12th Century's
Enlightment Technic
and Evolution

ಪರಮ ಪೂಜ್ಯ ಸದ್ಗುರು ಶ್ರೀ ವಿದ್ಯಾನಂದ ಶರಣರು ವಿರಚಿತ

ಕರುಣಾಜಲ



ಸಂಪಾದಕರು

ಬಸವರಾಜ ಸ್ವಾಮಿ

12th Century's
Enlightment Technic
and Evolution

ಕರುಣಾಜಲ

ಲೇಖಕರು
ಪರಮ ಪೂಜ್ಯ ಸದ್ಗುರು ಶ್ರೀ ವಿದ್ಯಾನಂದ ಶರಣರು
ಡಬ್ಬೇರು ಮಡುವು

ಸಂಪಾದಕರು
ಬಸವರಾಜಸ್ವಾಮಿ
ರಾಯಚೂರು

ಪ್ರಕಾಶಕರು
ಶ್ರೀ ಬಸವಸೇವಾ ಪ್ರತಿಷ್ಠಾನ
ನಂ.12-7-196 ಸುದ್ದಿಮೂಲ ಕಾರ್ಯಾಲಯ
ಸಿಯಾತಲಾಬ ಗಂಜ್ ಏರಿಯಾ
ರಾಯಚೂರು-584102

ಕರುಣಾಜಲ

ವಚನಾನುಭಾವ

Karunajala Vachananubhava Authour : Sadguru Sri Vidyananda Saharanaru
Dabberumaduvu Tq. Lingsugur, Dt. Raichur
Edited by : Basavaraj Swamy, Raichur

Mobile : 9980553750

ಲೇಖಕರು
ಪರಮಪೂಜ್ಯ ಸದ್ಗುರು ಶ್ರೀ ವಿದ್ಯಾನಂದ ಶರಣರು ಡಬ್ಬೇರಮಡುವು

ಸಂಪಾದಕರು
ಬಸವರಾಜ ಸ್ವಾಮಿ,
ರಾಯಚೂರು

ಮಿಂಚಂಚೆ:
suddimoola@gmail.com

ಪ್ರಕಾಶಕರು:
ಶ್ರೀ ಬಸವಸೇವಾ ಪ್ರತಿಷ್ಠಾನ
ನಂ.12-7-196 ಸುದ್ದಿಮೂಲ ಕಾರ್ಯಾಲಯ
ಸಿಯಾತಲಾಬ ಗಂಜ್ ಏರಿಯಾ
ರಾಯಚೂರು- 584102

ಬೆಲೆ : 125/-

ಪ್ರತಿಗಳು : 500

ಮುದ್ರಣ : ಪ್ರಥಮ ಮುದ್ರಣ ಮೇ 2023

ಬಳಸಿದ ಕಾಗದ : 70 ಜಿ.ಎಸ್.ಎನ್.ಎಸ್ ಮ್ಯಾಪಲಿತೋ

ಆಕಾರ : ಡೆಮಿ 1/8

ಪುಟಗಳು : 98+ vii

ಮುಖ ಪುಟ : ಮುರಳೀಧರ ವಿ. ರಾಠೋಡ್ ಬೆಂಗಳೂರು

ಮುದ್ರಣ

ಟ್ರಿನಿಟಿ ಅಕಾಡೆಮಿ - ಬೆಂಗಳೂರು

ಓದುವ ಮುನ್ನ ....

ದ್ವೈತ, ದ್ವೈತಾದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಿವಶಕ್ತಿ ವಿಶಿಷ್ಟಾದ್ವೈತ, ಮುಂತಾದ ಸಿದ್ಧಾಂತಗಳು ಭಾರತದಲ್ಲಿ ಪ್ರಚಲಿತದಲ್ಲಿವೆ. ಪ್ರತಿ ದೇಹದಲ್ಲಿರುವ ಶಕ್ತಿಯನ್ನು ಆಯಾ ದೇಹವೇ ಬಳಕೆ ಮಾಡಿಕೊಳ್ಳಲು ಸಕಲ ದೇಹಗಳಿಗೆ ನೆರವಾಗಲೆಂದು ಆಯಾ ಸಿದ್ಧಾಂತಗಳನ್ನು ಮಹಾಜ್ಞಾನಿಗಳು ರಚಿಸಿರುವರು . ಆದರೆ ಜನ ಆಯಾ ಗ್ರಂಥಗಳನ್ನು ಬರೆದ ಜ್ಞಾನಿಗಳನ್ನು ಅವರು ಬರೆದ ಸೂತ್ರಪ್ರಧಾನವಾದ ಜ್ಞಾನ ಗ್ರಂಥಗಳನ್ನು ಮಾತ್ರ ವಿಶ್ವಾಸಕ್ಕೆ ತೆಗೆದುಕೊಂಡರು . ತಮ್ಮ ತಮ್ಮ ದೇಹಗಳಲ್ಲಿ ತನ್ಮಯವಾದ ಅರಿವಿನ ಶಕ್ತಿಯನ್ನೆ ಮರೆತರು . ಒಬ್ಬೊಬ್ಬ ಜ್ಞಾನಿಯ ಹೆಸರಲ್ಲಿ ಮತ ಧರ್ಮ ನಿರ್ಮಾಣವಾಯಿತು . ಜಾತಿಉಪಜಾತಿ ಪಂಗಡಗಳು ಹುಟ್ಟಿಕೊಂಡವು. ಜ್ಞಾನಿಗಳು ಬರೆದ ಸೂತ್ರ ಪ್ರಧಾನ ಸಿದ್ಧಾಂತಗಳೆಲ್ಲಾ ಧರ್ಮಗ್ರಂಥಗಳಾದವು . ಅವು ಪೂಜೆಗೆ , ವಾದ ವಿವಾದಗಳಿಗೆ ಉಪನ್ಯಾಸಕ್ಕೆ ಮೀಸಲಾದವು .

ದೇಹದ ಉನ್ನತಿಗಾಗಿ ದೇಹದಿಂದಲೇ ಬರೆದ ಗ್ರಂಥಗಳು ದೇಹಗಳಿಗೆ ಮುಳುವಾದವು. ಈ ಸಕಲ ಸಿದ್ಧಾಂತಗಳಿಂದ ಆದ ಬದಲಾವಣೆಯನ್ನು ಶ್ರೀ ವಿದ್ಯಾನಂದ ಶರಣರು ಗಮನದಲ್ಲಿಟ್ಟು ಕೊಂಡು **ಕರುಣಾಜಲ** ಗ್ರಂಥವನ್ನು ಬರೆದರು . ಕರುಣಾಜಲ ಪುಸ್ತಕದಲ್ಲಿ ಬಸವಣ್ಣ ಚೆನ್ನಬಸವಣ್ಣ ಹಾಗೂ ಅಲ್ಲಮಪ್ರಭು ಅವರ 42 ವಚನಗಳಿಗೆ ಶ್ರೀ ವಿದ್ಯಾನಂದ ಶರಣರು ವಚನಾನುಭಾವವನ್ನು ಬರೆದಿದ್ದಾರೆ.

ಅಂಗ ಸಂಗಿಗನಲ್ಲ ನಮ್ಮ ಬಸವಯ್ಯನು.
ಪ್ರಾಣದ ಭ್ರಮೆಯವನಲ್ಲ ನಮ್ಮ ಬಸವಯ್ಯನು.
ಉಭಯದ ಹಂಗ ಹರಿದು ಉಪಮಾತೀತನಾದ ನಮ್ಮ ಬಸವಯ್ಯನು.
ಸಂಗಯ್ಯನಲ್ಲಿ ಕೂಡಿ ನಿರಾಳ ಪ್ರಸನ್ನ ಮೂರ್ತಿಯಾದ ನಮ್ಮ ಬಸವಯ್ಯನು.
ವಚನದಿಂದ ಹಿಡಿದು
ಧ್ವನಿಯ ತೋರಲು,
ಆ ಧ್ವನಿಯ ಮರೆಯಲ್ಲಿ ಹುಟ್ಟದಮದ್ದುಗ್ರು,
ಬಸವಣ್ಣಂಗೆ ಶಿವಸುಖವಾಯಿತ್ತು ಬಸವಾ.
ಆ ಧ್ವನಿಯಡಗಿ ಅಪ್ರತಿಮ ಸಂಗ
ನಿರ್ಮಲಾಕಾರವಾಯಿತ್ತಯ್ಯ ಎನಗೆ,
ಪ್ರಣವ ಸ್ವರೂಪ ಬಸವನ ಕಂಡ ಬಳಿಕ
ಆನು ಬಸವನ ಶಿಶುವಾದೆನಯ್ಯ ಸಂಗಯ್ಯ

ವರೆಗೆ ಹೀಗೆ ಒಟ್ಟು 42 ವಚನಗಳನ್ನು ಆಧಾರವಾಗಿಟ್ಟುಕೊಂಡು ಅವುಗಳ ಮೂಲಕ ಅನುಭಾವ ಶಕ್ತಿಯನ್ನು ಓದುವ ತನುವಿಗೆ ಮನದಟ್ಟಾಗುವಂತೆ ''**ಕರುಣಾಜಲ**'' ಗ್ರಂಥ ಸಿದ್ಧಪಡಿಸಿ ಸ್ವಾನುಭಾವದ ಕೃಷಿಯಲ್ಲಿ ತೊಡಗಿದ ಓದುಗನಿಗೆ ದಾಸೋಹ ರೂಪದಲ್ಲಿ ಉಣ ಬಡಿಸಿದ್ದಾರೆ.

ಸತ್ಯವನ್ನು ಲೋಕೋಪಯೋಗಿ ದೃಷ್ಟಿಯಿಂದ ಹೇಳುವವಳೇ ಆಪ್ತರು.

ಲೋಕೋದ್ಧಾರವೆಂದರೇನು? ಅದು ಯಾವುದರಿಂದ ಆಗುತ್ತದೆ? ಎಂಬುದನ್ನು ಸ್ಪಷ್ಟವಾಗಿ ತಿಳಿದು ಸ್ವಾರ್ಥದ ಲವಲೇಶವೂ ಇಲ್ಲದೆ ಉಸಿರಾಟದಷ್ಟೇ ಸಹಜವಾಗಿ ಆ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರು ಡಬ್ಬೇರುಮಡುವಿನ ಪರಮಪೂಜ್ಯ ಶ್ರೀ ವಿದ್ಯಾನಂದ ಶರಣರು.

ಶರಣರ ಮಾತೆಲ್ಲಾ ಅಮೃತವಾಯಿತು. ಪೂಜ್ಯರ ವ್ಯಕ್ತಿತ್ವವನ್ನು ವರ್ಣಿಸುವುದು ಕಷ್ಟವೇ. ಅವರನ್ನು ಕಣ್ಣಾರೆ ಕಂಡ, ಅವರೊಡನಾಡಿದ ಶಿಷ್ಯವರ್ಗ, ಅವರ ಪ್ರವಚನಗಳನ್ನು ಕೇಳಿದವರಿಗೆ ಅವರ ಬಗ್ಗೆ ಹೇಳಬೇಕಾಗಿಲ್ಲ . ಯಾರು ಅವರನ್ನು ನೋಡಿಲ್ಲವೋ, ಕೇಳಿಲ್ಲವೋ ಅಂಥವರನ್ನು ಇಂಥ ಒಬ್ಬ ಶರಣರಿದ್ದರು ಎಂದು ನಂಬಿಸುವುದು ಕಷ್ಟದ ಕೆಲಸ ಅಂತಹ ವ್ಯಕ್ತಿತ್ವ ಪೂಜ್ಯ ಸದ್ಗುರು ಶ್ರೀ ವಿದ್ಯಾನಂದಶರಣರದು.

ಮಗುವಿನಂಥ ನಿಷ್ಕಲ್ಮಷ ಹೃದಯ , ನಿರ್ಮಲ ನಗೆ, ವಾತ್ಸಲ್ಯಪೂರ್ಣ ನೋಟ. ಸದಾ ಶರಣರ ಗುರುಗಳಾದ ಸದ್ಗುರು ನಾಗಭೂಷಣರ ಸ್ಮರಣೆ, ಒಂದೇ ಮಾತಿನಲ್ಲಿ ಹೇಳುವುದಾದರೆ ಕಣ್ಣಿಗೆ ಬಿದ್ದ ಅರುಹೃದಯಿಗೆ ಸ್ವರೂಪ ಜ್ಞಾನ ಮಾಡಿಸುವ ಛಲವಂತ ಶರಣರವರು.

ಅವರೇ ಹೇಳಿದಂತೆ 4ನೇ ತರಗತಿಯವರೆಗೆ ಅಯ್ಯನವರ ಶಾಲೆಯಲ್ಲಿ ಅಭ್ಯಾಸ. ತಮ್ಮ 23ನೇಯ ವಯಸ್ಸಿನವರೆಗೆ ಈ ಲೋಕದವರು ಆಚರಿಸುವ ಹಲವಾರು ಆಚಾರಗಳಲ್ಲಿದ್ದೆವೆಂದು ಆಗಾಗ ಹೇಳಿಕೊಳ್ಳುತ್ತಿದ್ದರು.

ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲೂಕಿನ ಮುಚಳಾಂಬದ **ಸದ್ಗುರು ಶ್ರೀ ನಾಗಭೂಷಣ ಶಿವಯೋಗಿಗಳ** ದರ್ಶನದ ನಂತರ ಅವರೆಂದೂ ಹಿಂತಿರುಗಿ ನೋಡಲಿಲ್ಲ. ಪೂರ್ವಾಶ್ರಯದ ಡಬ್ಬೇರುಮಡುವಿನ ಆದನಗೌಡರು **ಶ್ರೀ ವಿದ್ಯಾನಂದ ಶರಣ**ರಾದರು. ಅಯ್ಯನವರ ಶಾಲೆಯಲ್ಲಿ ಕೇವಲ ಕನ್ನಡ ಅಭ್ಯಾಸ ಮಾಡಿದ್ದ ಆದನಗೌಡರು ಸದ್ಗುರು ನಾಗಭೂಷಣರ ಗರಡಿಯಲ್ಲಿ ಸಂಸ್ಕೃತ ಹಾಗೂ ಹಿಂದಿ ಅಭ್ಯಾಸ ಮಾಡಿ ಭಗವದ್ಗೀತೆಯನ್ನು ಸರಳ ಹಾಗೂ ಸುಲಲಿತವಾಗಿ ಪ್ರವಚನ ಮಾಡ ಹತ್ತಿದರು. ಸಕಲ ಶಿವಶರಣರ ವಚನಗಳು ಅವರಿಗೆ ಅತ್ಯಂತ ಪ್ರಿಯವಾದವು. ಕಬ್ಬಿಣದ ಕಡಲೆಯಂತಿರುವ ಅಲ್ಲಮ ಪ್ರಭುಗಳ ವಚನಗಳನ್ನು ನೋಡಿ ಅತ್ಯಂತ ಆನಂದಿತರಾದರು. ಅವುಗಳ ಒಳಗುಟ್ಟನ್ನು ತಮ್ಮ ಪ್ರವಚನಗಳ ಮೂಲಕ ಹೇಳಿ ಶಿಷ್ಯರ ಸ್ವರೂಪ ಜ್ಞಾನಕ್ಕೆ ದಾರಿಮಾಡಿಕೊಟ್ಟರು. ಹಗಲು ದಣಿವರಿಯದೆ ಪ್ರವಚನ ಮಾಡಿದರೆ ರಾತ್ರಿ ಏಕಾಂತದಲ್ಲಿ ವಚನಗಳಿಗೆ ವ್ಯಾಖ್ಯಾನ ಬರೆಯುತ್ತಿದ್ದರು. ಪುಸ್ತಕ ಓದಿ ಉದಾಹರಿಸುವ ಪಂಡಿತೋತ್ತಮನಿಗೆ ತನ್ನ (ದೇಹದ) ಪುಸ್ತಕದ ಪರಿಚಯ ಸ್ವರೂಪ ಜ್ಞಾನ ಕರುಣಿಸುತ್ತಿದ್ದರು.

ಸಕಲ ಶರಣರ ವಚನಗಳೂ ಅವರ ನಾಲಿಗೆಯ ತುದಿಯಲ್ಲಿದ್ದವು. ಪ್ರವಚನಗಳನ್ನು ಸಿದ್ಧಮಾಡಿಕೊಳ್ಳುತ್ತಿರಲಿಲ್ಲ. ಒಮ್ಮೆ ಹೇಳಿದ ವಚನದ ತಿರುಳು ಮತ್ತೊಮ್ಮೆ ಅನೇಕ ಕವಲುಗಳನ್ನು ಒಡೆದು ಒಂದೇ ಅರ್ಥದಲ್ಲಿ ಲೀನವಾಗಿ ಮೈಮನಗಳನ್ನು ಅರಳಿಸಿ ತನ್ನನ್ನು ನೋಡಿಕೊಳ್ಳುವಂತೆ ಮಾಡುವ ಮೋಡಿ ಸದ್ಗುರುಗಳಿಗೆ ಕರಗತವಾಗಿತ್ತು. ಅವರ ಪ್ರವಚನ ಕಲಿತ ವಿದ್ಯೆಯ ಪ್ರದರ್ಶನವಾಗಿರದೆ ಸತ್ಯವೇ ತಾನಾಗಿ ತಾನೇ ಸತ್ಯವಾಗಿ ತಾಯಿ ರೂಪದಲ್ಲಿ ತುತ್ತು ಮಾಡಿ ಉಣಬಡಿಸಿದಂತಿರುತ್ತಿತ್ತು. ತಾವೂ ಉಂಡು ಶಿಷ್ಯರಿಗೂ ಉಣ್ಣಿಸಿ ಸತ್ಯದ ಡೇಗು ಡೇಗುತ್ತಿದ್ದರು.

ಒಬ್ಬ ವ್ಯಕ್ತಿ ಸ್ವರೂಪ ಜ್ಞಾನಿಯಾಗಿ ತಾನು ಯಾವ ಕಾಯಕವನ್ನಾದರೂ ಮಾಡಲಿ ಅವನಿಂದ

ಲೋಕಕ್ಕೆ ಉಪಯೋಗವಾಗುತ್ತದೆ. ಮಹದಾನಂದ ಹೊಂದಿ ಸ್ವಸುಖ ಪಡೆಯುತ್ತಾನೆ ಎಂಬ ಕಳಕಳಿ ಅವರದಾಗಿತ್ತು. ಹಗಲಿರುಳೆನ್ನದೆ ತಮ್ಮ ಅರವತ್ತು ವಸಂತಗಳನ್ನು ಇದಕ್ಕಾಗಿ ಮೀಸಲಿಟ್ಟರು.

ಕುಳಿತಲ್ಲಿ, ನಿಂದಲ್ಲಿ, ಮಲಗಿದಲ್ಲಿ ಅವರ ಧ್ಯಾನ ಶರಣರ ಕುರಿತೇ ಆಗಿರುತ್ತಿತ್ತು. ಅರುಹೃದಯ ಸಿಕ್ಕ ಕೂಡಲೇ ಅವನನ್ನು ಬಿಗಿದಪ್ಪಿ ತಮ್ಮವನನ್ನಾಗಿ ತಮ್ಮ ಮಗನನ್ನಾಗಿ ಮಾಡಿಕೊಂಡು ಆತನೊಳಗಿದ್ದ ಅರುವನ್ನು ಆತನಿಗೇ ಪರಿಚಯಿಸುತ್ತಾ ಆತನ ಮರುವನ್ನು ಆತನಿಂದಲೇ ನಷ್ಟಮಾಡಿಸಿ ಸ್ವರೂಪ ಜ್ಞಾನಿಯನ್ನಾಗಿಸುವ ಸುಳುಹು ನೀಡುತ್ತಿದ್ದರು.

ಹೀಗೆ ಮಾಡುವಾಗ ಅವರ ಜಾತಿ-ಮತ ಪಂಥ ಅರ್ಥವ್ಯವಸ್ಥೆ, ಅಧಿಕಾರ, ಇದಾವುದನ್ನು ಗಮನಿಸದೆ ಅರುಹೃದಯವನ್ನು ಮಾತ್ರ ನೋಡುತ್ತಿದ್ದರು. ಅವನ ಭೇಟಿಗಾಗಿ ಹಗಲಿರುಳು ಹಂಬಲಿಸುತ್ತಿದ್ದರು. ದೇಹದ ಅಭಿಮಾನ ಅಹಂಕಾರ ಬಿಡುವವರಿಗೆ ಸುಲಲಿತವಾಗಿ ಪರೀಕ್ಷೆಗಳು ಸದಾ ನಡೆಯುತ್ತಿದ್ದವು. ಒಬ್ಬ ವ್ಯಕ್ತಿ ಸ್ವರೂಪ ಜ್ಞಾನಿಯಾಗಿ ತಾನು ಯಾವ ಕಾಯಕವನ್ನಾದರೂ

ಪಾದದಿಂದ ಹಿಡಿದು ನೆತ್ತಿಯವರೆಗಿನ ಅಭಿಮಾನ ಬಿಟ್ಟಾಗಲೇ ಆತ ಸದ್ಗುರುಗಳಿಂದ ಪೂಜಿತನಾಗುತ್ತಿದ್ದ ಪೂಜಿಸಲ್ಪಡುತ್ತಿದ್ದ. ಗುರುವಾಗುತ್ತಿದ್ದ. ಗುರುಮುಟ್ಟಿ ಗುರುವಾಗುವ ಪರಂಪರೆ ಶರಣ ಪರಂಪರೆಯಲ್ಲಿ ಮಾತ್ರ ಕೇಳುತ್ತೇವೆ. ಆದರೆ ಸದ್ಗುರು ವಿದ್ಯಾನಂದ ಶರಣರು ಆರು ದಶಕಗಳವರೆಗೆ ಇದನ್ನು ಸದ್ದುಗದ್ದಲವಿಲ್ಲದೆ ಏಕಾಂಗಿಯಾಗಿ ನಡೆಸಿಕೊಂಡು ಬಂದರು. ಜ್ಞಾನ ಪಡೆದು ತಮ್ಮ ಕಾಯಕ ಮಾಡುತ್ತಾ ಸ್ವಸುಖದಲ್ಲಿ ಲೀನವಾದ ಸದ್ಗುರು ವಿದ್ಯಾನಂದ ಶರಣರ ಶಿಷ್ಯಂದಿರು ಸಾವಿರಾರು ಸಂಖ್ಯೆಯಲ್ಲಿದ್ದಾರೆ. ಅವರೆಲ್ಲರೂ ಸದ್ಗುರು ವಿದ್ಯಾನಂದರ ಕಾಯಕದಲ್ಲಿ ಲೀನವಾದರೆ ಕಲ್ಯಾಣ ರಾಜ್ಯ ನಿರ್ಮಾಣವಾಗುವುದರಲ್ಲಿ ಸಂದೇಹವಿಲ್ಲ.

ಮಹಾತ್ಮಾ ಬಸವಣ್ಣ ಇಷ್ಟ ಲಿಂಗ ಕೊಟ್ಟು ಉಪಕಾರ ಮಾಡಿದನೆಂದು ಒಂದು ವರ್ಗ ಅವರನ್ನು ಸ್ಮರಿಸುತ್ತದೆ. ಮತ್ತೊಂದು ವರ್ಗ ರೇಣುಕರು ಇಷ್ಟ ಲಿಂಗ ಕೊಟ್ಟರೆಂದು ಪ್ರತಿಪಾದಿಸುತ್ತದೆ. ಹೀಗೆ ಅನ್ನುವ ಈ ಎರಡು ವರ್ಗಗಳು ಉಣ್ಣೆಯಂತೆ ಕ್ಷೀರದ ರುಚಿಯನ್ನು ಸವಿಯಲಿಲ್ಲವೆಂದು ರೇಣುಕ ಹಾಗೂ ಶರಣರ ಅಮೃತವನ್ನು ಸವಿದ ಅನುಭಾವಿಗಳಿಗೆ ಅನ್ನಿಸದೇ ಇರದು. ಶರಣರ ವಚನಗಳಲ್ಲಿ ರೇಣುಕರ ಅನುಭಾವದಲ್ಲಿ ಕುರುಹನ್ನೆ ಕಂಡರು. ಸದಾ ಕತ್ತಲನ್ನೆ ಕಂಡವರಿಗೆ ಬೆಳಕಿನ ರುಚಿ ಹಿಡಿಸುವುದಿಲ್ಲ.

ಸದ್ಗುರು ವಿದ್ಯಾನಂದರು ಈ ನಾಡು ಕಂಡ ಮಹಾನ್ ಸಂತರು. ಮಠ ಮಾನ್ಯಗಳ ಒಡೆಯರು ಸಾಹಿತಿಗಳು ಈ ಸತ್ಪುರುಷರನ್ನು ನೋಡಲು ಬರಲಿಲ್ಲ . ರಾಜಕಾರಣಿಗಳು ಇವರತ್ತ ಸುಳಿಯಲಿಲ್ಲ, ಗುರುಗಳಾದರೂ ಅಷ್ಟೆ, ಅವರ ನೆರಳಿನ ಸಾಮಿಪ್ಯವೂ ಹೋಗಲಿಲ್ಲ. ಅರುಹೃದಯಿಗಳನ್ನು ಕಂಡು ಅರಿವಿನ ಬೀಜ ಬಿತ್ತಿದರು. ಮೊಳಕೆಯೊಡೆದು ಸಸಿಗಳಾಗಿವೆ. ಕೆಲವು ಮರಗಳಾಗಿ ಫಲಕ್ಕೆ ಬಂದಿವೆ . ಆ ಮಾಗಿದ ಅರಿವಿನ ಫಲ ತನ್ನ ಕೆಲಸ ಮಾಡದೇ ಇರದು.

ತನ್ನೊಳಗಿರುವ ಒಡೆಯನನ್ನು ತೋರಿಸಿ ಅವನೇ ತಾನಾಗುವ ಪ್ರಯತ್ನವನ್ನು ಶರಣರು ಹನ್ನೆರಡನೆಯ ಶತಮಾನದಲ್ಲಿ ಯಶಸ್ವಿಯಾಗಿ ಪೂರೈಸಿದ್ದಾರೆ.

ಅದೇ ಪ್ರಯತ್ನವನ್ನು ಪರಮ ಪೂಜ್ಯ ಸದ್ಗುರು ಡಬ್ಬೇರುಮಡುವಿನ ಶ್ರೀ ವಿದ್ಯಾನಂದ

ಶರಣರು ಮನೆ ಮನೆಗೆ ತೆರಳಿ ಶ್ರೀಸಾಮಾನ್ಯನನ್ನು ಸ್ವರೂಪ ಜ್ಞಾನಿಗಳನ್ನಾಗಿ ಪರಿವರ್ತಿಸಲು ಏಕಾಂಗಿಯಾಗಿ ಯತ್ನಿಸಿದರು. ಹೆದ್ದೊರೆನಾಡು ಕಂಡ ಅಪೂರ್ವ ಸಂಚಾರಿ ಸಂತರಾದ ಪೂಜ್ಯ ಶ್ರೀ ವಿದ್ಯಾನಂದ ಶರಣರು ನಾಡಿನಾದ್ಯಂತ ಆಧ್ಯಾತ್ಮದ ಚಿಂತನೆಯ ವಾತಾವರಣವನ್ನು ಮೂಡಿಸಿದರು.

ಉತ್ತರ ಕರ್ನಾಟಕದ ರಾಯಚೂರು, ಕಲಬುರ್ಗಿ, ಬೀದರ್, ಬಾಗಲಕೋಟೆ, ಬಿಜಾಪುರ, ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಗಳಾದ್ಯಂತ ಸತತ ಅರವತ್ತು ವರ್ಷಗಳವರೆಗೆ ಹಗಲಿರುಳೆನ್ನದೆ ಸಂಚರಿಸಿ ಸಾವಿರಾರು ಸಂಖ್ಯೆಯ ಜಿಜ್ಞಾಸುಗಳಲ್ಲಿ ಆಧ್ಯಾತ್ಮದ ಆಸಕ್ತಿ ಹುಟ್ಟಿಸಿದರು.

ಈ ಜ್ಞಾನ ಮಹಾಯಜ್ಞ ಅವರೊಂದಿಗೆ ನಂದಲಿಲ್ಲ. ಅನುಭವ ಮಂಟಪದಲ್ಲಿ ಚೆನ್ನಬಸವಣ್ಣನವರು ಕ್ರಿಯಾಶೀಲರಾದಂತೆ ಬೆನಕನ ಹಳ್ಳಿಯ ಸದ್ಗುರು ನಾಗಭೂಷಣ ಶಿವಯೋಗಿ ಮಹಾಬೋಧಾಲಯದಲ್ಲಿ ಪೂಜ್ಯ ವಿದ್ಯಾನಂದ ಶರಣರ ಪ್ರೀತಿಯ ಕಂದ ಮಹಾಜ್ಞಾನಿ ದೇವಾನಂದರಾಗಿ ರೂಪುಗೊಂಡಿರುವರು.

ಸಾಧನೆಯ ಮಾರ್ಗದಲ್ಲಿರುವವರಿಗೆ ಯಾದಗಿರಿ ಜಿಲ್ಲೆಯ ಹುಣಶಿಗಿ ತಾಲೂಕಿನ ಬೆನಕನ ಹಳ್ಳಿಯ ಮಹಾ ಬೋಧಾಲಯ ಕೈ ಮಾಡಿ ಕರೆಯುತ್ತಲಿದೆ.

ಸದ್ಗುರು ಶ್ರೀ ವಿದ್ಯಾನಂದಶರಣರು ಜೂನ್ 1-2006 ರಂದು ಅಸ್ವಸ್ಥರಾದರು. ದೇಹದ ಬಳಲಿಕೆಯ ಮಧ್ಯೆಯೇ ಪ್ರವಚನ ಸಾಗಿತ್ತು. ಆನಂದದ ಮರೆಯಲ್ಲಿ ದೇಹ ಮತ್ತು ಪ್ರಾಣದ ಚಿನ್ನಾಟ ನಡೆದೇ ಇತ್ತು. 23 ದಿನಗಳ ಚಿಕಿತ್ಸಾ ಹಂತದಲ್ಲಿ ವೈದ್ಯರಿಗೆ ಒಮ್ಮೆಯೂ ದೇಹಕ್ಕಾದ ನೋವಿನ ಸಂಗತಿಯನ್ನು ವ್ಯಕ್ತಪಡಿಸಲಿಲ್ಲ.

ಗುರುಗಳು ಮುಂದಿನ ಚಿಕಿತ್ಸೆಗೆ ಒಪ್ಪಿಗೆ ಕೊಡಲಿಲ್ಲ. ಈ ಶರೀರದ ಕತೆ ಮುಗಿಯಿತು. ಬೆಳಿಗ್ಗೆ ಊರಿಗೆ ಹೊರಡೋಣ ಎಂದರು. ಅವರ ದೇಹದ ನರಳಾಟದಿಂದ ನನ್ನ ಹಾಗೂ ದೇವಾನಂದ ಶರಣರ ಮುಖ ಕಂದಿತು. ಇದನ್ನು ಗಮನಿಸಿದ ಗುರುಗಳು ನಮ್ಮಿಬ್ಬರನ್ನು ಹತ್ತಿರ ಕೂಡಿಸಿಕೊಂಡು ಇಡೀ ರಾತ್ರಿ ಪ್ರವಚನ ಮಾಡಿದರು, ಮಹಾಜ್ಞಾನ ಕಾಯ ಮತ್ತು ಪ್ರಾಣದ ಚಿನ್ನಾಟದ ದರ್ಶನ ಮಾಡಿಸಿದರು.

ಬೆನಕನಹಳ್ಳಿಯಲ್ಲಿ ದೇಹ ಬಿಡುವುದಾಗಿ ಹೇಳಿ ಕರೆದುಕೊಂಡು ಹೋಗಲು ಸೂಚಿಸಿದರು. ದಿನಾಂಕ 23-6-2006 ರಂದು ಬೆನಕನ ಹಳ್ಳಿಗೆ ಹೋದೆವು. ಕೊನೆಗೆ ಮೂರು ದಿನಗಳಲ್ಲಿ ಸಂಜ್ಞೆಯ ಮೂಲಕ ಹೇಳಿ ದಿನಾಂಕ 2-7-2006 ಮಧ್ಯಾಹ್ನ 2.20 ಗಂಟೆಗೆ ದೇಹಬಿಟ್ಟರು.

ಅವರು ಬರೆದ ಶರಣ ಸಾಹಿತ್ಯದಲ್ಲಿ 'ನಾನು ನನ್ನ ಕಂಡ ಕಣ್ಣು', 'ನಿಃಶಬ್ದ ಕೃಪೆ' ಅವರಿರುವಾಗಲೇ ಪ್ರಕಟವಾಗಿದೆ. ಅವರು ಇರುವವರೆಗೂ ತಮ್ಮ ಸಾಹಿತ್ಯ ಪ್ರಕಟಿಸಲು ಮುಂದೆ ಬಂದವರಿಗೆ ಇದನ್ನು ತಮ್ಮ ಹೃದಯದಲ್ಲಿ ಪ್ರಕಟಿಸಿಕೊಳ್ಳಿ ಪ್ರಕಟಣೆ ಬೇಡ ಎಂದು ಒತ್ತಿ ಹೇಳುತ್ತಿದ್ದರು. ನನ್ನ ಒತ್ತಾಯದ ಮೇರೆಗೆ ಪ್ರಕಟಿಸಲು ಅನುಮತಿ ಕೊಟ್ಟರು. 'ಗಗನ ಸಿದ್ಧಾಂತ ' ' ಗುರುಕನ್ಯ, ' ಡಿ.ಟಿ.ಪಿ.ಮಾಡಿ ತೋರಿಸಿದಾಗ ಅತ್ಯಂತ ಆನಂದ ಪಟ್ಟರು. ಇಷ್ಟು ಸಾಕು. ಬೇಕಾದವರು ಇದರ ಫೋಟೊ ಪ್ರತಿ ಮಾಡಿಕೊಳ್ಳಲಿ ಎಂದು ಹೇಳಿದರು.

ಗಗನ ಸಿದ್ಧಾಂತ 136 ವಚನಗಳ ತಾತ್ಪರ್ಯ ಮೊದಲ ಭಾಗ 6-7-2006 ರಂದು

ಮುದ್ರಣಗೊಂಡು ಪ್ರಕಾಶಿಸಲ್ಪಟ್ಟಿತು. ಪ್ರತಿಗಳು ಮುಗಿದು ಹೋದ ನಿಮಿತ್ತ ಪುನಃ ಸಮಗ್ರವಾಗಿ ಗಗನ ಸಿದ್ಧಾಂತವನ್ನು ಪ್ರಕಟಿಸಲಾಗಿದೆ. ಈ ಗ್ರಂಥ ಭೂಮಿಯೊಳಗಿದ್ದ ನಿಧಿಯಂತೆ ಅಂಜನ ಹಾಕಿ ಹುಡುಕಬೇಕು. ಸಾಧಕರಿಗೆ ಮಾರ್ಗ ಸುಲಭವಾಗಲಿ ಎಂದು ಹೆಚ್ಚಿನ ವಿವರಣೆಯೊಂದಿಗೆ ಶ್ರೀಸಾಮಾನ್ಯರ ಮನ ಮುಟ್ಟುವಂತೆ ಸದ್ಗುರುಗಳು ವಿವರಿಸಿದ್ದಾರೆ.

ಪೂಜ್ಯ ವಿದ್ಯಾನಂದ ಶರಣರ ಅಪ್ರಕಟಿತ ಸಾಹಿತ್ಯ ಐದು ಸಾವಿರ ಪುಟಗಳನ್ನು ಮೀರಲಿದೆ. ಪತ್ರಿಕೆ ಪ್ರಸಾರದೊಂದಿಗೆ ಅರಿವಿನ ಪ್ರಸಾರ ಮಾಡಲು ಪಣ ತೊಟ್ಟಿರುವ ರಾಯಚೂರು (ಸ್ಪಿಲ್)ಸುದ್ದಿಮೂಲ ಪಬ್ಲಿಷರ್ಸ್ ಇಂಡಿಯಾ ಲಿಮಿಟೆಡ್ ಸಂಸ್ಥೆಯು ಸದ್ಗುರುಗಳ ಇಚ್ಛೆಯಂತೆ ಶ್ರೀ ಬಸವ ಸೇವಾ ಪ್ರತಿಷ್ಠಾನ ಪ್ರಕಾಶನದ ಮೂಲಕ ಸಕಲರೂ ಸ್ವರೂಪ ಜ್ಞಾನಿಗಳಾಗಬೇಕೆನ್ನುವ ಆಶಯದೊಂದಿಗೆ ' **ಕರುಣಾಜಲ** ' ಪ್ರಕಾಶಿಸಿದೆ.

ಪ್ರಯತ್ನ ನಮ್ಮದು, ಅಂತಿಮ ಇಚ್ಛೆ ಓದುಗರದು; ಸಕಲ ತನುಗಳಲ್ಲಿಯೇ ತನ್ಮಯವಾದ ಅರಿವೆಂಬ ಗುರುದೇವನದು.

ಬಸವರಾಜ ಸ್ವಾಮಿ
ಸಂಪಾದಕ, ರಾಯಚೂರು
ಮೇ 25, 2023

ವಚನ - 1

ಮೂರು ಲಿಂಗಕ್ಕೆ ಮೂಲ ಸೂತ್ರವಾದಾತ ಗುರು.
ಮೂರು ವಿದ್ಯೆಕ್ಕೆ ವಿದ್ಯೆರೂಪಾದಾತ ಗುರು.
ಹೊದ್ದಿದ ಪ್ರಪಂಚನಳಿದ ರೂಪ ತಾ ರೂಪಾದಾತ ಗುರು.
ಲೋಕ ತ್ರಯಕ್ಕೆ ಕಪಿಲಸಿದ್ಧ ಮಲ್ಲಿಕಾರ್ಜುನನೆ ಗುರು ರೂಪಾದ.

ತಾತ್ಪರ್ಯ : ಪ್ರಪಂಚದಲ್ಲಿ ಬಹುಜನ ಗುರುಘನವ ತಿಳಿಯದೆ ತಮ್ಮ ತಮ್ಮ ಇಷ್ಟಾನುಸಾರ ಗುರು ಪದವ ಕೊಟ್ಟಿಹರು. ಇದು ಎಲ್ಲರಿಗೂ ಸರಿ ಹೋಗುವ ಯೋಗ್ಯತೆಯೂ ಅಲ್ಲ ಪದವಲ್ಲ. ಇಲ್ಲಿ ಸಿದ್ಧರಾಮ ಶಿವಯೋಗಿಯ ದಿವ್ಯ ದೃಷ್ಠಿಯಲ್ಲಿ ಕಪಿಲಸಿದ್ಧ ಮಲ್ಲಿಕಾರ್ಜುನನೆ ಗುರು ರೂಪು ಎಂದು ಹೇಳಿಕೊಂಡಿರುವಲ್ಲಿ ಗುರು ಪದ ಘನಪದ. ಅಪರಮಿತ ನಿಲುವುಳ್ಳ ಪದವಾಗಿಹುದರಿಂದ ಈ ಮಹಾಂತ ಅಪ್ರಮಾಣ. ಗಮ್ಯ ಘನವಂತನರುವ ಉಪಮಿಸಲಳವಲ್ಲ.

ದೇವ ? ದೇವರ ದೇವ. ವಿದ್ಯೆದ ವಿದ್ಯೆ, ಜ್ಞಾನದ ಜ್ಞಾನ, ಜ್ಞಾನ ಸ್ವರೂಪ ನಿಶಃಬ್ದ ವೇದಿಯಾದುದರಿಂದ ಮೂರು ಲಿಂಗಕ್ಕೆ ಸೂತ್ರವಾದಾತ ಗುರು. ಅನುಪಮ ಲಿಂಗಕ್ಕೆ ಸೂತ್ರವಾದಾತ ಅಚಲಿತ ಲಿಂಗಕ್ಕೆ ಸೂತ್ರವಾದಾತ, ಅಖಂಡಿತ ಲಿಂಗಕ್ಕೆ ಸೂತ್ರವಾದಾತ ಸೂತ್ರವಾದ ಮಹಾಮಹಿಮನಿಗೆ ಅದಾವ ಸೂತ್ರ ? ಭಕ್ತರ ಕರಕಮಲಕ್ಕೆ ಕರುಣಿಸಿದ ಕರ್ತಾರ. ವೇದ ವೇದಾಂತಗಳಿಗಸಾಧ್ಯವಾದ ಜ್ಞಾನ ರೂಪ ಲಿಂಗಕ್ಕೆ ಧ್ವನಿಯ ಮರೆಯಲ್ಲಿರ್ದುದು ಕರುಣಿಸಿ ಅನುಪಮ ಲಿಂಗವೆಂದು ಸೂತ್ರವಾದನೆ ? ವಾಕ್ ಮನದ ಮರೆಯಲ್ಲಿರ್ದುದು ತೋರಿ ಅಖಂಡಿತ ಲಿಂಗವೆಂದುದಕ್ಕೆ ಸೂತ್ರವಾದನೆ? ಈ ಮಹಂತನ ಸೂತ್ರ ನಿರೂಪ ಸೂತ್ರ. ನಿರುಪಮ ಸೂತ್ರ, ಅಚಲಿತ ಸೂತ್ರ, ಅಖಂಡ ಸೂತ್ರವಾದುದರಿಂದ ತಾನು ಮಾತಿಲ್ಲದವನಾಗಿ ನಿರ್ವಾಣದಿರುವ ಕರುಣಿಸಿದ ಸಾವಯವ ನಿರವಯವಾಗಿ ತೋರಿದ. ನಿರವಯವ ನಿಜದಿರುವಾಗಿ ತೋರಿದ ಕರ್ತಾರ ಇವನೆಂಥ ಕರ್ತಾರ ? ಕರ್ತಾರನೆಂಬನೆ ಅಕರ್ತಾರನಾಗಿಹನು. ಅಕರ್ತಾರನೆಂಬೆನೆ ಕರ್ತಾರನಾಗಿ ತನ್ನಂತೆ ಮಾಡುವಂಗೆ ಏನ್ನೆನ್ನುವದು? ಮೂರು ಲಿಂಗಕ್ಕೆ ಮೂಲ ಸೂತ್ರ ಇಷ್ಟಲಿಂಗಕ್ಕೆ ಸೂತ್ರವಾದಾತ ಪ್ರಾಣಲಿಂಗಕ್ಕೆ ಸೂತ್ರವಾದಾತ ಭಾವ ಲಿಂಗಕ್ಕೆ ಸೂತ್ರವಾದಾತ ಗುರುವೆಂದು ಹೇಳಿಹರು.

ಮೂರು ವಿದ್ಯೆಕ್ಕೆ ವಿದ್ಯೆ ರೂಪಾದಾತ ಗುರು :

ಅಪರ ವಿದ್ಯೆ, ಪರವಿದ್ಯೆ, ಪೂತ್ರರ ವಿದ್ಯೆ ಈ ಮೂರು ವಿದ್ಯೆಕ್ಕೆ ವಿದ್ಯೆ ರೂಪಾದಾತ, ಮೂರು ಜ್ಞಾನಕ್ಕೂ ಜ್ಞಾನ ರೂಪಾದಾತ ಗುರು. ನಾಮರೂಪದಿಂದ ತೋರುವ ಅನಾತ್ಮ ವಿದ್ಯೆಗೂ ವಿದ್ಯೆ ರೂಪಾದಾತ, ದೃಕ್ ರೂಪಾಗಿಹ ಆತ್ಮ ವಿದ್ಯೆಕ್ಕೂ ವಿದ್ಯೆ ರೂಪಾದಾತ ಅರಿವರುಹಿಸಿಕೊಂಬುದಕ್ಕೂ ಮೀರಿದ ಘನಕ್ಕೂ ವಿದ್ಯಾ ರೂಪಾದಾತ ಗುರು. ತೋರಿ ಇಲ್ಲವಾಗುವ ಕ್ಷರ ವಿದ್ಯೆಕ್ಕೂ ವಿದ್ಯಾರೂಪಾದಾತ. ಅರಿವ ದೃಕ್ ರೂಪ ಅಕ್ಷರ ವಿದ್ಯೆಕ್ಕೂ ವಿದ್ಯಾರೂಪಾದಾತ ಗುರು. ಅರಿಯಲಿಲ್ಲದ ಅರುವಾಗಿಹ ಅಕ್ಷರೋತ್ತಮ ವಿದ್ಯೆಗೂ ವಿದ್ಯಾರೂಪಾದಾತ ಗುರು. ಜ್ಞಾನ ನಿಧಿ ಗುರು, ಕರುಣಾನಿಧಿ ಗುರು, ಅಪೂರ್ವಿಕ ಗುರು, ಅಪ್ರಮಾಣವ ಕರುಣಿಸುವ ಗುರು, ಅಚಿಂತ್ಯವ ಕರುಣಿಸುವ ಗುರು ಅನಿಯಮ ಬೆಡಗುಳ್ಳ ಗುರು.

ಹೊದ್ದಿದ ಪ್ರಪಂಚವ ನಳಿದ ರೂಪ ತಾ ರೂಪಾದಾತ ಗುರು :

ಹೊದ್ದಿದ ಪ್ರಪಂಚವ ನಳಿದ ರೂಪ ಅದು ಗುರು ರೂಪ ಹೊದ್ದಿದ ಪ್ರಪಂಚ ಕುರುಹಿನಲ್ಲಿ ಕಂಡುದರಿಂದ ತಾನೆಂದು ತನ್ನದೆಂದು ಹೊದ್ದ ಪ್ರಪಂಚವ ನೋಡಿರೊ? ನಾಮ ರೂಪವೆಂಬ ಹುಸಿ ಪ್ರಪಂಚ ಅಸ್ತಿ ಭಾತಿ ಎಂಬ ತನ್ನ ಸತ್ಯದಲ್ಲಿ ಇಲ್ಲದ ಹೆಸರುಳ್ಳ ಚಿತ್ತಾರದಂತಿದ್ದ ಪ್ರಪಂಚ. ದೇಹವಾಗಲಿ ನಾಮರೂಪವಾಗಲಿ ಪ್ರಕೃತಿ, ಪ್ರಾಣ, ಜ್ಞಾನವಾಗಲಿ ಇದು ಇಲ್ಲದ ಹೆಸರುಳ್ಳ ಚಿತ್ರದಂತಿದ್ದುದು ತಿಳಿಯದ್ದರಿಂದ ಹೊದ್ದಿದ ಪ್ರಪಂಚವಾಗಿಹದು. ತನುವಿಡಿದುದು ಪ್ರಕೃತಿ, ಪ್ರಕೃತಿ ವಿಡಿದುದು (ಜ್ಞಾನ) ಪ್ರಾಣ, ಪ್ರಾಣ ವಿಡಿದುದು ಜ್ಞಾನ, ಜ್ಞಾನ ವಿಡಿದಿಹುದು ಗುರು, ಇಂತೀ ಗುರು ಲಿಂಗಜಂಗಮ ಪ್ರಸಾದ ಸಗುಣವೆಂದು ಹಿಡಿದು ನಿರ್ಗುಣವೆಂದು ಕಂಡ ಸಂದೇಹಿ ವೃತಗೇಡಿಗಳನೆ ನೆಂಬೆ ಅವರ ಮುಖವೆ ತೋರದಿರು ಕೂಡಲ ಸಂಗಮದೇವ.

ತನುವ ಹೊದ್ದಿಹ ಪ್ರಪಂಚ ಕರ್ಮೇಂದ್ರಿಯಂಗಳ ಶುಭಾ ಶುಭಕ್ರಿಯೆ ಹೊದ್ದಿಹ ಪ್ರಪಂಚ, ಜ್ಞಾನೇಂದ್ರಿಯಂಗಳ ಹೊದ್ದಿಹ ಪ್ರಪಂಚ, ಪ್ರಾಣಾದಿಗಳ ಕಾರ್ಯವ ಹೊದ್ದಿಹ ಪ್ರಪಂಚ, ಕರಣಂಗಳ ಕಾರ್ಯವ ಹೊದ್ದಿಹ ಪ್ರಪಂಚ, ತ್ರಿವಿಧ ಕಲ್ಪಿತರ ಹೊದ್ದಿಹ ಪ್ರಪಂಚ. ಇತ್ತ ಪರಮಾರ್ಥ ಸತ್ಯವೆಂಬ ಶೃತಿಗಳ ಹೊದ್ದಿರುವ ಪ್ರಪಂಚ, ತ್ರಿವಿಧ ಕಲ್ಪಿತವ ಹೊದ್ದುದಲ್ಲದೆ ತೋರುವುದಕ್ಕೆ ಗುರು, ಲಿಂಗ, ಜಂಗಮ, ಪ್ರಸಾದ ಸಗುಣವೆಂದು ಇದಕ್ಕೆ ಸಾಕ್ಷಿಯಾಗಿದ್ದುದ ನಿರ್ಗುಣವೆಂದು ಕಂಡವರೆಲ್ಲ ಕಲ್ಪಿತಕ್ಕೊಳಪಟ್ಟವರು. ಕಲ್ಪನಾರಹಿತವಾದ ಘನವು ಅಣುವಿಂಗಣುವಾಗಿ ರೇಣುವಿಂಗೆ ರೇಣುವಾಗಿ ತೃಣಕ್ಕೆ ತೃಣವಾಗಿರ್ದ ಘನವು. ತನುವಿನ ತನುವಾದುದು ಬಲ್ಲ. ಇಂದ್ರಿಯಂಗಳ ಇಂದ್ರಿಯಾದುದು ಬಲ್ಲ. ಪ್ರಾಣದ ಪ್ರಾಣವಾದುದು ಬಲ್ಲ. ಕರಣಂಗಳ ಕರಣವಾದುದು ಬಲ್ಲ ಅಂದರೆ ಮನದ ಮನವಾದದು ಬಲ್ಲ. ಜೀವದ ಜೀವವಾದುದು ಬಲ್ಲವನಾದುದರಿಂದ ಹೊದ್ದಿದ ಪ್ರಪಂಚ ನಳಿದ ರೂಪ ತಾ ರೂಪಾದಾತ ಎಂದು ಹೇಳಿಹರು.

''ತನುವಿನ ತನುವಾದುದು ಕಲ್ಪನಾರಹಿತವು. ಕಲ್ಪಿತನಾದವನು ಅವನೆಂತು ಹೊದ್ದವ. ಪ್ರಪಂಚವನಳಿದ ರೂಪವಾಗುವದು. ಅರು ಹೃದಯ ಕಣ್ತೆರೆಯಬೇಕೆಂದು ಗುರುವೆಂದು ಕಲ್ಪಿಸಿಕೊಂಡೆನಲ್ಲದೆ ಗುರುವಿಂಗೆ ಶಿಷ್ಯನೆಂಬುದುಂಟೆ ? ಶಿಷ್ಯಂಗೆ ಗುರುವೆಂಬುದುಂಟೆ ? ಗಮನಾಗಮನ ನಾಸ್ತಿಯಾದ ಲಿಂಗಕ್ಕೆ ಅಂಗವೆಲ್ಲಿಯದೋ ಗುಹೇಶ್ವರಾ'' ಎಂಬ ಪ್ರಭುವಿನ ಪ್ರಸಾದವಾಣಿ ನೋಡುವುಡೆ ಹೊದ್ದಿದ ಪ್ರಪಂವವ ನಳಿವ ರೂಪ ಅದು ಗುರುರೂಪ ಅರಿಯಲಿಲ್ಲದ ಅರುವೆ ತಾ ರೂಪಾದ ಮಹಂತ ಕಾಣಬಾರದ ಘನ ಅತೀಂದ್ರಿ ಪ್ರಾಣದ ಪ್ರಾಣವಾಗಿಹ ಪ್ರಾಣಲಿಂಗಿ ಮನದ ಮನವಾಗಿಹ ಸ್ವಯಂಜ್ಯೋತಿ ಲಿಂಗ. ಜೀವದ ಜೀವವಾಗಿಹ ನುಡಿಗಡೆಗೊಡದವನೆ ಗುರುಲಿಂಗ ಇಂತಪ್ಪ ತೆರಹಿಲ್ಲದ ಮಹಾಘನವೆ ತನುವನಳಿದುದು, ಪ್ರಕೃತಿ ಅಳಿದುದು, ಪ್ರಾಣವಳಿದುದು. ಜ್ಞಾನವದು ಒಂದನ್ನೊಂದಾಪೇಕ್ಷಿಸಿದ ಜ್ಞಾನವಳಿದು ಗುರು, ಲಿಂಗ, ಜಂಗಮ ಪ್ರಸಾದವೆಂಬ ಹೆತ್ತರಿವು ಅಳಿದು, ನಿಜದಿರುವ ತೋರುವ ನಿರವಧಿಯೆ ಗುರುವೆನ್ನದ ಜಂಗಮವಾದ್ದರಿಂದ ಕಲ್ಪನಾರಹಿತ. ಅದು ನುಡಿಗೆಡೆಗೊಡದ ಘನವಾದುದು ನುಡಿಗೊಳಪಟ್ಟುದು ಕಲ್ಪಿತವು. ಇದು ಕಾರಣ ಗುರು, ಲಿಂಗ, ಜಂಗಮ ಪ್ರಸಾದವೆಂಬ ಚತುರ್ವಿಧ ನಿಕ್ಷೇಪ ತನ್ನಂತರಂಗದಲ್ಲಿಯೆ ಕಾಣುವದು ಎಂದು ಹೇಳಿಹರು.

ಲೋಕತ್ರಯಕ್ಕೆ ಕಪಿಲಸಿದ್ಧ ಮಲ್ಲಿಕಾರ್ಜುನನೆ ಗುರುರೂಪವಾದ :

ತ್ರಿಲೋಕವೆನಿಸಿಕೊಳ್ಳುವ ಸ್ವರ್ಗ, ಮರ್ತ್ಯ, ಪಾತಾಳಕ್ಕೂ ಕಪಿಲಸಿದ್ಧ ಮಲ್ಲಿಕಾರ್ಜುನ ಗುರು ರೂಪಾದ, ಊರ್ಧ್ವ ಭಾಗವಾದ ಜ್ಞಾನಿ ಲೋಕಕ್ಕೂ ಮದ್ಯಭಾಗವಾದ ಅಂತರಾತ್ಮ ಲೋಕಕ್ಕೂ, ಅಧೋಭಾಗವಾದ ಅಭಾಸ ಲೋಕಕ್ಕೂ ಕಪಿಲಸಿದ್ದ ಮಲ್ಲಿಕಾರ್ಜುನ ಗುರುರೂಪಾದ. ಅಧೊಭಾಗವಾದ ಆಭಾಸ ಲೋಕಕ್ಕೂ ಕಪಿಲಸಿದ್ಧ ಮಲ್ಲಿಕಾರ್ಜುನ ಗುರುರೂಪಾದ. ಅಧೊಭಾಗವಾಗಿಹ ವಿಷಯ ಸುಖಕ್ಕಾಗಿ ಕರ್ಮ ಮಾಡುವ ಕರ್ಮಿಗಳ ಲೋಕ ಪಾತಾಳವಾಗಿದೆ. ಮಧ್ಯಭಾಗವಾಗಿಹ ಒಚ್ಚೊಚ್ಚೆ ಭಕ್ತರು ಒಚ್ಚೊಚ್ಚಿಭವಿಗಳಾಗಿಹ ಉಪಾಸನಾಕಾಂಡ ಭಾಗವೆ ಮರ್ತ್ಯಲೋಕವಾಗಿದೆ. ಊರ್ಧಭಾಗವಾಗಿಹ ಜ್ಞಾನಲೋಕವದು ಶ್ರವಣ ಮನನ ನಿಧಿಧ್ಯಾನಿ ನಡೆದಿರುವ ಜ್ಞಾನ ಕಾಂಡವೆ ಸ್ವರ್ಗವಾಗಿದೆ ಎಂದು ತಿಳಿವುದು.

ಸ್ವರೂಪಾನು ಸಂದಾನ ಮಾಡುವ ಗುರುಪುತ್ರರಿಗೂ ಪ್ರಣವ ಉಪಾಸನಾ ಮಾಡುವ ಅಹಂಗ್ರಹದಲಿತೀಯವಾದ ಭಕ್ತವೃಂದಕ್ಕೂ ಸರ್ವಾರ್ಪಣ ಮಾಡುವ ನಿಷ್ಕಾಮ ಕರ್ಮಿಗಳಿಗೂ ಶ್ರೀಗುರುವಾದಾತ ಕಪಿಲಸಿದ್ಧ ಮಲ್ಲಿಕಾರ್ಜುನನು ಎಂದು ಹೇಳಿಹರು.

ವಚನ – 2

ಕಂಡುದ ಹಿಡಿಯಲೊಲ್ಲದೆ ಕಾಣದುದ ನರಸಿ ಹಿಡಿದಿಹೆನೆಂದಡೆ
ಸಿಕ್ಕದೆಂಬ ಬಳಲಿಕೆ ನೋಡಾ ! ಕಂಡುದನೆ ಕಂಡು ಗುರುಪಾದವ ಹಿಡಿದಲ್ಲಿ
ಕಾಣದುದ ಕಾಣಬಹುದು ಕಾಣಾ ಗುಹೇಶ್ವರಾ.

ತಾತ್ಪರ್ಯ : ಕಂಡುದ ಹಿಡಿಯಲೊಲ್ಲದೆ ಕಾಣದುದು ನರಸಿ ಹಿಡಿದಿಹೆನೆಂದಡೆ ಸಿಕ್ಕದೆಂಬ ಬಳಲಿಕೆ ನೋಡಾ :

ಕಂಡುದು ಏನು? ಗುರುಪಾದ ಗುರುಪಾದ. ಏಕೆ ಹಿಡಿಯಬೇಕು? ಕಾಣಬಾರದ ಘನವದರಿಂದ ಹಿಡಿಯಬೇಕು. ಕಾಣದುದು ಆವುದು? "ಯಥಾ ವಾ ಚೊ ನಿವರ್ತಂತೆ ಅಪ್ರಾಪ್ಯ ಮನಸಾಸಹ" ಆವುದು ವಾರ್ ಮನಸ್ಸಿಗೆ ಕಾಣದ್ದಾಗಿದೆಯೊ ಅಂಥ ಅಪ್ರಮಾಣ ಗಮ್ಯವಾದ ತನ್ನ ಸ್ವರೂಪವನ್ನು ಗುರುಪಾದದಿಂದ ಶ್ರೀಗುರು ಕಾರುಣ್ಯದ ಅನುವಿನಿಂದ ಕಾಣದುದು ಕಾಣುವನು. ಗುರುಪಾದ ಕಂಡರೂ ಅದರಲ್ಲಿ ಭಕ್ತಿ ಮಾಡದೆ ನನ್ನ ಸ್ವರೂಪ ಕಾಣಲು ನಾನೇಕೆ ಗುರುಪಾದವ ಹಿಡಿಯುವದು ? ಸ್ವರೂಪ ಚಿಂತನ ಮಾಡಿದರೆ ನನಗೂ ಅಚಿಂತ್ಯಪದ ಪ್ರಾಪ್ತವಾಗುವದೆಂಬುದು ಭ್ರಮವು ಎಂದು ಪ್ರಭು ಎಚ್ಚರಿಸಿಹನು. ಕಂಡುದು ? ಶ್ರೀಗುರು ಎನ್ನುವವರು ಬಹಳ ಭಾವುಕರಿಹರು.

ಶ್ರೀಗುರು ಕಂಡವರು ಯಾರು? ನರರೂಪಾಗಿ ಕಾಣುವದರಿಂದ ಸಕಲರು ಕಂಡಿಹೆವು ಎನ್ನುವರು. ವಶಿಷ್ಠ ಗುರುಘನನನ್ನು ವಿಶ್ವಾಮಿತ್ರ ಕಂಡಿರುವೆನೆನ್ನುತ್ತಿದ್ದ. ಇತ್ತ ಮೂವ್ವತ್ತು ಮೂರು ಕೋಟಿ ದೇವತೆಗಳಿಗೆ ಗುರುವಾಗಿದ್ದನು ಸಕಲರು ಗುರುಭಾವನೆ ಮಾಡುತ್ತಿದ್ದರು. ಆದರೂ ಅನನ್ಯ ಭಕ್ತರು, ಅವರು ತಮ್ಮ ಅಂತರಂಗಲ್ಲಿಯೆ ಕಂಡರು. ದಶರಥ ಮಹಾರಾಜ ಶ್ರೀರಾಮ, ಲಕ್ಷ್ಮಣ, ಭರತ ಶತೃಘ್ನ ಇವರುಗಳೆ ಶ್ರೀಗುರುವ ಕಂಡವರು ಹಾಗೆ ಪ್ರಥಮಾಚಾರ್ಯ, ಲಿಂಗಾಚಾರ್ಯ, ಜಂಗಮಾಚಾರ್ಯ, ಪ್ರಸಾದಾಚಾರ್ಯ, ಸಕಲಾಚಾರ್ಯನಾ

ಗಿಹ ಗುರುಲಿಂಗವ ಚನ್ನಬಸವಣ್ಣ , ಪ್ರಭು ಅನುಮಿಷ , ಅಜಗಣ್ಣ ಮೊದಲಾದವರು ಇತ್ತ ಶರಣೆಯರಾದ ನೀಲಾಂಬಿಕೆ ಅಕ್ಕಮಹಾದೇವಿ, ಅಕ್ಕನಾಗಲಾಂಬಿಕೆ ಸತ್ಯ ಮೊದಲಾದವರು ಶ್ರೀಗುರುವ ಕಂಡವರು

ನರರೂಪದಲ್ಲಿ ಗುರುರೂಪಾಗಿ ಬಂದರೂ ಗುರುಪಾದ ಕಂಡವರು ವಿರಳ. ಕರ್ಮಿಗಳಿಗೂ ತಪಸ್ವಿ. ತ್ಯಾಗಿ, ಯೋಗಿ, ಅಣಿಮಾದಿ ಸಿದ್ದ ಪುರುಷರಿಗೂ ಗುರುಪಾದ ಕಾಣುವದು ದುರ್ಲಭ. ಗುರುವ ಕಾಣಲು ಶಿಷ್ಯರಾದವರಿಗೆ ಅಸಾಧ್ಯವು. ಅನನ್ಯ ಭಕ್ತನಾದವಂಗೆ ಸಾಧ್ಯವು. ಗುರು ಶಿಷ್ಯರ ಮಧ್ಯದಲ್ಲಿದ್ದ ವಸ್ತು ಕಂಡವಂಗೆ ಗುರುಲಿಂಗವು ಕಾಣುವದು. ಗುರುವಿಂಗೆ ಗುರುವಾಗಿ ಕಾಣ ಹೋದವರಿಗೆ ತನ್ನಂತರಂಗದಲ್ಲಿ ಗುರುಪಾದ ಕಾಣುವನು. ಶ್ರೀಗುರು ಅಹಮಿಲ್ಲದ ಚಿದೀಶ್ವರನಾಗಿಹುದರಿಂದ ಗುರುಪಾದ ಕಾಣುವದು ವಿರಳ. ಗುರುಪಾದ ಕಂಡವರು ಪ್ರಭುದೇವ ಗುರುಘನ ಶೃತಿಗಗೋಚರ ಅನುಪಮ ಅಕಲ್ಪಿತ ಅಚಿಂತ್ಯನು ಮಾತಿಲ್ಲದವನು ಶಬ್ದ ಮುಗ್ಧನು ನೆಲೆಯಿಲ್ಲದ ನಿಲುವು ಕಂಡವರು ಶರಣರು ಶರಣೆಯರು. ಗುರುಶಿಷ್ಯರ ಮಧ್ಯದಲ್ಲಿದ್ದ ವಸ್ತುವ ಕಂಡವರು ದೇವ ದೇವ ಅರುವಿಂಗರುವು ಸತ್ತದ ಸತ್, ಚಿತ್ತದ ಚಿತ್, ಆನಂದದ ಆನಂದ, ನಿತ್ಯದ ನಿತ್ಯ , ಪೂರ್ಣದ ಪರಿಪೂರ್ಣ. ಇದು ಶೃತಿಗಗೋಚರವು. ಗುರು ದರ್ಶನವದು ಜ್ಞಾನಾಮೃತ ಇಂತಪ್ಪ ಖಂಡಿತವಲ್ಲದ ಅಖಂಡಿತವ ನಾ ತಿಳಿದೆನೆನ್ನುವವರು ಭ್ರಾಂತರು ದುರಾಭಿಮಾನಿಗಳು ಇದು ಕಾರಣ ಶೃತಿಯು ನಿರ್ಲಜ್ಜಾ ಗುರು ಸನ್ನಿಧೌ ಎಂಬಂತೆ ನರಹಂಭಾವಿಗಳಾಗಿಹ ಅನನ್ಯ ಜ್ಞಾನೀ ಭಕ್ತರೆ ಗುರು ಪಾದಕಂಡವರು. ಇನ್ನುಳಿದ ಕಲ್ಪಿತರಾಗಿಹ ಮುಮುಕ್ಷವೃಂದ, ಜಿಜ್ಞಾಸುವೃಂದ, ಬೋಧಾ ಮೂರ್ತಿಯಾಗಿಹ ಗುರುವ ಕಂಡರಲ್ಲದೆ; ಪ್ರಭು ಬಸವಾದಿ ಪ್ರಮಥರು ಶರಣೆಯರು ತಮ್ಮ ಅಂತರಂಗದಲ್ಲಿ ಗುರುಲಿಂಗದುದಯ ಕಂಡವರು.

ಗುರುಲಿಂಗ ಶೃತಿಗೆ ಮೀರಿ ಬೆಳಗುವ ಚಿದ್ಘನ. ಬೋಧಕ್ಕೆ ಮೀರಿ ಬೆಳಗುವ ಚಿಜ್ಯೋತಿ. ಇದು ಬೋಧಕವಾಗದ ಗುರುಲಿಂಗ ಮರವರುವು ಕಾಣದ ಗುರುಲಿಂಗ.ನಿಸ್ಸೀಮ ಗುರುಲಿಂಗ. ಇಂತಪ್ಪ ಗುರುಲಿಂಗದುದಯ ಕಂಡು ಅರಸದವನಾದ ಆರಾಧಿಸದವನಾದ ಅಚಿಂತ್ಯನಾದ. ಅಕಲ್ಪಿತನಾದ ಗುರುದರ್ಶನವದು ಅಮೃತಾಹಾರ . ಇದು ಜ್ಞಾನಾಮೃತ ತಾನೆ. ಜ್ಞಾನಾನಂದವದು ಸ್ವತಃ ಸಿದ್ದವು.

ವಚನ - 3

ಅರಿದಿಹೆನೆಂದಡೆ ಅರುಹಿಂಗಸಾಧ್ಯ ನೆನದಿಹೆ ನೆಂದಡೆ ನೆನಹಿಂಗಸಾಧ್ಯ
ಭಾವಿಸಿಹೆನೆಂದಡೆ ಭಾವಕ್ಕಸಾಧ್ಯ ವಾಙ್ಮನಕ್ಕಗೋಚರ ಲಿಂಗವನರಿವ ಪರಿ ಎಂತಯ್ಯ
ಗುರು ತೋರದನ್ನಕ್ಕರ ? ಗುರು ಶಿಷ್ಯರ ಮಧ್ಯದಲ್ಲಿ ಸ್ವಯಂ ಜ್ಯೋತಿ ಲಿಂಗ
ಉದಯವಪ್ಪುದೆಂಬ ಶೃತಿ ಹುಸಿಯೇ? ಕೂಡಲಸಂಗಮದೇವಾ
ನಿಮ್ಮ ಮಹಾನುಭಾವರ ಮಥನದಿಂದ ಎನ್ನಲ್ಲಿ ನಿಜವ ನೆಲೆಗೊಳಿಸಾ ಪ್ರಭುವೆ.

ತಾತ್ಪರ್ಯ : ಬಸವರಾಜ ದೇವರು ನಿಜದ ನಿಲವು ತನ್ನಲ್ಲಿ ಅಚಲವಾಗಿ ಉಳಿಯಲು ಗುರು ತೋರದನ್ನಕ್ಕರ, ಕರುಣಿಸುವದನ್ನಕ್ಕರ ಅದೆಂತು ಸಾಧ್ಯ ? ಎಂದು ಗುರು

ಕಾರುಣ್ಯದಿಂದ ಗುರು ಶಿಷ್ಯರ ಮಧ್ಯದಲ್ಲಿ ಉದಯವಪ್ಪ ಸ್ವಯಂಜ್ಯೋತಿ ಲಿಂಗದನುವ ತೋರಿಸುತ್ತಿಹನೆಂಬುದು ಶೃತಿ ಹುಸಿಯೆ ಎಂದು ಅಭಯ ಹಸ್ತದ ಕೃಪೆಗೈಯುತ್ತಿಹನು.

ಅರಿದಿಹೆನೆಂದಡೆ ಅರುಹಿಂಗಸಾಧ್ಯ :

ನಿಜವದು ತೋರಿ ಇಲ್ಲವಾಗುವ ಮಾಯಿಕವಲ್ಲ. ತೋರುವದಾಗಿದ್ದಲ್ಲಿ ಅದನ್ನು ಅರಿದಿಹೆನೆಂದಡೆ ಅರುವಿಂಗಸಾಧ್ಯವೆಂದು ಬಿತ್ತರಿಸುತ್ತಿದ್ದಿಲ್ಲ. ನಿಜವೆಂಬುದು ದೃಕ್‌ರೂಪ ಅರಿವು ಆಗಿದ್ದಲ್ಲಿ ಅರಿಯಲನುವಾದ ಘನವಾಗುತ್ತಿತ್ತು. ಅರಿಯಲಿಲ್ಲದ ಅರುವು ಆದ್ದರಿಂದ ಇದು ಅರಿಯುವುದಲ್ಲ. ತನ್ನಿರುವು ಮರೆಯುವದಲ್ಲ. ಇದು ಕಾರಣ ನಿಜವದು ತಿಳಿಸಿಕೊಳ್ಳುವ ನಾಮರೂಪವು ಆಗಿಲ್ಲ ತಿಳಿಯುವ ದೃಕ್ ಆಗಿಲ್ಲವೆಂದಲ್ಲಿ ಅದನ್ನು ಪ್ರಕಾಶಕ ಪ್ರಕಾಶಿತ ಎಂದು ಹೇಗೆ ಹೇಳುವದು. ಅರಿವ ಅರುಹಿಸಿಕೊಂಬುದು ಎಂದು ಹೇಗೆ ಹೇಳುವದು.

ನೆನದಿಹನೆಂದಡೆ ನೆನಹಿಂಗಸಾಧ್ಯ :

ನಿಜವದು ನೆನಹಿಂಗೆ ನಿಲುಕದ್ದು ಕಲ್ಪಿತಕ್ಕೆ ಒಳಪಟ್ಟಲ್ಲಿ ನೆನಹಿಂಗೆ ಸಾಧ್ಯವಾಗುತ್ತಿತ್ತು. ನೆನಹಿಂಗೆ ಮೀರಿದ ಘನವ ನೆನೆಯುವದದೆಂತು? ಕಲ್ಪಿತವಲ್ಲದ ಘನಕ್ಕೆ ಜೀವನೆನಬೇಕೋ! ಅಂತರಾತ್ಮ ನೆನಬೇಕೋ? ಪರಮನೆನಬೇಕೋ? ಈ ಮೂರು ನೆನಹಿಂಗೆ ಒಳಪಟ್ಟಲ್ಲಿ ನೆನಹಿಂಗಸಾಧ್ಯವಾಗಲಿಲ್ಲವೆಂದಲ್ಲಿ ನುಡಿಗೊಳಪಟ್ಟುವು ಅಕಲ್ಪಿತ ಘನವಾಗವು ಇದು ಕಾರಣ ಅಕ್ಕ ಮಹಾದೇವಿಯು.

''ಲಿಂಗವೆನ್ನೆ ಲಿಂಗೈಕ್ಯವೆನ್ನೆ ಸಂಗವೆನ್ನೆ ಸಮರಸವೆನ್ನೆ ಆಯಿತೆನ್ನ ಆಗದೆನ್ನೆ ಚೆನ್ನಮಲ್ಲಿಕಾರ್ಜುನನಲ್ಲಿ ಏನೂ ಎನ್ನದೆ ಶಬ್ದಮುಗ್ದವಾಗಿದ್ದೆ'' ಎಂದು ಬಿತ್ತರಿಸಿದುದು ನೋಡುವುಡೆ ನುಡಿಗೊಳಪಟ್ಟುದು ನೆನಹಿಂಗೊಳಪಟ್ಟುದು ನಿಜತತ್ವವಲ್ಲ. ನಿಜವದು ತತ್ವ. ಅತತ್ವವೆಂದು ಭಾವಿಸಿಹೆನೆಂದಡೆ ಭಾವಕ್ಕಸಾಧ್ಯವು: ಭಾವಕ್ಕಸಾಧ್ಯವಾಗಿರುವಲ್ಲಿ ಭಾವಿಸುವ ಭಾವಲಿಂಗಕ್ಕೂ, ಸತ್ ಎಂಬ ಲಿಂಗತತ್ವಕ್ಕೂ ಮೀರಿದೆ. ಚಿತ್ ಎಂಬ ಜಂಗಮ ತತ್ವಕ್ಕೂ ಮೀರಿದೆ. ಆನಂದವೆಂಬ ಪ್ರಸಾದ ತತ್ವಕ್ಕೂ ಮೀರಿದೆ. ನುಡಿಗೆ ಮೀರಿದುದನ್ನು ಭಾವಿಸುವದದೆಂತು? ಇದು ಕಾರಣ ವಾಙ್ಮನಕ್ಕಗೋಚರ ಲಿಂಗವ ನರಿವ ಪರಿಎಂತಯ್ಯ: ವಾಕ್ ಮನಸ್ಸಿನಿಂದ ಮೀರಿದುದನ್ನು ವಾಕ್ಕಿನಿಂದ ಕಥನ ಮಾಡುವದೆಂತು? ಮನಸ್ಸಿನಿಂದ ಕಲ್ಪಿಸುವದೆಂತು? ಅರಿವದದೆಂತು? ತೆರಹಿಲ್ಲದ ಘನ ಗಂಭೀರ ಮಹಾಘನವನ್ನು ಎಷ್ಟೋ ಜಿಜ್ಞಾಸುಗಳು ವಾಕ್ ತಾವಾಗಿ ಕಲ್ಪಿತಕ್ಕೊಳಟ್ಟು ನೆನೆಯಹೋದಾಗ ನೆನಹಿಂಗಸಾಧ್ಯವಾದುದು ತಿಳಿಯದಂತಾಗಿ ಗುರು ತೋರದನ್ನಕ್ಕರ: ಎಂದು ಹೇಳಿಹರು.

ಗುರು ಶಿಷ್ಯರ ಮಧ್ಯದಲ್ಲಿ ಸ್ವಯಂಜ್ಯೋತಿ ಲಿಂಗ ಉದಯವಪ್ಪುದೆಂಬ ಶೃತಿ ಹುಸಿಯೆ? ಕೂಡಲ ಸಂಗಮದೇವಾ:

ಎಂದು ಶೃತಿ ಪ್ರಮಾಣ ಕೊಟ್ಟು ಹೇಳಿಹರು. ಗುರು ಶಿಷ್ಯರ ಮಧ್ಯದಲ್ಲಿ ಸ್ವಯಂಜ್ಯೋತಿಲಿಂಗ ಗುರು ತೋರುವ ತನಕ ಕರುಣೆ ಸದವಿನಃ ನಿಜವ ಕಾಣಲು ಅಸಾಧ್ಯವೆಂದು ಬಸವರಸರು ಬಿತ್ತರಿಸಿರುವಲ್ಲಿ ಗುರುಘನ ಕಾಣದುದನ್ನು ತೋರುವ ದೇವ ದೇವ. ಗುರುಲಿಂಗ ಭಕ್ತರ ಪರಿಶುದ್ದ ಹೃದಯಮಂದಿರದಲ್ಲಿದ್ದ ವರ್ಣಾತೀತ ಸ್ವಯಂಜ್ಯೋತಿ. ಆ ಸ್ವಯಂಜ್ಯೋತಿ ಲಿಂಗ ಶ್ರೀಗುರು. ಈ ಮಹಾಂತನ ಕಾರುಣ್ಯ ವಾಙ್ಮನಕ್ಕೆ ನಿಲುಕದ ಕಾರುಣ್ಯ. ಈ ಕಾರುಣ್ಯ ಗುರುಶಿಷ್ಯರ ಮಧ್ಯದಲ್ಲಿ ಸ್ವಯಂಜ್ಯೋತಿ ಲಿಂಗ ಉದಯಿಸುವ ಕಾರುಣ್ಯ. ಕಾರುಣ್ಯದ ಘನ

ವ ನೋಡಿರೇ? ಬೋಧರೂಪಿ ಗುರುವ ಕೊಂದಿತ್ತು. ಶಿಷ್ಯತನವ ಕೊಂದಿತು. ಅರುವೆಂಬ ಗುರುತನವ ಕೊಂದಿತ್ತು. ಮರವ ಕೊಂದಿತ್ತು. ಅರಿವ ಚಿದಹಮ್ಮಕೊಂದಿತ್ತು. ಉಪಮಿಸುವದೆಂತು? ಅರಿವವನಾಗಲಿಲ್ಲ ಅರುಹಿಸಿಕೊಂಬುದಾಗಲಿಲ್ಲ ಸಮತೆ ಎನ್ನರಿವು ಆಗಿಹ ಘನಕ್ಕೇನನ್ನಬೇಕು. ಧ್ವನಿಯ ಮರೆಯಲ್ಲಿರ್ದುದ ತೋರಿದ, ತೋರಬಾರದ ಘನವ ತೋರಿದ.

ಹೇಳಲೆಂದೇನೋ? ಹೇಳಬಾರದ ಘನವ ತೋರಲೆಂದೇನೋ ಎಂಬ ಪರಮರಹಸ್ಯವ ತೋರಿದುದಕ್ಕೇನನ್ನಬೇಕು? ಮಾತಿಲ್ಲದವನಾಗಿ ಮಾತಿಲ್ಲದವನ ತೋರಿದುದಕ್ಕೇನನ್ನಬೇಕು? ನುಡಿದುದು ನೋಡಿಯೇ ಇಲ್ಲ ನೋಡಿದುದು ನುಡಿದುದಿಲ್ಲ, ಏನೆಂದೆನಲಿಲ್ಲದ ಅರುವು ಅರುವೆನ್ನದ ಅರುವು. ಇಂತಪ್ಪ ತಾನೆ ತಾನಾದ ಸ್ವಯಂಜ್ಯೋತಿಗೆ ಏನೆನ್ನಬೇಕು. ಇದು ಬೋಧ ಅಬೋಧವ ಬೆರಸುವದಲ್ಲ, ಬೋಧಾ ಬೋಧ ಮಿಶ್ರವು ಬೆರಸುವದಲ್ಲ, ಕಾಲ ಅಕಾಲಗಳ ಬೆರಸದ ಸ್ವಯಂಜ್ಯೋತಿಗೆ ಗುರುಜ್ಯೋತಿ ಎನ್ನಲೇ ಶಿಷ್ಯ ಜ್ಯೋತಿ ಎನ್ನಲೇ? ಇದು ಅಜ್ಞಾನ ಕಾಲದಲ್ಲಿಲ್ಲದುದು ಎನ್ನಲೆ? ಜ್ಞಾನ ಕಾಲದಲ್ಲಿದ್ದುದು ಎನ್ನಲೆ? ನಿರಂತರ ಇದ್ದು ಘನಕ್ಕೆ ಘನ ಶಬ್ದ ಮುಗ್ಧ ಏನನ್ನಬೇಕು?

ಗುರುವಿನ ಪರಿ ವಿಪರೀತವಾಯಿತ್ತಯ್ಯ ಭ್ರಮರ ಕೀಟನ್ಯಾಯದಂತೆ ಗುರು ತನ್ನ ನೆನಹನ್ನಬರ ತನ್ನಂತೆ ಮಾಡಿದ ಇನ್ನು ಶಿಷ್ಯನಾಗಿ ಪೂಜಿಸುವವರಾರು ಹೇಳಾ ಗುಹೇಶ್ವರಾ.

ಗುರುಕೃಪಾ ಘನವ ವರ್ಣಿಸುವದದೆಂತು? ತಾನು ಹೇಗೊ ಹಾಗೆ ಮಾಡಿದ ತಾನು ಏನೊಂದಾಗದ ಘನ ಎನ್ನ ಏನೊಂದಾಗದ ಘನವಾಗಿದ್ದುದ ತೋರಿ ಎನ್ನ ತನ್ನಂತೆ ಮಾಡಿದ. ಇಬ್ಬರ ಮಧ್ಯದಲ್ಲಿದ್ದ ವಸ್ತುವ ತೋರಿ ತನ್ನ ಗುರುತನ ಕಾಣದಂತೆ ಮಾಡಿದ. ಇತ್ತ ಶಿಷ್ಯತನ ಕಾಣದಂತೆ ಮಾಡಿದ. ಕಾಣ ಬಾರದ ಘನವೆ ಎನ್ನರಿವು ತನ್ನಿರುವ ಒಂದಾದುದು ಶಬ್ದಕ್ಕೆ ತೆರಹಿಲ್ಲವಾದುದು ಕಂಡು ಎನ್ನ ತನ್ನಂತೆ ಮಾಡಿದ. ತಾನು ಗುರುವಾಗದ ಜ್ಯೋತಿ ಆನು, ಶಿಷ್ಯನಾಗದ ಜ್ಯೋತಿ. ಇದು ಏನೊಂದೆನ್ನದ ಮುನ್ನ ಇದ್ದುದರಿಂದ ನಿರಂತರ ಮಂಗಲಮಯ ಸ್ವಯಂಜ್ಯೋತಿಲಿಂಗವದು ಮಾತಾಡದ ಘನವು ಮಾತಿನಲ್ಲಿ ಬಳಸುವದದೆಂತು ಎಂದು ಹೇಳಿಹರು.

ಕೂಡಲ ಸಂಗಮದೇವಾ ನಿಮ್ಮ ಮಹಾನುಭಾವರ ಮಥನದಿಂದ ನಿಜವ ನೆಲೆಗೊಳಿಸಾ ಪ್ರಭುವೆ: ನಿಜವ ನೆಲೆಗೊಳ್ಳಲು ಮಹಾನುಭಾವರ ಮಥನವೇ ಅವಶ್ಯ. ಮಹಾನುಭಾವರು ಯಾರು? ಅವರ ಮಥನವೇನು? ನಿಜವರಿತವರೆ ಮಹಾನುಭಾವರು. ಸ್ವಯಂಜ್ಯೋತಿಲಿಂಗವದು ತನ್ನಿರುವಾಗಿ ತನ್ನಿಂದ ತನಗೆ ಸಿದ್ಧವಾಗದುದು. ಲಿಂಗವದು ತನ್ನಿರುವಾಗಿ ತೆರಹಿಲ್ಲದ ನುಡಿ ತೆರಹಿಲ್ಲದ ವಿಶ್ರಾಮವಕಂಡುದು. ಮರವರುವಿನ ನುಡಿಯಲು ನುಡಿಗವಕಾಶವ ಕೊಡದೆ ನುಡಿಯ ಸೇರದಿದ್ದುದು. ಮರವರುವಿನ ನಡೆಗೆ ಅವಕಾಶಕೊಡದೆ ಅರಿಯಲಿಲ್ಲದ ಅರುವು ತಾನಾದುದು. ಅವರ ಮಥನದಲ್ಲಿ ನಿಜವ ನೆಲೆಗೊಳಿಸುವದು. ಅಲ್ಲಿ ತಾನು ಗುರುವಾಗದವನು ಶಿಷ್ಯನಾದಗವನು. ಆ ನೆನ್ನದವನು, ನೀನೆನ್ನದವನು. ಅರಿವ ಅರುಹಿಸಿಕೊಂಬ ಈ ಉಭಯಂಗಳ ನಷ್ಟಮಾಡಿ ಅರಿಯಬಾರದ ಘನವಾಗಿಹ ತನ್ನ ನಿಜದಲ್ಲಿ ಸಕಲ ಶಬ್ದಂಗಳ ಅವಸಾನ. ನೆನಹು ಅವಸಾನ, ನಿರ್ಣಯ ಅವಸಾನ ಭಾವಂಗಳು ಅವಸಾನ, ಅರಿತೆ ಅರಿಯೆನೆಂಬುದರ ಅವಸಾನ ಶಬ್ದಮುಗ್ಧ , ಸವೆಯದ ಸುಖ, ಅಚಿಂತ್ಯದ ನಿಲವು, ಇಲ್ಲಿ ಪಡೆದ ಪದಂಗಳಿಲ್ಲ ಕಳೆದುಕೊಂಡು ನಾಮರೂಪಂಗಳಿಲ್ಲ, ತಾನೆ ತಾನಾಗಿದ್ದ ಸ್ವಯಂಜ್ಯೋತಿ. ನಿರಂತ

ರವಾಗಿಹ ಮಂಗಲಮಯ ಜ್ಯೋತಿಯ ಸಿದ್ದ ಮಾಡುವ ಸ್ವಯಾನುಭವವೆ ಮಹಾನುಭಾವರ ಮಥನ. ಇದು ಮಾತಿಲ್ಲದ ಮಥನ ನಾ ನೀನೆನ್ನದಿಹ ಮಥನ. ಶಬ್ದಕ್ಕಿಂಬು ಕೊಡದ ಮಥನ. ಬೋಧಾ ಬೋಧಕ್ಕಿಂಬು ಕೊಡದ ಮಥನ. ನುಡಿದು ನುಡಿಯದಂತಿದ್ದ ಮಥನ. ನಡೆದು ನಡೆಯದಂತಿದ್ದ ಮಥನ. ಇಂತಪ್ಪ ಮಹಾನುಭಾವರ ಮಥನದಿಂದ ನಿಜವ ನೆಲೆಗೊಳಿಸಾ ಪ್ರಭಾವೆ ಎಂದು ಹೇಳಿಹರು.

ವಚನ - 4

> **ಎನಗೆ ನಿಮ್ಮ ನೆನೆದಾಗಲೆ ಉದಯ. ಎನಗೆ ನಿಮ್ಮ ಮರೆದಾಗಲೆ ಅಸ್ತಮಾನ,**
> **ಎನಗೆ ನಿಮ್ಮ ನೆನಹೇಜೀವ ಎನಗೆ ನಿಮ್ಮ ನೆನಹುವೆ ಪ್ರಾಣ ಕಾಣಾ ತಂದೆ.**
> **ಎನ್ನ ಹೃದಯದಲ್ಲಿ ಚರಣ ದುಂಡಿಗೆಯ ನೊತ್ತಯ್ಯ, ವದನದಲ್ಲಿ ಷಡಕ್ಷರಿಯ**
> **ಬರೆಯಯ ಕರುಣದಿಂದ ಕೂಡಲಸಂಗಮ ದೇವಯ್ಯ.**

ತಾತ್ಪರ್ಯ : ಎನಗೆ ನಿಮ್ಮ ನೆನೆದಾಗಲೆ ಉದಯ :

ಎನ್ನ ನಿಮ್ಮ ನೆನೆದಾಗಲೆ ಉದಯವಾದ ಉದಯವ ನೋಡಿರೇ? ಎನ್ನ ಅನುಭಾವ ದಗಮ್ಯವೆ, ಎನ್ನ ಅರುವಿನ ವಿಶ್ರಾಮವೆ, ಎನ್ನ ಭಾವದ ಬಯಕೆಯೆ, ಎನ್ನ ನಿಜದ ನಿಲವೆ, ಎನ್ನ ಪರಿಣಾಮದ ಮೇರುವೆ ಎನ್ನ ಮನದ ಮಹಿಮನೇ ನಿಮ್ಮ ಸುಳುಹು ಎತ್ತ ಲಡಗಿತ್ತು ಎಲೆ ಲಿಂಗವೆ ? ನಿಮ್ಮ ನಾಮವೆತ್ತ ನಿರ್ನಾಮವಾಯಿತ್ತು ಪರಮಗುರುವೆ ಎಂದು ನಿಮ್ಮ ನೆನದಾಗಲೆ ಉದಯ. ಓ ನನ್ನಯ್ಯನೆ ನಿಮ್ಮನೆನಹಿನಲ್ಲಿ ನೀವು ಉರಿಯುಂಡ ಕರ್ಪೂರ ದಂತಾದಿರಲ್ಲ ಪ್ರಭುವೆ. ಅಯ್ಯ ನಿಮ್ಮ ನೆನೆಯುವ ನೆನಹಿನ ಭಾಗ್ಯ ಇದಾರಿಗೆ ? ಎಲ್ಲರಂತಹ ನೆನಹು ನಿಮ್ಮದೇ? ನಿಮ್ಮ ನೆನಹು. ಅನುಭಾವದಗಮ್ಯದ ನೆನಹು . ಎನ್ನ ಅನುಭಾವದಗ ಮ್ಯವು, ಎನ್ನ ಅರಿವ ಅರುಹಿಸಿಕೊಂಬುದಕ್ಕೆ ಮೀರಿದಘನವಾದುದು. ಅದು ಅರಿಯ ಬಾರದ ಘನವಾದುದರಿಂದ ಎನ್ನ ಅನುಭಾವದ ಗಮ್ಯವೆ ಎಂದು ಹೇಳಿಹರು.

ಎನ್ನ ಅರುವಿನ ವಿಶ್ರಾಮವು ನೀವು ಅರುವಿಂಗರುವಾಗಿಹುದರಿಂದ ನಿಮ್ಮ ನೆನೆದಾ ಗಲೆ ಎನ್ನ ಹೃದಯದಲ್ಲಿ ನೀವು ಅರುವಿಂಗರುವಾದುದು ವೇದ್ಯವಾಗಿ, ಎನ್ನ ಅರುವಿನ ಕಾರ್ಯ ಕೊನೆಗೊಂಡಿತ್ತು. ಅರುವಿನ ಕಾರ್ಯಕೊನೆಗೊಂಡುದದನೇನೆಂಬೆ ಅರಿವ ಅರುಹಿಸಿ ಕೊಂಬ ಈ ಉಭಯ ತೋರಿಕೆ ಅರುವಿಂಗರುವಾಗಿಹ ಘನವ ಕಂಡು ಮೃಗ ಜಲದಂತಾಗಿ ಹವು. ಬಂಜೆಯ ಮಗನಂತೆ ನುಡಿ ಮಾತ್ರವಲ್ಲದೆ, ಇಲ್ಲಾದುದಿಲ್ಲಾದುದೆಂದಿಪ್ಪುದು ಇಲಾದು ದಿಲ್ಲಾದುದೆಂತಿಪ್ಪುದಾಗಿ ಎನ್ನ ಅರುವಿನ ವಿಶ್ರಾಮವಾಯಿತ್ತು.

ಎನ್ನ ಭಾವದ ಬಯಕೆಯು ನಿಮ್ಮ ಅರಿಯಲಿಲ್ಲದ ಅರುವ ಸ್ವೀಕರಿಸಿ ಅರಿಯಲಿಲ್ಲ. ನಿಮ್ಮಿರುವ ಮರೆದಂತಿರುವೆ. ಎನ್ನ ಭಾವ ಬಯಕೆಯು, ತೆರಹಿಲ್ಲದ ಲಿಂಗಭರಿತವೆಂಬ ನಿಮ್ಮ ಕಾರುಣ್ಯವಿಡಿದು ಅರಿದರಿದು ಲಿಂಗಭರಿತ ಶರಣ, ಶರಣ ಭರಿತ ಲಿಂಗವೆಂಬ ಭಾವದ ಬಯಕೆ ಎನ್ನ ನಿಜದ ನಿಲವೆ. ಓಹೋ ನಿಮ್ಮ ನಿಜ ನಿಲವೇ, ಅದು ವರ್ಣಾತೀತ, ಘನಕ್ಕೆ ಘನ. ನಿಜದ ನಿಲವೆ ಏನನ್ನುವದು ನುಡಿಗೆಡೆಗೊಡದ ಇರುವಿಂಗೆ ! ನುಡಿದುದಕ್ಕದೆ ಕೊರತೆ, ಲಿಂಗವೆಂಬುದು ತಪ್ಪಾಯಿತ್ತು. ತೆರಹಿಲ್ಲವೆಂಬುದೆ ತೆರಹಿಲ್ಲದಂತಾಗಿ ಲಿಂಗಭರಿತ ಶರಣಾ

ದುದು ಶರಣ ಭರಿತ ಲಿಂಗವಾದುದು ಶರಣನೆ ಬಲ್ಲ. ಎನ್ನ ಪರಿಣಾಮದ ಮೇರುವೆ ಇದು ಅಗಮ್ಯದಲ್ಲಿ ಗಮನಗೆಟ್ಟುದು ಅದೆಂತುಸರುವುದು ? ಅರಿಯಲಿಲ್ಲದ ಅರುವರಿತು ಅರಿವ ಅರುಹಿಸಿಕೊಂಬುದು ನಷ್ಟವಾಗಿ , ಅರಿಯದಂತಿದ್ದುದು ಅದೆಂತು ಉಸರುವುದು. ಸುಖದ ಸುಖದಲ್ಲಿ ಸುಖವೆಂಬ ನುಡಿಯು ನಷ್ಟವಾಗಿಹುದನ್ನು ಅದೆಂತುಸರುವುದು? ಆನಂದದ ಆನಂದವಿದ್ದುದು ಅದು ಆನಂದವೆಂದು ನಿರಾನಂದವೆಂದು ಹೇಗೆ ಹೇಳುವುದು? ಎನ್ನಮನದ ಮಹಿಮನೇ ಮನದೊಡೆಯನೆ ನಿಮ್ಮ ಸುಳುಹು ಎತ್ತಲಡಗಿತ್ತು. ಎಲೆ ಲಿಂಗವೆ ನಿಮ್ಮ ನಾಮವೆತ್ತ ನಿರ್ನಾಮವಾಯಿತ್ತು. ಎಲೆ ಪರಮಗುರುವೆ ಓ ಮನದ ಮಹಿಮನೆ ನಿಮ್ಮ ಸುಳುಹು ಎತ್ತಲಡಗಿತ್ತು ಎಲೆ ಲಿಂಗವೆ ಎನ್ನ ಮನವು ಗುರುಲಿಂಗದುದಯವಾಗಿ ಮನವು ಪುಶಿ, ಅದರ ಕಾರ್ಯವು ಪುಶಿ , ಮನವು ಪುಶಿಯಾದಲ್ಲಿ ಅದರ ಒಡೆಯನಾಗಿಹ ದೃಕ್ ರೂಪ ಅರಿವ ಅರುವು ಪುಶಿ, ಬೆಳಗಿಸಿಕೊಳ್ಳುವ ಮನವು ಪುಶಿ. ಬೆಳಗುವ ಮನದ ಮಹಿಮನು ಪುಶಿಯಾದುದರಿಂದ ನಿಮ್ಮ ಸುಳುಹು ಎತ್ತಲಡಗಿತ್ತು ಎಲೆ ಲಿಂಗವೆ. ನಿಮ್ಮ ಗುರುವೆಂಬ ನಾಮ ವೆತ್ತ ನಿರ್ನಾಮವಾಯಿತ್ತು. ಶರಣರು ಗುರುವಿಂಗೆ ಗುರುವಾಗಿಹ ಗುರುಲಿಂಗದುದಯ. ತಮ್ಮ ಅಂತರಂಗಕ್ಕೆ ವೇದ್ಯವಾಗಿ ಬೋಧರೂಪವಾಗಿಹ ಗುರುವೆಂಬ ನಾಮವೆತ್ತ ನಿರ್ನಾಮವಾಯಿತ್ತು. ಇಂತಪ್ಪ ಪರಮ ರಹಸ್ಯ ಎನ್ನಂತರಂಗದಲ್ಲಿ ನಿಮ್ಮ ನೆನದಾಗಲೆ ಉದಯವಾಯಿತ್ತು.

ಎನಗೆ ನಿಮ್ಮ ಮರೆದಾಗಲೆ ಅಸ್ತಮಾನ : ಓ ಗುರು ಲಿಂಗವೆ, ನಿಮ್ಮನ್ನು ಚಾರಿತ್ರ್ಯ ಪುರುಷನೆಂದು ಕಂಡುದು ಎನಗೆ ನಿಮ್ಮ ಮರೆದುದು. ಅದು ಎನಗೆ ಅಸ್ತಮಾನ. ಅರಿವ ಅರುಹಿಸಿ ಕೊಂಬುದನ್ನಾಗಿ ಮಾಡದುದು ಎನಗೆ ನಿಮ್ಮ ಮರೆದುದು ಅದು ಎನಗೆ ಕಾರ್ಗತ್ತಲು. ತಪಸ್ವಿ ತ್ಯಾಗಿ ಯೋಗಿ ಅಣಿಮಾದಿ ಸಿದ್ಧ ಪುರುಷನೆಂದು ಕಂಡುದು. ಅದು ಎನ್ನಯ ಮರವು ಭ್ರಾಂತಿ ! ಎನಗೆ ನಿಮ್ಮ ಮರೆದಾಗಳೆ ಅಸ್ತಮಾನ. ಅದು ಎನ್ನ ನಿಜ ವಿಕೃತ ಅದುವೆ ಮರಣ, ಅದುವೆ ಕಾರ್ಗತ್ತಲು. ಎನಗೆ ನಿಮ್ಮ ನೆನಹೇ ಜೀವ: ಅಯ್ಯ ಎನಗೆ ನಿಮ್ಮ ನೆನಹೆ ಜೀವವಾಗಿ ಭ್ರಮರ ಕೀಟ ನ್ಯಾಯದಂತೆ ಗುರು ತನ್ನ ನೆನಹನ್ನಬರ ತನ್ನಂತೆ ಮಾಡಿದುದನೆಂತುಪಮಿಸುವದು? ನಿಮ್ಮ ನೆನಹಿನ ಜೀವ ತಾನು ಅರಿಯಬಾರದ ಘನವರಿತು ಅರುವಿನ ವಿಶ್ರಾಮವಾಯಿತ್ತೆ, ಭಾವಕ್ಕಗವ್ಯವಾಯಿತೆ, ತನ್ನ ನಿಜದಿರುವುಳ್ಳ ನಿಜಾನಂದವಾಯಿತೆ? ಅದು ತನ್ನಯ ಪರಮಶಾಂತಿಯ ಪರಮಾನಂದಧಾಮವಾಯಿತೆ ? ಎನ್ನ ಜೀವದ ಜೀವವಾಗಿಹ ಅಗಣಿತ ಅಕ್ಷರೇಶ್ವರ ತಾನಾಯಿತೆ. ಪರಂಜ್ಯೋತಿ ತಾನಾದುದು ನಿಮ್ಮ ನೆನೆದ ನೆನಹಿನ ಪರಿಣಾಮವಯ್ಯ. ಎಂದು ಹೇಳಿಹರು.

ಎನಗೆ ನಿಮ್ಮ ನೆನಹೆ ಪ್ರಾಣ ಕಾಣಾ ತಂದೆ : ನಿಮ್ಮ ನೆನಹು ಸಾಮಾನ್ಯವೆ? ಪ್ರಮಾಣ ಗಮ್ಯವು. ಅಚಿಂತ್ಯದ ಲಿಂಗಭರಿತವೆಂಬ ನಿಮ್ಮ ಸ್ವಾನುಭವರೂಪಿ ಸಮ್ಯಜ್ಞಾನವು. ಅದು ನಿಮ್ಮ ಚರಣ ದುಂಡಿಗೆಯು ಎನ್ನೊಳಗೆ ಅಚಲವಾಗಿರಿಸುವಂತೆ ನಿಮ್ಮ ಕೃಪಾ ರೂಪಿ ಕಾರುಣ್ಯವನೊತ್ತಯ್ಯ ಎಂದು ಹೇಳಿಹರು.

ವದನದಲ್ಲಿ ಷಡಕ್ಷಯ ಬರೆಯಯ್ಯ. ಕರುಣದಿಂದ : ಹಣೆಯ ಲಿಖಿತವೆಂಬ ಭ್ರಮವ ಕಳೆದು. ಷಡ್ಧಾತು ಅದು ಷಡಕ್ಷರವೆಂದು ಎನ್ನ ತಲೆಯಲ್ಲಿ ಅರುವ ತುಂಬಯ್ಯ. ತ್ವಙ್ಮಯವದು ಓಂಕಾರ ರುಧರಮಯವದು ನಕಾರ. ಮಾಂಸಮಯವದು ಮಕಾರ. ಮೇಧೊ

ಮಯವದು ಶಿಕಾರ ಅಸ್ಥಿಮಯವದು ವಾ ಕಾರವು ಮಜ್ಜೋಮಯವದು ಯ ಕಾರ ಇಂತೀ ಷಡ್ಧಾತುವೆ ಷಡಕ್ಷರವಾಗಿಪ್ಪವು. ಎನ್ನ ವದನದಲ್ಲಿ ಷಡಕ್ಷರಿಯ ಬರೆಯಯ್ಯ ಕರುಣದಿಂದ ಕೂಡಲಸಂಗಮದೇವಾ. ಷಡಕ್ಷರಿ ಇದು ಅವಿನಾಶಿ ಮಂತ್ರ ನೋಡಾ ತೆರಹಿಲ್ಲದ ಮಹಾಘನದಿರುವ ಸೂಚಿಸುವ ಮಂಗಲಮಯ ಮಂತ್ರ ನೋಡಾ. ಅರಿವುಡೆ ತಾನೆ ಮಂತ್ರ. ತಾನೆ ಮಂತ್ರದರ್ಥವು ತಾನೆ ಮಂತ್ರಮಯ ತಾನೆಂಬುದು ತನಗದು ವಿಧಿತವು.

ವಚನ - 5

ಕಾಣಬಾರದ ಗುರು ಕಣ್ಗೆ ಗೋಚರವಾದರೆ ಹೇಳಲಿಲ್ಲದ ಭಿನ್ನಪ.
ಮುಟ್ಟಲಿಲ್ಲದ ಹಸ್ತ ಮಸ್ತಕ ಸಂಯೋಗ, ಹೂಸಲಿಲ್ಲದ ವಿಭೂತಿ ಪಟ್ಟಿ ಕೇಳಲಿಲ್ಲದ
ಕರ್ಣಮಂತ್ರ, ತುಂಬಿ ತುಳಕದ ಕಳಸಾಭಿಷೇಕ, ಆಗಮವಿಲ್ಲದ
ದೀಕ್ಷೆ , ಪೂಜೆಗೆ ಬಾರದ ಲಿಂಗ, ಸಂಗವಿಲ್ಲದ ಸಂಬಂಧ, ಸಯಮಪ್ಪನು
ಗ್ರಹಮಂ ಆನುಗೊಂಬಂತೆ ಮಾಡಾ ಗುಹೇಶ್ವರ.

ತಾತ್ಪರ್ಯ : ಕಾಣಬಾರದ ಗುರು ಕಣ್ಗೆ ಗೋಚರವಾದರೆ ಹೇಳಲಿಲ್ಲದ ಭಿನ್ನಪ :

ಕಾಣಬಾರದ ಗುರು ''ಅರಸಿ ತೊಳಲಿದರಿಲ್ಲ, ಹರಸಿ ಬಳಲಿದರಿಲ್ಲ, ಬಯಸಿ ಹೊಕ್ಕರಿಲ್ಲ , ತಪಸ್ಸು ಮಾಡಿದರಿಲ್ಲ , ಅದು ತನ್ನ ಅಹಕಾಲಕ್ಕಲ್ಲದೆ ಸಾಧ್ಯವಾಗದು.'' ಶಿವನೊಲಿದ ಚಿನ್ಹ ಅದು ಹೃದಯವಾಗಿಹ ಚಿನ್ಹ, ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗವ ಕೂಡಿ ಅಚಲಾನಂದ ದೊಳಿಪ್ಪ ಪರಮ ನಿರ್ಲೇಪಿಗೆ ಕಾಣಬಾರದ ಗುರು ಎಂದು ಹೇಳಿಹರು. ಈ ಘನ ಗುರು ಜ್ಞಾನಾನಂದವೆ ತಾನಾದ ಪರಮಾನಂದದೊಳಿಪ್ಪ ಜ್ಞಾನಸ್ವರೂಪ, ಜ್ಞಾನ ಘನ, ಚಿದ್ಘನ, ಚಿದ್ಘನರೂಪಿ, ಕಾಣಬಾರದ ಗುರು, ಕಣ್ಗೆಗೋಚರವಾದರೆ ಹೇಳಲು ಅವರ್ಣೀಯ.

ಸೂರ್ಯನು ಕಣ್ಗೆ ಗೋಚರವಾದರೆ, ಕಣ್ಣು ಸೂರ್ಯಪ್ರಕಾಶ ನೋಡಿ ಮೌನವಾದುದು ಕಂಡು ತನ್ನ ಗೆಳೆಯ ಜಿಹ್ವೆ ಪ್ರಕಾಶ ಪ್ರಕಾಶವೆಂದು ಹೇಳಿದಂತೆ. ಚಿದ್ಘನ ದೇವನು ಲಿಂಗಾಂಗ ಸಮರಸ ಜ್ಞಾನವುಳ್ಳ ಸುಮನ ರೂಪಿ ಶರಣಂಗೆ ಗೋಚರವಾಗಿ, ಮನಕರಗಿ ಹೃದಯ ವರಳಿ ಅರಿದರಿದು ನೋಡಿ ಅರುವಿನ ಪರಿಮಳವಾಗಿ ಸುಖದ ಸುಖವಾಗಿಹ ತೃಪ್ತವಾದ ಪ್ರಸಾದವಾಣಿಗೆ ಕಾಣಬಾರದ ಗುರು ಕಣ್ಗೆ ಗೋಚರವಾದರೆ ಹೇಳಲಿಲ್ಲದ ಭಿನ್ನಪವೆಂದು ಉಪಮಿಸಲಳವಲ್ಲದುದನೆ ಉಪಮಿಸಿತು ಎಂದು ಹೇಳಿಹರು.

ಮುಟ್ಟಲಿಲ್ಲದ ಹಸ್ತಮಸ್ತರಕ ಸಂಯೋಗ :

ಕಾಣಬಾರದ ಗುರು ಶಿಷ್ಯರ ಘನದಿರುವ ನೋಡಿರೆ? ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗವ ಕೂಡಿ ಅಚಲಾನಂದದೊಳಿಪ್ಪ ನಿರ್ಲೇಪಿಗೆ ಮುಟ್ಟಲು ಹಸ್ತವುಂಟೆ, ಭಿನ್ನ ದೃಷ್ಠಿಯುಂಟೆ? ಒಡಲುಂಟೆ? ಇಲ್ಲದವನಾದುದರಿಂದ ಮುಟ್ಟಲಿಲ್ಲದ ಹಸ್ತ ಅಪ್ರತಿಮ ಲಿಂಗವಕೂಡಿ ಅಚಲಾನಂದದೊಳಿಪ್ಪ ನಿರಾಲಂಬ ಮೂರ್ತಿಯ ಕಂಡು ತಾನೆ ತನ್ನೊಳು ಅರಿದರಿದುದೆ ಮುಟ್ಟಿಸಿಕೊಳ್ಳದ ಮಸ್ತಕವೆಂದು ಹೇಳಿಹರು. ಈರ್ವರ ಸಂಗಮವೆ ಮುಟ್ಟಲಿಲ್ಲದ ಹಸ್ತಮಸ್ತಕ ಸಂಯೋಗ ಇದು ಮುಟ್ಟದ ಹಸ್ತ ಮುಟ್ಟಿಸಿಕೊಳ್ಳದ ಮಸ್ತಕ. ಇದು ಜ್ಞಾನಾರ್ಜನೆ, ಜ್ಞಾನಲಿಂಗೋಪದೇಶ. ಅರುವಿನ ಕ್ರಿಯೆ, ಅಕ್ರಿಯೆ, ಅರುವಿನ ಅರುವು ತಾನೆ ತನ್ನೊಳ

ತಿಳಿಯುವದೆ ಜ್ಞಾನ ಲಿಂಗೋಪದೇಶ ಈ ಕ್ರಮ ಸಕಲರಿಗೆ ತಿಳಿಯುವದು ಅಸಾಧ್ಯ. ಈ ಜ್ಞಾನ ಲಿಂಗಾರ್ಚನೆ ತಿಳಿದ ಮಹಾಂತರು ಸಿಕ್ಕುವದು ವಿರಳ. ಇದು ಬಸವಾದಿ ಪ್ರಮಥರಾಗಿಹ ಶರಣ ಶರಣೆಯರಿಗೆ ಸಾಧ್ಯವು.

ಹೂಸಲಿಲ್ಲದ ವಿಭೂತಿ: ಇದು ಚಿದ್ ವಿಭೂತಿ ಕರಣಂಗಳ ಸ್ವಭಾವ ಕೆಟ್ಟು ಚಿದ್ಘನದಲ್ಲಿದ್ದುದು. ಅದು ಹೂಸಲಿಲ್ಲದ ವಿಭೂತಿಪಟ್ಟ ಚಿದ್ಘನಕ್ಕೆ ವಿಭೂತಿಯ ಹಚ್ಚುವುದೆಲ್ಲಿ?

ಚಿದಂಗನಿಗೆ ಅವಯವಂಗಳೆಲ್ಲಿ? ಚಿತ್ಕಾಯನು ತ್ರಿಪುಂಡಧಾರಣ ಮಾಡುವದಾದರೂ ಏತಕ್ಕೆ. ಚಿದಗ್ನಿಯಿಂದ ತಾನೆ ಚಿದ್‌ಭಸ್ಮನಾದುದರಿಂದ ಹೂಸಲಿಲ್ಲದ ವಿಭೂತಿ ಪಟ್ಟಿ ಎಂದು ಹೇಳಿದೆ.

ಕೇಳಲಿಲ್ಲದ ಕರ್ಣಮಂತ್ರ :

ಅಪ್ರತಿಮವಾದ ಗುರುಲಿಂಗವ ಕೂಡಿ ಅಚಲಾನಂದ ದೊಳಿಪ್ಪ ಮಹಾಲಿಂಗ , ಸ್ವಯ ಸುಖದಲ್ಲಿದ್ದ ಸುಖ ಸ್ವರೂಪ ನಾದುದರಿಂದ ಮೌನ ಮುದ್ರೆ ಧರಿಸಿದ ಸಂಕೇತವೆ ಕೇಳಲಿಲ್ಲದ ಕರ್ಣಮಂತ್ರ. ಪರಮ ಗುರುವ ಕಂಡು ಅರಿದರಿದು ಶಬ್ದಮುಗ್ಧನಾಗಿ ಅಚಲಾನಂದದೊಳಿರುವುದೆ ಕೇಳಲಿಲ್ಲದ ಕರ್ಣಮಂತ್ರ. ನುಡಿಯುವವನಾಗಿದ್ದರೆ ಕೇಳುವ ಮಂತ್ರವಿತ್ತು. ಅಪ್ರತಿಮ ಲಿಂಗವ ಕೂಡಿದ ಘನಲಿಂಗಿಗೆ ಜಿಹ್ವೆಇಲ್ಲ. ಅದನ್ನು ಕಂಡರಿದ ಮನ ಸುಮನವಾದ್ದರಿಂದ ಜ್ಞಾನಲಿಂಗಿಗೆ ಕಿವಿಯಿಲ್ಲ. ಇವರೀರ್ವರ ನಿಶಬ್ದ ನಿಲಯವೆ ಕೇಳಲಿಲ್ಲದ ಕರ್ಣಮಂತ್ರವಾಗಿದೆ.

ತುಂಬಿ ತುಳಕದ ಕಳಸಾಭಿಷೇಕ :

ಮನ ಮೇರೆದಪ್ಪಿ ನಿರವಯವ ನಪ್ಪಿದ ನಿಜದ ನಿಲವು. ತುಂಬಿ ತುಳುಕದ ಕಳಸಾಭಿಷೇಕ. ಪೂರ್ಣದಲ್ಲಿ ಮನುಷ್ಯನಾಗಿ ಭಾವನಷ್ಟಾಗಿ ನಿಷ್ಪತ್ತಿ ನಿರಾಳವನೊಳಗೊಂಡುದು ತುಂಬಿ ತುಳುಕದ ಕಳಸಾಭಿಷೇಕ ನೋಡಾ ಎಂದು ಹೇಳಿಹರು.

ಆಗಮವಿಲ್ಲದ ದೀಕ್ಷೆ, ಕಾಂಡ ತ್ರಯಂಗಳ ನಷ್ಟ ಮಾಡುವುದೆ ಆಗಮವಿಲ್ಲದ ದೀಕ್ಷೆ, ನಿಶಬ್ದವೇದಿಗಳಾದುದೆ ಆಗಮವಿಲ್ಲದ ದೀಕ್ಷೆ ಮಾತನಳಿವ ಮಾತು ಬಂದು ತಾನು ಮಾತಿಲ್ಲದವನಾಗಿ ಶಬ್ದಮುಗ್ದನಾದುದೆ ಆಗಮವಿಲ್ಲದ ದೀಕ್ಷೆ ಶೃತಿಗಳ ಹಂಗು ಇಲ್ಲದೆ ಶಬ್ದವ ನಷ್ಟಮಾಡಿದುದೆ ಆಗಮವಿಲ್ಲದ ದೀಕ್ಷೆ. ಗುರು ಶಿಷ್ಯರ ಮಧ್ಯದಲ್ಲಿನ ವಸ್ತುವರಿತು ತಾನು ಮೌನಮುದ್ರೆ ಧರಿಸಿಹುದು. ಆಗಮವಿಲ್ಲದ ದೀಕ್ಷೆ ಅಪ್ರತಿಮ ಲಿಂಗವ ಕೂಡಿ ಅಚಲಾನಂದ ದೊಳಿಪ್ಪ ಗುರುಲಿಂಗವರಿತು ಮರವರುವುಗಳೆಂಬ ದ್ವಂದ್ವಗಳಿಗೆಡೆಗೊಡದೆ ನಿಶಬ್ದ ನಿಲುವುಳ್ಳದರಲ್ಲಿದ್ದು ಸವೆಯದ ಸುಖಿಯಾದುದು ಆಗಮವಿಲ್ಲದ ದೀಕ್ಷೆ, ಅರಿಯಲಿಲ್ಲದ ಅರುವೆ ತಾನಾದವಂಗೆ ಕ್ರಿಯೆ ಆವುದು? ಜ್ಞಾನವಾವುದು? ಅರಿಯಬಾರದ ಘನವೆ ಆಗಮವಿಲ್ಲದ ದೀಕ್ಷೆ ನೋಡಾ ಎಂದು ಹೇಳಿಹರು.

ಪೂಜೆಗೆ ಬಾರದ ಲಿಂಗ :

ಇದು ಅಪ್ರತಿಮ ಲಿಂಗ ವಾಙ್ಮನಕ್ಕೆ ಬಾರದ ಲಿಂಗ. ಲಿಂಗವನ್ನದವನ ಲಿಂಗ, ಲಿಂಗವರಿತು ಲಿಂಗವಾದವರ ಲಿಂಗ, ಬೆಳಗಿಸಿಕೊಳ್ಳುವ ಲಿಂಗವಲ್ಲ ಬೆಳಗಿಂಗೆ ಬೆಳಗಾಗಿಹ ಲಿಂಗ. ಪೂಜೆಗೆ ಬಾರದ ಲಿಂಗ ತಾನೆ ಲಿಂಗವಾಗಿಹ ಮಹಾಲಿಂಗ, ಘನಲಿಂಗ ಅಪ್ರತಿಮಲಿಂಗವರಿತು ಅರಿಯಲಿಲ್ಲದ ಅರುವೆ ತಾನಾದಾಗ ತನಗಾವ ಸಂಗ? ತನಗಾವ

ಸಂಬಂಧ ತಾನೆ ನಿರಾಲಂಬನೆಂಬುದು ತನ್ನಿಂದ ತನಗದು ವೇದ್ಯವಾದುದು ಅದುವೆ ಸಂಗವಿಲ್ಲದ ಸಂಬಂಧ ಸಯವಪ್ಪ ಅನುಗ್ರಹವ ಆನುಗೊಂಬಂತೆ ಮಾಡಿದ ಸಂಕೇತ. ಇದು ಪೂರ್ವಾನುಗ್ರಹದ ಸಂಕೇತವೆಂದು ಹೇಳಿಹರು.

ವಚನ - 6

> **ಉರಿವ ಕೆಂಡದ ಮೇಲೆ ತೃಣವ ತಂದಿರಿಸಿದರೆ ಆ ತೃಣವ ಕೆಂಡ ನುಂಗಿದಂತೆ**
> **ಗುರು ಚರಣದ ಮೇಲೆ ತನು ತೃಣವ ನಿಳುಹಿದರೆ ಆತನ ಸರ್ವಾಂಗವೆಲ್ಲ**
> **ಲಿಂಗ ಕಾಣಾ ರಾಮನಾಥ.**

ತಾತ್ಪರ್ಯ : ಉರಿವ ಕೆಂಡದ ಮೇಲೆ ತೃಣವ ತಂದಿರಿಸದರೆ ಆ ತೃಣವ ಕೆಂಡ ನುಂಗಿದಂತೆ :

ದೇವರ ದಾಸಿಮಯ್ಯ ತಂದೆ ದೃಷ್ಠಾಂತದೊಂದಿಗೆ ಗುರು ಚರಣದ ಘನತ್ವ ತೋರಿಹನು. ಉರಿವ ಕೆಂಡದ ಮೇಲೆ ಆವುದೆ ತೃಣ ರೂಪದ ಹುಲ್ಲು ಕಡ್ಡಿಯಾಗಲಿ ಕಟ್ಟಿಗೆಯಾಗಲಿ ಕೆಂಡವ ನುಂಗುವುದು ಇದು ಸಕಲರಿಗೆ ತಿಳಿದಂತೆ ಸಿದ್ದಾಂತದಲ್ಲಿ ತಿಳಿಯುವುದು ಮುಖ್ಯವಾಗಿದೆ.

ಗುರು ಚರಣದ ಮೇಲೆ ಎಷ್ಟೋ ಭಕ್ತರು ಶಿಷ್ಯ ವರ್ಗವು ಪ್ರತಿ ನಿತ್ಯ ತಮ್ಮ ತನುವ ಗುರು ಚರಣದ ಮೇಲೆ ಇಡುತ್ತಾರೆ. ಇವರದು ಲಿಂಗವಾಗಿದೆಯಾ? ಸರ್ವಾಂಗ ಲಿಂಗವಾಗಿದೆಯಾ? ಪೂರ್ವದಲ್ಲಿ ಎಷ್ಟೇ ಭಕ್ತರುಗಳು, ಶಿಷ್ಯ ವರ್ಗವು ಗುರು ಚರಣದ ಮೇಲೆ ಇಟ್ಟ ತನು ತೃಣವದು ಲಿಂಗವಾಗಿದೆಯೆ? ಎಂದು ಪ್ರಶ್ನಿಸುವಲ್ಲಿ ಆವ ಭಕ್ತನಾಗಲಿ, ಶಿಷ್ಯನಾಗಲಿ ಆರಾದರೂ ಹಿಂದಿನ ಶರಣರು ತಾವು ಕಂಡು ಸ್ವಸುಖದಲ್ಲಿ ನಿಂತು ಮಾತಾಡಿದಂತೆ ಈ ಅಧುನಿಕ ಸಮಾಜದೊಳಗೆ ಹಿಂದಿನವರಂತೆ ಸದ್ಯ ಪರಿಸ್ಥಿತಿಯಲ್ಲಿ ಆರಿಂದಲಾದರೂ ಉತ್ತರ ಸಿಗುತ್ತದೆಯೆ? ಎಂದು ಪ್ರಶ್ನಿಸಿಹರು.

ಆವ ತನು ತೃಣ ಚರಣರೂಪಿ ಚಿದಗ್ನಿಯ ಮೇಲೆ ಇಳುಹಿದೆ. ಆತನ ಸರ್ವಾಂಗವೆಲ್ಲ ಲಿಂಗಕಾಣಾ ಪೂರ್ವಕಾಲದಲ್ಲಿದ್ದ ಶರಣ ಶರಣೆಯರು ತಮ್ಮ ತನುವೆಂಬ ತೃಣವ ಗುರು ಚರಣದ ಮೇಲೆ ಇಳುಹಿ ಅವರ ಸರ್ವಾಂಗಲಿಂಗವಾಗಿದೆ. ಗುರು ಚರಣವೆಂಬ ಉರಿವ ಕೆಂಡದ ಮೇಲೆ ತನು ತೃಣವ ನಿಳುಹಿದುದರಿಂದ ಅವರ ಸರ್ವಾಂಗ ಲಿಂಗವಾಗಿದೆ. ಇಂದಿನ ಶರಣ ಶರಣೆಯರ ಮೇಲೆ ಭಕ್ತರು ತನು ಇಡುತ್ತಾರೆ. ಇವರ ತನು ಲಿಂಗವಾಗಿಲ್ಲವೆಂದಲ್ಲಿ ತನುವಿನ ದೋಷವೋ? ಗುರು ಚರಣದ ದೋಷವೋ? ಎಂದು ಅರುವಿನ ನಾವು ಜನ್ಮದಲ್ಲಿ ಬಂದ ಮೇಲೆ ವಿಚಾರಿಸಬೇಕು. ಗುರು ಚರಣವದು ಚಿದಗ್ನಿ. ಜ್ಞಾನಾಗ್ನಿ. ಇದು ಅಗ್ನಿಗಿಂತಲೂ ಶ್ರೇಷ್ಠವಾದ ಅಗ್ನಿ. ಭವ ತಾಪವನ್ನು ಸುಡುವ ಅಗ್ನಿ. ಕಟ್ಟಿಗೆಯ ಸುಡುವ ಅಗ್ನಿ ಬೇರೆ, ಚಿದಗ್ನಿ ಬೇರೆ, ಆ ಅಗ್ನಿಯ ಕಾರ್ಯ ಇದು ಮಾಡುವದಿಲ್ಲ. ಚಿದಗ್ನಿ ಕಾರ್ಯ ಇದು ಮಾಡುವದಿಲ್ಲ. ಜ್ಞಾನಾಗ್ನಿಯು ಪ್ರವೃತ್ತಿ ರೂಪ ವಿಷಯಾಸಕ್ತಿಯನ್ನೆ ಸುಡುವ ಅಗ್ನಿ. ತೋರುವ ಮಾಯಿಕ ನೋಟವ ಸುಡುವ ಅಗ್ನಿ. ಇದು ಸಂಚಿತ, ಅಗಾಮಿ, ಪ್ರಾರಬ್ಧರೂಪ ಕರ್ಮ ಸುಡುವ ಚಿದಗ್ನಿ. ಜ್ಞಾನಾಗ್ನಿ. ಸ್ಥೂಲ, ಸೂಕ್ಷ್ಮ ಕಾರಣವೆಂಬ ತನುತ್ರಯ ಸುಡುವ,

ಗುರುಚರಣವೆಂಬ ಚಿದಗ್ನಿ. ಅರ್ಥಾತ್ ಜ್ಞಾನಾಗ್ನಿಯ ಮೇಲೆ ಇಳುಹಲು ತತ್‌ಕ್ಷಣ ಈ ತೋರಿಕೆಯುಳ್ಳ ತನುವೆಂಬ ಭಾವ ರೂಪ ಭ್ರಾಂತಿಯನ್ನು , ಮೋಹ ರೂಪ ಆಸಕ್ತಿಯನ್ನು ದಹಿಸಿಬಿಡುವುದು. ಆಗ ಅದು ಸರ್ವಾಂಗವೆಲ್ಲ ಲಿಂಗ ಕಾಣಾ ಎಂದು ದಾಸಿಮಯ್ಯ ತಂದೆ ಹೇಳಿಹನು.

ಓ ಗುರು ಘನನೆ ಎಷ್ಟೋ ಭಕ್ತಾದಿಗಳು ನಿಮ್ಮ ಚರಣದ ಮೇಲೆ ತಮ್ಮ ಮಸ್ತಕವ ಇಡುತ್ತಾರೆ. ಅವರ ಅಂಗಗಳು ಲಿಂಗವಾಗಲೊಲ್ಲವು ಎಂಬುದು ನಮ್ಮಗಳ ಅನುಭವಕ್ಕೆ ಬಂದಿದೆ. ಕಾರಣವೇನು? ತಿಳುಹಿ ಕೊಡಬೇಕು. ಇದಲ್ಲದೆ ಚಿದಗ್ನಿರೂಪ ಗುರುಪಾದದ ಮೇಲೆ ಈ ತನುವೆಂಬ ತೃಣವ ಹೇಗೆ ಇಳುಹಬೇಕು?

ಓ ಮಾನವಾ ಗುರು ಚರಣದ ಮೇಲೆ ತನುವೆಂಬ ತೃಣವ ಹೇಗೆ ಇಳುಹುವದೆಂದಲ್ಲಿ ''ಸರ್ವಧರ್ಮಾನ್ ಪರಿತ್ಯಜ್ಯ ಮಂಮೇಕಂ ಶರಣ, ವ್ರಜ, ಇತಿ ಶಕ್ತಿ'' ಎಂಬ ಗೀತಾ ಉಕ್ತಿಯಂತೆ ಶರಣಾಗತಿ ಭಾವ ಬಹುಮುಖ್ಯವಾದುದು. ಸರ್ವ ಧರ್ಮದಭಿಮಾನ ತ್ಯಜಿಸಿದ ವಿನಃ ಮನವು ಶುದ್ಧವಾಗದು. ಅಹಂಕಾರವು ತಾನಾರೆಂದು ತನ್ನ ತಿಳಿಯಲು ನಾನಾ ವಿಧದಿಂದ ಪ್ರತಿಬಂಧಕ ಮಾಡುವದು. ಮಾನವನಿಗೆ ಹುಟ್ಟು ಸಾವುಗಳ ಭಯ ತನ್ನ ಸ್ವಸುಖದ ಆತುರವಿಲ್ಲದ್ದರಿಂದ ಅವನಿಗೆ ಶರಣಾಗತಿ ಭಾವವು ಬರದು ಇತ್ತ ಸರ್ವಧರ್ಮಂಗಳಲ್ಲಿ ತಾತ್ಸಾರ ಬುದ್ಧಿ ಬರುವದು ಕಷ್ಟ ಹೀಗಿದ್ದು ಹೃದಯ ಅದು ತನ ತೃಣವೆನಿಸದು.

ಆವ ಹೃದಯದಲ್ಲಿ ಗುರು ಘನನ ಮೇಲೆ ಅಪಾರ ವಿಶ್ವಾಸವಿದೆ. ಭಕ್ತಿ ಇದೆ. ನಿಷ್ಠೆ ಇದೆ. ಅಲ್ಲಿ ತನ್ನ ತಪ್ಪನ್ನು ತಿದ್ದಿಕೊಳ್ಳುವಷ್ಟು ನಿರಹಂಭಾವ ಹೃದಯವಾಗಿದೆ. ಕಾರಣ ಗುರುಘನನ ಮೇಲೆ ''ತಂದೆ ನೀನು, ತಾಯಿ ನೀನು, ಬಂಧು ನೀನು, ಬಳಗ ನೀನು, ನೀನಲ್ಲದೆ ಮತ್ತಾರು ಇಲ್ಲವಯ್ಯ ಹಾಲಲದ್ದು ನೀರಲದ್ದು ಕೂಡಲಸಂಗಮದೇವಾ'' ಎಂಬ ಭಾವ ಬಂದಲ್ಲಿ ತನ್ನ ಅಸಮರ್ಥತೆಯನ್ನು ದೋಷವನ್ನು ಹೊರಹಾಕುವನು . ಆಗ ಗುರುಘನ ತನನ್ನ ನಿವೇದನೆಯ ಮಾಡಿಕೊಳ್ಳುವನು.

ಓ ಗುರುದೇವನೆ ನನ್ನ ಇಂದ್ರಿಯಂಗಳ ಕ್ರಿಯೆಯಿಂದ ತ್ಯಾಗವಾಗಲಿ ನಿಗ್ರಹವಾಗಲಿ, ಜಪ,ತಪ,ಧಾರಣ ಮಾಡಿದರೂ ನನ್ನ ಉತ್ಥಾನವಾಗದು ಕಾರಣ ನನ್ನ ಉತ್ಥಾನ ನಿನ್ನಿಂದ ಸಾಧ್ಯವಲ್ಲದೆ ನನ್ನಿಂದ ನನಗಸಾಧ್ಯವೆಂದು ಹೃದಯಬಿಚ್ಚಿ ಪ್ರಾರ್ಥಿಸುವದೆ ನಿಜವಾದ ಶರಣಾಗತ. ಏಕೆಂದರೆ ಇವುಗಳು ನನ್ನ ಅಜ್ಞಾನವೆಂಬ ಆವರಣ ಕಳೆಯವು. ಇದು ಕಾರಣ ಮರವ ಕಳೆಯಲು ಗುರು ಚರಣವೆಂಬ ಚಿದಗ್ನಿಯೆ ಅಧಿಕವು.

ಗುರು ಚರಣಕ್ಕೆ ಅನನ್ಯ ಭಕ್ತಿಯಿಂದುಕ್ತರಾಗಿ ಶರಣಾಗತರಾಗುವದೆ ತನುವ ನಿಳುಹಿದಂತೆ. ಆಗ ಶ್ರೀಗುರುವೆಂಬ ಚಿನ್ಮಯನು ತನ್ನ ಹೃದಯದಲ್ಲಿದ್ದು ಗಗನ ಸದೃಶವಾಗಿರುವ ಅಖಂಡ ಜ್ಞಾನಾಮೃತರೂಪಿ ಜ್ಞಾನ ಗಂಗೆಯನ್ನು ತನ್ನ ವಾಗ್ ವೈಖರಿಯಿಂದ ಅನನ್ಯ ಭಕ್ತರುಗಳಿಗೆ ಶ್ರೋತೃವಿನ ಮೂಲಕ ಒಳಗೆ ಪ್ರವೇಶವಾಗಿ ಅವನ ಅಂತರಂಗದೋಳ್ ಹುದುಗಿದ್ದ ಸ್ಥೂಲ, ಸೂಕ್ಷ್ಮ, ಕಾರಣ ರೂಪಿ ತನುವೆಂಬ ಭ್ರಾಂತಿ ಭಾವವ ದಗ್ಧಮಾಡಿ ತೆರಹಿಲ್ಲದ ಲಿಂಗಭರಿತನೆಂಬ ಅರುವಿನ ಅನುವು ಕರುಣಿಸಲು ಅವನ ಸರ್ವಾಂಗವೆಲ್ಲ ಲಿಂಗದಿರುವಿನ ಅರುವಾದುದೆ ಲಿಂಗವಾದಂತೆ ಎಂದು ತಿಳಿಯುವದು. ಎಲ್ಲಿಯವರೆಗೆ ಶ್ರೀಗುರುವಿನ

ಬೋಧಾಗ್ನಿ ಭಕ್ತರ ಕರ್ಣವ ಹೊಕ್ಕು ಹೃದಯಕ್ಕೆ ತಟ್ಟಿ ನುಡಿಗೆಡೆಗೊಡದ ಚಿದ್ಘನದಿರುವು ಪ್ರಜ್ವಲಿಸುವದಿಲ್ಲವೋ? ಅಲ್ಲಿಯವರೆಗೆ ಉರಿವ ಕೆಂಡದ ಮೇಲೆ ತೃಣವ ನಿಳುಹದೆ ನಿರರ್ಥಕ ಮಾತ ಬಳಸಿದರೆ ಅದು ನಮಗೆ ಪ್ರತ್ಯಕ್ಷ ಕಾಣಬಹುದೆ? ಹಾಗೆ ಮಾತಿನ ಗುರುಚರಣ, ಮಾತಿನ ತನು ರೂಪಿ ತೃಣ, ಲಿಂಗಾಂಗ ಸಾಮರಸ್ಯ ಜ್ಞಾನವಿಲ್ಲದ ಗುರುಚರಣ. ಸರ್ವಾರ್ಪಣ ಮಾಡದ ಅನನ್ಯ ಭಕ್ತಿ ಬಾರದ ಡಾಂಭಿಕ ನಮಸ್ಕಾರ. ನಿಸ್ಸೀಮ ಜ್ಞಾನವಿಲ್ಲದ ಗುರು ಚರಣ ಅನನ್ಯ ಭಕ್ತಿ ಮುಮುಕ್ಷತ್ವವಿಲ್ಲದ ಶರಣಾಗತ ಇದ್ದೇನು ಫಲ. ಇದು ಕಾರಣ ಅರಿಯಲಿಲ್ಲದ ಅರುವುನರುಹಿಸುವ ಅರುವುಳ್ಳ ಪಾದವೆ ಗುರುಚರಣ. ಕೇವಲ ಅಖಂಡ ಜ್ಞಾನಕ್ಕಾಗಿ ಸಕಲವು ಪರಿತ್ಯಜಿಸಿ ತನ್ನ ಸ್ವಯಸುಖದ ತವಕವುಳ್ಳ ಕಿಂಕರ ಭಾವವುಳ್ಳ ತನುವೆಂಬ ತೃಣ. ಇವೆರಡು ಕೂಡಲು ತತ್‌ಕ್ಷಣ ತನ್ನ ಸರ್ವಾಂಗ ತೆರಹಿಲ್ಲದ ಲಿಂಗ ಭರಿತವೆಂಬ ಸುಜ್ಞಾನದಿಂದುಕ್ತನಾಗಿ ಸ್ವಯಂಲಿಂಗ ತಾನಾದುದು. ತನ್ನಿಂದ ತನಗೆ ಜ್ಞಾನೋದಯವಾದುದು. ಸರ್ವಾಂಗವಾದಂತೆ ಎಂದು ತಿಳಿವುದು ಎಂದು ಹೇಳಿಹರು.

ವಚನ – 7

ನೀ ನನಗೆ ಗುರುವಪ್ಪುಡೆ . ನಾ ನಿನಗೆ ಶಿಷ್ಯನಪ್ಪಡೆ
ಎನ್ನ ಕರಣಾದಿ ಗುಣಂಗಳ ಕಳೆದು ಎನ್ನ ಕಾಯ ಧರ್ಮವ ತೊಡೆದು
ನೀ ನೆನ್ನ ಕಾಯದಲಡಗಿ, ನೀ ನೆನ್ನ ಪ್ರಾಣದ ಲಡಗಿ
ನೀ ನಿನ್ನೆ ಭಾವದ ಲಡಗಿ.
ನೀ ನೆನ್ನ ಕರಸ್ಥಲಕ್ಕೆ ಬಂದು ಕಾರುಣ್ಯ ಮಾಡು ಗುಹೇಶ್ವರಾ.

ತಾತ್ಪರ್ಯ : ನೀ ನನಗೆ ಗುರುವಪ್ಪುಡೆ ನಾ ನಿನಗೆ ಶಿಷ್ಯನಪ್ಪುಡೆ: ಇದು ಗುರು ಶಿಷ್ಯರ ಒಪ್ಪಿಗೆ ಹೃದಯ ಹೃದಯದ ಒಪ್ಪಿಗೆ. ಭಾವ ಭಾವದ ಒಪ್ಪಿಗೆಯೂ ಅವಶ್ಯಕವಾದುದು. ಓ ಗುರುಘನನೇ ನಾನು ನಗೆ ಶಿಷ್ಯನಪ್ಪುಡೆ ಎನ್ನ ಕರಣಾದಿ ಗುಣಂಗಳ ಕಳೆದು, ಎನ್ನ ಕಾಯ ಧರ್ಮವ ತೊಡೆದು ನೀ ನೆನ್ನ ಕಾಯದಲ್ಲಡಗಿ , ನೀ ಎನ್ನ ಪ್ರಾಣದಲ್ಲಡಗಿ ನೀ ನೆನ್ನ ಭಾವದಲ್ಲಡಗಿ ನೀ ನೆನ್ನ ಕರಸ್ಥಲಕ್ಕೆ ಬಂದು ಕಾರುಣ್ಯಾ ಮಾಡು ಗುಹೇಶ್ವರಾ.

ಓ ಎನ್ನ ಅಕಲ್ಪಿತ ಘನನೆ ನಾ ನಿನಗೆ ಶಿಷ್ಯನೆಂಬುದು ಒಪ್ಪಿದಲ್ಲಿ ಎನ್ನ ಕರಣಾದಿ ಗುಣಂಗಳ ಕಂಡು ನಿನಗೆ ಕರುಣೆ ಬಾರದೆ? ಇಲ್ಲದುದು ಕಲ್ಪಿಸಿ ಇದ್ದುದ ನರಿಯದಿಹ ಮನವ ಕಂಡು ಸುಮ್ಮನಿರುವದು ನಿನಗುಚಿತವೆ ? ಇಲ್ಲದುದೆ ನಿರ್ಣಯ ಮಾಡುವ ಬುದ್ಧಿ ಇದ್ದುದು ನಿನಗೆ ಸಮ್ಮತವೆ? ಇಲ್ಲದ ಚಿತ್ತ ಚಿಂತನ ಮಾಡುವ ಚಿತ್ತ. ಅಚಿಂತ್ಯ ಪದದಿಂದ ದೂರಾಗಿರುವುದು ನಿನಗಿಷ್ಟವೆ? ಇಲ್ಲದ ಅಹಂ ಇದ್ದಂತಾಗಿ ಕರ್ತೃತ್ವ ಬೋಕ್ತೃತ್ವವುಳ್ಳದ್ದಾಗಿ ಬಳಲುತ್ತಿರುವದು ಕಂಡು ಕಂಡು ನಿನಗಿನ್ನು ದಯೆ ಬಾರದೆ ಓ ಕರುಣಾನಿಧಿಯೆ ನಿನ್ನ ನೆನಹನ್ನಬರ ತನ್ನಂತೆ ಮಾಡುವ ಕೃಪೆ ನಿನ್ನದಲ್ಲವೇ? ಹೀಗಿದ್ದು ಎನ್ನ ಕರುಣಾದಿ ಗುಣಂಗಳ ಕಳೆದುದು ಎಂದು? ಎನ್ನ ಕರುಣಾದಿ ಗುಣಂಗಳ ಕಳೆಯಲು ನಿನ್ನವರ ಪ್ರಸಾದ ರೂಪವಾಗಿಹ ಅರಿಯಲಿಲ್ಲದ ಅರುವ ನರುಹಿಸುವ ಕರುಣ ಕೃಪೆಮಾಡು ತಂದೆ. ಆಗ ಎನ್ನ ಕರುಣಾದಿ ಗುಣಂಗಳು ತಾವಾಗಿಯೇ ಇಲ್ಲವಾಗುವವು. ಸೂರ್ಯನ ಮುಂದೆ ಕತ್ತಲೆ ಇರಬಲ್ಲುದೆ?

ಕಲ್ಪನಾ ರಹಿತವಾಗಿಹ ಸ್ವಪ್ರಭೆಯ ಮುಂದೆ ಮನೋರೂಪಿ ಕತ್ತಲೆ ಇರಬಹುದೆ. ಮನವೆ ಇಲ್ಲವಾದಲ್ಲಿ ನೆನಹು ಇಲ್ಲ ನಿರ್ಣಯ ಮಾಡುವ ಬುದ್ದಿಯು ಇಲ್ಲ . ಚಿಂತನ ಮಾಡುವ ಚಿತ್ತಾ ಇಲ್ಲ, ಇವುಗಳು ಇಲ್ಲವಾದಲ್ಲಿ ಇವುಗಳ ಅಹಂ ಬುದ್ದಿ ಎಲ್ಲಿ ? ಅಹಂ ಬುದ್ದಿ ಇಲ್ಲವಾದಲ್ಲಿ ಕರ್ತೃತ್ವ ಬೋಕೃತ್ವವಾದರೂ ಅದೆಲ್ಲಿಯವು ? ಇದು ಕಾರಣ ಅಕಲ್ಪಿತ ಘನದಿರುವ ಎನಗೆ ಕರುಣಿಸು ತಂದೆ.

ಓ ದಯಾ ಮೂರ್ತಿಯೆ ನಾ ನಿನಗೆ ಶಿಷ್ಯನೆಂಬುದು ಒಪ್ಪಿಗೆಯಾದಲ್ಲಿ ಎನ್ನ ಕಾರ್ಯಧರ್ಮವ ತೊಡೆ ಯದೆ ಇರುವುದು ನಿನಗೊಪ್ಪಿಗೆಯೇ? ನೀನು ಚಿತ್ಕಾಯನಾಗಿರುವಲ್ಲಿ ನಾನು ಮಲಮಯ ಕಾಯ ನಾಗಿರುವುದು ಸರಿಯೆ? ಸುವಾಸನೆಯಿರುವಲ್ಲಿ ದುರ್ವಾಸನೆ ಇರುವುದು ಸರಿಯೆ? ನೀನು ಅಜಾತನೆಂದೆನಿಸಿ ನಾನು ಜಾತನಾಗಿರುವದು ಭವಿಯಾಗಿರುವದು ನಿನಗೆ ಅಪಮಾನವಲ್ಲವೆ? ಅಪಕೀರ್ತಿಯಲ್ಲವೆ? ನಿನ್ನ ನಿರ್ಭಯದ ನಿವಾಸದಲ್ಲಿ ಭಯವುಳ್ಳವನಿರುವದು ಸರಿಬಾರದು ನಿರ್ವಿಕಾರನಾದ ನೀನೆತ್ತ? ಷಡ್ವಿಕಾರದಿಂದುಕ್ತನಾದ ನಾನೆತ್ತ? ಮಂತ್ರವೆತ್ತ? ಮಾಂಸ ವೆತ್ತ? ಅಸ್ತಿ ಭಾತಿ ಎಂಬ ನಿಮ್ಮ ಸತ್ಯವೆತ್ತ? ಎನ್ನ ಭ್ರಮಾತ್ಮಕವಾಗಿಹ ನಾಮರೂಪ ಹುಸಿ ಎತ್ತ ದಿಟದ ಮುಂದೆ ಹುಸಿ ಇರಬಹುದೆ? ಎನ್ನ ನಾಮರೂಪ ಹುಸಿ ತೋರಿಕೆ ನಷ್ಟಮಾಡಲು ನಿಮ್ಮ ಸತ್ಯವಾದ ಆಸ್ತಿ ಭಾತಿ ಎಂಬ ತತ್ವವ ಅನುಗ್ರಹಿಸು. ನಿನ್ನ ಕೃಪೆಯೆಂಬ ಚಿತ್‌ಸೂರ್ಯ ಪ್ರಜ್ವಲಿಸಲು ಷಡ್ವಿಕಾರವುಳ್ಳ ಭ್ರಾಂತಿರೂಪ ಕತ್ತಲೆ ತಾನಾಗಿ ನಷ್ಟವಾಗುವದು. ಆಗ ಹೃದಯ ಪರಿಶುದ್ದವಾಗುವದು ಆರು ಹೃದಯವಾಗುವದು. ನೀ ನೆನ್ನ ಕಾಯದಲ್ಲಡಗಿ ನೀ ಎನ್ನ ಪ್ರಾಣದಲ್ಲಡಗಿ, ನೀ ನೆನ್ನಭಾವದಲ್ಲಡಗಿ, ನೀ ಎನ್ನ ಕರಸ್ಥಲಕ್ಕೆ ಬಂದು ಕಾರುಣ್ಯ ಮಾಡು ಗುಹೇಶ್ವರಾ.

ಓ ಗುರುಘನನೆ ನಿನ್ನ ಕಾರುಣ್ಯ ಅಪಾರ. ನೀ ನೆನ್ನ ಕರಸ್ಥಲಕ್ಕೆ ಬಂದು ಕಾರುಣ್ಯ ಮಾಡಿದಲ್ಲಿ , ನೀ ನೆನ್ನ ಭಾವದಲ್ಲಡಗಿದುದು ನನಗೆ ವೇದ್ಯವಾಗುವುದು. ನೀ ನೆನ್ನ ಭಾವದಲ್ಲಡಗಿದುದು ನನಗೆ ವೇದ್ಯವಾದಲ್ಲಿ ನೀ ಎನ್ನ ಪ್ರಾಣದಲ್ಲಡಗಿದುದು ವೇದ್ಯವಾದಲ್ಲಿ, ನೀ ನೆನ್ನ ಕಾಯದಲ್ಲಡಗಿದುದು ವೇದ್ಯವಾದಲ್ಲಿ ಅದು ನಿನ್ನಯ ಕಾರುಣ್ಯ ನೋಡಾ. ಓ ದೇವ ದೇವನೆ ನಿನ್ನಯ ಕಾರುಣ್ಯವನೇನೆಂಬೆ ? ನೀ ನೆನ್ನ ಕರಸ್ಥಲಕ್ಕೆ ಬಂದು ಕಾರುಣ್ಯ ಮಾಡಿದುದ ನೇನೆಂಬೆ ? ತೆರಹಿಲ್ಲದ ಲಿಂಗ ಭರಿತನೆಂದು ನೀ ನೆನ್ನ ಕರಸ್ಥಲಕ್ಕೆ ಬಂದು ಕೃಪೆ ಗೈದೆಯಾ? ಅರಿಯಬಾರದ ಘನನೆಂದು ನೀ ನೆನ್ನ ಕರಸ್ಥಲಕ್ಕೆ ಬಂದು ಕರುಣಿಸಿದೆಯಾ?

ಅರಿಯಲಿಲ್ಲದ ಅರುವೆಂದು ನೀ ನೆನ್ನ ಕರಸ್ಥಲಕ್ಕೆ ಬಂದುದನೇನೆಂದು ಹೇಳುವದು. ನೀ ನೆನ್ನ ಕರಸ್ಥಲಕ್ಕೆ ಬಂದು ಕಾರುಣ್ಯ ಮಾಡಿದಲ್ಲಿ ನೀ ನೆನ್ನ ಭಾವದಲ್ಲಿ ತೆರಹಿಲ್ಲದ ಲಿಂಗಭರಿತವೆಂಬುದು ಭರಿತ ಭಾವ ತುಂಬಿತ್ತು. ಎನ್ನ ಪೂರ್ವಭಾವರೂಪ ಭ್ರಮ ನಷ್ಟವಾಗಿ ಎಲ್ಲೆಲ್ಲೂ ತೆರಹಿಲ್ಲದ ಲಿಂಗ ಭರಿತವೆಂಬ ಭಾವ ನಿಂದು ಅಖಂಡ ಭಾವ ಎನ್ನಯ ಭಾವವಾಯಿತ್ತು. ಇಂತಪ್ಪ ಅಖಂಡಿತ ಭಾವ ಎನ್ನದು ನಿಶ್ಚಯವಾಗಿ ನೀ ಎನ್ನ ಪ್ರಾಣದಲ್ಲಡಗಿದುದು ವೇದ್ಯವಾಗಿ, ಪ್ರಾಣವದು ಪ್ರಾಣದ ಪ್ರಾಣವಾಗಿ, ಪ್ರಾಣಲಿಂಗವಾಗಿ ಪ್ರಜ್ವಲಿಸುತ್ತಿತ್ತು. ಇಂತಪ್ಪ ಪ್ರಾಣಲಿಂಗ ಪ್ರಜ್ವಲಿಸಿ ಸುಖದ ಸುಖವಾಗಿ ಎನ್ನ ಅರುವಿನ ವಿಶ್ರಾಮವಾಗಿ ಅರಿಯಬಾರದ ಘನವೆ ಎನ್ನ ಇರುವಾಯಿತು. ಎನ್ನಯ ಇರುವೆ ಅರಿಯಲಿಲ್ಲದ ಅರುವಾಗಿ ನೀ ನೆನ್ನ ಕಾಯದಲ್ಲಡಗಿದುದು ಅದನಾರಯ್ಯ ಫೀಗೆಯೇ ಎಂದು

ವರ್ಣಿಸುವದು? ನೀ ನೆನ್ನ ಕಾಯದಲ್ಲಿಡಗಿದುದು ಕಂಡು ಅದು ನಿನ್ನ ಕಾಯ, ಅದು ನಿನ್ನಯ ಪ್ರಾಣ, ಅದು ನಿನ್ನಯ ಭಾವ, ನೀ ನೆನ್ನ ಕರಸ್ಥಲಕ್ಕೆ ಬಂದು ಕಾರುಣ್ಯವ ಮಾಡಿ ನಿನ್ನಂತೆ ಎನ್ನನ್ನು ಮಾಡದೆ ಎನ್ನ ನಿನ್ನಂತೆ ಮಾಡಿದುದು ಅದನೆಂತು ವಿಸ್ತರಿಸುವದು.

ಗುರುಘನನೇ ನಿನ್ನ ಕಾಯವದು ಅರಿಯಬಾರದ ಘನಕಾಯ. ಅದು ಅರಸಿಕೊಳ್ಳದ ಕಾಯ. ಅರಿಯದ ಕಾಯ ಅರಿಯಲಿಲ್ಲದ ಅರುವಾಗಿಹ ಘನಕಾಯವಾದುದರಿಂದ ಅಲ್ಲಿ ಅರಿಯಲಿಲ್ಲ ಮರೆಯಲಿಲ್ಲ ಪೂರ್ವದ ಕಾಯ ಪೂರ್ವದ ಪ್ರಾಣ ಪೂರ್ವದ ಭಾವ ಅರಿಯಲಿಲ್ಲದ ತನ್ನ ನಿಜದಿರುವ ಮರೆಯಲಿಲ್ಲವಾದ್ದರಿಂದ ಕಾಯವದು ಲಿಂಗ, ಲಿಂಗವದು ಪೂಜಾಲಿಂಗವಲ್ಲ, ಪೂಜೆಗೆ ಬಾರದ ಲಿಂಗ. ಪ್ರಾಣವದು ಲಿಂಗ ಲಿಂಗವಾಗಿಹ ಪ್ರಾಣ ಅದು ಅರಿಯಬಾರದ ಘನವಾಗಿಹ ಪ್ರಾಣ. ಅರಿಯಲಿಲ್ಲದ ಅರುವೆ ತಾನಾಗಿ ಪ್ರಜ್ವಲಿಸುವ ಪ್ರಾಣವಾದ್ದರಿಂದ ಪ್ರಾಣ ಲಿಂಗವೆಂದು ಹೇಳಿಹರು. ಪ್ರಾಣಲಿಂಗವೆ ಅಣುವಿನ ಅಣುವಾಗಿ ರೇಣುವಿನ ರೇಣುವಾಗಿ ಘನಕ್ಕೆ ಘನವಾಗಿ, ಜೀವದ ಜೀವವಾಗಿ, ಮನದ ಮನವಾಗಿ, ಕಾಯದ ಕಾಯವಾಗಿದ್ದುದು ನೀನೆನ್ನ ಕರಸ್ಥಲಕ್ಕೆ ಬಂದು ಕರುಣೆ ಮಾಡಿದಲ್ಲಿ ಎತ್ತ ನೋಡಿದ ಡತ್ತ ನೀವು ಕಂಡಿರಿ. ನೀವಾಗಿದುದ್ದು ನಾನಾಗಿಕಂಡೆ (ನಾ ಕಂಡೆ) ನಾನಾಗಿ ಕಂಡಲ್ಲಿ ನಾನೀ ನೆಂಬುಭಯ ಭಾವಂಗಳು ಬಯಲಾಯಿತ್ತು. ಬಯಲಿಂಗೆ ಬಯಲಾಗಿಹ ನಿಮ್ಮ ತೆರಹಿಲ್ಲದಿ ರುವ ಎನ್ನಯ ಇರುವಾಗಿದ್ದುದು ನೀನೆನ್ನ ಕರಸ್ಥಲಕ್ಕೆ ಬಂದು ಕಾರುಣ್ಯ ಮಾಡಿದಲ್ಲಿ ಕಣ್ದೆರೆದೆ ಕಾಣಾ ಗುಹೇಶ್ವರಾ.

ವಚನ - 8

ಕಾಣದುದ ನರಸುವರಲ್ಲದೆ ಕಂಡುದ ನರಸುವರೆ ಹೇಳಾ ?
ಘನಕ್ಕೆ ಘನವಾದ ವಸ್ತು ತಾನೆ ಗುರುವಾದ ತಾನೆ ಲಿಂಗವಾದ ತಾನೆ
ಜಂಗಮವಾದ ತಾನೆ ಪ್ರಸಾದವಾದ ತಾನೆ ಮಂತ್ರವಾದ ತಾನೆ
ಯಂತ್ರವಾದ ತಾನೆ ಸಕಲ ವಿದ್ಯಾ ಸ್ವರೂಪವಾದ. ಇಂತಿವ ನೆಲ್ಲವನೊಳಕೊಂಡು
ಎನ್ನ ಕರಸ್ಥಲಕ್ಕೆ ಬಂದು ಇನ್ನು ನಿರ್ವಿಕಾರ ಕಾಣಾ ಗುಹೇಶ್ವರಾ.

ತಾತ್ಪರ್ಯ : ಕಾಣದುದ ನರಸುವರಲ್ಲದೆ ಕಂಡುದ ನರಸುವರ ಹೇಳಾ : ಕಾಣ ದುದು ಆವುದು? ಅರಸಿದವರು ಯಾರು? ಕಂಡುದು ಏನು? ಅರಿದವರು ಯಾರು? ಕಾಣದುದು ಯಾವುದು? ''ಯತಾವ್ಯಾಜ್ಯೋ ನಿವರ್ತಂತೆ ಅಪ್ರಾಪ್ಯ ಮನಸಾಸಹ'' ಎಂಬ ಶೃತಿಯಂತೆ ಯಾವುದು ವಾಕ್ ಮನಸ್ಸಿಗೆ ನಿಲುಕದ್ದಾಗಿದೆಯೊ? ಅದುವೆ ಲಿಂಗ. ಅದುವೆ ಪರಬ್ರಹ್ಮ ಇದುವೆ ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗ ಇದುವೆ ಸಕಲರ ಇರುವು ಸ್ವರೂಪ ಇದುವೆ ಕಾಣದುದು ಎಂದು ತಿಳಿಯುವುದು.

ಲಿಂಗ: ಲಿಂಗವೆಂಬವಂಗೆ ಲಿಂಗವಿಲ್ಲ, ಜಂಗಮ : ಜಂಗಮವೆಂಬವಂಗೆ ಜಂಗಮ ವಿಲ್ಲ ಪ್ರಸಾದ ಪ್ರಸಾದವೆಂಬವಂಗೆ ಪ್ರಸಾದವಿಲ್ಲವಾದುದರಿಂದ ಲಿಂಗವರಿಯದೆ ಜಂಗಮವರಿ ಯದೆ ಲಿಂಗ ಲಿಂಗ ಎಂದು ಹಲಬುವರು ಜಂಗಮ ಜಂಗಮವೆಂದು ಹಲಬುವರು? ಇವರೆ ಅರಸುವವರು ಎಂದು ತಿಳಿಯುವದು.

ಲಿಂಗವರಿತು ಲಿಂಗವೆ ತಾನಾದುದರಿಂದ ಲಿಂಗ ಲಿಂಗ ಎನ್ನದವನು. ಲಿಂಗ ಎನ್ನದವಂಗೆ ಲಿಂಗವುಂಟು. ಜಂಗಮವೆನ್ನದವಂಗೆ ಜಂಗಮವುಂಟು. ಪ್ರಸಾದವೆನ್ನದವಂಗೆ ಪ್ರಸಾದವುಂಟು. ತಾನೆ ಲಿಂಗ, ತಾನೆ ಜಂಗಮ, ತಾನೆ ಪ್ರಸಾದವಾದುದರಿಂದ ತಾನೆ ಲಿಂಗವಾಗಿ ತನ್ನ ಕಂಡವ ಮತ್ತಾವುದು ಅರಸುವುದಿಲ್ಲ. ಅರಸದವರೆಂದರೆ ತನ್ನ ಅರಿದು ತಾನೆ ತಾನು ಆದವನೆ ಅರಸದವನು ಎಂದು ತಿಳಿಯುವದು.

ಘನಕ್ಕೆ ಘನವಾದ ವಸ್ತು ಘನಕ್ಕೆ ತಾನೆ : ''ತಾನಿಲ್ಲದ ಮುನ್ನ ಗುರುವೆಲ್ಲಿಯದೊ? ಲಿಂಗವೆಲ್ಲಿಯದೊ? ಜಂಗಮವೆಲ್ಲಿಯದೊ? ಪ್ರಸಾದವೆಲ್ಲಿಯದೊ? ಪರವೆಲ್ಲಿಯದೊ? ಸ್ವಯವೆಲ್ಲಿಯದೊ? ಗುರುವೆಂದರಿತವನು ತಾನೆ, ಲಿಂಗವೆಂದರಿತವನು ತಾನೆ ಜಂಗಮವೆಂದರಿತವನು ತಾನೆ, ಪ್ರಸಾದವೆಂದರಿತವನು ತಾನೆ ಸ್ವಯವೆಂದರಿತವನು ತಾನೆ ಪರವೆಂದರಿತವನು ತಾನೆ ಇವೆಲ್ಲವು ಹೆತ್ತರಿವು ಸ್ವಯಂಜ್ಯೋತಿ ತಾನೆ ಕಲ್ಲೇಶ್ವರಾ'' ಹೆತ್ತರಿವು ಅದು ಹೇಗೆ ಘನಕ್ಕೆ ಘನ ವಸ್ತುವಾಗುವುದು ? ಸ್ವಯಂಜ್ಯೋತಿ ತಾನಾದುದರಿಂದ ಘನಕ್ಕೆ ಘನ ವಸ್ತು ತಾನೆ. ಗುರು ಅರು ಸ್ವರೂಪನಾಗಿ ಘನವೆನಿಸುವದು ತನ್ನಿಂದಲೆ. ಅರು ಸ್ವರೂಪ ಗುರುವೆಂಬುದು ಸಿದ್ಧವಾಗುವದರಿಂದ , ತಾನು ಅರುವಿಂಗರುವಾಗಿಹುದರಿಂದ ಗುರುವೆಂದರಿತವನು ತಾನೆ. ಇದು ಕಾರಣ ತಾನು ಘನಕ್ಕೆ ಘನನೆಂದು ತಿಳಿವುದು.

ಲಿಂಗವು ಘನ, ಘನವಾಗಿಹ ಲಿಂಗವು ತನ್ನಿಂದ ಸಿದ್ಧವಾಗುವುದರಿಂದ ತಾನು ಲಿಂಗಕ್ಕೆ ಲಿಂಗವಾಗಿಹ ಸ್ವಯಲಿಂಗ ತಾನಾದುದರಿಂದ ತಾನೆ ಘನಕ್ಕೆ ಘನವಸ್ತು ತಾನಾದ. ಜಂಗಮವು ಘನವಹುದು, ಜಂಗಮ ಲಿಂಗವು ನನ್ನಿಂದ ಸಿದ್ದವಾದುದರಿಂದ ಘನಕ್ಕೆ ಘನ ವಸ್ತು ತಾನೆ ಎಂದು ತಿಳಿವುದು.

ತಾನೆ ಗುರುವಾದ, ತಾನೆ ಲಿಂಗವಾದ, ತಾನೆ ಜಂಗಮವಾದ, ತಾನೆ ಪ್ರಸಾದವಾದ, ತಾನೆ ಮಂತ್ರವಾದ, ತಾನೆ ಯಂತ್ರವಾದ, ತಾನೆ ಸಕಲ ವಿದ್ಯಾಸ್ವರೂಪನಾದ ಇಂತಿವನೆಲ್ಲವನೊಳಕೊಂಡು ಎನ್ನ ಕರಸ್ಥಲಕ್ಕೆ ಬಂದು ಇನ್ನು ನಿರ್ವಿಕಾರ ಕಾಣಾ ಗುಹೇಶ್ವರಾ:

ತಾನೆ ಗುರುವಾದ : ಸ್ವಯಂಜ್ಯೋತಿ ತಾನಾದುದು, ಇದು ಗುರುವಾಗಿ ಬೋಧಿಸಿದ ಜ್ಯೋತಿ ಶಿಷ್ಯನಾಗಿ ಶ್ರವಣ ಮಾಡದ ಜ್ಯೋತಿ, ಗುರು ಶಿಷ್ಯರ ಮಧ್ಯದಲ್ಲಿದ್ದ ಸ್ವಯಂಜ್ಯೋತಿ, ಸಮತೆ ತನ್ನದಾಗಿಹ ತಾನಾಗಿಹ ಉದಯಾಸ್ತವಿಲ್ಲದ ನಿರಂತರವಾಗಿಹ ಮಂಗಲಮಯ ಜ್ಯೋತಿಯೆ ಘನಕ್ಕೆ ಘನವಾದ ವಸ್ತು. ಇದು ಅರಿವಿನ ಅರುವು. ಅರುವೆನ್ನದ ಅರುವು. ಅರಿಯಲಿಲ್ಲದ ಅರುವು. ಏನೆಂದೆನಲಿಲ್ಲದ ಶಬ್ದಮುಗ್ದವಾಗಿಹ ಅರುವು. ಇದುವೆ ಮಹದರಿವು. ಇಂತಪ್ಪ ತೆರಹಿಲ್ಲದ ಮಹಾಘನ ತಾನೆ ಗುರುವಾದ, ತಾನೆ ಲಿಂಗವಾದ, ತಾನೆ ಜಂಗಮವಾದ, ತಾನೆ ಪ್ರಸಾದವಾದ, ಇದು ತಾನಾರೆಂದರಿತು ತಾನೆ ತಾನಾದ ತನ್ನಯ ಇರವು. ಅರಿಯಲಿಲ್ಲದ ಅರುವಾಗಿದ್ದುದು ಕರಿಗೊಂಡು, ನಿಶಃಬ್ದ ನಿಲುವೆ ನಿಜದ ನಿಲುವಾಗಿದೆ. ನೋಡದ ನೋಟವಾಗಿದೆ. ನೆನೆಯದ ಮನವಾಗಿದೆ. ಅದುವೆ ತಾನೆ ಗುರುವಾದುದು. ಇದು ಆರಿಗೂ ಉಪದೇಶ ಕೊಟ್ಟು ಗುರುವಾದುದಲ್ಲ, ಅರುವಿಂಗರುವಾಗಿ ಅರಿಯದರುವರಿದುದರಿಂದ ತಾನೆ ಗುರುವಾದ. ಇದಕ್ಕಿಂತ ಶ್ರೇಷ್ಠ ಗುರುತನ ಇಲ್ಲ.

ತಾನೆ ಲಿಂಗವಾದ : ಇದು ಕಲ್ಪಿತಲಿಂಗವಲ್ಲ, ಲಿಂಗಕ್ಕೆ ಲಿಂಗವಾಗಿಹ ಸ್ವಯಲಿಂಗ ಸಕಲರ ಅಂತರಂಗದಲ್ಲಿರ್ದ ಸಮಪ್ರಕಾಶ ಸ್ವಯ ತೇಜ. ಇದು ಪೂಜೆಗೆ ಬಾರದ ಲಿಂಗ,

ನೆನಹಿಂಗೆ ಬಾರದ ಲಿಂಗ, ಕೇವಲ ಜ್ಯೋತಿ, ವರ್ಣಾತೀತವಾಗಿಹುದರಿಂದ ತಾನೆ ಲಿಂಗವಾದುದು ಎಂದು ಹೇಳಿಹರು. ತಾನೆ ಪ್ರಸಾದವಾದ ಪ್ರಸಾದವೆಂಬ ಅರಿವು ತನ್ನಿಂದ ಸಿದ್ದವಾಗುವದರಿಂದ ಪ್ರಸಾದದ ಪ್ರಸಾದವಾಗಿಹ ಅವಿನಾಶಿ ಪ್ರಸಾದವಾದುದರಿಂದ ತಾನೆ ಪ್ರಸಾದವಾದ ಎಂದು ಹೇಳಿಹರು.

ತಾನೆ ಜಂಗಮವಾದ: ಭಾವಿಕರು ಭಾವಿಸಿಹ ಭಾವ, ಭಾವಕ್ಕೊಳಪಟ್ಟ ಜಂಗಮ ತತ್ವ ಇದಲ್ಲ, ಅದು ನಿರ್ಲೇಪ ಜಂಗಮ. ನಿರುಪಾದಿ ಜಂಗಮ, ನಿರ್ಭಾವಿ ಜಂಗಮನಾದುದರಿಂದ ನಿರಾಲಂಬ ಜಂಗಮ, ನಿರಾಲಂಬ ದರುವಿನ ಇರುವುಳ್ಳ ಜಂಗಮನಾದುದರಿಂದ ತಾನೆ ಜಂಗಮನಾದ. ಅರಿಯಲಿಲ್ಲದ ಅರುವೆ ತಾನಾಗಿರುವದರಿಂದ ಅರಿವೆ ಅರುಹಿಸಿಕೊಂಬುದಕ್ಕೂ ಅಂಜದವನು ಮತ್ತಂ ತನುವಿಲ್ಲದವನು, ತನುವಿನ ತನುವಾಗಿಹುದರಿಂದ ನಿರುಪಾಧಿ ಜಂಗಮನೆಂದು ನಿರ್ಲೇಪ ಜಂಗಮನೆಂದು ಹೇಳಿಹರು.

ತಾನೆ ಪ್ರಸಾದವಾದ : ಶುದ್ಧನರಿದು ತಾನೆ ಪ್ರಸಾದವಾದ. ಸಿದ್ಧವನರಿತು ತಾನೆ ಪ್ರಸಾದವಾದ. ಪ್ರಸಿದ್ಧವ ನರಿತು ತಾನೆ ಪ್ರಸಾದವಾದ. ತಾನೆ ಮಂತ್ರವಾದ. ಮಂತ್ರದ ಮೂಲವ ನರಿತು ತಾನೆ ಮಂತ್ರವಾದ (ಮಂತ್ರ) ಮಂತ್ರದರ್ಥವ ತಿಳಿದು ತಾನೆ ಮಂತ್ರವಾದ, ''ಪ್ರಣವ ನುಚ್ಚರಿಸುವ ಪ್ರಮಾಣಿಕರೆಲ್ಲರು ಪ್ರಣವದರ್ಥವ ತಿಳಿದು ನೋಡಿರೆ. ಪ್ರಣವ ನಾಹಂ ಎಂದುದೆ? ಪ್ರಣವ ಕೋಹಂ ಎಂದುದೆ? ಪ್ರಣವ ಸೋಹಂ ಎಂದುದೆ?'' ಪ್ರಣವ ಕೇಳದ ಮಂತ್ರ ತಾನೆ ಆದ ಎಂದು ಹೇಳಿಹರು. ತಾನೆ ಸಕಲ ವಿದ್ಯಾಸ್ವರೂಪನಾದ, ಸಕಲದರ ಅರಿವು ತನ್ನದಾದುರಿಂದ ತಾನೆ ಅರುವಿನ ಉಗಮ. ಅರಿವ ಅರುಹಿಸಿಕೊಂಬ ಅರುವಿನ ಮೂಲ ಸ್ವರೂಪನಾದುದರಿಂದ ಅರುಹಿಸಿಕೊಂಬ ಅರುವು ತಾನೆ, ಅರಿವ ಅರುವು ತಾನೆ, ತಾನೆ ಅರುವಿಂಗರುವಾದುದರಿಂದ, ತಾನೆ ಸಕಲ ವಿದ್ಯಾಸ್ವರೂಪನಾದ ಎಂದು ಹೇಳಿಹರು. ಇಂತಿವನೆಲ್ಲವನೊಳಕೊಂಡು ಎನ್ನ ಕರಸ್ಥಲಕ್ಕೆ ಬಂದು ಇನ್ನು ನಿರ್ವಿಕಾರ ಕಾಣಾ ಗುಹೇಶ್ವರಾ ಇಂತಿವನೊಳಕೊಂಡು? ತನ್ನೊಳಗ್ಗೆ ಗುರು ತನ್ನೊಳಗೆ ಲಿಂಗ, ತನ್ನೊಳಗೆ. ಜಂಗಮ ಇವೆಲ್ಲವು ತನ್ನೊಳಗೆ ಪ್ರಸಾದ ಮಂತ್ರ, ಯಂತ್ರ, ಸಕಲ ವಿದ್ಯಾ ಸ್ವರೂಪವಾದುದು ತನ್ನಿಂದ ತಾನೆ ಕಂಡುದು. ಇಂತಪ್ಪ ಪೂರ್ವಾತ್ಪರ ಅರಿವು ಎನ್ನಿರವೆ. ಅರಿವು ಆದಲ್ಲಿ ನಿರ್ವಿಕಾರ ಕಾಣಾ ಗುಹೇಶ್ವರ ಎಂದು ಹೇಳಿಹರು.

ವಚನ - 9

> **ಕಾಣಬಾರದ ಲಿಂಗ ಕರಸ್ಥಲಕ್ಕೆ ಬಂದರೆ ಹೇಳಲಮ್ಮೆ ಕೇಳಲಮ್ಮೆ,**
> **ಎನಗಿದು ಸೋಜಿಗ, ಎನಗಿದು ಸೋಜಿಗ.**
> **ಅಹುದೆನಲಮ್ಮೆನು, ಅಲ್ಲೆನಲಮ್ಮೆನು.**
> **ಗುಹೇಶ್ವರಲಿಂಗ ನಿರಾಳ ನಿರಾಕಾರ ಬಯಲು ಆಕಾರವಾದಡೆ.**

ತಾತ್ಪರ್ಯ : ಕಾಣಬಾರದ ಲಿಂಗ ಕರಸ್ಥಲಕ್ಕೆ ಬಂದರೆ ಹೇಳಲೆಮ್ಮೆ ಕೇಳಲೆಮ್ಮೆ ಎನಗಿದು ಸೋಜಿಗ ಎನಗಿದು ಸೋಜಿಗ: ಕಾಣಬಾರದ ಲಿಂಗ ಅದುವೆ ಕರಸ್ಥಲಕ್ಕೆ ಬಂದರೆ ಅದರ ಘನವ ಹೇಳೆನು ಕೇಳೆನು ಕಾಣದ ಕಣ್ಣು ಅದನ್ನು ಆರಾದರೂ ಕಂಡಿರಬಹುದೇ?

ಸಕಲ ಚರಾಚರ ಜಗದ್ರೂಪ ಕಾಣುವ ಕಣ್ಣನ್ನು ಕಾಣುವದದೆಂತು? ತನ್ನ ಶರೀರ ಹಿಡಿದು ಸಕಲವನ್ನು ನೋಡುವ ಕಣ್ಣನ್ನು ಕಾಣುವದದೆಂತು? ಆರಾದರೂ ಕಂಡಿರಬಹುದೆ? ಅದು ಕನ್ನಡಿಯ ಕೃಪೆಯಿಂದ ಕಣ್ಣನ್ನು ಪ್ರತ್ಯಕ್ಷ ತಿಳಿದ ಮೇಲೆ ಅದು ತನ ಕಣ್ಣಿಗಿಂತನ್ಯವೆನ್ನಲು ಬರುವುದೆ? ಕಣ್ಣೆ ಕಾಣ್ಣಾಗಿರುವಲ್ಲಿ ಹೇಳೆನು ಕೇಳೆನು, ಹಾಗೆ ಕಾಣಬಾರದ ಲಿಂಗವಾವುದು ಅದು ಎನ್ನ ಕರಸ್ಥಲಕ್ಕೆ ಬಂದರೆ ಹೇಳಲಮ್ಮೆ ಕೇಳಲಮ್ಮೆ. ಕಾಣಬಾರದ ಲಿಂಗವದು ಕಣ್ಣಿಗೆ ಕಾಣದ ಲಿಂಗ ನೆನಹಿಂಗೆ ನಿರ್ಣಯಕ್ಕೆ ನಿಲುಕದ ಲಿಂಗ, ಭಾವಕ್ಕಗಮ್ಯವಾಗಿಹ ಲಿಂಗ, ಶೃತಿಗೆ ಮೀರಿದ ಅಪ್ರಮಾಣಗಮ್ಯಲಿಂಗ, ಅಚಿಂತ್ಯಲಿಂಗ , ಸ್ವಯಂಜ್ಯೋತಿ ಲಿಂಗ, ಗುರುಕೃಪೆಯಿಂದ ಕರ ಕಮಲದಲ್ಲಿ ಸ್ವಯಂಜ್ಯೋತಿಯಾಗಿ ಪ್ರಕಾಶಿಸುವುದು ಕಂಡು ಹೇಳಲಮ್ಮೆ ಕೇಳಲಮ್ಮೆ. ಶ್ರೀಗುರುವಿನ ಕರುಣೆಯ ಅದೆಂತು ಹೇಳುವದು ಅಪ್ರತಿಮೆ ಪ್ರತಿಮೆಯುಳ್ಳದ್ದಾಯಿತೆ. ನಿರೂಪ ರೂಪವುಳ್ಳದ್ದಾಯಿತೆ? ಇದು ಸೋಜಿಗ ಇದು ಸೋಜಿಗ.

ಅರಸಲು ಬಾರದ ಲಿಂಗ ಅರಸಲು ಅನುವಾಯಿತೆ? ಕಾಣದ ಲಿಂಗ ಕರಕಮಲದಲ್ಲಿ ಕಂಡಿತೆ? ಎನ್ನ ಅಂಗೈಯಲ್ಲಿ ಕಂಡಿತೆ. ಎನಗಿದು ಆಶ್ಚರ್ಯ. ಆಶ್ಚರ್ಯ ! ಅರಸಬಾರದ ಅರಿವು ಕರಕಮಲದಲ್ಲಿ ಕಂಡು ಹೃದಯಕ್ಕೆ ಹೃದಯವು ತಿರುವು ಮುರುವಾಯಿತೆ? ಚಿಂತೆಯಳಿದು ಅಚಿಂತ್ಯವಾಯಿತೆ! ನೋಡುವ ನೋಟ ನೋಡದ ನೋಟವಾಯಿತೆ? ಮಾಡುವ ಮಾಟ ಮಾಡದ್ದಾಯಿತೆ? ಕೂಡುವ ಕೂಟ ಕೂಡದಗಲದ ಘನವಾಯಿತೆ? ಅರಿವು ಲಿಂಗರಿತು ಅರಿಯಲಿಲ್ಲದ ಅರುವಾಯಿತೆ? ಎನಗಿದು ಆಶ್ಚರ್ಯ ಆಶ್ಚರ್ಯ ! ಗುಹೇಶ್ವರನೆಂಬ ಲಿಂಗ ನಿರಾಕಾರ ಬಯಲು ಸಾಕಾರವಾಗಿ ಕರ ಕಮಲಕ್ಕೆ ಬಂದರೆ ಹೇಳಲಮ್ಮೆ ಕೇಳಲೆಮ್ಮೆ.

ಗುಹೇಶ್ವರ ಲಿಂಗ ನಿರಾಳ, ನಿರಾಕಾರ ಬಯಲು ಆಕಾರವಾಡದೆ : ಅದು ಲಿಂಗ ಲಿಂಗ ಸ್ಥೂಲವೆಂಬರು ಕೆಲಬರು. ಲಿಂಗ ಸೂಕ್ಷ್ಮವೆಂಬರು ಕೆಲಬರು. ಲಿಂಗಸ್ಥೂಲದಲ್ಲಿ ಸೂಕ್ಷ್ಮ ವಲ್ಲ , ಸ್ಥೂಲ ಸೂಕ್ಷ್ಮದ ಮೇಲಣ ಜ್ಞಾನರೂಪ. ಪರಮಾನಂದ ಪರಬ್ರಹ್ಮವೆ ಲಿಂಗವೆಂದರಿದ ಅರಿವು. ಅಖಂಡ ರೂಪ ನಿಜಗುರು ಸ್ವತಂತ್ರ ಸಿದ್ದೇಶ್ವರನ ನಿಲುವು ತಾನೆ ಬೇರಿಲ್ಲ. ಲಿಂಗ ಘನವರಿತ ಲಿಂಗ ಸ್ವರೂಪನು ಚಿದಂಗನು. ಅವರ ಮಾತೆಂಬುದು ಜ್ಯೋತಿರ್ಮಯಲಿಂಗ. ಅಂತಪ್ಪ ಮಹಾಂತನ ಮಾತಿನಿಂದ ಸಂಜ್ಞೆಯಿಂದ ಲಿಂಗವರಿಯಲು ಸಾಧ್ಯ. ಇನ್ನುಳಿದ ಮಾತುಗಳು ನಿಃಶಬ್ದ ಘನಲಿಂಗದ ಸಂಜ್ಞೆಯ ತಿಳಿಸವು. ಲಿಂಗ ಸ್ಥೂಲವಲ್ಲ, ಸೂಕ್ಷ್ಮವಲ್ಲ, ಸ್ಥೂಲ ಸೂಕ್ಷ್ಮದ ಮೇಲಣ ಜ್ಞಾನರೂಪ ಪರಮಾನಂದ ಪರಬ್ರಹ್ಮವೆ ಲಿಂಗವೆಂದರಿದ ಅರಿವು. ಅಖಂಡರೂಪವೆಂಬ ಗುರು ಕಾರುಣ್ಯದನುವ ಅರಿತಾಗ ತಾನೆ ಲಿಂಗ. ತನಗಿಂತನ್ಯವಿಲ್ಲ. ಹೀಗೆ ಮಹಾಂತರ ಮಹಾಪ್ರಸಾದ ದೊರೆತಾಗ ಅದುವೇ ಕರಸ್ಥಲಕ್ಕೆ ಅಂದರೆ ನಮ್ಮ ಅನುಭವಕ್ಕೆ ಬಂದುದು. ಹೇಳಲಮ್ಮೆ ಕೇಳಲಮ್ಮೆ ಲಿಂಗವೆಂಬ ಪರಾನಂದ ಪ್ರರಬ್ರಹ್ಮ ಅರಿಯಲಿಲ್ಲದ ಅರುವು. ಅದು ಸಾಕಾರವಾಗಿ ಕರಸ್ಥಲಕ್ಕೆ ಬಂದರೆ ಹೇಳಲಮ್ಮೆ. ಲಿಂಗವದು ಜ್ಞಾನರೂಪಿ ನಿಸ್ಸೀಮವು ನಿರವಧಿ ಅನಂತ ಅಪಾರ ಘನಕ್ಕೆ ಘನ ತಾನೆ ನಿಜಗುರುವದು. ತನ್ನಿರುವು ಅದುವೆ, ಸಿದ್ದಲಿಂಗೇಶ್ವರ ಇದು ನಿನಗಿಂತನ್ಯವಲ್ಲವೆಂದು ಹೇಳಿ ತಿಳಿಸಿದ. ಮಹದರುವು ಸಾಕಾರವಾಗಿ ಕರಸ್ಥಳಕ್ಕೆ ಬಂದರೆ ಎನಗಿದು ಸೋಜಿಗವೆಂದು ಪ್ರಭು ಹೇಳಿದನು.

ಗುಹೇಶ್ವರ ಲಿಂಗ ನಿರಾಕಾರ ಬಯಲು: ಲಿಂಗವದು ನಿರೂಪ. ಸ್ಥೂಲವಾಗದ್ದು ಸೂಕ್ಷ್ಮವಾಗದ್ದು ಬಯಲು ಅದು ನಿರಂತರ ಮಂಗಳಮಯ ಚಿಜ್ಯೋತಿ, ಪರಮಸತ್ಯ,

ಬಯಲು ರೂಪ ಮಾಡಬಲ್ಲಾತನೆ ಶರಣ, ಆ ರೂಪ ಬಯಲು ಮಾಡಬಲ್ಲಾತನೆ ಲಿಂಗಾನುಭವಿ, ಬಯಲು ರೂಪ ಮಾಡಲರಿಯದಿರ್ದಡೆ ಎಂತು ಶರಣನೆಂಬೆ ? ಆ ರೂಪ ಬಯಲ ಮಾಡಲರಿಯದಿರ್ದಡೆ ಎಂತು ಲಿಂಗಾನುಭವಿ ಎಂಬೆ ? ಈ ಉಭಯ ಒಂದಾಗಿದರಲ್ಲಿ ನಿಮ್ಮಲ್ಲಿ ತೆರಹುಂಟೆ? ಕೂಡಲಸಂಗಮದೇವಾ. ಬಯಲು ರೂಪ ಮಾಡಬಲ್ಲಾತ ಶರಣ: ಲಿಂಗರೂಪ ಶರಣನಿಂದ ಮೂಡಿಬಂದರೂಪ ಲಿಂಗ ಅರುರೂಪವಾಗಿ ಕಂಡ ಬಯಲು. ನಿರಂತರವಾಗಿರುವ ಮಂಗಳಮಯ ಚಿಜ್ಯೋತಿ. ಅದುವೆ ಪರಮಸತ್ಯ ರೂಪಾಗಿ ಕಾಣುವ ಲಿಂಗಯ್ಯನ ಅರಿವು. ಶರಣನಿಂದ ಕರುಣಿಸಿದ ಅರಿವು. ಶರಣವರೇಣ್ಯ ಪ್ರಭುದೇವ ಅನನ್ಯ ಭಕ್ತರಿಗೆ ತಿಳಿಯುವಂತೆ ಮಾಡಿದ ಕರುಣೆ. ಹೇಳಲಮ್ಮೆ ಕೇಳಲಮ್ಮೆ ಇದು ಸೋಜಿಗ ಇದು ಸೋಜಿಗ.

ಲಿಂಗವದು ನಿರಂತರವಾಗಿಹ ಮಂಗಳಮಯ ಪರಮಸತ್ ಅಖಂಡ ರೂಪ ಅರಿವುಡೆ ತನಗಿಂತನ್ಯವಾದುದಿಲ್ಲ ಇಲ್ಲವಾದುದು ಇಲ್ಲವಾದುದರಿಂದ ಗುಹೇಶ್ವರ ಲಿಂಗ ನಿರಾಕಾರ ಬಯಲು ಸಾಕಾರವಾಗಿ ತನ್ನ ಕರತಸ್ಥಲಕ್ಕೆ ಬಂದರೆ ಎನಗಿದು ಸೋಜಿಗ. ಅರಿದಡೆ ತಾನೆ ಲಿಂಗರೂಪ, ತಾನೆ ಬಯಲು, ತಾನೆ ಚಿಜ್ಯೋತಿ, ತಾನೆ ಪರಮಸತ್ಯ ತನಗಿಂತನ್ಯ, ಆವುದು ಇಲ್ಲದುದರಿಂದ ತಾನೆ ಸಕಲವಾದ್ದರಿಂದ ಹೇಳಲಮ್ಮೆ. ಅಹುದೆನಲಮ್ಮೆನು ಅಲ್ಲೆನತೆಮ್ಮೆನು ಕಥನಕ್ಕೆ ಮೀರಿದುದಾಗಿರುವಲ್ಲಿ ಏನನ್ನ ಬೇಕು.ತೆರಹಿಲ್ಲದಭವ ನುಡಿಗೆಡೆಗೊಡದವನನ್ನು ಅಹುದೆನಲಮ್ಮೆನು ಅಲ್ಲೆನ ಲಮ್ಮೆನು. ಏನೆಂದೆನ್ನದ ಮುನ್ನ ತಾನೆ ಆದ ಮಹಾಘನಕ್ಕೆ ಅಹುದೆನಲಮ್ಮೆನು ಅಲ್ಲೆನಲಮ್ಮೆನು. ಮಾತಿಲ್ಲದವನು ಮಾತಾಡಿದುದೆಂತು? ಮೂಕನು ಮಾತಾಡಿದುದೆಂತು? ಮೂಕನು ಮಾತಾಡಿದನೆ? ಲಿಂಗವದು ಲಿಂಗವೆ? ಕಣ್ಣೆಂಬುದು ಕಣ್ಗೆ ಕಣ್ಣು ತಾನಾಗಿರುವುದರಿಂದ ಕಣ್ಣೆನಲಿಲ್ಲ. ಲಿಂಗ ತಾನು ಕಾಣಬಾರದ ಲಿಂಗವಾದುದರಿಂದ ಲಿಂಗನಲಿಲ್ಲ. ಗುಹೇಶ್ವರಲಿಂಗ ನಿರಾಳ ನಿರಾಕಾರ ಬಯಲು ಆಕಾರವಾದಡೆ ಗುರುಕೃಪೆ ವರ್ಣಿಸುವದ ಸಾಧ್ಯವು. ಓಹೋ ಗುರು ಘನನೆ ಬಯಲನ್ನ ಆಕಾರ ಮಾಡಿದೆಯಾ? ನೀ ಕರುಣಿಸಿದ ಕರುಣೆ ಆಕಾರವು ಅದು ರೂಪವಾದುದಲ್ಲ , ಅರೂಪವಾದುದಲ್ಲ, ಅವರ್ಣೀಯವು ! ಸಾಕಾರ ನಿರಾಕರ ತನ್ನೊಳಗಡಗಿರ್ದುದಕ್ಕೇನನ್ನಬೇಕು? ಸಾವಯವವೆಂಬೆನೆ ನಿರವಯ. ಸಾವಯುವ ನಿರವಯ ತನ್ನೊಳಡಗಿರ್ದುದ ನೀವೆಬಲ್ಲಿರಾಗಿ ಎಂದು ಹೇಳಿಹರು.

ವಚನ - 10

ಶಿವ ಗುರುವೆಂದು ಬಲ್ಲಾತನೆ ಗುರು, ಶಿವ ಲಿಂಗವೆಂದು ಬಲ್ಲಾತನೆ ಗುರು,
ಶಿವ ಜಂಗಮವೆಂದು ಬಲ್ಲಾತನೆ ಗುರು,
ಶಿವ ಶಿವಾಚಾರವೆಂದು ಬಲ್ಲಾತನೆ ಗುರು,
ಶಿವ ಪ್ರಸಾದವೆಂದು ಬಲ್ಲಾತನೆ ಗುರು,
ಇಂತೀ ಪಂಚವಿಧವ ಪರಬ್ರಹ್ಮವೆಂದು ಅರಿದ
ಮಹಾಮಹಿಮ ಸಂಗನ ಬಸವಣ್ಣ ಎನಗೆಯೂ ಗುರು.
ನಿನಗೆಯೂ ಗುರು. ಆ ರೂಪ ಬಯಲು ಮಾಡಬಲ್ಲಾತನೆ ಲಿಂಗಾನುಭವಿ,
ಜನಕ್ಕೆಲ್ಲಕ್ಕೂ ಗುರು ಕಾಣಾ ಗುಹೇಶ್ವರಾ.

ತಾತ್ಪರ್ಯ: ಪ್ರಭುದೇವ, ಸಂಗನ ಬಸವಣ್ಣನು ಎನಗೆಯು ಗುರು ನಿನಗೆಯೂ ಗುರು ಜಗಕ್ಕೆಲ್ಲಕ್ಕೂ ಗುರುದೇವನೆಂದು ಚನ್ನಬಸವಣ್ಣನ ಮುಂದೆ ಸ್ತುತಿಸಿದುದು. ಪಂಚವಿಧ ಪರಬ್ರಹ್ಮವೆಂದರಿತ ಮಹಾಮಹಿಮನೆಂದರೆ ಸಂಗನ ಬಸವಣ್ಣ. ಶಿವ ಗುರುವೆಂದು ಬಲ್ಲಾತ ಶಿವ ಲಿಂಗವೆಂದು ಬಲ್ಲಾತ, ಶಿವ ಜಂಗಮವೆಂದು ಬಲ್ಲಾತ, ಶಿವ ಶಿವಾಚಾರವೆಂದು ಬಲ್ಲಾತ, ಇವು ಪ್ರಸಾದವೆಂದು ಬಲ್ಲಾತ, ಈ ಬಲ್ಲತನಕ್ಕೆ ಗುರುಘನನೆಂದು ಗುರು ಲಿಂಗ ಉದಯ ಶಿವಲಿಂದುದಯ ಜಂಗಮ ಲಿಂಗದುದಯವರಿತ ಮಹಾಂತ ತನ್ನಂತರಂಗದೊಳಗಿರ್ದ ಗುರು ಲಿಂಗ ಜಂಗಮ ಅಗೋಚರ. ಆಚಾರ ಪ್ರಸಾದದ ನಿಕ್ಷೇಪವ ಕಂಡ ನಿಜ ನಿಧಿ ಅಕ್ಷಯ ಸಂಪತ್ತು. ಇಂತಪ್ಪ ಮಹದರಿವುಳ್ಳ ಮಹಾಂತ ನನಗೆಯೂ ಗುರು ನಿನಗೆಯೂ ಗುರು ಜನಕ್ಕೆಲ್ಲಕ್ಕೂ ಮಹಾಮಹಿಮನೆಂದು ವರ್ಣಿಸಿದ.

ಶಿವ ಯಾರು?: ''ಸಾಕಾರಂಚ ನಿರಾಕಾರಂ ನೇತಿ ನೇತೇತಿ, ಸರ್ವದಾ, ಭೇದಾ ಭೇದ ನಿರ್ಮುಕ್ತೋ ವರ್ತತೆ ಕೇವಲಃ ಶಿವಃ'' ಸಾಕಾರ ನಿರಾಕಾಗಳನ್ನು ನೇತಿ ನೇತಿ ಎಂಬ ಭಾವನೆಯಿಂದ ನಿರಾಕರಿಸಿದರೆ ಕೊನೆಗುಳಿಯುವದೆ ಭೇದಾ ಭೇದ ವಿನಿರ್ಮುಕ್ತನಾದ ಕೇವಲ ಶಿವನೆಂದು ವರ್ಣಾತೀತನೆಂದು ಶಿವ ತತ್ವಕಂಡವರು ಶಿವನ ತತ್ವರೂಪಾಗಿ ಕಂಡವರು ಬಸವರಸರು. ಶಿವನನ್ನು ಸಾಕಾರ ನಿರಾಕಾರನೆಂದು ತಿಳಿದವರೆಲ್ಲ ಶಿವನು ನಾಮಿಯಲ್ಲ, ಅನಾಮಿಯಲ್ಲ ರೂಪನಲ್ಲ ಅರೂಪನಲ್ಲ, ಅಲ್ಲ ಅಲ್ಲವೆಂಬುದಕ್ಕೂ ಮೀರಿ ಬೆಳಗುವ ಮಹಾಘನ ಚೈತನ್ಯವೆ ಶಿವನೆಂದು ತಿಳಿದಿದ್ದವನು ಇದಲ್ಲದೆ ಶಿವನನ್ನು ಭೇದ ದೃಷ್ಠಿಯಿಂದ ಕಂಡಾತನಲ್ಲ, ಅಭೇದ ದೃಷ್ಠಿಯಿಂದ ಕಂಡಾತನಲ್ಲ.

ಕೆಲಬರು ದ್ವೈತವನ್ನಿಚ್ಚೆಸುವರು. ಕೆಲವರು ಅದ್ವೈತವನ್ನಿಚ್ಚೆಸುವರು. ಇಂಥವರು ದ್ವೈತ ದ್ವೈತ ವಿಸರ್ಜಿತವಾಗಿಹ ಸಮ ಪ್ರಕಾಶ ಮಾನವಾದ ತತ್ವವನ್ನು ತಿಳಿಯಲಾರರು. ಎಂಬ ದತ್ತ ಗೀತಾ ಉಕ್ತಿಯಂತೆ ಕೆಲವರು ಶಿವ ಬೇರೆ ನಾನು ಬೇರೆಂಬ ಸರ್ವಜ್ಞತ್ವ ಅಲ್ಪಜ್ಞತ್ವವೆಂಬ ಉಪಾಧಿ ದೃಷ್ಠಿಯೇ ಶ್ರೇಷ್ಠವಾದುದರಿಂದ ಅವರು ದ್ವೈತವನ್ನಿಚ್ಚೆಸುವರು. ಕೆಲವರು ಉಪಾಧಿ ಗೆ ಮಹತ್ವಕೊಡದೆ ತೋರಿಕೆಗೆ ಮಹತ್ವಕೊಡದೆ ಅಲ್ಪಜ್ಞತ್ವಕ್ಕೂ ಸರ್ವಜ್ಞತ್ವಕ್ಕೂ ಬೇರಾಗಿರುವ ಸಂಗ, ಸಾಕ್ಷಿ ಲಕ್ಷಣಕ್ಕೆ ಒಪ್ಪಿ ಆತ್ಮ ಪರಮಾತ್ಮ ಒಂದೆ ಎಂದು ಅದ್ವೈತವ ನಿಚ್ಚೆಸುವರು ಇಂಥಹರು ಬಸವಣ್ಣನವರ ಕಂಡು ಬೇದಾ ಭೇದ ವಿನಿರ್ಮುಕ್ತ ಶಿವನ ತಿಳಿಯದವರು. ಇದು ಕಾರಣ ಇಂಥಹರು ದ್ವೈತಾ ದ್ವೈತ ವಿಸರ್ಜಿತವಾದ ಸಮಪ್ರಕಾಶ ಮಾನವಾದ ತತ್ವ ತಿಳಿಯಲಾರರು ಎಂದು ಹೇಳಿಹರು.

ಶಿವ ತತ್ವವದು ಮಾಯಿಕವಲ್ಲ, ನಿರ್ಮಾಯವು. ಒಂದು ವ್ಯಕ್ತಿ ಚಾರಿತ್ರ್ಯವಲ್ಲ, ನಿರುಪಮವಾದುದು. ನಿರುಪಮವಾದುದ ಉಪಮೆಗೆ ತರಬಾರದು. ಬಸವರಸರು ಶಿವ. ಎನೊಂದು ಸುರಲು ಎಡೆಗೊಡದ ಘನ. ಕೇವಲ ಜ್ಯೋತಿ, ವರ್ಣಾತೀತವೆಂದು ಬಲ್ಲವನಾದುದರಿಂದ ಸ್ವಯಂಜ್ಯೋತಿ. ಶಿವ ಶಿವನ ಹೊರ್ತು ಅನ್ಯಕಾಣದ್ದರಿಂದ ಪಂಚ ವಿಧದಿಂದಲೂ ಶಿವನನ್ನೆಕಂಡ ಬೋಧ ರೂಪ ಗುರು ಘನನನ್ನು ಶಿವನನ್ನಾಗಿ ಕಂಡ. ಕರಕಮಲದಲ್ಲಿದ್ದ ಪೂಜಾ ಲಿಂಗವನ್ನು ಸ್ವಯಂಜ್ಯೋತಿ ಶಿವನನ್ನಾಗಿ ಕಂಡ. ಗಮನಿ ಜಂಗಮವನ್ನು ಲಿಂಗ ಒಂದಾಗಿರ್ದ ಜಂಗಮಲಿಂಗವಾಗಿ ಕಂಡ ಅಭೇದ್ಯ ಶಿವನಾಗಿ ಕಂಡ

ಶಿವ ತತ್ವದಿರುವಿನ ಅರುವೆ ಶಿವ ಪ್ರಸಾದವಾಗಿ ಕಂಡ. ಹೀಗೇ ಪಂಚವಿಧದಲ್ಲಿಯೂ ತತ್ವವೆ ಕಂಡ. ಶಿವನನ್ನೆ ಕಂಡುದರಿಂದ ಪಂಚ ವಿಧ ಪರಬ್ರಹ್ಮವೆಂದು ಅರಿದ ಮಹಾಮಹಿಮ ಸಂಗನ ಬಸವಣ್ಣ ಎನಗೆಯೂ ಗುರು ನಿನಗೆಯೂ ಗುರು ಜಗಕ್ಕೆಲ್ಲಕ್ಕೂ ಗುರು ಕಾಣಾ ಗುಹೇಶ್ವರಾ ಎಂದು ಪ್ರಭು ಕೊಂಡಾಡಿಹುದು.

ಬಸವಣ್ಣನವರ ದಿವ್ಯ ದೃಷ್ಠಿಯಲ್ಲಿ ಕಂಡುದು ಬೇರೆ. ಭಾವಿಕರು ಕಂಡುದು ಬೇರೆ. ಭಾವಿಕರು ಪರಿಮಿತಿ ಉಳ್ಳವರು. ಶರಣ ಬಸವಣ್ಣ ಅಪರಮಿತ ಭಾವಿಕರು. ಗುರು ಲಿಂಗ ಜಂಗಮ ಆಚಾರ ಪ್ರಸಾದ ಇವು ಐದು ತೋರುದನ್ನಾಗಿ ಕಂಡರು. ನಾಮ ರೂಪವುಳ್ಳದಾಗಿ ಕಂಡರು. ಬಸವಣ್ಣನು ಅಪೂರ್ವಿಕನಾದುದರಿಂದ ಗುರುವನ್ನು ಕಾಣಬಾರದ ಗುರುಘನನಾಗಿ ಕಂಡ. ಲಿಂಗ ಪೂಜೆಗೆ ಬಾರದ ಲಿಂಗವಾಗಿ ಕಂಡ. ನಿಜದಲ್ಲಿ ನಿಂದ ನಿಬ್ಬೆರಗುಳ್ಳ ನಿಜೈಕ್ಯ ಜಂಗಮವ ಕಂಡ. ಒಡಲಳಿದುದೆ ಆಚಾರವಾಗಿ ಕಂಡ. ಸಮತಾನಿಧಿಯಾದುದೆ ಆಚಾರ. ಸಮರತಿಯಾದುದೆ ಆಚಾರ. ಸಮ ಸ್ವರೂಪವ ಕಂಡುದೆ ಆಚಾರ. ಸುಖದ ಸುಖಿಯಾದುದು ಆಚಾರ , ಅರುವಿಂಗರುವಾಗಿಹ ತೆರೆಹಿಲ್ಲದ ನಿಜದಿರುವುಳ್ಳವನಾಗಿ ತಾನೆ ತಾನಾದುದು ಶಿವ; ಪ್ರಸಾದ. ಹೀಗೆ ಐದು ವಿಧದಿಂದಲೂ ಅಭೇದ್ಯ ಶಿವನಕಂಡ ಮಹಾ ಮಹಿಮ.

ಎನಗೆಯೂ ಗುರು ನಿನಗೆಯೂ ಗುರು :

ಓ ಚನ್ನಬಸವೇಶ. ಇಲ್ಲಾದುದಿಲ್ಲಾದುದೆಂದಿಪ್ಪುದು ಇಲ್ಲಾದುದಿಲ್ಲಾದುದೆಂತಿಪ್ಪುದು ಎಂಬ ಎನ್ನ ವೈರಾಗ್ಯಕ್ಕೂ ಗುರು. ಇದಲ್ಲದೆ ಅನುವರಿತು ಅನುವ ಮರದಡೆ ಭಾವ ರಹಿತ ಗುಹೇಶ್ವರ ಬಯಲೆಂಬುದಕ್ಕೂ ಗುರು ಕಾಣಾ. ಮತ್ತು ನಿನ್ನ ಜ್ಞಾನ ಕ್ರಿಯೆಕ್ಕೂ ಗುರು ನೋಡಾ. ಅರುವ ಅರಿಯುವ ಕ್ರಿಯೆ ಜ್ಞಾನ ಕ್ರಿಯೆ ನಿನ್ನದಾಗಿದ್ದರೂ ನಿನಗೂ ಗುರು ಅರಿಯಲಿಲ್ಲದ ಅರುವ ಸ್ವೀಕರಿಸಿದ ಮಹಾಮಹಿಮ ಈತ, ಪ್ರಭುವಿನ ವೈರಾಗ್ಯವ ಅರಿಯಲಿಲ್ಲ. ಮತ್ತು ಚನ್ನಬಸವಣ್ಣನ ಜ್ಞಾನ ಕ್ರಿಯೆಯ ಅರಿಯಲಿಲ್ಲ, ತನ್ನಿರುವ ಮರೆಯಲಿಲ್ಲ. ಖಂಡಾ ಖಂಡ ಸಂಯೋಗವಿಲ್ಲದ ಅಖಂಡಿತನ ನಿಲುವಾಗಿಹ ನೆಲೆಯಿಲ್ಲದ ನಿಲುವು ಬಸವಣ್ಣನವರದು. ನನಗೆಯೂ ಗುರು, ನಿನಗೆಯೂ ಗುರುವೆಂದು ಹೇಳಿದುದಲ್ಲದೆ ಜಗಕ್ಕೆಲ್ಲಕ್ಕೂ ಗುರು ಕಾಣಾ ಗುಹೇಶ್ವರ ಎಂದು ಹೇಳಿಹರು.

ಜಗಕ್ಕೆಲ್ಲಕ್ಕು ಗುರು ಬಸವಣ್ಣವೆಂದು ಪ್ರಭುದೇವ ಬಿತ್ತರಿಸಿದುದು ನೋಡುವುಡೆ ಜಗವ ನಾನು ಕಂಡುದು ಬೇರೆ, ಬಸವಣ್ಣ ಕಂಡುದು ಬೇರೆ. ಜಗವ ಇಲ್ಲಾದುದಿಲ್ಲಾಗಿ ಕಂಡೆ ಮತ್ತು ಎಲ್ಲಿಪ್ಪುದು ಎಂದಿಪ್ಪುದು ಎಂದು ಕಂಡೆ. ದೇವ ದೇವ ಬಸವದೇವ ಕಂಡುದು ಘನವು. ಈ ಮಹಾಂತ ಜಗವೆನಲಿಲ್ಲ , ಜಗದ್ಭರಿತ ನೆನ್ನದೇವನೆಂದ ! ಮಾಂಸ ಪಿಂಡವ ಕಾಣಲಿಲ್ಲ, ಮಂತ್ರಪಿಂಡವಾಗಿ ಕಂಡ. ಪಂಚಭೂತವ ಕಾಣಲಿಲ್ಲ ತೆರಹಿಲ್ಲದ ಲಿಂಗ ಭರಿತವಾಗಿ ಕಂಡ ಪ್ರಾಣವ ಕಾಣಲಿಲ್ಲ ಪ್ರಾಣದ ಪ್ರಾಣವಾಗಿಹ ಪ್ರಾಣಲಿಂಗವಾಗಿ ಕಂಡುದರಿಂದ ಜಗಕ್ಕೆಲ್ಲಕ್ಕೂ ಗುರು ಬಸವಣ್ಣ ಕಾಣಾ ಗುಹೇಶ್ವರಾ ಎಂದು ಹೇಳಿಹರು.

ವಚನ - 11

ಶುದ್ಧವ ನರಿದೆ ಚನ್ನಬಸವಣ್ಣ ನಿಮ್ಮ ದಯದಿಂದ ಸಿದ್ಧವ ನರಿದೆ
ಚನ್ನ ಬಸವಣ್ಣ ನಿಮ್ಮ ದಯದಿಂದ ಪ್ರಸಿದ್ಧವ ನರಿದೆ ಚನ್ನಬಸವಣ್ಣ ನಿಮ್ಮ ದಯದಿಂದ

ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ ಚನ್ನಬಸವಣ್ಣ ಗುರುವಾಗಿ ಬಂದು
ಎನ್ನ ಜನ್ಮ ಕರ್ಮ ನಿವೃತ್ತಿ ಮಾಡಿದನಯ್ಯ.

ತಾತ್ಪರ್ಯ: ಶುದ್ಧವ ನರಿದೆ ಚನ್ನಬಸವಣ್ಣ ನಿಮ್ಮ ದಯದಿಂದ: ಸಿದ್ದರಾಮ ಶಿವಯೋಗಿಗಳು ಶುದ್ದ ಸಿದ್ದ ಪ್ರಸಿದ್ದವ ನರಿದೆ ನಿಮ್ಮ ಕರುಣೆಯಿಂದ. ಶುದ್ಧವದು, ತನಗಿಂತ ಭಿನ್ನವೊ? ಅಭಿನ್ನವೊ? ಭಿನ್ನಾ ಭಿನ್ನವೊ? ಆವುದಕ್ಕನ್ನಬೇಕು? ಧ್ವನಿಯ ಮರೆಯಲ್ಲಿರ್ದುದು ಶುದ್ದವು ಶಬ್ದ ನಷ್ಟ ಮಾಡುವ ಗುರು ಕರುಣೆ ಆರಿಗೆ ಕರಗತವು ಅವರು ಶುದ್ದ ನರಿತವರು. ಏನೆಂದೆನ್ನದ ಮುನ್ನ ತಾನೆ ಆದುದು ಆದಾರು ವರ್ಣಿಸುವದು ಶುದ್ದವದು ತತ್ವ. ಅದು ಆವಾವುದಕ್ಕೂ ಅಂಟದೆ ಅಲುಪ್ತವಾಗಿ ನಿರಾಲಂಬವಾಗಿದೆ. ಅದು ಶುದ್ದವು. ಗಾಳಿ ಹೊಲಸು ಮಾಡದು. ನೀರು ಪವಿತ್ರ ಮಾಡದು. ಅಗ್ನಿಯು ದಹಿಸದು. ಆಕಾಶವು ಮುಚ್ಚಿಡದು, ವಾಣಿಯು ಅದನ್ನು ವರ್ಣಿಸದು, ಮನ ನೆನೆಯದು, ಸಿದ್ಧಿ ನಿರ್ಧರಿಸದು, ಅದು ಮರವರುವಿನ ಮಾಪಿನಿಂದ ಅಳೆಯದು ಚಿತ್ತಾ ಚಿಂತಿಸದು. ಅಹಂಕಾರವು ಸಮೀಪ ಹೋಗದು. ಶುದ್ಧ ವದು ಕೊನೆ ಮೊದಲಿಲ್ಲದ ನಿರವಧಿಯು. ಒಳ ಹೊರಗೆನ್ನದೆ ಭರಿತವು ತೆರಹಿಲ್ಲದ ಮಹಾಘನವು ಅರಿವುಡೆ ತಾನೆ ತಾನೆಂದರಿತ ಅರುವಿಂಗರುವು . ವಾಙ್ಮನಕ್ಕಗೋಚರ ಶೃತಿ ಗೋಚರ. ಪ್ರಾಪ್ತಿ, ಅಪ್ರಾಪ್ತಿ ಎನ್ನಲು ಬರುವದಿಲ್ಲ. ಮೊದಲು ಲಭ್ಯವಾಗಿದ್ದಿಲ್ಲ ಈಗ ಲಭ್ಯವಾದುದು ಎಂದು ಸಿದ್ಧವಾಗುವುದು ನಿರಂತರ ಇದ್ದುದನ್ನು ಅಪ್ರಾಪ್ತಿ ಎಂದು ಹೇಗೆ ಹೇಳುವದು. ನಿತ್ಯ ಪ್ರಾಪ್ತರೂಪ ತಾನೆ ಇರುವಲ್ಲಿ ಪ್ರಾಪ್ತಿ ಅಪ್ರಾಪ್ತಿ ಎಂಬುದು ಅರಿಯದುದಲ್ಲ ಇದು ಕಾರಣ ಶುದ್ದ ತಾನೆ ನಿಷ್ಕಳಂಕ ತಾನೆ ತಾನು ನಾಮರೂಪ ಎಂದೂ ಆದವನಲ್ಲ. ಏಕೆಂದರೆ ಸುಮ್ಮನೆ ಹೇಳುವದಕ್ಕಾದರೂ ನಾಮರೂಪವಿಲ್ಲ. ನನಗಿಂತನ್ಯವಾಗಿರುವ ನನ್ನ ಸಮಾನವಿರುವ ಒಂದೂ ವಸ್ತುವಿಲ್ಲ. ಗಗನದಂತೆ ಸಮಾನವಾಗಿರುವ ಅಖಂಡ ಜ್ಞಾನಾಮೃತ ಒಂದೆ ಸತ್ಯವಿದ್ದುದರಿಂದ ತೋರುವ ಅವಯವಂಗಳು ಆವಾವು ಆಗಿಲ್ಲ. ಇಂದ್ರಿಯಂಗಳ ಶುಭಾಶುಭಕ್ರಿಯೆ ಆದವನಲ್ಲ. ತೋರಿ ಇಲ್ಲವಾಗುವ ಮಾಯಿಕ ತತ್ವ ಅತತ್ವವೆಂಬ ನುಡಿಗೊಳಪಟ್ಟುದು ಒಂದು ಆದವನಲ್ಲ. ತುದಿ ಮೊದಲಿಲ್ಲದ ಅಂದು ಇಂದು ಇದ್ದಂತಿರುವ ನಿರ್ವಿಕಾರ ನಿರಾಳವಿರುವಲ್ಲಿ ಶುದ್ಧವೆಂದು ಹೇಳಿದೆ. ಇದು ನಿರಂತರ ನಿಷ್ಕಳಂಕವಿರುವುದರಿಂದ ಶುದ್ಧವನರಿದೆ ಚೆನ್ನಬಸವಣ್ಣಾ ನಿಮ್ಮ ದಯದಿಂದ ಎಂದು ಹೇಳಿಹರು.

ಪ್ರಸಿದ್ದವ ನರಿದೆ ಚೆನ್ನಬಸವಣ್ಣ ನಿಮ್ಮ ದಯದಿಂದ: ಸಿದ್ಧವದು ಸ್ವತಃ ಸಿದ್ಧವು ತನ್ನಿಂದ ತಾನಾದಾ ಮಹಾಘನವು ಇದನ್ನಾವ ತತ್ವ ಅತತ್ವ ವಿವೇಕ ಸಿದ್ಧ ಮಾಡದು. ಆನು ಅರಿದೆ ಮರದೆ ಅಳಿದೆ ಉಳಿದೆನೆಂಬ ಮನದ ಕಲ್ಪನೆಗಳೆಲ್ಲ ಅದರಿಂದಲೆ ಸಿದ್ದವಾಗುವವು. ಮನದ ಕಲ್ಪಿತ ಅದನ್ನು ಸಿದ್ಧ ಮಾಡದು. ಸ್ಥೂಲ ಸೂಕ್ಷ್ಮವೆಂಬ ತೋರಿಕೆ ಅದರಿಂದ ಸಿದ್ಧವು. ಅಂತರ್ಮುಖ, ಬಹಿರ್ಮುಖ ಮನದ ಕಾರ್ಯವೆಲ್ಲವು ಸಿದ್ಧವಸ್ತುವಿನಿಂದ ಸಿದ್ದವು. ಅಂತರ್ಮುಖವುಳ್ಳ ಬ್ರಹ್ಮಾಕಾರವೆ ಸಿದ್ದವಾದುದನ್ನು ಸಿದ್ದ ಮಾಡದಿದ್ದಲ್ಲಿ ಬಹಿರ್ಮುಖವಾಗಿಹ ವಿಷಯಾಕಾರದಿಂದ ಅದೆಂತು ಸಿದ್ದವಾಗುವದು. ಪುಣ್ಯಪಾಪ ಸ್ವರ್ಗ ನರಕ ಬಂಧ ಮೋಕ್ಷ ಪ್ರವೃತ್ತಿ ನಿವೃತ್ತಿಯೆಂಬ ಮನದ ಕಲ್ಪಿತವೆಲ್ಲ ಅದರಿಂದ ಸಿದ್ದವು. ಸೂರ್ಯ ಬೆಳಕಿನಿಂದ ಜಗವು, ಜಗದ ಕಾರ್ಯವು ಜೀವಿಗಳು ಜೀವನ ಕಾರ್ಯ ಹೇಗೆ ಸಿದ್ದವಾಗುವದೋ ಹಾಗೆ

ಪ್ರವೃತ್ತಿ ಕಾರ್ಯವೆ ಇರಲಿ ನಿವೃತ್ತಿ ಕಾರ್ಯವಾದ ಬೋಧ ಕಾರ್ಯವೆ ಇರಲಿ ಇವುಗಳೆಲ್ಲವು ಸ್ವತಃ ಸಿದ್ದವಾಗಿಹ ಸಿದ್ದ ವಸ್ತುವಿನಿಂದಲೆ ಸಿದ್ಧವಾಗಿಹವು. ಮನ ಸ್ವಪ್ನ ಕಾರ್ಯವು ಕೂಡ ಇದರಿಂದ ಸಿದ್ದವಾಗುವುದು. ಜೀವ ಪರಮರೇಖತ್ವದ ಸಂದಾನ, ಹಠಯೋಗ, ರಾಜಯೋಗ, ಜ್ಞಾನಯೋಗ ಮೊದಲಾದವುಗಳು ಸಿದ್ದ ವಸ್ತುವಿನಿಂದ ಸಿದ್ದವು, ದ್ವೈತ ವಿಚಾರ, ಅದ್ವೈತ ವಿಚಾರ, ನಾಹಂ, ಕೋಹಂ, ಸೋಹಂ, ಚಿದಹಮ್ಮು ಮರವಿನವೆ ಇರಲಿ ಅರುವಿನವೆ ಇರಲಿ ಇವೆಲ್ಲವು ಸ್ವತಃ ಸಿದ್ದವಾಗಿಹ ಸ್ವತೇಜದಿಂದ ಸಿದ್ದವು. ಸ್ವಪ್ರಕಾಶವಾಗಿಹ ಸ್ವತೇಜವನ್ನು ಇವಾವು ಸಿದ್ದ ಮಾಡಲರಿಯವು ಇದು ಮನ ನಷ್ಟಮಾಡಿದವರ ಇರವು ಅರಿತ ಅರುಹು ಆಗಿಹುದು ಎಂದು ಹೇಳಿಹರು.

ಪ್ರಸಿದ್ದವದು ಅಭಾವ. ಭಾವಾಭಾವಕ್ಕಿಂಬುಕೊಡದ ಘನವು. ಅದು ತುಂಬಿದುದು. ಒಳಹೊರಗೆನ್ನದೆ ಭರಿತವಾದುದರಿಂದ ಪ್ರಸಿದ್ದವು. ಏನೊಂದು ಸುರಲು ಅವಕಾಶವಿಲ್ಲವಾದುದರಿಂದ ಶಬ್ದ ಮೀಸಲು. ಅಕಲ್ಪಿತವಿರುವುದರಿಂದ ಅಲ್ಲಿ ಕಲ್ಪಿತಕ್ಕವಕಾಶವಿಲ್ಲ. ನುಡಿಯಲು ನುಡಿಗವಕಾಶವಿಲ್ಲ. ಮಾತಿಲ್ಲದುದು. ಅದು ಪ್ರಸಿದ್ದವು ಅಪಾರವು. ಬಯಲಿನ ಅಳತೆ ಅದಾವ ಮಾಪಿನಿಂದ ಅಳೆಯು ? ಅರಿಯದರುವುಳ್ಳ ಅಖಂಡವು ಆವ ಅರಿವ ಅರಿಸಿಕೊಂಬ ಮಾಪಿನಿಂದ ಅಳೆಯುವದು ? ಭಾವಕ್ಕಗಮ್ಯವಾಗಿಹ ಘನವ ಅದಾವ ಭಾವದಿಂದ ಭಾವಿಸುವದು, ಪ್ರಸಿದ್ಧವದು ಶಬ್ದಮುಗ್ಧ. ಇದು ಒಳಹೊರಗೆನ್ನದೆ ಭರಿತವು. ಇದು ಅಪ್ರಮಾಣಗಮ್ಯವಾಗಿಹ ತೆರಹಿಲ್ಲದ ನಿಜವು. ನಿಜವೆನ್ನದ ಅಚಲತವು. ಇಂತಪ್ಪ ಪ್ರಸಿದ್ದವ ನರಿದು ಪ್ರಸಿದ್ದವೆನಲಿಲ್ಲ. ಪ್ರಸಿದ್ದವದು ತಾನೆ . ಚೆನ್ನಬಸವಣ್ಣ ಗುರುವಾಗಿ ಬಂದು ಎನ್ನ ಜನ್ಮ ಕರ್ಮ ನಿವೃತ್ತಿ ಮಾಡಿದನಯ್ಯ. ಓಹೋ ಇದಾರಿಗೆ ಸಾಧ್ಯವು ! ಕಪಿಲಸಿದ್ದ ಮಲ್ಲಿಕಾರ್ಜುನನೆ ಕರುಣಾಮಯನೆ ನೀನೆ ಚನ್ನಬಸವಣ್ಣನು ನೀನೆ ಗುರುವಾಗಿ ಬಂದು ಎನ್ನ ಜನ್ಮದ ಕರ್ಮ ನಿವೃತ್ತಿ ಮಾಡಿದನಯ್ಯ ! ಗುರು ಘನನೆ , ಎನ್ನ ಜನ್ಮ ಕರ್ಮ ನಿವೃತ್ತಿ ಮಾಡಿದನಯ್ಯ. ಗುರುಘನನೆ ಎನ್ನ ಜನ್ಮ ಕರ್ಮ ನಿವೃತ್ತಿ ಮಾಡಲು ಶುದ್ಧವನರಿಯಲು ಕೃಪೆ ಮಾಡಿದೆಯಯಾ? ನಿಮ್ಮ ಕಾರುಣ್ಯದ ಘನವ ನೀವೆ ಬಲ್ಲಿರಾಗಿ ಸಿದ್ದವರಿತೆ ಪ್ರಸಿದ್ದವರಿತು ತೆರಹಿಲ್ಲದಭವ ನುಡಿಗೆಡೆಗೊಡದ ಮಹರಿವೆ ಎನ್ನಯ ಇರುವಾಗಿ ಎನ್ನ ಜನ್ಮದ ಕರ್ಮ ನಿವೃತ್ತಿ ಮಾಡಿದೆಯಯ್ಯ.

ಶುದ್ಧ ತತ್ವವರಿತು ಅರುಹಿಸಿಕೊಂಬ ಅನಾತ್ಮನಾನೆಂಬುದು ನನ್ನದೆಂಬುದು ನಷ್ಟವಾಗಿ, ಷಡ್ವಿಕಾರ ಕ್ಕೊಳಪಟ್ಟ ದೇಹವು ನಾನಾಗದಾದೆ. ಅದು ತಾಯಿಗರ್ಭದಲ್ಲಿರಲಿ ಅಲ್ಲಿಂದ ಹೊರಗೆ ಬರಲಿ ಅದು ಸೊಕ್ಕಲಿ ಸೊರಗಲಿ ಬಾಲ್ಯ ಯೌವ್ವನ ಮುಪ್ಪು ಮರಣದಿಂದ ತೋರಲಿ. ನಿಮ್ಮ ಕಾರುಣ್ಯದಿಂದ ಅವುಗಳು ನಾನಾಗದಾದೆ. ನನ್ನವು ಆಗದಾದೆ. ನಿಮ್ಮ ದಯದಿಂದ. ಶುದ್ದ ತತ್ವವೆ ನನ್ನಿರುವಾಗಿ ಇಂದ್ರಿಯಂಗಳ ಶುಭಾ ಶುಬ ಕ್ರಿಯೆಂಗಳು ನನಗಿಲ್ಲವಾಗಿ ಅತೀಂದ್ರಯನಾದೆ. ಪ್ರಾಣಾದಿಗಳ ಕಾರ್ಯವೆ ನನಗಿಲ್ಲವಾಗಿ ಪ್ರಾಣದ ಪ್ರಾಣವಾಗಿಹ ಪ್ರಾಣವಾದೆ. ಕರಣಂಗಳ ಕಾರ್ಯವೆ ನನಗಿಲ್ಲವಾಗಿ ಲಿಂಗ ಕಿರಿಣಂಗಳಾಗಿ ಅರಿಯಲಿಲ್ಲದ ಅರುವೆ ನಾನಾಗಿ ಎನ್ನ ಕರ್ಮಂಗಳು ನನಗಿಲ್ಲವಾದವಯ್ಯ.

ಶುದ್ಧವರಿತು ಜಾಗೃತ ಪ್ರಪಂಚದ ತೋರಿಕೆ ಇಲ್ಲವಾಗಿ, ಎನ್ನ ಜನ್ಮದ ಕರ್ಮ ನಿವೃತ್ತಿ ಮಾಡಿದೆಯಯ್ಯ. ಸಿದ್ಧವರಿತು ಮನದ ಕಾರ್ಯವಾಗಿಹ ಕನಸಿನ ತೋರಿಕೆಯ ಇಲ್ಲವಾಗಿ

ಎನ್ನ ಜನ್ಮದ ಕರ್ಮ ನಿವೃತ್ತಿ ಮಾಡಿದೆಯಯ್ಯ. ಪ್ರಸಿದ್ದವರಿತು ಪ್ರಾಜ್ಞವೆಂಬ ತೋರಿಕೆಯೆ ಇಲ್ಲವಾಗಿ ಅರಿಯಲಿಲ್ಲದ ಅರುವೆ ನಿಜದಿರುವೆಂದು ಕರುಣಿಸಿ ಎನ್ನ ಜನ್ಮದ ಕರ್ಮ ನಿವೃತ್ತಿ ಮಾಡಿದೆಯಯ್ಯ ಎಂದು ಹೇಳಿಹರು.

ವಚನ - 12

ಗುರು ಕರುಣಿಸೆ ಬಿಟ್ಟಿತ್ತು ಮರವು ಗುರು ಕರುಣಿಸೆ ಬಿಟ್ಟಿತ್ತು ಮಾಯೆ,
ಗುರು ಕರುಣಿಸೆ ಬಿಟ್ಟಿತ್ತು ಪ್ರಪಂಚ, ಕೂಡಲಚೆನ್ನಸಂಗಮದೇವಾ
ಗುರು ಕರುಣಿಸೆ ಬಿಟ್ಟಿತ್ತು ಕರ್ಮ ಪಾಶ.

(ಗುರು) ತಾತ್ಪರ್ಯ : ಗುರು ಕರುಣಿಸೆ ಬಿಟ್ಟಿತ್ತು ಮರವು:

ಆ ಮಹಾಂತ ಕರುಣಿಸುವ ಕರುಣೆ ಆವುದು? ಗುರು ತಮಶ್ಚಂಡ ಭಾಸ್ಕರ 'ಗು' ಅಂದರೆ ದೇಹರು ಪ್ರಕಾಶಮಯ. ಪ್ರಕಾಶವದು. ವರ್ಣಾತೀತ. ಅಜ್ಞಾನರೂಪಿ ಕತ್ತಲು ನಷ್ಟಮಾಡುವ ಚಿತ್‌ಸೂರ್ಯ, ಜ್ಞಾನ ಪ್ರಕಾಶ. ಈ ಮಹಾಂತ ದೇವ ದೇವ. ಮಹಾಮಹಿಮ, ಅಕಲ್ಪಿತ ನಿತ್ಯ ನಿರತಿಶಯಾನಂದ. ಗುರು ಮೂರ್ತಿ ಆಕಾರನಲ್ಲ ನಿರಾಕಾರನಲ್ಲ ಸರ್ವತ್ರ ಸದಾ ಸಕಲರ ಹೃದಯದ ಒಳ ಹೊರಗೆನ್ನದೆ ಬೆಳಗಿಂಗೆ ಬೆಳೆಗಾಗಿಹ ಚಿಜ್ಯೋತಿ. ರೂಪನಾಗಿ ಕಂಡರೂ ನಿರೂಪನು ನಿರವಯ ನಿತ್ಯಾನಂದಮಯನು.

''ಗುರುವಿನ ಪರಿ ವಿಪರೀತವಾಯಿತ್ತಯ್ಯ. ಭ್ರಮರ ಕೀಟ ನ್ಯಾಯದಂತೆ ಗುರು ತನ್ನ ನೆನಹನ್ನ ಬರ ಎನ್ನ ತನ್ನಂತೆ ಮಾಡಿದ ಇನ್ನು ಶಿಷ್ಯನಾಗಿ ಪೂಜಿಸುವವರಾರು ಹೇಳಾ ಗುಹೇಶ್ವರಾ.'' ಗುರುದೇವನು ಮಹಾಮಹಿಮನು ತನ್ನ ನೆನೆವವರನ್ನು ತನ್ನಂತೆ ಮಾಡುವ ಮಹಾಮಹಿಮ. ಅಂಗ ಭಾವ ನಷ್ಟಮಾಡಿ ಸರ್ವಾಂಗ ಲಿಂಗಿಯನ್ನಾಗಿ ಮಾಡುವ ದೇವ ದೇವ. ಗುರು ಕರುಣಿಸೆ ಬಿಟ್ಟಿತ್ತು ಮರವೆ, ಗುರು ಕರುಣೆಯ ಕಾಣಿರೆ ಬಿಟ್ಟಿತ್ತು ಮರವೆ. ಕರುಣೆ ಕರಣಂಗಳ ಕೆಡಿಸಿ ಲಿಂಗ ಕಿರಣಂಗಳ ಮಾಡುವ ಕರುಣೆ. ಅರಿವ ಅರುಹಿಸಿಕೊಂಬ ಈ ಉಭಯ ಭಾವ ನಷ್ಟ ಮಾಡಿ ಅರಿಯಲಿಲ್ಲದ ಅರುವ ನರುಹಿಸಿದ ಮಹಾಮಹಿಮ. ಇಂತಪ್ಪ ಮಹದರುವಿನ ಇರುವ ಕರುಣಿಸಿದಾಗಳೆ ಬಿಟ್ಟಿತ್ತು ಮರವು. ಮರವು ಆವುದು? ತಾನಾರೆಂಬ ತನ್ನ ನಿಜದಿರುವು ಮರೆತುದು ಮರವು . ತಾನಾಗಿದ್ದು ತನ್ನದಾಗದ್ದು ತಾನೆಂಬುದು ಅರಿಯಲಿಲ್ಲದ ಅರುವು. ನಿರಂತರವಾಗಿದ್ದುದ ಮರೆತುದನ್ನು ಭಕ್ತನ ಹೃದಯಕ್ಕೆ ಅನುಭವವಾಗುವಂತೆ ತಿಳಿಸಿಕೊಟ್ಟುದೆ ಕರುಣೆ.

ಗುರುದೇವ ಚಿತ್ಕಾಯನು. ಮಾನವರಂತೆ ಕಂಡರೂ ಚಿದ್ಘನನು. ಅಹಮಿಲ್ಲದ ಚಿದ್ಘನ. ಚಿದ್ಘನನಿಗೆ ಒಡಲಿಲ್ಲ, ಅಂಗಾಂಗವೆಲ್ಲಿ? ಅತಿಂದ್ರಿಯಾದವಂಗೆ ಇಂದ್ರಿಯಂಗಳೆಲ್ಲಿ? ಪ್ರಾಣದ ಪ್ರಾಣವಾಗಿಹ ಪ್ರಾಣಲಿಂಗಿಗೆ ಪ್ರಾಣವೆಲ್ಲಿ? ನಿರುಪಾಧಿಯು ನಿರ್ಮಾಯನು ನಿತ್ಯಾನಂದಮಯನು ಜ್ಞಾನಾಮೃತನು ಜ್ಞಾನಾನಂದಮಯನು ಆದುದರಿಂದ ಅಲ್ಲಿಂದ ಹೊರ ಹೊಮ್ಮಿ ಬರುವ ವೈಖರಿಯು ಅದು ಜ್ಞಾನ ಸುಧಾ. ಅದು ಮಾತನಳಿದ ಮಾತು. ನುಡಿಯ ನಿಶಬ್ದವೇಧಿಸಿದ ತಿರಳು, ಅನುವು. ಇದು ಶ್ರವಣೇಂದ್ರಿ ಮೂಲಕ ಭಕ್ತರ ಹೃದಯದಲ್ಲಿ ಪ್ರವೇಶಿಸಲು ಅದನ್ನು ಅಪಾರ ಶ್ರದ್ಧೆ ಅನನ್ಯ ಭಕ್ತಿಯಿಂದುಕ್ತನಾಗಿ ಜ್ಞಾನಾಮೃತ ಧಾರಣ

ಮಾಡಲು, ಅಲ್ಲಿ ಮರವು ಬಿಟ್ಟಿತ್ತು. ವಿಸ್ಮೃತಿ ಇರದು ಈ ಸ್ವರೂಪವಾಗಿಹ ಪ್ರಜ್ವಲಿಸುವದರಿಂದ ಅರಿವ ಅರುಹಿಸಿಕೊಂಬ ಈ ಉಭಯಗಳನ್ನು ಅರಿಯದಂತಿದ್ದದರಿಂದ ಗುರು ಕರುಣಿಸೆ ಬಿಟ್ಟಿತ್ತು ಮರವು. ಸೂರ್ಯೋದಯವಾಗವುದರಿಂದ ಕತ್ತಲೆ ಹೇಗೆ ಇರದು ಹಾಗೆ ಅರಿಯಲಿಲ್ಲದ ಅರುವ ನರುಹಿಸಿದುದರಿಂದ ತನ್ನ ನಿಜದರಿವಿನ ಇರುವು ನಿಸ್ಸಂಗತ್ವ , ನಿರಾಲಂಬತ್ವ, ನಿರ್ಮಾಯ, ಕೂಡದಗಲದ ಇರುವಿಕೆ, ತನ್ನಿಂದ ತನಗೆ ವೇದ್ಯವಾದುದೆ ಗುರುಕರುಣೆ. ಇಂತಪ್ಪ ಚಿದ್ರಸವ ಕರುಣಿಸುವ ಕರುಣಾಕರನೆ ಗುರುದೇವನು.

ಆ ಮಾತಿಲ್ಲದವನಾಗಿ ಸಕಲರ ಅಂತರಂಗದೊಳಿರ್ದ ಗುರು, ಲಿಂಗ, ಜಂಗಮ, ಪ್ರಸಾದಗಳೆಂಬ ಚತುರ್ವಿಧ ಅಕ್ಷಯ ಸಂಪತ್ತನ್ನು ತೋರಿ ಕೊಡುವನೊ ಅವನೆ ಕಾಣಬಾರದ ಗುರು. ಅಂತಪ್ಪ ಗುರುಲಿಂಗ ಕಣ್ಗೆ ಗೋಚರವಾದರೆ ಹೇಳಲಿಲ್ಲದ ಭಿನ್ನಪ ! ಎಂದರೆ ಅಲ್ಲಿಯೆ ಗುರುಶಿಷ್ಯರ ಮಧ್ಯದಲ್ಲಿದ್ದ ವಸ್ತುವಿನ ದರ್ಶನ ಅದು ಗುರು ಶಿಷ್ಯರ ಕಾಣದ ಉದಯಾಸ್ತವಿಲ್ಲದ ಜ್ಞಾನ ಜ್ಯೋತಿ. ಅಲ್ಲಿಯೆ ಪೂಜೆಗೆ ಬಾರದ ಲಿಂಗ ದರ್ಶನ . ಅಲ್ಲಿಯೆ ಲಿಂಗ ಒಂದಾಗಿರ್ದ ಜಂಗಮದೇವನ ದರ್ಶನ. ಅಲ್ಲಿ ಪ್ರಸಾದದ ಪರಿಣಾಮ ತನ್ನಲ್ಲಿ ತಾನಾಗಿ ಬೆಳಗುಳ್ಳ ಬೆಳಗಾಗಿ ಬೆಳಗುವದರಿಂದ ಗುರುಕರುಣಿಸೆ ಬಿಟ್ಟಿತ್ತು ಮರವು. ಅಂದರೆ ಪೂರ್ವಾಶ್ರಯವುಳ್ಳ ತನುಭಾವ ಶುಭಾಶುಭ ಕ್ರಿಯೆವುಳ್ಳ ಇಂದ್ರಿಯಂಗಳು ಪ್ರಾಣಾದಿಗಳು ಕರಣಂಗಳು ಅರಿವ ದೃಕ್ ಅರುಹಿಸಿಕೊಳ್ಳುವ ದೃಶ್ಯವೆಂಬ ಈ ಉಭಯ ಭಾವ ಹುಸಿಯಾಗಿ ಭ್ರಮೆಯಾಗಿ ಕಂಡುದರಿಂದ ಗುರು ಕರುಣಿಸೆ ಬಿಟ್ಟಿತ್ತು ಮರವು ಎಂದು ಹೇಳಿಹರು.

ಗುರು ಕರುಣಿಸೆ ಬಿಟ್ಟಿತ್ತು ಮಾಯೆ :

ಗುರು ಕರುಣೆ ಅಪಾರ; ತಿರುವು ಮುರುವು ಮಾಡಿತ್ತು. ಎನಗಿದುರಾಗಿ ತೋರುವ ತೋರಿಕೆಯಲ್ಲಾ ತೋರಬಾರದ ಘನವಾಗಿ ತೋರಿತ್ತು. ಹೇಳಲೆಂದೇನೋ? ಎಂಬಂತೆ ತೆರಹಿಲ್ಲ ಲಿಂಗ ಭರಿತವೆಂಬ ರಹಸ್ಯ ತಿಳುಹಿ "ಕಣ್ಗಳ ತುಂಬಿದ ಬಳಿಕ ನೋಡಲಿಲ್ಲ, ಕಿವಿ ತುಂಬಿದ ಬಳಿಕ ಕೇಳಲಿಲ ಕೈಯ ತುಂಬಿದ ಬಳಿಕ ಹಿಡಿಯಲಿಲ್ಲ , ಮನ ತುಂಬಿದ ಬಳಿಕ ನೆನೆಯಲಿಲ್ಲ, ಕೂಡಲ ಸಂಗಮದೇವಾ " ಭರಿತ ದೃಷ್ಠಿಯೆ ನನ್ನಿರುವಾಗಿ ನಿಶಬ್ದವೇದಿಯಾಗಿ ಕೇಳದ ಕಿವಿಯಾಯಿತ್ತು. ಕೈಯ ಕೈಯಾಗಿಹ ಸುಜ್ಞಾನವೆ ಎನ್ನ ಕೈಯಾಯಿತ್ತು. ಮೌನ ಘನವಾಗಿ ಮನವಾಗಿ ಅರಿಯಲಿಲ್ಲದ ಅರುವೆ ನನ್ನಿರುವಾಗಿ ಆಚಾರ ಅನಾಚಾರವಾಯಿತ್ತು. ಸೀಮೆ ನಿಸ್ಸೀಮವಾಯಿತ್ತು. ಪ್ರಾಣ ಸಂಚಯ ತಪ್ಪಿ ಲಿಂಗ ಸಂಚಯವಾಯಿತ್ತು. ಎಲ್ಲಿ ರೂಪಲ್ಲಿಯೆ ಲಿಂಗ ಸ್ವಾಯುವವಾಯಿತ್ತು. ಎಲ್ಲಿ ಶಬ್ದವಲ್ಲಿಯೆ ಲಿಂಗ ಸ್ವಾಯತವಾಯಿತ್ತು. ಎಲ್ಲಿ ಸ್ಪರ್ಶವಲ್ಲಿಯೆ ಲಿಂಗ ಸ್ವಾಯತವಾಯಿತ್ತು. ಎಲ್ಲಿ ರಸವಲ್ಲಿಯೆ ಲಿಂಗ ಸ್ವಾಯತವಾಯಿತ್ತು, ಎಲ್ಲಿ ಗಂಧವೆಲ್ಲಿಯೆ ಲಿಂಗ ಸ್ವಾಯತವಾಯಿತ್ತು ಕೂಡಲಸಂಗಮದೇವಾ ಕರುಣಾರಸಾಬ್ಧಿ ಕಡಕೋಡಿ ಒಡೆಯಿತ್ತಯ್ಯ ಎನ್ನ ಮೇಲೆ ಗುರು ಕರುಣೆಯೆಂಬ ಕರುಣಾರಸಾಬ್ದಿ ಕಡಕೋಡಿ ಎಮ್ಮ ಮೇಲೆ ಒಡಿದಾಗಲೆ ಬಿಟ್ಟಿತ್ತು ಮಾಯೆ. ಇಲ್ಲದ ಅರಿವ ಅರುಹಿಸಿ ಕೊಂಬ ತೋರಿಕೆ ಇಲ್ಲವಾಗಿ, ಎಲ್ಲಿ ನೋಡಿದಡದಲ್ಲಲ್ಲಿ ಅರಿಯಬಾರದ ಘನವೆ ಪ್ರಜ್ವಲಿಸಿ, ಇಲ್ಲದ ತೋರಿಕೆಯು ನಿರಂತರವಾಗಿಹ ಮಂಗಲಮಯ ಸ್ವಯಂಜ್ಯೋತಿ ಲಿಂಗವಾಗಿ, ಲಿಂಗದರುವೆ ಇರುವಾಗಿ, ಎನ್ನ ಸಂಬಂಧವಾದುದರಿಂದ ಗುರು ಕರುಣಿಸೆ ಬಿಟ್ಟಿತ್ತು ಮಾಯೆ ಎಂದು ಹೇಳಿಹರು.

ಗುರು ಕರುಣಿಸೆ ಬಿಟ್ಟಿತ್ತು ಪ್ರಪಂಚ :

ಗುರು ಕರುಣಿಸಿದ ವಿನಃ ಪ್ರಪಂಚ ಬಿಡದು ಪ್ರಪಂಚವೆಂಬುದು ಗುರು ಕರುಣಿಸಿದಾಗ ಅದರ ಗುಟ್ಟು ತಿಳಿಯುವುದು. ''ನಾನೊಬ್ಬನುಂಟು ಎಂಬವಂಗೆ ನೀನೊಬ್ಬನು ಉಂಟಾಗಿ ತೋರುವೆ. ನಾನು ನೀನು ಎಂಬುದು ಉಂಟಾದಲ್ಲಿ ಜ್ಞಾನ ಅಜ್ಞಾನ ಉಂಟಾಯಿತ್ತು. ಜ್ಞಾನ ಅಜ್ಞಾನ ಉಂಟಾದಲ್ಲಿ ನಾನಾವಿಧ ಪ್ರಪಂಚ ಆಯಿತ್ತು ನೋಡಾ. ಮಾಯಿಕವೆಂಬುದು ಹೀಗಲ್ಲದೆ ಇನ್ನು ಹೇಗೆ ಇಹುದು. ನಾನು ನೀನು ಎಂಬೆರಡು ಸತ್ತರೆ ಜ್ಞಾನ ಅಜ್ಞಾನ ಅರಿತಿತ್ತು ಗುಹೇಶ್ವರಾ.''

ಗುರು ಕರುಣಿಸೆ ಬಿಟ್ಟಿತ್ತು ಪ್ರಪಂಚ. ಗುರು ಕರುಣಿಸಿದುದು ಅದನೆಂತು ವರ್ಣಿಸುವುದು? ಎನ್ನ ನಿಜದಿರುವು ತೋರಿದುದು ಅದನೆಂತು ವರ್ಣಿಸುವದು. ನಿಜದಿರುವು ಅದು ಅರಿವುದಲ್ಲ , ಅರುಹಿಸಿಕೊಂಬುದಲ್ಲ, ಇವೆರಡನ್ನು ಅರಿಯಬಾರದ ಘನ. ಅರಿಯದಂತಿದ್ದ ಘನ. ಅರಿಯಲಿಲ್ಲದ ಅರುವೆ ತಾನಾಗಿಹ ಘನ . ನಾ ನೀನೆಂಬುದಕ್ಕವಕಾಶ ಕೊಡದ ಘನ. ತೆರಹಿಲ್ಲದ ಮಹಾಘನವೆಂದು ಕರುಣಿಸಿದಲ್ಲಿ ನಾನೊಬ್ಬನುಂಟು ಎಂಬುದು ಕೆಟ್ಟಿತ್ತು. ಇದು ಕೆಡಲೊಡನೆ ನೀನೊಬ್ಬನುಂಟಾಗಿ ತೋರುವದು ನಷ್ಟವಾಯಿತ್ತು. ಇವೆರಡು ನಾ ನೀನೆಂಬರಡು ಉಂಟಾದಲ್ಲಿ ಜ್ಞಾನ ಅಜ್ಞಾನ ದುತ್ಪತ್ತಿ ಸಹಜ. ಈ ಜ್ಞಾನ ಅಜ್ಞಾನ ಇರುವಲ್ಲಿ ನಾನಾವಿಧ ಪ್ರಪಂಚ ಅಲ್ಲಿಯೆ. ದಾಸೋಹ ನೀನೆಂಬ ಪ್ರಪಂಚ ಇವೆಲ್ಲವು ಹಮ್ಮಾಗಿ ಬಿಮ್ಮಾಗಿ, ನಾನಾಗಿ, ನೀನಾಗಿ, ಮರವು ಅರುವಾಗಿ ಭೇದವಾಗಿ ಅಭೇದವಾಗಿ ನಾನಾ ಕಲ್ಪಿತವೆ ನಿಜವಾಗಿ ಭಾವರೂಪ ಭ್ರಮೆಯೆ ಪ್ರಪಂಚವಾಗಿ ತೋರಿತು. ಗುರುದೇವ ಎನ್ನ ಅರಿಯಬಾರದ ಘನವಾಗಿಹ ಅರಿಯಲಿಲ್ಲದ ಅರುವ ನರುಹಿಸಿದಾಗಳೆ ಕರುಣಿಸಿದಾಗಳೆ ಭಾವಕ್ಕಗಮ್ಯವಾಗಿಹ ನಿಜದಿರುವು ಸಿದ್ಧವಾಗಿ ಸಟೆಯ ಪ್ರಪಂಚ ಸೆಟೆಯಾದುದೆ ಗುರು ಕರುಣಿಸೆ ಬಿಟ್ಟಿತ್ತು ಮರವು ಎಂದು ಹೇಳಿಹರು.

ಕೂಡಲ ಚೆನ್ನ ಸಂಗಮದೇವಾ ಗುರು ಕರುಣಿಸೆ: ಬಿಟ್ಟಿತ್ತು ಕರ್ಮಪಾಶ ಓ ಗುರು ಘನನೆ ನಿಮ್ಮ ಕರುಣಾಜಲವೆಂಬ ಲಿಂಗ ಪಾದೋದಕ ಇದು ಅರಿಯ ಬಾರದ ಘನವರಿಯುವಂತೆ ಕರುಣಿಸಿದಾಗಳೆ ಸಂಚಿತ ಕರ್ಮ ನಾಶವಾಯಿತ್ತು. ನಿಮ್ಮ ಕರುಣಾಜಲವ ವಿನಯ ಪೂರ್ವಕ ಸದುಹೃದಯನಾಗಿ ಅರಿಯಬಾರದ ಘನವರಿತು ಅರಿಯಲಿಲ್ಲದ ಅರುವೆ ನನ್ನಿರುವಾಗಿ ನಾನಾಗಿ ಅರಿವ ಅರುಹಿಸಿಕೊಂಬ ಈ ಉಭಯವ ಅರಿಯದಂತಿದ್ದಾಗಳೆ ಎನ್ನ ಪ್ರಾರಬ್ದ ಕರ್ಮ ನಾಶವಾಯಿತು. ತೆರಹಿಲ್ಲದನಡೆ ತೆರಹಿಲ್ಲದ ನುಡಿ ತೆರಹಿಲ್ಲದ ವಿಶ್ರಾಮ ಸುಖದ ಸುಖವಾಗಿ, ತೆರಹಿಲ್ಲದ ಗಂಭೀರ ತೆರಹಿಲ್ಲದ ಮಹಾಮಹಿಮನಾಗಿದ್ದುದರಿಂದ ಆಗಾಮಿ ಕರ್ಮ ನಾಶವಾಯಿತ್ತು. ತ್ರಿವಿಧ ಕರ್ಮಂಗಳು ಶುದ್ಧ ಸಿದ್ಧ ಪ್ರಸಿದ್ದವರಿತು ಸಂಚಿತ ಪ್ರರಬ್ಧ ಆಗದು. ಈ ತ್ರಿವಿಧ ಕರ್ಮನಾಶವಾಯಿತ್ತು ಎಂದು ಹೇಳಿಹರು.

ವಚನ - 13

ಶ್ರೀ ಪಂಚಾಕ್ಷರಿಯೆ ಸರ್ವಮಂತ್ರವೆಲ್ಲಕ್ಕೆ ಉತ್ಪತ್ತಿ ಸ್ಥಿತಿ ಲಯ ಸ್ಥಾನ
ಸರ್ವ ಕಾರಣವೆಲ್ಲವಕ್ಕೆಯೂ ಮೂಲ. ಶೃತಿಃ ಸಪ್ತಕೋಟಿ ಮಹಮಂತ್ರ ಉಪಮಂತ್ರ
ಸ್ತ್ವನೇಕಶಃ ಪಂಚಾಕ್ಷರೆ ಪ್ರಲೀಯತೆ ಪುನಸ್ತತ್ರೈವ ನಿರ್ಗತಃ ತನ್ಮಾತ ವೇದಾಶ್ಚ
ಶಾಸ್ತ್ರಾಣೆ ಮಂತ್ರೆ ಪಂಚಾಕ್ಷರೆ ಸಿತಾಃ ಎಂದುದಾಗಿ ಇದು ಕಾರಣ

ಶ್ರೀ ಪಂಚಾಕ್ಷರಿವುಳ್ಳಭಕ್ತನೆ ವೇದವೇತ್ತ ಆತನೆ ಶಾಸ್ತ್ರವಾನ್ ಆ ಮಹಿಮನೆ
ಪುರಾಣಿಕನು ಆತನೆ ಆಗಮಿಕನು ಆತನೆ ಸರ್ವಜ್ಞಾನಿಯು
ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ

ತಾತ್ಪರ್ಯ : ಶ್ರೀ ಪಂಚಾಕ್ಷರಿಯೆ ಸರ್ವಮಂತ್ರವೆಲ್ಲಕ್ಕೆ ಉತ್ಪತ್ತಿ ಸ್ಥಿತಿ ಲಯ ಸ್ಥಾನ ಸರ್ವಕಾರಣವೆಲ್ಲಕ್ಕೆಯೂ ಮೂಲ : ಶ್ರೀ ಪಂಚಾಕ್ಷರಿಯೆ ಸಕಲ ಮಂತ್ರಗಳಿಗೂ ಉತ್ಪತ್ತಿಗೂ ಆಧಾರ. ಸ್ಥಿತಿಗೂ ಆಧಾರ ಲಯಕ್ಕೂ ಆಧಾರ. ಶ್ರೀ ಎಂಬುದು ಅಖಂಡ ಪದ ಸುಖದೇಕರಸವಾಗಿಹ ಚಿದ್ರಸ ಸಚ್ಚಿದಾನಂದದ ಪರಾನಂದ ಪರಮಾಮೃತ, ಪರಮಜ್ಞಾನಸ್ವರೂಪ. ಸತ್ಯದ ಸತ್ಯವಾಗಿಹ ಪರಮಸತ್ಯ. ಅಭೇದ್ಯ ಸತ್ಯ ನುಡಿಗೆಡೆಗೊಡದ ಘನವು. ಇದು ಸಕಲ ನಿಷ್ಪತ್ತಿಯ ನಿಲುವುಳ್ಳ ನಿಜಧಾಮ. ಶ್ರೀ ಇದುವೆ ಇರುವುಳ್ಳ ಅರಿವು. ಗುರು ಲಿಂಗ ಜಂಗಮ ಪಾದೋದಕ ಪ್ರಸಾದದ ಅರಿವುಳ್ಳ ಜ್ಞಾನೇಶ್ವರಿ. ಪಂಚಾಕ್ಷರಿ ಅದು ಅವಿನಾಶಿಯ ಘನತ್ವದಿಂ ಪ್ರಜ್ವಲಿಸುವ ಸುಜ್ಞಾನವು. ಇದುವೆ ಸತ್ ಚಿತ್ ಆನಂದ, ನಿತ್ಯ ಪರಿಪೂರ್ಣವಾಗಿಹ ಅರಿವೆ ಪಂಚಾಕ್ಷರಿ. ಇದು ಕಾರ್ಯಕಾರಣ ಮಂತ್ರಗಳಿಗೆ ಮೂಲವು. ಮಂತ್ರಗಳಲ್ಲ ಕೆಲವು ಕಾರಣ ರೂಪಾಗಿ ಕೆಲವು ಕಾರ್ಯ ರೂಪಾಗಿ ಪರಿಗಣಿಸಲ್ಪಟ್ಟಿದೆ.

ಶಿವ, ವಿಷ್ಣು ಶಕ್ತಿ ಬ್ರಹ್ಮ ಇತ್ಯಾದಿ ಮಂತ್ರಗಳು ಕಾರಣರೂಪಾಗಿ ಗಣಪತಿ ಷಣ್ಮುಖ, ವೀರಭದ್ರ, ದೇವೇಂದ್ರ ಮೊದಲಾದವುಗಳು ಕಾರ್ಯಮಂತ್ರವಾಗಿ ಪರಿಗಣಿಸಲ್ಪಟ್ಟಿವೆ. ಪಂಚಾಕ್ಷರಿ ಮಂತ್ರದಿಂದಲೆ ಕಾರಣ ಮಂತ್ರಗಳುಗಮ , ಕಾರ್ಯಮಂತ್ರಗಳುಗಮ. ಪಂಚಾಕ್ಷರಿಯಿಂದ ರಕ್ಷಣೆ, ಪಂಚಾಕ್ಷರಿಯಿಂದಲೆ ಲೀಯವು.

ನಮಃ ಶಿವಾಯ ಮಂತ್ರವು ಲಿಂಗಾಂಗ ಸಾಮರಸ್ಯ ಜ್ಞಾನವುಳ್ಳ ಮಂತ್ರವು. ಜೀವ ಬ್ರಹ್ಮರೇಕತ್ವದ ಅರುವುಳ್ಳ ಮಂತ್ರ. ತತ್ವಮಸಿ ಮಹಾವಾಕ್ಯದರ್ಥದರಿವುಳ್ಳ ಮಂತ್ರ. ಸಪ್ತಕೋಟಿ ಮಂತ್ರಗಳಿಗೆ ಅಧಿಷ್ಠಾನವಾದ ಮಂತ್ರ. ಅವು ಉಪಮಂತ್ರವಾಗಿವೆ. ಇಂಥಹ ಲಿಂಗಾಂಗ ಸಾಮರಸ್ಯ ಜ್ಞಾನವುಳ್ಳ ನಮಃಶಿವಾಯ ಮಂತ್ರವ ಆರು ಪಠಿಸುವರು, ಅನುಸಂದಾನ ಮಾಡುವರು, ಅವರು ವೇದವನ್ನು ಬಲ್ಲವರು ಶಾಸ್ತ್ರವ ಬಲ್ಲವರು, ಪುರಾಣವ ಬಲ್ಲವರು. ಆತನೆ ಆಗಮಿಕನು. ಆತನೆ ಸರ್ವಜ್ಞಾನಿಯು ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ.

ನಮಃಶಿವಾಯ ಪಂಚಾಕ್ಷರಿ ಜ್ಞಾನವುಳ್ಳ ಭಕ್ತನೆ ವೇದವಿತ್ತ. ಪಂಚಾಕ್ಷರಿ ಬೇರಲ್ಲ ನಮಃ ಶಿವಾಯ ಬೇರಲ್ಲ, ಪಂಚಾಕ್ಷರಿಯ ಅರುವೆ ನಮಃಶಿವಾಯ. ನಮಃ ಶಿವಾಯದ ಅರುವೆ ಪಂಚಾಕ್ಷರಿಯು. ಕಾರಣ ಲಿಂಗಾಂಗ ಸಮರಸದರಿವುಳ್ಳ ಭಕ್ತನೆ ಪಂಚಾಕ್ಷರಿ ಜ್ಞಾನವುಳ್ಳ ಭಕ್ತನು. ಜೀವ ಬ್ರಹ್ಮರೇಕತ್ವದರಿವುಳ್ಳ ಭಕ್ತನು ಅವನ ಈ ಭಕ್ತ ಅಖಂಡ ಅರುವಿನ ಇರುವಿನಲ್ಲಿ ನಿಜನಿವಾಸವಾದುದರಿಂದ ಭಕ್ತನೆಂಬ ನಾಮಪದ ಬಂದಿಹುದು.

ನಮಃ ಶಿವಾಯ ಮಂತ್ರದ ಗುಟ್ಟು ನೋಡಿರೆ : ನ ಎಂಬುದೆ ವಾಙ್ಮನಕ್ಕಗೋಚರವಾಗಿಹ ಘನ ಯತಾವಾಙ್ಞ ನಿವರ್ತಂತೆ ಅಪ್ರಾಪ್ಯ ಮನಸಾ ಸಹ ಎಂಬಂತೆ ಆವುದು ವಾಕ್ಕಿಗೂ ಮನಕ್ಕೂ ನಿಲುಕದ್ದಾಗಿದೆ. ನುಡಿಗೆಡೆಗೊಡದ ಘನವಾವುದು ಅದುವೆ ನ. ನಾನೀನೆಂಬುದಕ್ಕಾವುದು ಎಡೆಗೊಡದ ಘನವಾಗಿದೆ ಅದುವೆ ಸಕಲರ ಅಂತರಂಗದಲ್ಲಿ ಆವುದು ಉದಯಾಸ್ತವೆನ್ನದೆ ಪ್ರಜ್ವಲಿಸುವ ಸ್ವಯಂಜ್ಯೋತಿ ಅದುವೆ ನ. ತೆರಹಿಲ್ಲದ ಲಿಂಗ

ಭರಿತವಾದುದು ಅವುದು ಅದುವೆ ಮ ಎಂಬ ಅಕ್ಷರವಾಗಿದೆ. "ತುಂಬಿದುದು ತುಳಕದು ನೋಡಾ , ನಂಬಿದುದು ಸಂದೇಹಿಸದು ನೋಡಾ. ಒಲಿದುದು ಓಸರಿಸದು ನೋಡಾ. ನೆರೆ ಅರಿದುದು ಮರೆಯದು ನೋಡಾ ಚೆನ್ನಮಲ್ಲಿಕಾರ್ಜುನಯ್ಯ ನೀನೊಲಿದ ಶರಣಂಗೆ ನಿಸ್ಸೀಮ ಸುಖ ನೋಡಯ್ಯ"

ಮ ಎಂಬ ಮಂತ್ರ ಮಯ ಭರಿತ. ಇದು ತುಂಬಿದುದು ಒಳಗೊರಗೆನ್ನದೆ ಭರಿತವು. ಅದುವೆ ಜ್ಞಾನ ಸ್ವರೂಪ ಲಿಂಗ, ಚೈತನ್ಯ ಲಿಂಗ, ಚೈತನ್ಯವೆ ಎಲ್ಲೆಲ್ಲೂ ತುಂಬಿದುದರಿಂದ ಮ ಎಂಬ ಮಂತ್ರದರ್ಥವ ಸೂಚಿಸುವದು. ಕಾರಣ ಮಂತ್ರವಾಗಲಿ ಕಾರ್ಯ ಮಂತ್ರವಾಗಲಿ, ಶಿ ಎಂಬ ಅಧಿಷ್ಠಾನ ಮಂತ್ರದಿಂದ ಸಿದ್ಧವಾಗುವವು . ಶಿ ಎಂಬ ಮಂತ್ರ ಸ್ವತಃ ತನ್ನಿಂದ ತಾನೆ ಸಿದ್ಧವಾದ ಮಂತ್ರ. ಅದರಿಂದಲೆ ಅದರ ಬೆಳಕಿನಿಂದ ಸಕಲವು ಸಿದ್ದವಾಗುವವು. ಇವುಗಳಿಂದ ಅದು ಸಿದ್ದವಾಗುವದಿಲ್ಲ. ಕೋಟಿ ಸೂರ್ಯಪ್ರಕಾಶವು ಸ್ವತೇಜವುಳ್ಳ ಮಂತ್ರ ಇದನ್ನು ಒಬ್ಬ ಸೂರ್ಯನ ಬೆಳಕು ಸಿದ್ದ ಮಾಡಬಹುದೆ? ಹಾಗೆ ಉಪಮಂತ್ರಗಳು ಸ್ವತೇಜವುಳ್ಳ ಶಿ ಮಂತ್ರವ ಸೂಚಿಸುವದು. ವಾ ಎಂಬ ಸಂಕೇತ ಅವಿನಾಶಿ. ಇದು ವಾಣಿಯ ವಾಣಿಯಾಗಿದೆ. ಧ್ವನಿಯ ಮರೆಯಲ್ಲಿರ್ದುದಾಗಿದೆ. ಏನೆಂದನ್ನದ ಮುನ್ನ ತಾನಾದ ಸಂಕೇತವೆ ವಾ ಎಂಬ ಮಂತ್ರದರ್ಥವ ಸೂಚಿಸುವದು.

ಯ ಎಂಬುದು ಸಕಲ ನಿಃಕಲ ತಾನಾದುದು ಸೂಚಿಸುವದು ಸಾಕಾರ ನಿರಾಕಾರ ತಾನೆ. ಸಗುಣ ನಿರ್ಗುಣ ತಾನೆ. ಖಂಡ ತಾನೆ. ಖಂಡಾ ಖಂಡಿಸಂಯೋಗವಿಲ್ಲದ ಅಖಂಡತನು ತಾನೆ. ತಾನಲ್ಲದೆ ಅನ್ಯವಿಲ್ಲ. ಬಂಗಾರದಲ್ಲಿ ತೋರುವ ಆಭರಣಗಳು ಬಂಗಾರವಲ್ಲದೆ ಅನ್ಯವಿಲ್ಲವು ಹಾಗೆ ಖಂಡಿತವಲ್ಲದ ಅಖಂಡಿತವಾಗಿಹ ಯ ಎಂಬ ಮಂತ್ರು ಖಂಡಿತವುಳ್ಳ ಸಕಲ ನಿಃಕಲ ತಾನೆ ಸಾಕಾರ ನಿರಾಕಾರ ತಾನೆ, ಕಾರ್ಯ ಕಾರಣ ಮಂತ್ರತಾನೆ ತಾನೆ. ಆಧಾರ ತಾನೆ, ಅಧಿಷ್ಠಾನ ತಾನು, ತಾನೆಂಬುದೆ ಯ ಎಂಬ ಮಂತ್ರದ ಅಧಿಷ್ಠಾನವಾಗಿದೆ.

ಇಂತಪ್ಪ ಪಂಚಾಕ್ಷರಿ ಅರ್ಥವುಳ್ಳ ಜ್ಞಾನಿಯೆ ಜ್ಞಾನಿ. ಭಕ್ತ ವೇದವಿತ್ತ. ಆತನೆ ಶಾಸ್ತ್ರವಾನ್. ಆರು ಕಲ್ಪಿತನನ್ನಾಗಿ ಕಾಣುವ ದಿವ್ಯ ದೃಷ್ಠಿಯುಳ್ಳವರಾಗಿಹ ಅವರೆ ಶಾಸ್ತ್ರಜ್ಞ. ಏಕೆಂದರೆ ಕಲ್ಪಿತನಿಗೆ ಅಚಿಂತ್ಯದಿರುವ ಕರುಣಿಸುವದೆಂದಲ್ಲಿ ಅಕಲ್ಪಿತದಿರುವ ಕರುಣಿಸುವದೆ ಮುಖ್ಯ ಗುರಿಯಾದುದರಿಂದ ಆ ಮಹಾಮಹಿಮನೆ ಪುರಾಣಿಕನು ಕಾರ್ಯಕಾರಣ ಮಂತ್ರ ಪುರಾಣಂಗಳೆಲ್ಲ ದೇವನು ಪೂಜ್ಯನು ಕಾರಣನು ಪೂಜಕನು ಭಕ್ತನು ಕಾರ್ಯರೂಪನು ಹೀಗೆ ವಿಭಾಗ ಮಾಡಿ ತೋರಿಸುವದು ಪುರಾಣಿಕರ ಕಾರ್ಯ ಪಂಚಾಕ್ಷರಿ ಅರ್ಥವುಳ್ಳ ಜ್ಞಾನಿ ಭಕ್ತ ಪುರಾಣಿಕರ ಕಾರಣ ಕಾರ್ಯವೆಂಬ ಪೂಜ್ಯ ಪೂಜಕನನ್ನೆ ಸಮಸ್ತ್ ಮಾಡಿ ಸತ್ಯಜ್ಞಾನಾನಂದದಲ್ಲಿರಿಸುವ ಮಹಾಮಹಿಮನೆಂದು ಹೇಳಿಹರು.

ಪಂಚಾಕ್ಷರಿ ಅರ್ಥವನರಿತ ಜ್ಞಾನಿ, ಭಕ್ತ ಜೀವನನ್ನು ಪೂಜಕನ ಮಾಡಲಿಲ್ಲ, ಶಿವನನ್ನು ಪೂಜ್ಯನನ್ನಾಗಿ ಮಾಡಲಿಲ್ಲ ಜೀವನನ್ನು ಅಲ್ಪಜ್ಞನೆನಲಿಲ್ಲ ಇವನ ಸರ್ವಜ್ಞನೆನಲಿಲ್ಲ ನಿರಾಲಂಬದ ನಿಜದೃಷ್ಠಿಯುಖಳ್ಳವನಾದುರಿಂದ ಮಹಾಮಹಿಮನೆಂದು ಹೇಳಿಹರು. ಅವನೆ ಆಗಮ ಜ್ಞಾನಿಯು ಎಂದು ಹೇಳಿದೆ. ಪಂಚಾಕ್ಷರಿವುಳ್ಳ ಭಕ್ತ ಅಕ್ಷರದರ್ಥವರಿತು ಎತ್ತ ನೋಡಿದತ್ತ ಪಂಚಾಕ್ಷರಿಯ ಕಾಣುವದರಿಂದ ಆಗಮಿಕನು ಯಾರು ನಮಃ ಶಿವಾಯವೆಂಬ ಲಿಂಗಾಂಗ ಸಮರಸಜ್ಞಾನದಿರುವುಳ್ಳವರಾಗಿಹರು ಅವರೆ ಸರ್ವಜ್ಞಾನಿಯು ಉರಿಲಿಂಗಪೆದ್ದಿ ಪ್ರಿಯ

ವಿಶ್ವೇಶ್ವರಾ ಎಂದು ಹೇಳಿಹರು.

ವಚನ - 14

> **ಅಂತ್ಯಜನಾಗಲಿ ಅಗ್ರಜನಾಗಲಿ ಮೂರ್ಖನಾಗಲಿ ಪಂಡಿತನಾಗಲಿ ಜಪಿಸುವದು**
> **ಪಂಚಾಕ್ಷರಿಯ, ಜಪದಿಂದ ರುದ್ರನಪ್ಪುದು ತಪ್ಪದು.**
> **ಶ್ಲೋಕ ಅಂತ್ಯ ಜ್ಯೋಪ್ಯ ಅಗ್ರಜ್ಯೋವಾಪಿ**
> **ಮೂರ್ಖೋವಾ ಪಂಡಿತೋಪಿ ವಾ ಜಪೇತ್**
> **ಪಂಚಾಕ್ಷರೀ ನಿತ್ಯಂ ನರುದ್ರೋ ನಾತ್ರ ಸಂಶಯಃ**

ತಾತ್ಪರ್ಯ: ಪಂಚಾಕ್ಷರಿ ಜಪಿಸಲು ಸಕಲರು ಅಧಿಕಾರಿಗಳು. ಅವರು ಇವರು ಎಂಬ ಪಕ್ಷಭೇದವಿಲ್ಲ . ಪಂಡಿತನಾಗಲಿ ಮೂರ್ಖನಾಗಲಿ, ಉಚ್ಚ ಕುಲದವರಾಗಲಿ, ಕೀಳು ಕುಲದವರಾಗಲಿ ನಿಶ್ಚಯವಾಗಿ ರುದ್ರನಾಗುವನು. ಇದರಲ್ಲಿ ಅನುಮಾನ ಮಾಡಕೂಡದು. ಜ ಎಂದರೆ ಜನ್ಮಜಾತ ಪ ಎಂದರೆ ಪಾಪನಾಶ . ಜಪವೆಂದರೆ ಜನ್ಮ ಪಾಪವ ನಾಶ ಮಾಡುವದು, ಪರಿಶುದ್ದನನ್ನಾಗಿ ಮಾಡುವದು, ರುದ್ರನನ್ನಾಗಿ ಮಾಡುವದು.

ನಾಲ್ಕು ವೇದ, ಹದಿನಾರು ಶಾಸ್ತ್ರ , ಹದಿನೆಂಟು ಪುರಾಣ, ಇಪ್ಪತ್ತೆಂಟು ಆಗಮ, ಮೂವ್ವತ್ತೆರಡು ಉಪನಿಷತ್ತುಗಳೆಲ್ಲವೂ ಪಂಚಾಕ್ಷರದ ಸ್ವರೂಪವ ನರಿಯದೆ ನಿಂದವು. ಏಳು ಕೋಟಿ ಮಂತ್ರಗಳಿಗೆ ತಾನೆ ಮೂಲ ಮಂತ್ರವಾಗಿ ಸುರರಿಗೆ ಅಣಿಮಾಡಿ ಕೊಟ್ಟುದು ಶರಣರಿಗೆ ತ್ರಿನಯನ ಕೊಟ್ಟುದು ಈ ಪಂಚಾಕ್ಷರ. ಪ್ರಣವದೊಳಡಕವಾದ ಪಂಚಾಕ್ಷವನರಿತಲ್ಲಿ ಸೌರಾಷ್ಟ್ರ ಸೋಮೇಶ್ವರ ಲಿಂಗ ಸಂಜ್ಞೆಯ ವರ್ಣವೆನ್ನ ಸರ್ವಾಂಗದಲ್ಲಡಗಿದವಯ್ಯ ಬಹುವಾಗಿ.

ಕೆಲವು ವೇದ ಪಾಠಗಳು, ಇತ್ತ ಹದಿನಾರು ಶಾಸ್ತ್ರ ಹದಿನೆಂಟು ಪುರಾಣ ಆಗಮಾದಿಗಳಿಗೂ, ಉಪನಿಷತ್ತುಗಳನ್ನೆ ಶ್ರೇಷ್ಠಮಾಡಿ ಪಂಚಾಕ್ಷರಿಯನ್ನು ಗೌಣವಾಗಿ ಕಾಣುತ್ತಾರೆ. ಇದಲ್ಲದೆ ಕೆಲಬರು ಪಂಚಾಕ್ಷರಿ ಮಂತ್ರವನ್ನು ಕರ್ಣದಲ್ಲಿ ಗುರುವಿನಿಂದ ಊದಿಸಿಕೊಳ್ಳುವ ಮಂತ್ರ ಮಾಡಿಹರು. ಇದನ್ನು ಕಂಡು ''ಕರ್ಣವ ನೂದಿ ಮಂತ್ರವ ಪೇಳಿದುದು ಬೋಧವೆ ಅಲ್ಲಲ್ಲಾ '' ಎಂದು ಹೇಳಿದುದು ನೋಡಿದಡೆ ಪಂಚಾಕ್ಷರಿಯ ನರಿಯದವರೆ ಹೆಚ್ಚು ಜನ ಸಿಕ್ಕುತ್ತಾರೆ. ಅರಿತವರು ಸಿಕ್ಕುವದು ವಿರಳ. ವ್ಯಾಪಕಾಕ್ಷರದಲ್ಲಿ ನಾಲ್ಕಕ್ಷರ ಸ್ಪರ್ಶನಾಲ್ಕಕ್ಷರದಲ್ಲಿಯ ಏಕಾಕ್ಷರ ಇಂತೀ ಪಂಚಾಕ್ಷರವೆ ಪರಬ್ರಹ್ಮ ಸ್ವರೂಪ ಶಿವಜ್ಞಾನಕ್ಕೆ ಮೂಲವೆಂದರಿತು ಮೂಲ ಪಂಚಾಕ್ಷರ ಸ್ಥೂಲ ಪಂಚಾಕ್ಷರ ಸೂಕ್ಷ್ಮ ಪಂಚಾಕ್ಷರ ಮಾಯಾಖ್ಯ ಪಂಚಾಕ್ಷರ ಪ್ರಸಾದ ಪಂಚಾಕ್ಷರವೆಂಬ ಪಂಚಪಂಚಾಕ್ಷರದ ಸ್ವರೂಪನರಿತು ಪಂಚಾಕ್ಷರವ ಜಪಿಸಲು ಸೌರಾಷ್ಟ ಸೋಮೇಶ್ವರ ಲಿಂಗವಪ್ಪುದು ತಪ್ಪದಯ್ಯ ಪಂಚಾಕ್ಷರ ಜಪಿಸುವದರಿಂದ ರುದ್ರನು ರುದ್ರನಾದರೂ ತಾನಾರೆಂದರಿಯದಿದ್ದಲ್ಲಿ ಅಷ್ಟು ಶ್ರೇಷ್ಠವಾಗಲಿಲ್ಲ, ಸಕಲರು ಪಂಚಾಕ್ಷರ ಜಪಿಸಬಹುದು. ಶ್ರೇಷ್ಠ ಕುಲದವರೆ ಮಂತ್ರ ಜಪಿಸಬೇಕು ಕೆಳಗಿನವರು ಪಂಚಾಕ್ಷರಿ ಮಂತ್ರ ಜಪಿಸಬಾರದೆಂದು ಹೇಳಿರುವಿದಿಲ್ಲ, ಬ್ರಾಹ್ಮಣನೆ ಇರಲಿ ಚಾಂಡಾಲನೆ ಇರಲಿ ಇತ್ತ ಸನ್ಯಾಸಿ ಇರಲಿ ಗೃಹಸ್ಥನೆ ಇರಲಿ ಪುರುಷರಿರಲಿ, ಸ್ತ್ರೀಯರಿರಲಿ ಆರಾದರೂ ಪಂಚಾಕ್ಷರಿ ಜಪಿಸಿದರೆ ರುದ್ರನಾಗುವನು ಎಂದು ಹೇಳಿಹರು. ಇದಕ್ಕಿಂತಲೂ ಶ್ರೇಷ್ಠವೆಂದಲ್ಲಿ ಪಂಚಾಕ್ಷರಿಯ ನರಿವುದು.

ವ್ಯಾಪಕಾಕ್ಷರದಲ್ಲಿ ನಾಲ್ಕಕ್ಷರ ಸ್ಪರ್ಶನಾಕ್ಷರದಲ್ಲಿ ಏಕಾಕ್ಷರ ಇಂತೀ ಪಂಚಾಕ್ಷರವೆ ಪರಬ್ರಹ್ಮ ಸ್ವರೂಪು ಎಂದು ಬಿತ್ತರಿಸಿದುದು ನೋಡಿದಡೆ ಪಂಚಾಕ್ಷರವದು ವ್ಯಾಪಕಾಕ್ಷರದಲ್ಲಿ ನಾಲ್ಕಕ್ಷರ ಸ್ಪರ್ಶನಾಕ್ಷರದಲ್ಲಿ ಏಕಾಕ್ಷರ ಅಕ್ಷರವದು ವ್ಯಾಪಕ. ಆವುದು ಅತ್ಯಂತ ಸೂಕ್ಷ್ಮಾತಿ ಸೂಕ್ಷ್ಮವಾದುದು ಅದು ವ್ಯಾಪಕ.

ಭೂಮಿ ನೀರು ಅಗ್ನಿ ಗಾಳಿ ಇವುಗಳಿಗೆ ಆಧಾರವಾವುದು ಅದು ವ್ಯಾಪಕ. ಆ ವ್ಯಾಪಕಾಕ್ಷರದಲ್ಲಿ ನಾಲ್ಕಕ್ಷರ ಈ ನಾಲ್ಕಕ್ಕಾಧಾರವಾದುದು ಅದು ಸತ್. ಈ ನಾಲ್ಕು ಭೂತಗಳನ್ನು ತಿಳಿಯುವದರಿಂದ ಚಿತ್. ನಾಲ್ಕು ಭೂತಕ್ಕಿಂತಲೂ ಪ್ರಿಯವಾದುದರಿಂದ ಆನಂದ. ಇವುಗಳು ಬದಲಾವಣೆಗಳುಳ್ಳವು. ಒಂದೆ ರೀತಿಯಾಗಿ ಇರವು. ಮತ್ತೊಂದು ಇದ್ದಂತಿರುವದರಿಂದ ನಿತ್ಯವೆಂತಲೂ ಹೇಳಿಹರು. ಇದು ಕಾರಣ ಈ ನಾಲ್ಕಕ್ಷರ ಚೈತನ್ಯದ ಲಕ್ಷಣವ ಸೂಚಿಸುವದರಿಂದ ಚೈತನ್ಯವಾಗಿಹವು , ಅರು ಸ್ವರೂಪವಾಗಿಹವು. ನಾಲ್ಕು ಭೂತಂಗಳು ಜಡವೆನಿಸಿಕೊಳ್ಳತ್ತವೆ ಇವು ತನ್ನನ್ನು ತಿಳಿಯವು. ತಿಳಿಯದಿದ್ದಲ್ಲಿ ಚೈತನ್ಯನಾದ ನನ್ನ ತಿಳಿಯುವದದೆಂತು? ತಿಳಿಯದ್ದರಿಂದ ಜಡ. ನಾಶವುಳ್ಳವುಗಳು. ಪಂಚಾಕ್ಷರವು ಅರಿಯುವ ಅರು ಸ್ವರೂಪ ಅವು ಅವಿನಾಶಿ ಎಂದು ಹೇಳಿಸಿಕೊಳ್ಳುವವು.

ಇನ್ನೊಂದು ಸ್ಪರ್ಶನಾಕ್ಷರದಲ್ಲಿ ಏಕಾಕ್ಷರವು ಯ ಇದು ಸ್ಪರ್ಶದ ಸ್ಪರ್ಶವು. ಅರುವಿಂಗರುವು, ಸತ್‌ದ ಸತ್ , ಚಿತ್‌ದ ಚಿತ್ತ, ಆನಂದದ ಆನಂದ, ನಿತ್ಯದ ನಿತ್ಯ ,ಪೂರ್ಣದ ಪೂರ್ಣವಾಗಿಹ ಅಖಂಡಿತ. ಖಂಡಿತವಲ್ಲದ ಅಖಂಡಿತ ಪದವೆ ಯ ಎಂಬ ಅಕ್ಷರವ ಸೂಚಿಸುವುದು. ಇಂತಪ್ಪ ವ್ಯಾಪಕಾಕ್ಷರವು ಪಂಚಾಕ್ಷರವು. ಖಂಡಿತವಲ್ಲದ ಅಖಂಡಿತ ಜ್ಞಾನ ಸ್ವರೂಪವಾದುದರಿಂದ ಪರಬ್ರಹ್ಮ ಸ್ವರೂಪ.

ಶಿವಜ್ಞಾನಕ್ಕೆ ಮೂಲವೆಂದರೆ ಮೂಲ ಪಂಚಾಕ್ಷರ ಸ್ಥೂಲ ಪಂಚಾಕ್ಷರ, ಸೂಕ್ಷ್ಮ ಪಂಚಾಕ್ಷರ, ಮಾಯಾಕ್ಯ ಪಂಚಾಕ್ಷರ, ಪ್ರಸಾದ ಪಂಚಾಕ್ಷರವೆಂಬ ಪಂಚ ಪಂಚಾಕ್ಷರದ ಸ್ವರೂಪವನ್ನರಿತು ಪಂಚಾಕ್ಷರವ ಜಪಿಸಲು ಸೌರಾಷ್ಟ್ರ ಲಿಂಗ ವಪ್ಪುದು ತಪ್ಪದಯ್ಯ. ಮೂಲ ಪಂಚಾಕ್ಷರ ಇದು ಧ್ವನಿಯ ಮರೆಯಲ್ಲಿದ್ದುದು. ಮೂಲ ಪಂಚಾಕ್ಷರ ನಮಃ ಶಿವಾಯ ಮರೆಯಲ್ಲಿರ್ದುದು ಸತ್, ಚಿತ್, ಆನಂದ, ನಿತ್ಯ, ಪೂರ್ಣವೆಂಬ ಧ್ವನಿಯ ಮರೆಯಲ್ಲಿರ್ದುದು. ಮೂಲ ಪಂಚಾಕ್ಷರವದು ಏನೆಂದೆನ್ನದ ಮುನ್ನ ತಾನೆ ಆದುದು ಮೂಲ ಪಂಚಾಕ್ಷರ. ಸ್ಥೂಲ ಪಂಚಾಕ್ಷರವದು 'ನ ' ಕಾರವೆ ಭೂಮಿ, 'ಮ' ಕಾರವೆ ನೀರು, 'ಶಿ' ಕಾರವೆ ಅಗ್ನಿ (ಗಾಳಿ) 'ವಾ' ಕಾರವೆ ವಾಯು, ಯ ಕಾರವೆ ಆಕಾಶ. ಇದು ಸ್ಥೂಲ ಪಂಚಾಕ್ಷರ ಸೂಕ್ಷ್ಮ ಪಂಚಾಕ್ಷರವದು ಭೂಮಿಯ ಭೂಮಿ ಆದುದು ನ ಕಾರ ನೀರಿನ ನೀರು ಆದುದು ಮ ಕಾರ, ಅಗ್ನಿಯ ಅಗ್ನಿ ಆದುದು ಶಿ ಕಾರ, ವಾಯುವಿಂಗೆ ವಾಯು ಆದುದು ವಾ ಕಾರ ಆಕಾಶದ ಆಕಾಶವಾದುದು ಯ ಕಾರ ಇದು ಸೂಕ್ಷ್ಮ ಪಂಚಾಕ್ಷರವೆಂದು ತಿಳಿಯುವದು.

ಮಾಯಿಕ ಪಂಚಾಕ್ಷರ ತೋರಿ ಇಲ್ಲವಾಗುವುದು ಇದು ಮಾಯಿಕ ಪಂಚಾಕ್ಷರ, ಬೋಧ ರೂಪೆಂಬ ಮಾಯಿಕ ಪಂಚಾಕ್ಷರ. ಬೋಧದಲ್ಲಿ ತೋರಿದಂತಾಗಿ, ಪುನಃ ಬೋಧ ಮಾಡುವುದು ಬಿಡುವುಡೆ ಇಲ್ಲವಾಗುವುದು. ನುಡಿಯುವಾಗ ತೋರಿ ನುಡಿಯುವದು ಬಿಡುವುಡೆ ಇಲ್ಲವಾಗುವುದು. ನಮಃ ಶಿವಾಯ ನಮಃ ಶಿವಾಯ ಎಂಬಲ್ಲಿ ತೋರುವುದು ,

ಜಪಿಸಿದಾಗ ತೋರುವದು, ಧಾರಣ ಧ್ಯಾನಾದಿ ಮಾಡಿದಾಗ ತೋರುವದು, ಬಿಡುವುಡೆ ಕಾಣದಾಗುವುದು . ಇದು ಕಾರಣ ತೋರಿ ಇಲ್ಲವಾಗುವದದು ಮಾಯಾಖ್ಯ ಪಂಚಾಕ್ಷರವೆಂದು ತಿಳಿವುದು.

ಪ್ರಸಾದ ಪಂಚಾಕ್ಷರ ವಾಙ್ಮನೋತೀತವಾದುದು ಸಮ ಪ್ರಕಾಶವಾದ ಜ್ಞಾನಜ್ಯೋತಿ ಮಾತಿಲ್ಲದವನ ಕಂಡು ತಾನು ಮಾತಿಲ್ಲದವನಾಗಿ ಶಬ್ದಮುಗ್ಧನಾಗಿ ಪರವಶನಾದುದು ಪ್ರಸಾದ ಪಂಚಾಕ್ಷರವು. ನುಡಿಗೆಡೆಗೊಡದ ಘನವದು ಮೂಲ ಪಂಚಾಕ್ಷರ. ತೋರುವುದೆಲ್ಲ ಸ್ಥೂಲ ಪಂಚಾಕ್ಷರ. ನಮಃ ಶಿವಾಯವು ತೋರುವುದರಿಂದ ಸ್ಥೂಲ ಪಂಚಾಕ್ಷರವು.

ವ್ಯಾಪಕಾಕ್ಷರದ ನಾಲ್ಕಕ್ಷರ ಸ್ಪರ್ಶದಲ್ಲಿಯ ಏಕಾಕ್ಷರವದು ಸೂಕ್ಷ್ಮ ಪಂಚಾಕ್ಷರ ಸತ್ ಚಿತ್ ಆನಂದ ನಿತ್ಯ ಪೂರ್ಣವೆಂಬ ನೆನಹಿನಿಂದುಕ್ತವಾದುದು ಧಾರಣ ಧ್ಯಾನದಿಂದುಕ್ತವಾದುದು ಸೂಕ್ಷ್ಮ ಪಂಚಾಕ್ಷರವು. ಬೋಧಕ್ಕೊಳಪಟ್ಟುದು ಮಾಯಾಖ್ಯ ಪಂಚಾಕ್ಷರವು.

ಇಂತೀ ಪಂಚ ಪಂಚಾಕ್ಷರದ ಸ್ವರೂಪವನರಿತು ಜಪಿಸಲು ಹೀಗೆ ಪಂಚ ಪಂಚಾಕ್ಷರದ ನಿಜವನರಿತು ಜಪಿಸಲು ಭಾವ ಭರಿತವಾಗುವದು. ಏನಕಂಡರೂ ತೆರಹಿಲ್ಲದಲಿಂಗ ಭರಿತವಾಗಿ ಸಚ್ಚಿದಾನಂದ ನಿತ್ಯಪೂರ್ಣವಾಗಿ ಪ್ರಜ್ವಲಿಸುವದರಿಂದ ಪ್ರಕಾಶಿಸುವದರಿಂದ ತಾನೆ ಸಕಳ ತಾನೆ ನಿಃಕಳವಾದುದು ವಿಧಿತವಾದುದರಿಂದ ವೇದ್ಯವಾಗುವದರಿಂದ ಸೌರಾಷ್ಟ್ರ ಸೋಮೇಶ್ವರ ಲಿಂಗವಪ್ಪುದದು ತಪ್ಪದಯ್ಯ ಎಂದು ಹೇಳಿಹರು.

ವಚನ - 15

ಇನ್ನು ಮುಕ್ತನೆಂದಡೆ ಮುನ್ನವೇನು ಬದ್ಧನೇ? ಮುನ್ನ ಮುನ್ನವೆ
ಒಂದು ಕಾರಣದಿಂದ ಬದ್ಧನಾದಡೇನು, ಗುರು ಕಾರುಣ್ಯದಿಂದ ಮುಕ್ತನು.
ಗುರು ಕಾರುಣ್ಯದಿಂದ ಗುರುವಾದ ಬಳಿಕ ಬದ್ಧ ಮುಕ್ತನೆನಲುಯುಂಟೆ?
ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ.

ತಾತ್ಪರ್ಯ : ಇನ್ನು ಮುಕ್ತನೆಂದಡೆ ಮುನ್ನವೇನು ಬದ್ಧನೇ :

ತಾನಾರೆಂದರಿತವನು ತನ್ನೊಳಗೆ ತಾನೆ ಮುಕ್ತನೆಂಡದೆ ಮುನ್ನವೇನು ಬದ್ಧನೆ? ಎಂದು ತನಗೆ ತಾನೆ ಪ್ರಶ್ನಿಸಿಹನು. ಮುನ್ನ ಮುನ್ನವೆ ಮುಕ್ತನು ಎಂದು ಉತ್ತರ ಕೊಡುತ್ತಿಹನು. ಇದು ಸ್ವಾತಂತ್ರ್ಯ ಅರಿವು. ಪೂರ್ವಜನ್ಮಂಗಳಲ್ಲಿ ಮಾಡಿದ ನಿಷ್ಕಾಮ ಕರ್ಮದ ಫಲ. ಈಶ್ವರ ಕೃಪೆ ಅಂತಃಕರಣ ಕೃಪೆ, ವೇದ ಕೃಪೆ, ಗುರು ಕೃಪೆಯಾದಲ್ಲಿ ಮಾನವನಿಗೆ ಸ್ವಾತಂತ್ರ್ಯ ಅರಿವು ಉದಯವಾಗುವುದು ಸ್ವತಂತ್ರ ಅರಿವು ತನಗೆ ಸ್ವಂತಾಗಿ ಅರು ಹೃದಯದ ಉಗಮವಾಗು ವದು. ಇಲ್ಲಿ ಅಂಧಶ್ರದ್ಧೆ ಇಲ್ಲ ಗುರುಘನ ಒಂದು ವ್ಯಕ್ತಿ ಎಂದು ತಿಳಿದಿಲ್ಲ. ಈಶ್ವರನನ್ನು ಒಂದು ಮಾಯಿಕವಾಗಿ ಕಂಡಿಲ್ಲ. ವೇದವದು ಒಂದು ಗ್ರಂಥವೆಂದು ತಿಳಿದಿಲ್ಲ. ತನ್ನನ್ನು ನಾಮರೂಪವೆಂದು ತಿಳಿದಿಲ್ಲ, ಇಲ್ಲಿ ಅರುವಿಂಗರುವಾದುದನ್ನು ಲಕ್ಷಿಸಿರುವದರಿಂದ ಸಂಕುಚಿತ ಕ್ಕಿಂಬಿಲ್ಲ ಉಪಾಧಿಗೆ ಮಹತ್ವವಿಲ್ಲವಾದ್ದರಿಂದ ಹಿರಿದಿಲ್ಲ ಕಿರಿದಿಲ್ಲ , ಅಲ್ಪಜ್ಞನಿಲ್ಲ ಸರ್ವಜ್ಞನಿಲ್ಲ, ಮಾಯೆ ಇಲ್ಲ, ಅವಿದ್ಯೆ ಇಲ್ಲ, ಉಪಾಧಿಗತ ಚೇತನಕ್ಕಿಂಬು ಕೊಡದ ಜ್ಞಾನ ಇಲ್ಲಿ ಬೆಳಗುವದ ರಿಂದ ಉರಿಲಿಂಗ ಪೆದ್ದಿ ಪ್ರಿಯ ಶರಣರು ಅರಿವ ಅರುಹಿಸಿಕೊಂಬ ಕಲ್ಪಿತ ಜ್ಞಾನ ಇಲ್ಲಿ ಹೇಳ

ಲಿಲ್ಲ, ಅರಿಯಲಿಲ್ಲದ ಅರುವನ್ನೆ ಇಲ್ಲಿ ವರ್ಣಿಸಿದ್ದಾರೆ.

ಒಂದು ಕಾರಣದಿಂದ ಬದ್ಧನಾದಡೇನು ? ಗುರುಕಾರುಣ್ಯದಿಂದ ಮುಕ್ತನು :

ಒಂದು ಕಾರಣ? ಅದಾವ ಕಾರಣ ತಾನಾರೆಂದರಿಯದಿದ್ದುದೆ ಕಾರಣ. ಮರವು ಎಂಬುದೆ ಕಾರಣ. ಇದು ತಾನಾಗದ ತನ್ನದಾಗದ್ದನ್ನು ತನ್ನ ಮೇಲೆ ಆರೋಪಿಸಿ ಕೊಂಡಿಹುದೆ ಕಾರಣ. ದೇಹಾದಿಗಳು ದೇಹಾದಿ ಧರ್ಮಂಗಳು ತಾನೆಂದು ತಿಳಿದು ಕರ್ತೃತ್ವ, ಭೋಕ್ತೃತ್ವ ಬುದ್ಧಿಯುಳ್ಳವನಾಗಿ ದೇಹಾದಿಗಳ ಜನನ ಮರಣಂಗಳ ಕಲ್ಪಿಸಿಕೊಂಡುದೆ ಕಾರಣ ಈ ಕಾರ ಣದಿಂದ ಬದ್ಧನಾದರೇನು? ತಾನು ಅರುವಿಂಗರುವಾಗಿದ್ದರೂ ತನ್ನಿಂದ ತನ್ನ ಘನದಿರುವ ತಿಳಿ ಯದಿದ್ದುದೆ ಕಾರಣ. ತನ್ನ ಪ್ರಮಾದವೆ ತನಗೆ ಕಾರಣವಾಗಿ ಬದ್ದನಾದ. ಬದ್ದನಾದರೇನಾ ಯಿತು ಗುರು ಕಾರುಣ್ಯದಿಂದ ಮುಕ್ತನು. ಗುರು ಕಾರುಣ್ಯವದು ಮಹಾಮಹಿಮವು. ಇಲ್ಲದ ನಾಮರೂಪವ ಹುಸಿ ಮಾಡ ತೋರಿಸಿ ಇದ್ದ ತನ್ನ ನಿರಂತರವಾಗಿಹ ಮಂಗಲಮಯ ಪರಮ ಸತ್ಯದಿರುವ ಸಿದ್ಧಮಾಡಿ ತೋರಿದಾಗಳೆ ಮುಕ್ತನು.

ಗುರುಘನ ತಮಸ್ಸಂದ ಭಾಸ್ಕರ. ಕತ್ತಲೆಗೆ ಸೂರ್ಯನಿದ್ದಂತೆ. ಅಜ್ಞಾನರೂಪಿ ಕತ್ತಲೆಗೆ ಸುಜ್ಞಾನರೂಪಿ ಜ್ಞಾನ ಸೂರ್ಯ. ಅವಲ್ಲಿ ಸುಜ್ಞಾನರೂಪಿ ಚಿದ್ಘನನು ಸ್ವ ಪ್ರಕಾಶವಾಗಿ ಬೆಳಗು ತ್ತಿಹನು. ಅಲ್ಲಿ ಭ್ರಾಂತಿ ರೂಪ ಕತ್ತಲೆ ಇರದು. ಇಲ್ಲದುದು ಇಲ್ಲವಾಗಿ ಇದ್ದ ನಿರಂತರ ತತ್ವವು ಪ್ರಜ್ವಲಿಸುವ ಗುರು ಕಾರುಣ್ಯದಿಂದ ಮುಕ್ತನು.

ಓಂ ಅಸತೋಮಾ ಸದ್ಗಮಯ, ತಮಸೋಮಾ ಜ್ಯೋತಿರ್ಗಮಯ, ಮೃತ್ಯೋರ್ಮ ಅಮೃತಂ ಗಮಯ, ಗುರು ಸಚ್ಚದ್ರೂಪದ ಅರಿವು ತೋರಿದ ಅಜ್ಞಾನರೂಪಿ ಮರವಿಂಗೆ ಇಲ್ಲ ದುದು ಇಲ್ಲಮಾಡಿ ಇದ್ದ ಸ್ವಯಂಜ್ಯೋತಿಯಾಗಿಹ ತನ್ನೊರುವ ತೋರಿದ ಮೃತ್ಯು ಎಂಬುದು ಪ್ರನ ಏಕೆಂದರೆ ಪ್ರಾಣವಲ್ಲ ಪ್ರಾಣವದು ಪ್ರಾಣಲಿಂಗವೆಂದು ತೋರಿದುದರಿಂದ ಒಂದು ಕಾರಣದದಿಂದ ಬದ್ದನಾದರೇನಾಯಿತು. ಗುರು ಕಾರುಣ್ಯದಿಂದ ಸಚ್ಚಿದ್ರೂಪದಿಂದ ಇಲ್ಲದ ಅಜ್ಞಾನರೂಪಿ ಮರವು ಇಲ್ಲಮಾಡಿ ಇದ್ದ ಅರುಸ್ವರೂಪನಾದುದರಿಂದ ಮುಕ್ತನು ಇಲ್ಲದ ಮೃತ್ಯು ಇಲ್ಲ ಮಾಡಿ ತೆರಹಿಲ್ಲದ ಲಿಂಗ ಭರಿತನೆಂಬ ಗುರು ಕಾರುಣ್ಯದರುವು ಹೃದಯದಲ್ಲಿ ಬೆಳಗುವುಡೆ ಪ್ರಣವ ಪ್ರಭೆಯ ಮೆಲುಣ ಪರಂಜ್ಯೋತಿ ತಾನಾಗಿ ಮುಕ್ತನೆಂದು ಹೇಳಿಹರು.

ಗುರು ಕಾರುಣ್ಯದಿಂದ ಗುರುವಾದ ಬಳಿಕ ಬದ್ಧ ಮುಕ್ತನೆನೆಲುಂಟೆ ? :

ಉರಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ. ಗುರು ಕಾರುಣ್ಯದಿಂದ ಗುರುವಾದ ಬಳಿಕ ಗುರವಲ್ಲದೆ ತಾನಿಲ್ಲ. ತಾನಿಲ್ಲಾಗಿ ಓದಲಿಲ್ಲ ಓದಲಿಲ್ಲಾಗಿ ಕೇಳಲಿಲ್ಲ , ಕೇಳಲಿಲ್ಲಾಗಿ ಹೇಳಲಿಲ್ಲ, ಹೇಳಲಿಲ್ಲಾಗಿ ಅರಿಯಲಿಲ್ಲಾ , ಅರಿಯಲಿಲ್ಲಾಗಿ ಅರಿಯಲಿಲ್ಲದ ಅರುವ ಅರುಹಿಸಿದ ಬಳಿಕ ಗುರುವ ನರಿಯಲುಂಟೆ? ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ.

ಗುರು ಕರುಣೆ, ತನ್ನಂತೆ ಮಾಡುವ ಕರುಣೆ, ಗುರು ಕರುಣೆ ಇಬ್ಬರ ಮಧ್ಯದಲ್ಲಿದ್ದ ವಸ್ತುವಿನಿರುವ ತಿಳಿಸುವ ಕರುಣೆ, ಗುರು ಶಿಷ್ಯರ ಮಧ್ಯದಲ್ಲಿದ್ದ ವಸ್ತುವ ತಿಳಿಸುವ ಕರುಣೆ, ಅದುವೆ ಸ್ವಯಂಜ್ಯೋತಿ ಲಿಂಗದುದಯ. ಅದು ನಿರಂತರ ಉದಯ, ಅದು ಉದಯಾಸ್ತವಿ ಲ್ಲದುದಯ. ಇದು ಕೆಡದ ಜ್ಯೋತಿ. ಕಲ್ಪಿತರಾಗಿ ಕಾಣಹೋದವರಿಗೆ ಕಾಣದ ಜ್ಯೋತಿ ಇಂತಪ್ಪ ಸಮ ಪ್ರಕಾಶ ಸಮತೆಯೆ ತನ್ನಿರುವು ತಾನಾಗಿಹ ಘನ ತನ್ನಿಂದ ತನಗೆ ವೇದ್ಯವಾದಲ್ಲಿ ಪ್ರತಿಭಾವವುಳ್ಳ ಶಿಷ್ಯ ಗುರುವಿಂಗೆ ಕಾಣಲಿಲ್ಲ, ಶಿಷ್ಯಂಗೆ ಗುರುವ ಕಾಣಲಿಲ್ಲ, ಕಲ್ಪಿತ ನಷ್ಟವಾಗಿ

ಕಲ್ಪನಾ ರಹಿತವಾಗಿಹ ಗುರುವಾದ ಬಳಿಕ ಶಿಷ್ಯ ಬದ್ಧ, ಗುರು ಮುಕ್ತನೆನಲುಂಟೆ? ಅಥವಾ ಪೂರ್ವದಲ್ಲಿ ಬದ್ಧನಾಗಿದ್ದೆ ಗುರು ಕರುಣೆಯಾಗಿ ಮುಕ್ತನೆನಬಹುದೆ? ಎಂದು ಹೇಳಿಹರು.

ಅರಿಯಲಿಲ್ಲದ ಅರುವೆ ತಾನಾಗಿರುವಲ್ಲಿ ಕಲ್ಪಿತ ತಾನಲ್ಲ , ಕಲ್ಪನಾ ರಹಿತವಾದ ತನ್ನ ನಿಜದಿರುವಿನಲ್ಲಿ ಕಲ್ಪಿತ ತಾನಿಲ್ಲ, ಕಲ್ಪಿತ ತಾನಿಲ್ಲವಾದಲ್ಲಿ ಓದಿದುದು ಅದೆಂತು? ಕೇಳಿಉದು ಅದೆಂತು? ಹೇಳಿದುದು ಅದೆಂತು? ಅರಿದುದು ಅದೆಂತು? ಓದಿದ ವೇದದಲ್ಲೇನಹುದಯ್ಯ ಓದಿಸಬಾರದಂಥ ಲಿಂಗಸ್ಥಲ ಸಾಧಿಸಿದ ಶಾಸ್ತ್ರದಲ್ಲೇನಿಹುದಯ್ಯ ಸಾಧ್ಯವಹದಂಥ ಜಂಗಮ ಸ್ಥಲ ಅರಿಯಲಿಲ್ಲದ ಅರುವ ನರಿತಲ್ಲಿ, ಅಲ್ಲಿ ಅರಿವ ಅರುಹಿಸಿಕೊಂಬುದೆ ಅರಿಯದಂತಿರು ವಾಗ ಓದಿದ ವೇದವ ಕಾಣಬಹುದೆ ? ಅದನ್ನು ಓದಿದ ಜಿಜ್ಞಾಸುವ ಕಾಣಬಹುದೆ ? ಇದು ಕಾರಣ ಗುರು ಕಾರುಣ್ಯದ ಘನವ ಅದನೆಂತುಸು.ರುವುದು. ತಮದಂತಾಯಿತ್ತೆನ್ನ ಗುರು ಕಾರುಣ್ಯದ ಘನವ ಅದನೆಂತುಸರುವುದು ಇವನ ಕಂಡು ಧ್ವನಿಯ ಮರೆಯಲ್ಲಿದ್ದ ಇವನ ಕಂಡು ತಮದಂತಾಯಿತ್ತೆನ್ನ ಗುರುವಿನುಪದೇಶವೆಂದುದು ನೋಡಿದಡೆ ಧ್ವನಿಯ ಮರೆಯಲ್ಲಿದ್ದುದ ಅರಿದುದು ಅದು ಗುರುವ ನರಿದುದು ತನ್ನ ಅರಿದುದು ಸಕಲವು ಅರಿ ದುದು ಅರಿದಲ್ಲಿ ಅರಿಯಲಿಲ್ಲದ ಅರುವೆ ತಾನಾದುದೆ (ಭಕ್ತ) ಬದ್ಧ ಮುಕ್ತನೆನಲುಂಟೆ ? ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ ಎಂದು ಹೇಳಿಹರು.

ವಚನದ ತಾತ್ಪರ್ಯವು ಇಲ್ಲಿ ಬಂದಿದೆ. 278 ಪಾನು ಓದಿದ ನಂತರ 277 ಪಾನಿನ ಲ್ಲಿದ್ದುದು ಓದುವದು ಬರೆಯುತ್ತ ದೃಷ್ಠಿ ದೋಷದಿಂದ ಈ ಪಾನು ಕಾಣದಾಗಿ ಮುಂದಿನ ಪಾನಿನಲ್ಲಿ ಬರೆದದ್ದು ತಿಳಿದು ಪುನಃ ಆ ವಚನದ ವಿಷಯ ಅಲ್ಲಿ ಬರೆದಿರುವದು. ಪ್ರಿಯ ವಾದ ವಿಷಯವದು ಸಮತ್ವ ಇದು ಪ್ರಿಯವಾದುದರಿಂದ ಸಮತಾನಿಧಿಯೆಂದು ಹೇಳಿಸಿ ಕೊಂಡಿದೆ. ಒಂದೆ ಅಕ್ಷರವಿದ್ದರೂ ಅದು ಅಕ್ಷರವು ಎರಡು ಇದ್ದರೂ ಅಕ್ಷರವು ಪಂಚಾಕ್ಷರವಿ ರಲಿ ಅದು ಅಕ್ಷರವು ಆರು ಅರ್ಥಾತ್ ಷಡಕ್ಷರವಿದ್ದರೂ ಅಕ್ಷರ. ಅಕ್ಷರವದು ಅವಿನಾಶಿ ಅವಿನಾಶಿಯಲ್ಲಿ ವಿನಾಶವನರ್ಪಿತವಾದುದು ಅವಿನಾಶಿ ಎಂದು ಸಿದ್ಧವಾಗುವದು. ಇಂಥಹ ಅವಿನಾಶಿ ಪದ ಸಿದ್ದಮಾಡಿದ ಮಹಿಮರು ಪ್ರಭುದೇವ ಚನ್ನಬಸವಣ್ಣ ಬಸವಣ್ಣಅಕ್ಕಮಹಾ ದೇವಿ ನೀಲಾಂಬಿಕೆ ಮೊದಲಾದ ಶರಣರು ಶರಣೆಯರು ಇವರಾಗಿಹರು ಇಲ್ಲಿ ಪ್ರಭುದೇವರ ವಿಷಯ ತೆಗೆದುಕೊಳ್ಳುವಾ.

"ಪ್ರಣವ ನುಚ್ಚರಿಸುವ ಪ್ರಮಾಣಿಕರೆಲ್ಲರು ಪ್ರಣವ ಮಂತ್ರದರ್ಥವ ತಿಳಿದು ನೋಡಿರೆ? ಪ್ರಣವ ನಾಹಂ ಎಂದುದೆ? ಪ್ರಣವ ಕೋಹಂ ಎಂದುದೆ? ಪ್ರಣವ ಸೋಹಂ ಎಂದುದೆ? ಪ್ರಣವ ಚಿದಹಂ ಎಂದುದೆ? ಎನ್ನದಾಗಿ ಪ್ರಣವ ದರ್ಥವು ತಾನೆ ಮಯವು ಗುಹೇಶ್ವರಾ" ಎಂದು ಬಿತ್ತರಿಸಿದುದು ನೋಡಿದಡೆ ಪ್ರಣವ ಪಲ್ಲವಗಳ ನರಿದು ಜಪಿಸುವದು ಸಫಲ ನೋಡಾ. ಪ್ರಣವವದು ಮಂತ್ರ. ಮಂತ್ರದರ್ಥವ ತಿಳಿದು ನೋಡುವುದು ಸಫಲವು. ಆರು ಪ್ರಣವವದು ಓಂ ಎಂದು ಓಂಕಾರದರ್ಥವದು ಜ್ಞಾನ ಸ್ವರೂಪ ಜ್ಞಾನ ಸ್ವರೂಪ ಆರು ತಿಳಿ ದುನೋಡಿಹರು. ತಾನೆ ನುಡಿಗೆಡೆಗೊಡದ ಘನ, ತಾನೆ ಮಯವೆಂದು, ತಾನಾರೆಂದು ತನ್ನ ತಿಳಿಯಲು ಏಕಾಕ್ಷರವೆ ಜಪಿಸಲಿ ಎರಡಕ್ಷರ ಜಪಿಸಲಿ ತಾನೆ ಮಯವು. ತನ್ನಲ್ಲಿ ನಾಹಂ ಎಂಬುದಕ್ಕೂ ಸಂದಿಲ್ಲ, ಕೋಹಂ ಎನ್ನಲು ಸುದಿಲ್ಲ, ಸೋಹಂ ಎನ್ನಲೂ ಸಂದಿಲ್ಲ, ಚಿದಹಂ ಎನ್ನಲೂ ಸಂದಿಲ್ಲವಾದ್ದರಿಂದ ಅಖಂಡಿತ ಘನ ಪೂರ್ಣವಪ್ಪ ತನ್ನಿರುವೆ ಅರುವೆಂದರಿದ ನಿಜ

ಲಿಂಗೈಕ್ಯನ ದೃಷ್ಠಿಯಲ್ಲಿ ನುಡಿಗೊಳಪಟ್ಟ ಮಂತ್ರಂಗಳು ಕಿವಿಗೆ ಕೇಳುವವುಗಳಾಗಿರುವದರಿಂದ ಅಕ್ಷರವೆನಿಸವು. ಮಂತ್ರದರ್ಥವರಿತಲ್ಲಿ ನುಡಿಗೆಡೆಗೊಡದ ಘನದಿರುವು ಸಿದ್ದವಾಗುವದರಿಂದ ಸಮತ್ವವು ಸಿದ್ದವಾಗುವದು. ಅದು ಅಕ್ಷರವೆನಿಸುವದು ಇದು ಕಾರಣ ಪ್ರಣವ ಪಲ್ಲವಗಳ ರಿದು ಜಪಿಸುವದು ಸಫಲ ನೋಡಾ ಎಂದು ಹೇಳಿಹರು.

ಇದರಂದವ ತೋರಿದ ಎನ್ನ ಚನ್ನಬಸವಣ್ಣ ನೋಡಾ ಗುರುವೆ ಕಪಿಲಸಿದ್ಧ ಮಲ್ಲಿಕಾ ರ್ಜುನ ಇವನ ಕಂಡವ ಗುರು ಶಿಷ್ಯದ ಮಧ್ಯದಲ್ಲಿದ್ದ ವಸ್ತು. ಇದರಂದವ ತೋರಿದ ಎನ್ನ ಬಸವಣ್ಣ ನೋಡಾ ಗುರುವೆ ವಚನ 16ರ ತಾತ್ಪರ್ಯವು 276ರ ಪುಟಕ್ಕೆ ಬರೆದಿದೆ. ಅಲ್ಲಿ ನೋಡಿ.

ವಚನ - 16

ತಿಳಿಯದೆ ಜಪಿಸಿದ ಮಂತ್ರ ನಿಷ್ಪಲವಾದುದು ನೋಡಾ
ಗುರುವೆ ಪ್ರಣವ ಪಲ್ಲವಿಗಳರಿದು ಜಪಿಸುವದದು ಸಫಲನೋಡಾ
ಗುರುವೆ ಇದರಂದವ ತೋರಿದ ಎನ್ನ ಚನ್ನಬಸವಣ್ಣ ನೋಡಾ
ಗುರುವೆ ಕಪಿಲಸಿದ್ಧ ಮಲ್ಲಿಕಾರ್ಜುನ

ತಾತ್ಪರ್ಯ: ತಿಳಿಯದೆ ಜಪಿಸಿದ ಮಂತ್ರ ನಿಷ್ಪಲವಾದುದು ನೋಡಾ ಗುರುವೆ. ಪ್ರಣವ ಪಲ್ಲವಿಗಳರಿದು ಜಪಿಸುವದು ಸಫಲ ನೋಡಾ ಗುರವೆ : ತಿಳಿಯದೆ ಜಪಿಸಿದ ಮಂತ್ರ ನಿಷ್ಪಲವಾದುದು. ಮಂತ್ರ ಜಪಿಸುವವರು ಬಹು ಸಂಖ್ಯೆಯಲ್ಲಿ ದೊರೆಯುವರು. ತಿಳಿಯದೆ ಜಪಿಸುವವರು ಬಹಳಷ್ಟು ಇದ್ದಾರೆ. ಮಂತ್ರದಲ್ಲಿಯೂ ಐದು ಅಕ್ಷರ, ಆರು ಅಕ್ಷರ, ಎಂಟು ಅಕ್ಷರ, ಹದಿನಾರು ಅಕ್ಷರಗಳ ಮಾಡಿ ಅದರಲ್ಲಿ ಏಕಾಕ್ಷರ ಮತ್ತು ಎರಡು ಅಕ್ಷರವೆಂದು ಹೇಳುವ ಗುರು ಸಾಂಪ್ರದಾಯವಿದೆ. ಸಾಂಪ್ರದಾಯವಿದ್ದರೆ ಇರಲಿ, ಐದು ಅಕ್ಷರ ಆರು ಅಕ್ಷರದವನಿಗೆ ವಿರೋಧವಾಗಿದೆ. ಆರು ಅಕ್ಷರ ಎಂಟು ಅಕ್ಷರದವನಿಗೆ ವಿರೋಧವಾಗಿದೆ. ಮಂತ್ರಂಗಳಲ್ಲಿ ವಿಷಮವೆ ತುಂಬಿದೆ. ಹೇಳಿಕೊಡುವ ತಿಳಿಸಿಕೊಡುವ ಗುರು ಸಾಂಪ್ರದಾಯವು ವಿರೋಧವಾಗಿದೆ. ಹೀಗಾಗಿ ಸಮತ್ವವೆ ದೂರಾಗಿದೆ. ಸಮತಾನಿಧಿ ಯಿಂದ ದೂರಾದುದು ವಿಷಮತ್ವಕ್ಕೆ ನಾಂದಿಯಾಗಿದೆ.

ಹಗ್ಗದಲ್ಲಿ ಹಾವು ಕಾಣಲು ಕತ್ತಲೆಯು ನಾಂದಿಯಾದಂತೆ ಸಮತತ್ವದಲ್ಲಿ ವಿಷಮ ದೃಷ್ಠಿ ವಿಷಮಭಾವ ವಿಷಮ ಜ್ಞಾನ ಕಾಣಲು ಜ್ಞಾನರೂಪಿ ಕತ್ತಲು ಭ್ರಾಂತಿ ರೂಪಿ ಕತ್ತಲೆ ವಿಪರೀತವಾಗಿ ತಿಳಿಯುವದೆ ಇದಕ್ಕೆ ನಾಂದಿಯಾಗಿದೆ. ಮಹಾಂತರು ಎರಡೆನಲಿಲ್ಲ ಎರಡಕ್ಷರ ಒಂದೆನಲಿಲ್ಲ ಏಕಾಕ್ಷರವೆಂದು ಹೇಳಿದರು. ಮಂತ್ರವದು ಒಂದೆ ಅಕ್ಷರವಿರಲಿ. ಎರಡೆ ಅಕ್ಷರವಿರಲಿ ಅವುಗಳ ಮೂಲ ಅಕ್ಷರವೆಂದು ತಿಳಿಸಿಕೊಡುವುದು ಎಂದಲ್ಲಿ ವಿಷಮತ್ವನಷ್ಟವಾಗಿ ಸಮತ್ವ ಸಿದ್ಧವಾಗುವಲ್ಲಿ , ಸಮತ್ವವೆ ನಷ್ಟವಾಗಿ ವಿಷಮತ್ವ ವೃದ್ಧಿಯಾಗಿದೆ. ಎಂದಲ್ಲಿ ತಿಳಿಯದೆ ಜಪಿಸಿದ ಮಂತ್ರ ನಿಷ್ಪಲವಾದುದು ನೋಡಾ ಎಂದು ಹೇಳಿಹರು.

ಪ್ರಣವ ಪಲ್ಲವಿಗಳರಿದು ಜಪಿಸುವದು ಸಫಲ ನೋಡಾ ಗುರುವೆ ಎಂದು

ಬಿತ್ತರಿಸಿದುದು ನೋಡಿದಡೆ ಪ್ರಣವವದು ಪಲ್ಲವ ಪದದರ್ಥ ಪಲ್ಲವಿಗಳಲ್ಲಿ ಎಂದು ತಿಳಿಸಿದಂತೆ. ಪ್ರಣವವದು ಏಕಾಕ್ಷರ. ಸೋಹಂ ಅದು ಎರಡಕ್ಷರ. ಐದು ಅಕ್ಷರವದು ನಮಃ ಶಿವಾಯ. ಷಡಕ್ಷರವದು ಓಂ ನಮಃ ಶಿವಾಯವೆಂದು ಹೀಗೆಯೇ ಬಲ್ಲವರು ಮಂತ್ರಂಗಳ ವಿವರಣೆ ಮಾಡುವರು. ಈಗ ನಮಗೆ ಬೇಕಾದುದು ಸಮತ್ವ. ಬೇಡಾದುದು ವಿಷಮತ್ವ ವಿಷಮತ್ವದಿಂದ ಭಯಾನಕವದೆ. ಸಮತ್ವವು ಸಕಲರಿಗೂ ಪ್ರಿಯವಾದುದು. ಈ ವಚನದ ಅಭಿಪ್ರಾಯ. ಹಿಂದಿನ ಪಾನು 277ರಲ್ಲಿ ಬರೆದಿದೆ. ಅಲ್ಲಿ ನೋಡಿರಿ.

ಇದರಂದವ ತೋರಿದ ಎನ್ನ ಚನ್ನಬಸವ ನೋಡಾ ಗುರುವೆ : ಗುರುವಿಂಗೆ ಗುರುವಾಗಿಹ ಗುರುಲಿಂಗದಂದವ ತೋರಿದ. ಲಿಂಗಕ್ಕೆ ಲಿಂಗವಾಗಿಹ ಶಿವಲಿಂಗದಂದವ ತೋರಿದ. ಜಂಗಮಕ್ಕೆ ಜಂಗಮವಾಗಿಹ ನಿರಾಲಂಬ ಜಂಗಮದಂದವ ತೋರಿದ. ಪ್ರಸಾದಕ್ಕೆ ಪ್ರಸಾದವಾಗಿಹ ಪರಿಣಾಮ ಪ್ರಸಾದದಂದವ ತೋರಿದ ಎನ್ನ ಚನ್ನಬಸವ ನೋಡಾ ಗುರುವೆ ಕಪಿಲಸಿದ್ದ ಮಲ್ಲಿಕಾರ್ಜುನ ಗುರುವಿಂಗೆ ಗುರುವಾಗಿಹ ಪರಮಗುರು ಎನ್ನ ಚನ್ನಬಸವ ನೋಡಾ, ಎನ್ನ ಅಂತರಂಗದಲ್ಲಿರ್ದ ನಿಕ್ಷೇಪ ನಿಜ ನಿಧಿಯ ತೋರಿದ ಗುರುವಿಂಗೆ ನಮೋ ನಮೋ ಎಂಬೆ.

ವಚನ - 17

> **ಮನನ ಮಾಡಿದ ಮಂತ್ರ ಮಹಾಪದವಿಯ ಕೊಟ್ಟಿತಯ್ಯ. ಮನನವರಿಯದ ಮಂತ್ರ ಮಂತ್ರದಲ್ಲಿಯೆ ವಸ್ತು ಕೊಟ್ಟಿತ್ತಯ್ಯ. ಮಂತ್ರವೇನು ಮನವೆ? ಕಪಿಲಸಿದ್ದ ಮಲ್ಲಿಕಾರ್ಜುನ ಫಲವೇನು ವಿಚಾರದಿಂದ ವಿಶ್ವಾಸದಿಂದ ಗಣಿತ ಫಲವ ಕೊಟ್ಟಿತಯ್ಯ**

ತಾತ್ಪರ್ಯ: ಮನನ ಮಾಡಿದ ಮಂತ್ರ : ಮಹಾ ಪದವಿಯ ಕೊಟ್ಟಿತ್ತಯ್ಯ ಮಂತ್ರದ ಘನವ ನೋಡಿರೆ? ಮಂತ್ರದ ಮನನದಿಂದ ಸಾಲೋಕ್ಯ ಸಾಯುಜ್ಯ ಸಾಮೀಪ್ಯ ಸಾರೂಪ್ಯವೆಂಬ ಮಹಾ ಪದವಿಯ ಕೊಟ್ಟಿತ್ತಯ್ಯ ಮಹಾ ಪದವಿಯ ಮಂತ್ರ ಅದಾವ ಮಂತ್ರ, ಗುರು ಕರುಣಿಸಿದ ಮಂತ್ರ, ಜೀವ ಶಿವರೇಕತ್ವ ಮಂತ್ರ, ಪಂಚಾಕ್ಷರ ಮಂತ್ರ, ಅದು ತ್ವಂ ಪದವು ಅಲ್ಲ ತತ್ವದವೂ ಅಲ್ಲ ಅಸಿಪದವಾಗಿಹ ಮಂತ್ರ. ಅಸಿಪದವೆಂದರೆ ಅಸಿ ಪದ ಲಕ್ಷ್ಯವಾಗಿದೆ. ಇದು ಪಿಂಡಾಂಡಕ್ಕೆ ಬೆಳಗುವ ಜ್ಯೋತಿಯು ಅಹುದು. ಬ್ರಹ್ಮಾಂಡಕ್ಕೂ ಬೆಳಗುವ ಜ್ಯೋತಿಯು ಅಹುದು. ಪಿಂಡಾಂಡ ಬ್ರಹ್ಮಾಂಡವೆನ್ನದೆ ನಿರಾಲಂಬವಾಗಿಹ ಚಿಜ್ಯೋತಿಯು ಅಹುದು . ಎನೊಂದುಸರಲು ಬಾರದ ತಾನೆ ತಾನಾಗಿಹ ಸ್ವಯಂಜ್ಯೋತಿ ಅಹುದು. ಇದು ಕಾರಣ ಮನನ ಮಾಡಲು ಯೋಗ್ಯಮಂತ್ರವದು ಜೀವ ಶಿವ ರೇಕತ್ವ ಮಂತ್ರ. ಸತ್ಯಂ ಶಿವಂ ಸುಂದರಂ ಎಂಬ ಶಿವ ಮಂತ್ರ. ಸರ್ವಖಲ್ವಿದಂ ಬ್ರಹ್ಮವೆಂಬ ಮಂತ್ರ, ತೆರಹಿಲ್ಲದ ಲಿಂಗ ಭರಿತವೆಂಬ ಮಂತ್ರ, ಶಿವನೆ ಸತ್ಯನು, ಭೇದಿಸಬಾರದ ಅಭೇದ್ಯ ಸತ್ಯನು ಶಿವನೆ ಸುಂದರನು, ಶಿವನೆ ಅತ್ಯಂತ ಪ್ರಿಯನು, ಶಿವನೆ ನಿರೂಪನು, ಶಿವನೆ ರೂಪನು, ಶಿವನೆ ಪರಿಪೂರ್ಣನು, ಜೀವನು ಪೂರ್ಣನು, ಜೀವನು ನಿರೂಪನು, ಜೀವನು ಜೀವದ ಜೀವದ ತನುಮನ. ತನು ಮನದ ಮನವಾದ್ದರಿಂದ ಇವರೀರ್ವರ ಲಕ್ಷಣ ಒಂದೇ ಇರವು ಒಂದು ಇರುವುದರಿಂದ ಏಕತ್ವಮಂತ್ರವದು , ಸಾಮರಸ್ಯ ಸರ್ವವು ಬ್ರಹ್ಮಮಯವು. ಸಕಲವು

ಲಿಂಗಮಯವೆಂದರೆ ಸಾಮರಸ್ಯ ಮಂತ್ರ ಇದು ಸರ್ವವು ಬ್ರಹ್ಮಮಯವು ಇದು ಜ್ಞಾನಾರ್ಜನೆ ಪೂರ್ಣಾನು ಸಂದಾನ, ಲಿಂಗಾನು ಸಂದಾನ. ಇಂತಪ್ಪ ಮಹಾಲಿಂಗದ ಮನನ ಮಾಡುವದರಿಂದ ಮಹಾ ಪದವಿಯ ಕೊಟ್ಟಿತಯ್ಯ ಎಂದು ಹೇಳಿಹರು.

ಜ್ಞಾನ ಲಿಂಗಾನು ಸಂದಾನ ಮಾಡಿದ ಘನವನೇನೆಂಬೆ ? ಮನ ಯಾವಾಗ ಮಹಾಲಿಂಗದ ಮನನ ಮಾಡುವುದು ಆಗಳೆ ಮಹಾಪದವಿಯು. ಶರೀರ ಸತ್ತ ಮೇಲೆ, ಜೀವ ಹೋದ ಮೇಲೆ ,ಪ್ರಾಣ ಪಕ್ಷಿ ಶರೀರವ ಬಿಟ್ಟ ಮೇಲೆ ,ಮಹಾ ಪದವಿಕೊಟ್ಟಿತ್ತು ಎಂಬುದು ಅಂಧಶ್ರದ್ಧೆ. ಭಾವಿಕರ ಭಾವುಕತನ.

ಗುರು ಮುಖದ್ವಾರಾ ಆರು ಜೀವ ಶಿವರೇಕತ್ವದ ಅರುವಿನ ರಹಸ್ಯವ ತಿಳಿದಿಹರು, ಅವರಿಗೆ ಲಿಂಗಾಂಗ ಸಾಮರಸ್ಯದ ಜ್ಞಾನವಾಗಿ ಅಂತಪ್ಪ ಜ್ಞಾನಾರ್ಜನೆಯಿಂದ ಸಾಲೋಕ್ಯ ಸಾಮೀಪ್ಯ ಆಗಳೆ ಸಿದ್ಧವು. ಇದು ಅರು ಹೃದಯಕ್ಕೆ ವೇದ್ಯವಾಗುವ ವಿಷಯ. ಏಕೆಂದರೆ ಶಿವ ವಿಚಾರ ನಡೆಯುವ ಸ್ಥಾನವದು ಶಿವಲೋಕವಾಗಿದೆ. ಇದು ಅಭೇದ್ಯ ಶಿವ ತತ್ವ ಗುಟ್ಟು ತಿಳಿಸುವ ಸ್ಥಾನವೆ ಶಿವಲೋಕ. ಇಂತಪ್ಪ ಪರತತ್ವ ನಡೆಯುವಲ್ಲಿ ಅದನ್ನು ಶ್ರವಣ ಮಾಡುವ ಸದುಹೃದಯಂಗಳು ಅರುವಿನ ವಿಚಾರದಲ್ಲಿ ಭಾವದಲ್ಲಿ ನೆನಹಿನಲ್ಲಿ ಲೀಯವಾದ ಹೃದಯ ಶಿವ ತತ್ವದ ಅಲೆ ಸಮೀಪ ವಿದ್ದುದರಿಂದ ಸಾಮೀಪ್ಯವೆಂದು ಹೇಳಿಹರು.

ಶಿವ ಒಳಹೊರಗೂ ವ್ಯಾಪಿಸಿರುವವ. ಶಿವ ಒಳಹೊರಗೆನ್ನದೆ ಭರಿತವಾದುದು, ಶಿವ ಸರ್ವಾತ್ಮ ಶಿವ . ಮರಳು ತಲೆ ಹುರುಳು ತಲೆ ನೀನೆ ದೇವ. ಹೆಂಗೂಸು, ಗಂಡುಗೂಸು ನೀನೆ ದೇವ, ಎಮ್ಮಕ್ಕನ ಗಂಡ ನೀನೆ ದೇವಾ, ಭ್ರಾಂತಳಿದು ಭಾವ ನೆಲೆಗೊಂಡಿತ್ತು ಕೂಡಲಸಂಗಮದೇವಾ ಸರ್ವಾತ್ಮ ಶಿವ ,ನೇತಾತ್ಮ ಶಿವ , ಅಜ್ಞಾನಿಯು ಶಿವ, ಜ್ಞಾನಿಯು ಶಿವ, ಸಾಕಾರ ಶಿವ, ನಿರಾಕಾರ ಶಿವ ,ಹೀಗಿದ್ದು ಶಿವನಾದಲ್ಲಿ ಅವನು ಶಿವನೆಂದುದೇಕೆ ನೀನು ಶಿವನಿರುವಲ್ಲಿ ನಾನು ಶಿವನಿರುವಲ್ಲಿ ಇದರಲ್ಲಿ ಅನುಮಾನವೇಕೆ ? ಇದ್ದೊಬ್ಬನಿಗೆ ಶಿವನ ವಿಷಯದಲ್ಲಿ ನಾನು ಆಗುವುದೇಕೆ? ನೀನು ಆಗುವುದೇಕೆ? ಆಗುವುದೆಲ್ಲ ಕೃತ್ರಿಮವು ಸಟೆಯು ಎಂದು ಹೇಳಿದೆ.

ಇದ್ದುದೆಲ್ಲವು ಶಿವಮಯವಾಗಿರುವಲ್ಲಿ , ನಾನು ನೀನು ಶಿವನು ಇರುವಲ್ಲಿ , ಇಲ್ಲಿ ಅಹುದೆಂಬುದಾವುದು? ಅಲ್ಲೆಂಬುದಾವುದು? ಶಿವ ನಿರಂತರವಾಗಿರುವ ಮಂಗಲಮಯ. ಚಿದಾಕಾಶವು ಎಂದು ತತ್ವದನುಸಂದಾನ ಮಾಡಲು ಮನವು ಬ್ರಹ್ಮಾಕಾರ ಚಿತ್‌ಪ್ರಕಾಶದ ಸಮೀಪದಲ್ಲಿರುವದರಿಂದ ಸಾಮೀಪ್ಯವೆಂದು ಹೇಳಿದೆ. ಆವರಣವಿಲ್ಲದೆ ಮನವು ಚಿಜ್ಯೋತಿ ಅನು ಸಂದಾನದಿಂದ ಹೃದಯ ಶುದ್ಧವಾಗಿ ಚಿಜ್ಯೋತಿ ಘನಕ್ಕೆ ವೇದ್ಯವಾಗುವುದರಿಂದ ಸಾಲೋಕ್ಯವೆಂದು ಹೇಳಿದೆ.

ಮನನವರಿಯದ ಮಂತ್ರ ಮಂತ್ರದಲ್ಲಿಯೆ ವಸ್ತುವ ಕೊಟ್ಟಿತ್ತಯ್ಯ: ಮನನವರಿಯದ ಮಂತ್ರ ಮಂತ್ರದಲ್ಲಿಯೆ ವಸ್ತುವಕೊಟ್ಟಿತ್ತಯ್ಯ ಮನನವರಿಯದ ಮಂತ್ರ? ಮನನಕ್ಕೆ ಸಿಲುಕದ ಮಂತ್ರ, ನೆನಹಿಂಗೆ ನಿಲುಕದ ಮಂತ್ರ ಧ್ಯಾನಾದಿಗಳಿಗೆ ನಿಲುಕದ ಮಂತ್ರ ಅನುಸಂದಾನಕ್ಕೆ ಬಾರದ ಮಂತ್ರ ನುಡಿಗೆಡೆಗೊಡದ ಮಂತ್ರ, ಏನೊಂದುಸಿರಲು ಬಾರದ ಮಂತ್ರ, ಘನಕ್ಕೆ ಘನವಾಗಿದ್ದವನ ಇರುವು ನಿರಂತರವೆನ್ನದ ನಿರಂತರವು. ಇದು ಅರಸುವವರತ್ತತ್ತ ಭಾವಿಸುವವರತ್ತತ್ತ ಚಿಂತಿಸುವವರತ್ತತ್ತ ಇದು ಮನನವರಿಯದ ಮಂತ್ರವೆಂದು ಹೇಳಿದೆ.

ಇದು ಮಂತ್ರದಲ್ಲಿಯೆ ವಸ್ತು ಕೊಟ್ಟಿತ್ತಯ್ಯ. ಮಂತ್ರವದು? ಆವ ಮಂತ್ರ? ಮಂತ್ರದಲ್ಲಿ ವಸ್ತು ಕೊಟ್ಟುದು ಆವುದಯ್ಯ ಮಂತ್ರ? ಕಿವಿಗೆ ಹೇಳಿದ ಮಂತ್ರ, ಇದು ಶಬ್ದ ಅಪಶಬ್ದಗಳಿಗೆ ನಿಲುಕದ ವಸ್ತುವ ಕೊಟ್ಟಿತ್ತು. ಶಾಸ್ತ್ರದ ಎಷ್ಟೋ ಸಹಸ್ರ ಸಹಸ್ರ ಶಬ್ದವಾಗಲಿ ಲೋಕದ ಸ್ತುತಿ ನಿಂದಾರೂಪಿ ಅಪಶಬ್ದಗ್ಗಳಾಗಲಿ ಅದನ್ನು ಹೊಗಳವು ನುಡಿಗೆಡೆಗೊಡದ ಘನವೆಂಬುದು ನಾಚಿ ಎನೆಂದೆನ್ನದ ಮುನ್ನ ತಾನೆ ಆದುದು ಉಸರುವದದೆಂದು ಧ್ವನಿಯ ಮರೆಯಲ್ಲಿರ್ದುದು ಧ್ವನಿಗೆ ಒಳಪಡುವದದೆಂತು ಅರಿಯಲಿಲ್ಲದ ಅರುವ ಅರಿಯಲಿಲ್ಲ, ಮರೆಯಲಿಲ್ಲದ ವಸ್ತುವ ಕೊಟ್ಟಿತ್ತಯ್ಯ. ವಸ್ತುವೆ ತಾನಾಗಿ ಶಬ್ದಮುಗ್ದವಾಯಿತ್ತು. ಮಂತ್ರವದು ತಾನಾದವರ ಇರವು. ಇದು ನಿಃಶಬ್ದ ವೇದಿಗಳ ಇರವು ಎಂದು ಹೇಳಿದುದು.

ಮಂತ್ರವೇನು ಮನವೆ?: ಮಂತ್ರವದು ಮೌನ, ಮೌನವದು ಮಂತ್ರ. ಮಂತ್ರವದು ನುಡಿಗೆಡೆಗೊಡದ ಘನದಿರುವು, ನಿಃಶಬ್ದ ಬ್ರಹ್ಮ ಹೊಗಳತೆಗೆ ಸಿಕ್ಕದ ಘನವು ನಿಃಶಬ್ದ ಬ್ರಹ್ಮವೆಂದಲ್ಲಿ ತಪ್ಪಿದ ನಿಲವು, ಅರಿದರಿದು ನೋಡಿದವರ ಇರವು, ನೆಲೆಯಿಲ್ಲದ ನಿಲವು, ನಿಜವೆನ್ನದ ನಿಜವು ನಿಜವೆಂದಲ್ಲಿಯೆ ತಪ್ಪಿತ್ತು ಇದು ನಿರ್ವಾಣವಾಣಿಗೆ ತರಬಾರದು ನೋಡಾ. ಮಂತ್ರವೆಂದರೆ ಏನೊಂದನರಿಯದೆ ಇದ್ದ ತನ್ನಯ ಇರವು. ಶಬ್ದಮುಗ್ಧವಾದುದು . ಅದೆಂತು ಮನವಾಗುವದು? ತೋರಬಾರದ ಘನ ಅದು ಮನವೆ? ಹೊಗಳತೆಗೆ ಸಿಕ್ಕುದುದು ಅದು ಮನವೆ? ಮನವಾಗದು ಎಂದು ಹೇಳಿಹರು.

ಕಪಿಲಸಿದ್ಧ ಮಲ್ಲಿಕಾರ್ಜುನ, ಅರಿಯಬಾರದ ಘನ ಅದು ಅರಿಯಲಿಲ್ಲದ ಅರುವು. ಅದನ್ನು ಅರಿಯಲು ಗುರು ಕರುಣಿಸಿದ ಅನುವು. ಅದುವೆ ವಿಚಾರ. ಅಂತಪ್ಪ ಮಹದ ವಿಚಾರದಿಂದ ವಿಶ್ವಾಸದಿಂದ ಅಪರಮಿತ ಜ್ಞಾನ ನಿಧಿ ನಿಶಃಬ್ದ ವೇದಿ ತಾನಾದುದು. ಇದು ಅಗಣಿತ ಫಲ ಕೊಟ್ಟುದು, ಗುರು ಕಾರುಣ್ಯದನವು, ವಿಶ್ವಾಸ ಇವೆರಡು ಕೂಡುವದು ಗುರುತನಕೆಟ್ಟ ಗುರುಲಿಂಗವಾಗಿಹ ಗುರುಕಾರುಣ್ಯದನವು, ಭಕ್ತನ ಭಕ್ತ ಇವೆರಡು ಕೂಡಿದಲ್ಲಿ ಅಗಣಿತ ಫಲ ಕೊಟ್ಟಿತ್ತಯ್ಯ, ನಿಸ್ಸೀಮ ನಿಲುವುಳ್ಳವನಾದುದು ಅಗಣಿತ ಫಲ ಕೊಟ್ಟಿತ್ತಯ್ಯ ಎಂದು ಹೇಳಿಹರು.

ವಚನ - 18

ಎರಡೆಂಭತ್ತು ಕೋಟಿ ವಚನಂಗಳ ಹಾಡಿ ಹಾಡಿ ಸೋತಿತ್ತೆನ್ನ ಮನ,
ಮನ ಘನವರಿಯದು, ಘನ ಮನವರಿಯದು,
ಗುಹೇಶ್ವರ ಲಿಂಗವ ನರಿವುಡೆ ಗೀತೆಯೆಲ್ಲಾ ಮಾತಿನೊಂದೊಳಗು

ತಾತ್ಪರ್ಯ: ಪ್ರಭುದೇವ ಮಾಯಾ ಕೋಲಾಹಲ ಮಾಡಿದ ಪ್ರಭು, ನಿರಾಳ ಪ್ರಭು, ನಿರಾಲಂಬ ಪ್ರಭು, ಪ್ರಭುವೆ ಎರಡೆಂಭತ್ತು ಕೋಟಿ ವಚನಂಗಳ ಹಾಡಿ ಹಾಡಿ ಸೋತಿತ್ತೆನ್ನ ಮನವೆಂದು ಹೇಳಿರುವಲ್ಲಿ ಇಲ್ಲಿ ವಿಚಾರ ಮಾಡಿ ನೋಡುವ ಕೃಪಾ ಘನತ್ವವ ಎತ್ತಿ ತೋರಿಹನು.

ಮನ, ಘನವರಿಯದು ಮನದ ಅಲಾಪವ ನೋಡಿರೆ ? ಕಾಯ ನಾನೆನ್ನುವ ಕರ್ಮಿಗೊಂದು ಅಲಾಪವಿದ್ದರೆ ಈಶಾರ್ಪಣ ಮಾಡುವ ಭಕ್ತನಿಗೊಂದು ಆಲಾಪ. ಇತ್ತ

ನಿತ್ಯಾನಿತ್ಯ ಮಾಡುವ ಜ್ಞಿಜ್ಞಾಸಿಗೊಂದು ಆಲಾಪ. ಮೂರು ಆಲಾಪಂಗಳು ಮನದ ಕಾರ್ಯಂಗಳೆ! ಆಲಾಪ ಬಯಕೆ ಆಶೆ ಎಲ್ಲಿ ಅದೆ, ಅಲ್ಲಿ ಮರವು ಇದೆ. ಮರವು ಇದ್ದಲ್ಲಿ ಅಭಿಮಾನ, ಮೋಹ, ಚಿಂತೆ, ಭಯ, ದುಃಖವಿದ್ದುದು. ಅಲ್ಲಿ ಅಕಾಂತತೆ. ಅಲ್ಲಿರುವ ನಿಲುವು ಇದೆಲ್ಲವು ಮನದ ಕ್ಷೋಭೆಯು. ಮನದ ಹಂಗು ಹರಿಯಲು ಪ್ರಭುದೇವರ ಪ್ರಸಾದವಾಣಿಗೆ ಶರಣಾಗತರಾಗುವುದು. ಆಗ ಡಂಭತನಕ್ಕೆ ನಾಚಿಕೊಳ್ಳುವುದು, ಡಾಂಭಿಕ ಮನವು ಒಮ್ಮೆ ನಗಿಸುವದು ಅಳಿಸುವದು ಇದು ಮಾನವತೆಯನ್ನು ಹಾಳು ಮಾಡುತ್ತದೆ. ಇದರ ವಶಗತನಾಗಿ ಕ್ಷಣದಲ್ಲಿ ಸಂಸಾರಿ, ಪುನಃ ಕ್ಷಣದಲ್ಲಿ ತ್ಯಾಗಿ, ಪುನಃ ಕ್ಷಣದೋಳ್ ಯೋಗಿ, ಹೀಗೆ ಕ್ಷಣ ಕ್ಷಣದೋಳ್ ವಿಕಾರಗೊಂಡು ತಾನಾರೆಂದು ತನ್ನ ತಿಳಿಯಗೊಡದಂತೆ ಮಾಡುವುದು.

ಎಲೆ ಮನವೆ ಘನವರಿಯಲು ಎರಡೆಂಭತ್ತು ಕೋಟಿ ವಚನಂಗಳ ಹಾಡಿದೆಯಾ? ಅಹುದಹುದು. ನಿನ್ನ ಸಾಹಸ ಅಹುದಹುದು. ನಿನ್ನ ಪ್ರಯತ್ನ ಅಹುದಹುದು. ನಿನ್ನ ಅರಸುವಿಕೆ, ಆಲಾಪಿಸುವಿಕೆ, ಕೊನೆಗೆ ನೀನು ಸೋತೆಯಾ? ನೀನು ಸೋತದ್ದು ನಿನಗೆ ಕ್ಷೇಮಕರ. ನೀನು ಸೋಲಬಾರದ ನಿನ್ನ ಡಂಭಿಕತನವೆ ಎರಡೆಂಭತ್ತು ಕೋಟಿ ವಚನಂಗಳ ಹಾಡಿದರು. ನಿನ್ನ ಬಯಕೆ ದೂರವಾಯಿತೆ? ನಿನ್ನ ಪಡೆಯಬೇಕಾದ ಪದ ನಿನಗೆ ಪ್ರಾಪ್ತವಾಯಿತೇ? ನೀನು ಸಾಧಿಸಬೇಕಾದುದು ಸಾಧಿಸಿದೆಯಾ? ಸಾಧಿಸದಿದ್ದಲ್ಲಿ ಇದರಿಂದ ನಿನಗಾವ ನಿಶ್ಚಿಂತತೆ, ಎಲೆ ಮನವೆ ನೀನಾವಾಗ ಸೋತೆ, ನಾಚಿದೆ, ಶಬ್ದಮುಗ್ಧವಾದೆ.

ನಿನ್ನ ಸಾಹಸ ಬಿಟ್ಟೆ, ಪ್ರಯತ್ನವ ಬಿಟ್ಟೆ ಆವಾಗಳ ನಿರ್ವಾಣ ಪದವು ಸ್ವತಃ ಸಿದ್ಧವಹುದು ಎಂಬುದು ನಿನ್ನಿಂದ ನೀನೆ ಅರಿ ಎಂದು ಮನಸ್ಸಿಗೆ ಬೋಧಿಸಿದ ಪ್ರಭುವಿನ ಪ್ರಸಾದವಾಣಿ ನಮ್ಮಗಳ ಉತ್ಥಾನವು. ಇದು ಕಾರಣ ಬಹು ಸಾಧಕರು ಪ್ರಭುವಿನ ಸುಭೋದವ ದಕ್ಕಿಸಿಕೊಳ್ಳುವದು ಲಕ್ಷಕ್ಕೊಬ್ಬರು ಕೋಟಿಗೊಬ್ಬರು ಏಕೆಂದರೆ ಮನದ ಪೂರ್ವಾಶ್ರಯ ನಷ್ಟಮಾಡಿ ನಿಜದಿರುವು ತಿಳಿಸಿಕೊಡುವದು ಅಷ್ಟು ಸುಲಭ ಕಾರ್ಯವಲ್ಲವೆಂದು ಹೇಳಿಹರು. ಘನವರಿಯದು ಘನ ಆವುದು ಗೊತ್ತೆ?

ಘನವದು ಅರಿದರುಹಿಸಿಕೊಂಬುದಕ್ಕೆ ಮೀರಿದ ಘನ ಅದು ಅರಿಸಿಕೊಳ್ಳುವ ನಾಮರೂಪವು ಆಗದ್ದು, ಇತ್ತ ಅರಿವ ದೃಶ್ ರೂಪವು ಆಗದ್ದು. ಘನವದು ನಿರಂತರವಾಗಿಹ ಮಂಗಲಮಯ ತತ್ವವೆ ಘನವು, ಅರಿಯಬಾರದ ಘನವು. ಇದು ಕಾಣಬಾರದ ಘನ, ವಾಙ್ಮನಕ್ಕಗೋಚರ, ಕೃತಿಗಗೋಚರವಾದುದು, ಅದು ಘನವು. ಕಲ್ಪನಾರಹಿತವಾವುದು ಅದು ಘನವು. ಭಾವಕ್ಕಿಂಬಿಲ್ಲ, ಶಬ್ದ ಮೀಸಲು, ನುಡಿಗೆಡೆಯಿಲ್ಲ, ಎಡೆಗೆ ಕಡೆಯಿಲ್ಲ ಗುಹೇಶ್ವರ ಲಿಂಗ ವೇಧಿಸಲೊಡನೆ "ಅರಿಯಬಾರದ ಘನ ಅರಿದೆವರಿದೆವೆಂಬಿರಿ ಅರಿದ ಪರಿ ಎಂತು ಹೇಳಿರೆ ? ಅರಿದವರು ಅರಿದೆವೆಂಬರೆ ? ಅರಿಯಬಾರದ ಘನವರಿತವರು ಅರಿಯದಂತಿಪ್ಪರು ಗುಹೇಶ್ವರಾ" ಘನವೆಂದರೆ ಅರಿಯಬಾರದ ಘನವೆ. ಘನವು ಅದರ ಇರುವು ಅರಿಯದ ಇರುವು. ಅದೆಂತು ಅರಿವುದು "'ಆರು ಕೋಟಿ ಬ್ರಹ್ಮರು ಮಡಿವಲ್ಲಿ ನಾರಾಯಣಂಗೊಂದು ದಿನವಾಯಿತ್ತು. ನಾರಾಯಣರೊಂದು ಕೋಟಿ ಮಡಿವಲ್ಲಿ ರುದ್ರನ ಕಣ್ಣೆವೆ ಹಳಚಿತ್ತು. ಹಲವು ರುದ್ರರಳಿದಲ್ಲಿ ಕೂಡಲಸಂಗಮದೇವ ಅರಿಯಬಾರದ ಘನ" ಅವನೆಂತು ಅರಿವನು, ಅರಿಯಲಿಲ್ಲದ ಅರುವೆ ಆ ಘನದ ಇರುವು ಇರುವಲ್ಲಿ ಅವನೆಂತು ಅರಿವನು ಅರಿವ ಅರಿವ ಅರಿಯನು, ಅರುಹಿಸಿಕೊಂಬುದನ್ನು ಅರಿಯನು ದಿಟವು ಸಟೆಯ ಅರಿಯಬಹುದೆ ?

ಬಂಜೆ ಮಗನನ್ನು ಆರಾದರೂ ಅರಿತಿರಬಹುದೆ ? ಗಗನ ಕುಸುಮವ ಆರಾದರೂ ಕಂಡಿರಬಹುದೇ? ಹಾಗೆ ಅರಿಯಬಾರದ ಘನದೃಷ್ಠಿಯಲ್ಲಿ ಅರಿವ ಅರುಹಿಸಿಕೊಂಬ ಈ ಉಭಯಂಗಳು ಇಲ್ಲವಾದ್ದರಿಂದ ಇದ್ದುದೊಂದೆ

ಪರಮ ಸತ್ಯವು ಅದುವೆ ಅರಿಯಬಾರದ ಘನವು. ಇಂತಪ್ಪ ಮಹಾ ಘನವ ಗುರುಕರುಣೆಯಿಂದ ತಿಳಿವರು. ಅವರು ಅರಿವ ಅರುಹಿಸಿಕೊಂಬುದನ್ನು ಅರಿಯದಂತಿದ್ದು ಅರಿಯಬಾರದ ಘನವೆ ಆದುದರಿಂದ ಸಂಕಲ್ಪ ವಿಕಲ್ಪರೂಪ ಮನವರಿಯರು. ತೋರಬಾರದ ಘನವೆ ಆದುದರಿಂದ ಸಂಕಲ್ಪ ವಿಕಲ್ಪರೂಪ ಮನವರಿಯರು. ತೋರಬಾರದ ಘನವೆ ತನ್ನಿರುವಾಗಿಹ ಶರಣಂಗೆ ಮನವುಂಟೆ ಮರುಳೆ ಶಿವಯೋಗಿಗೆ ಎಂದು ಪ್ರಶ್ನಿಸಿಹರು. ಆರು ಕಲ್ಪಿತರು ಅವರ ದೃಷ್ಠಿಗೆ ಸಂಕಲ್ಪ ವಿಕಲ್ಪ ರೂಪ ಮನವು ಇದ್ದುದು ನಿಜ. ಕಲ್ಪನಾ ರಹಿತನೆ ತಾನಾದ ಮಹಾಂತಂಗೆ ಕಲ್ಪಿತರಾಗಿಹ ನರರು ಇಲ್ಲಿ ಸುರರು. ಇಲ್ಲಿ ದೇವಗಣ, ರುದ್ರಗಣ, ಪ್ರಮಥಗಣರಿಲ್ಲ, ಇತ್ತ ಸತ್ಯರು, ನಿತ್ಯರು ಮುಕ್ತರು ಎಂಬ ಮಹಾಮಹಿಮರು ಇಲ್ಲ, ಇದ್ದುದೊಂದೆ ಅರಿಯಬಾರದ ಘನವೊಂದೆ ಇದ್ದುದು ಅರಿವುಡೆ ತಾನೊಂದು. ಇದ್ದುದು ತಾನೆ ಘನವಾಗಿಹುದರಿಂದ ಮನವರಿಯದು ಎಂದು ಹೇಳಿಹರು.

ಗುಹೇಶ್ವರ ಲಿಂಗವ ನರಿವುಡೆ ಗೀತೆಯಲ್ಲಾ ಮಾತಿನೊಂದೊಳಗು : ಎಂದು ಬಿತ್ತರಿಸಿದುದು ನೋಡಿದಡೆ ಗುಹೇಶ್ವರ ಲಿಂಗವ ಅರಿತವರಾರು? ಅವರ ದಿವ್ಯ ದೃಷ್ಠಿಗೆ ಗೀತೆಯೆಲ್ಲಾ ಮಾತಿನೊಂದೊಳಗು.

'' ಲಿಂಗ ಒಳಗೊ? ಹೊರಗೋ? ಬಲ್ಲಡೆ ನೀವು ಹೇಳಿರೆ? ಲಿಂಗ ಎಡನೋ ಬಲನೊ? ಬಲ್ಲಡೆ ನೀವು ಹೇಳಿರೆ? ಲಿಂಗ ಮುಂದೊ ಹಿಂದೊ? ಬಲ್ಲಡೆ ನೀವು ಹೇಳಿರೆ? ಲಿಂಗ ಸ್ಥೂಲವೊ ಸೂಕ್ಷ್ಮವೊ? ಬಲ್ಲಡೆ ನೀವು ಹೇಳಿರೆ? ಲಿಂಗ ಪ್ರಾಣವೊ ಪ್ರಾಣ ಲಿಂಗವೊ ಬಲ್ಲಡೆ ನೀವು ಹೇಳಿರೆ? ಗುಹೇಶ್ವರ ಲಿಂಗವು.''

ಕುರುಹು ಉಂಟೆ ಮರುಳೆ ಲಿಂಗಕ್ಕೆ ತೆರಹು ಉಂಟೆ ಮರುಳೆ ಲಿಂಗಕ್ಕೆ ? ಎಲ್ಲೆಡೆಯೊಳು ಪರಿಪೂರ್ಣವಾದ ಪರಾತ್ಪರ ಲಿಂಗದ ನಿಲುವ ನರಿಯದೆ ''ಹುಸಿಯನೆ ಕಲ್ಪಿಸಿ ಹುಸಿಯನೆ ಪೂಜಿಸಿ ಹುಸಿ ಫಲ ಪದವ ನುಂಡು ಹುಸಿಯಾಗಿ ಹೋದವರ ಕಂಡು ನಸುನಗುತಿಪ್ಪನಯ್ಯ ನಮ್ಮ ಅಖಂಡೇಶ್ವರ '' ಖಂಡಿತವಲ್ಲದ ಅಖಂಡಿತ ಲಿಂಗ ತುದಿ ಮೊದಲಿಲ್ಲದ ಘನ, ಒಳ ಹೊರಗೆಂಬುದಿಲ್ಲದ ಸ್ವಯಂಜ್ಯೋತಿ ಲಿಂಗ, ಅದಕ್ಕೆ ಒಳಗೆಂದು ಹೇಗೆ ಹೇಳುವದು ಹೊರಗೆಂದು ಹೇಗೆ ಹೇಳುವುದು. ಎಲ್ಲೆಡೆಯೊಳು ಪರಿಪೂರ್ಣವಾದ ಪರಾತ್ಪರ ಲಿಂಗಕ್ಕೆ ಎಡನೆಂದು ಬಲನೆಂದು, ಮುಂದೆ ಎಂದು ಹಿಂದೆ ಎಂದು, ಸ್ಥೂಲವೆಂದು, ಸೂಕ್ಷ್ಮವೆಂದು, ಪ್ರಾಣವೆಂದು ಹೇಗೆ ಹೇಳುವುದು. ಅರಿವುಡೆ ಲಿಂಗಕ್ಕೆ ಲಿಂಗವಾಗಿಹ ಸ್ವಯಲಿಂಗ ತಾನಿದ್ದುದೆ ಗುಹೇಶ್ವರ ಲಿಂಗ. ಇದು ಕಾರಣ ತನ್ನ ತಾನರಿವುಡೆ ಗುಹೇಶ್ವರ ಲಿಂಗ ತಾನೆ. ಆಗ ಎಷ್ಟೋ ಗೀತೆಗಳೆಲ್ಲ ಅರಿಯಬಾರದ ಘನವರಿತವರು ಅರಿದಂತಿಪ್ಪರು ಎಂಬ ಮಾತಿನೊಂದೊಳಗು ಎಲ್ಲಾ ಗೀತೆಯು ಅರಿಯಬಾರದ ಘನವೆ ಗುಹೇಶ್ವರ ಲಿಂಗ. ಇಂತಪ್ಪ ಗುಹೇಶ್ವರ ಲಿಂಗವರಿತವರಿಗೆ ಗೀತೆಯೆಲ್ಲ ಮಾತಿನೊಂದೊಳಗು ಎಂದು ಹೇಳಿಹರು.

ವಚನ - 19

ಆರು ಪ್ರಣವದ ಕಡೆಯಕ್ಷರ ಚಿದಾಕಾಶದಂಗ ನೋಡಾ.
ಆರು ಪ್ರಣವದ ಮೂಲಾಕ್ಷರ ಚಿನ್ಮಯ ಮಂದಿರ ನೋಡಾ.
ಆರು ಪ್ರಣವದ ಮಧ್ಯ ನಾಲ್ಕಕ್ಷರ ಶಿವಶಕ್ತಿರೂಪು ನೋಡಾ.
ಆರು ಪ್ರಣವದ ಜಪವದು ಕಪಿಲಸಿದ್ಧ ಮಲ್ಲಿಕಾರ್ಜುನನ ಒಲುಮೆ ನೋಡಾ

ತಾತ್ಪರ್ಯ : ಆರು ಪ್ರಣವದ ಕಡೆಯಕ್ಷರ ಚಿದಾಕಾಶದಂಗ ನೋಡಾ:

ಆರು ಪ್ರಣವವೆಂದರೇನು? ಓಂಕಾರಕ್ಕಷ್ಟೇ ಪ್ರಣವವೆಂದು ಭಾವಿಸಿದ ಬಹು ಭಾವಿಕರು ಇರುವರು. ಓಂ ನಮಃಶಿವಾಯ ಎಂಬ ಆರು ಪ್ರಣವಂಗಳೆ ಎಂದು ತಿಳಿದವರು ವಿರಳ. ಶರಣ ಶರಣೆಯರದು ತೆರಹಿಲ್ಲದ ಲಿಂಗ. ಇದು ಭರಿತ. ಚೆನ್ನಾಗಿ ಬಲ್ಲವರಿಗೆ ಓಂ ಎಂಬ ಪ್ರಣವವು ಪೂರ್ಣವು. ಇದು ಪೂರ್ಣವಿದ್ದುದರಿಂದ ಶೃತಿಗಳು ಉಪನಿಷತ್‌ಗಳು ಓಂ ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದುಚ್ಯತೆ, ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವ ಶಿಷ್ಯತೆ ಓಂ ಶಾಂತಿಃ ಶಾಂತಿಃ ಶಾಂತಿಃ ಎಂದು ಹೇಗೆ ಸೂಚಿಸುವದೊ ಹಾಗೆಯೆ "ನ ಮಃ ಶಿ ವಾ ಯ" ಪೂರ್ಣದಿರುವನ್ನು ಸೂಚಿಸುವದರಿಂದ ಅಕ್ಷರವೆಂದು ಹೇಳಿಹರು. ಅಕ್ಷರವದು ಅವಿನಾಶಿಯ ಘನವ ಸೂಚಿಸುವದು.

ಆರು ಪ್ರಣವದ ಕಡೆಯಕ್ಷರ ಚಿದಾಕಾಶದಂಗ ನೋಡಾ. ಪ್ರಣವವದು ಕಡೆ ಮೊದಲಿಲ್ಲದ ಘನ. ಆದಿ ಮಧ್ಯ ಅವಸಾನವನರಿಯದ್ದರಿಂದ ಅನಾದಿ ಅನಂತ ಅಪಾರ ಅಪ್ರತಿಮಅಗಮ್ಯವೆಂದು ಹೇಳಬಹುದು. ಆರು ಪ್ರಣವದ ಕಡೆಯಕ್ಷರ ಯ ಆಗಿದೆ "ಯ" ಎಂಬುದು ಚಿದಾಕಾಶದ ಅಂಗ ನೋಡಾ ಎಂದು ಹೇಳುವಲ್ಲಿ ಚಿದಾಕಾಶವದು ಚಿದ್. ಇದು ಜ್ಞಾನ ಸ್ವರೂಪ, ಅರು ಸ್ವರೂಪ, ಇದು ಗಗನದಂತಿರುವ ಜ್ಞಾನ ಘನದ ಅಂಗ. ವ್ಯಾಪಕ ಅಂಗ ಭರಿತ ಅಂಗ ಅರುವಿನ ಅಂಗ ಸಕಲ ಚರಾಚರ ಜಗವೆಲ್ಲವು ಚಿದಾಕಾಶದ ಅಂಗ ಚೈತನ್ಯದ ಸತ್ತೆಯು ಸಕಲ ಅಂಗಾಂಗಳು ಎಂದು ಹೇಳಿದೆ ಇದುವೆ ಆರು ಪ್ರಣವದ ಕಡೆಯಕ್ಷರ 'ಯ' ಎಂದು ಹೇಳಿದೆ.

ಆರು ಪ್ರಣವದ ಮೂಲಾಕ್ಷರ ಚಿನ್ಮಯ ಮಂದಿರ ನೋಡಾ :

ಆರು ಪ್ರಣವದ ಮೂಲಾಕ್ಷರವದು ಓಂ. ಇದು ಜ್ಞಾನಸ್ವ ರೂಪ. ಅರಿವುಡೆ ಚಿನ್ಮಯ ತಾನೆ. ಚಿನ್ಮಯವದು ಘನಕ್ಕೆ ಘನ. ಉಪಮಿಸಲಳವಲ್ಲ, ಅರಿವುಡೆ ತಾನೆ ಮಯವು. ತಾನು ಕೇವಲ ಅರುವು, ಅರಿಯಬಾರದ ಘನ, ತೆರಹಿಲ್ಲದಭವ, ಅರಿಯಲಿಲ್ಲದ ಅರುವು ಇದುವೆ ನಿಜದಿರುವು.

ಇದು ಸ್ವಸುಖದ ಮಂದಿರ. ನಿಷ್ಪತ್ತಿ ನಿಲಯ. ನೆಲೆಯಿಲ್ಲದ ನಿಲುವು. ಇದು ಆಧಾರ ಆಧೇಯವೆಂಬುದಕ್ಕೂ ಮೀರಿದುದು. ಅಗಣಿತನ ಗಣಿತವ ಮಾಡುವದದೆಂತು ? ಸ್ವಸುಖವು ಕರಣಂಗಳ ಮಾಪಿಗೆ ಮೀರಿದುದು. ಕಾರಣ ನೆನೆಯಲರಿಯೆ, ನಿರ್ಧರಿಸಲರಿಯೆ, ಧ್ಯಾನಾತೀತ ತಾನೆ ಯಾಯಿತ್ತಾಗಿ ಉಪಮಿಸಲರಿಯೆ. ಅರಿಯಬಾರದ ಘನವ ನೆನೆಯುವದದೆಂತು? ನಿರ್ಧರಿಸುವದದೆಂತು? ಧ್ಯಾನಕ್ಕೆ ಮೀರಿದುದರಿಂದ ಧ್ಯಾನಾತೀತವೆಂದು ಹೇಳಿದುದು ತಾನೆ ಆದುದರಿಂದ ಉಪಮಿಸಲರಿಯೆ ಎಂದು ಹೇಳಿಹರು.

ಆರು ಪ್ರಣವದ ಮಧ್ಯ ನಾಲ್ಕಕ್ಷರ ಶಿವಶಕ್ತಿ ರೂಪು ನೋಡಾ:

ಆರು ಪ್ರಣವದ ಮಧ್ಯ ನಾಲ್ಕಕ್ಷರವದು 'ನಮಃ ಶಿವ' ಈ 'ನಮಃ ಶಿವ' ಎಂಬ ಪ್ರಣವವೆ ಶಿವ ಶಕ್ತಿರೂಪವೆಂದು ಹೇಳುವಲ್ಲಿ 'ನಮಃ' ಎಂಬುದೆ ಶಕ್ತಿ 'ಶಿವ' ಎಂಬುದೆ ಶಿವವದು ಸುಖ ಸುಖವದುಷ ಸ್ವರೂಪಧ ಸ್ವರೂಪವದುಷ ಸಮ ಪ್ರಕಾಶ ಸ್ವಯಂಜ್ಯೋತಿ ಶಿವಷ ಹಾಲು ಇದ್ದಲ್ಲಿ ರುಚಿ ಉಂಟು ಅಗ್ನಿ ಇದ್ದಲ್ಲಿ ಸುಡುವ ಶಕ್ತಿಯು ಉಂಟು, ಶಬ್ದವಿದ್ದಲ್ಲಿ ಅರ್ಥವು ಉಂಟು, ಅರ್ಥವಿದ್ದಲ್ಲಿ ಶಬ್ದವು, ಹೀಗೆ ಶಕ್ತಿ ಇದ್ದಲ್ಲಿ ಶಿವ, ಶಿವ ಇದ್ದಲ್ಲಿ ಶಕ್ತಿಯು. ಹಾಗೆ ಮಣ್ಣು ಮಣ್ಣಿನಲ್ಲಿರುವ ಶಕ್ತಿ. ಶಕ್ತಿ ಇದು ಇಚ್ಛಾಶಕ್ತಿ, ಕ್ರಿಯಾಶಕ್ತಿ, ಜ್ಞಾನಶಕ್ತಿ, ಇದುವೆ ಪರಾಶಕ್ತಿ ಲಿಂಗಾಂಗ ಸಾಮರಸ್ಯ ಜ್ಞಾನದ ಅಭಿಲಾಷೆಯೆ ಇಚ್ಛಾಶಕ್ತಿ. ಅದನ್ನು ಸದ್ಗುರು ಮುಖದ್ವಾರ ಪಡೆಯುವದೆ ಕ್ರಿಯಾಶಕ್ತಿ. ಪಡೆದುದನ್ನು ಇದ್ದಕ್ಕಿದ್ದಂತೆ ತಿಳಿಯುವದೆ ಜ್ಞಾನಶಕ್ತಿ. ಇವು ತುಪ್ಪದಂತೆ ಶಿವವದು ಕರಗಿದ ತುಪ್ಪದಂತೆ ಸಾರಭೂತ ಒಂದೇ ಆದರೂ ಘಟ್ಟಿಯಾದಂತಾಗಿ, ಕರಗಿದಂತಾಗಿ ಹೇಗೆ ತೋರುವುದೋ ಹಾಗೆ ಶಿವ ಶಕ್ತಿಯು ತನ್ನ ವಿನೋದವಾಗಿದೆ.

ಏಕೆಂದರೆ ಒಂದು ತೋರುವದಾಗಿ ಇನ್ನೊಂದು ತೋರಬಾರದ ಘನವಾಗಿದ್ದರೂ ಇದ್ದುದು ಅದುವೆ ಹಾಲು. ಹಾಲಿನಲ್ಲಿರುವ ಮಾಧುರ್ಯ : ಹಾಲು ವ್ಯಕ್ತ, ಹಾಲಿನಲ್ಲಿ ಅಡಕವಾಗಿರುವ ರುಚಿ ಅವ್ಯಕ್ತ. ಹಾಗೆ ಇಚ್ಛಾಶಕ್ತಿ, ಕ್ರಿಯಾಶಕ್ತಿ, ಜ್ಞಾನಶಕ್ತಿ ವ್ಯಕ್ತ. ಇದರಿಂದ ಪ್ರಕಟವಾದ ಪರಮಾನಂದ ರೂಪ ಅಚಿಂತ್ಯ ಪದವು ಅವ್ಯಕ್ತವು ಇದುವೆ ನಮಃ ಶಿವಾಯ ಎಂಬ ನಾಲ್ಕಕ್ಷರದ ಮಹಿಮೆಯು. ಆರು ಪ್ರಣವದ ಜಪವದು ಕಪಿಲಸಿದ್ಧ ಮಲ್ಲಿಕಾರ್ಜುನನ ಒಲುಮೆ ನೋಡಾ : ಆರು ಪ್ರಣವದ ಜಪವದು ಕಪಿಲಸಿದ್ಧ ಮಲ್ಲಿಕಾರ್ಜುನನ ಒಲಿಸಿಕೊಳ್ಳುವ ಮಹಾ ಔಷಧವು. ಈ ದಿವ್ಯ ಔಷಧದ ಉಪಯೋಗ ಎಷ್ಟು ಭಕ್ತರು ವಶ ಮಾಡಿಕೊಂಡಿಹರು? ಅದೆಷ್ಟೋ ಭಕ್ತರಿಗೆ ದೇವನ ಒಲಿಸಿಕೊಳ್ಳುವುದಾಗಿಲ್ಲ. ಹೀಗಾಗಲು ಕಾರಣವೇನು ? ಆವ ಭಕ್ತರು ಆರು ಪ್ರಣವದ ರಹಸ್ಯ ವನ್ನು ಅನನ್ಯ ಭಕ್ತಿ, ಅಪಾರ ಶ್ರದ್ಧೆಯಿಂದ, ಗುರುದೇವನ ಒಲಿಸಿಕೊಂಡು ತಿಳಿದಿಹರೊ ತಿಳಿದುದಲ್ಲದೆ ಜಪಿಸಿಹರೊ ಅವರಿಗೆ ದೇವನ ಒಲುಮೆಯಾಗಿದೆ. ತತ್ವದ ಒಲುಮೆಯಾಗಿದೆ. ತತ್ವ ಬಲ್ಲವರಾಗಿ ನಿಶಬ್ಧವೇದಿಗಳಾಗಿಹರು. ಅದು ಗುರು ಕಾರುಣ್ಯದ ಹಿರಿಮೆಯೆಂದು ತಿಳಿವುದು.

'ಆರು ಪ್ರಣವ'ದ ರಹಸ್ಯವನ್ನು ಅನನ್ಯ ಭಕ್ತರಾಗಿ ಗುರು ದೇವನನ್ನು ಒಲಿಸಿಕೊಳ್ಳದೆ ಆ ಗುಟ್ಟು ತಿಳಿದವರಾಗಿರುವುದಿಲ್ಲವೊ ಅವರು ಶಬ್ದವೇದಿಗಳಾಗಿಹರು. ಅವರ ಹೃದಯದಲ್ಲಿ 'ಆರು ಪ್ರಣವ' ತತ್ವದ ಗುಟ್ಟು ಬೆಳಗಿರುವುದಿಲ್ಲವೆಂದು ತಿಳಿದಿರುವುದು. ಆವದೇ ಹೃದಯ ಒಲಿದು ಒಲಿಸಿಕೊಳ್ಳಬೇಕು, ಒಲಿದಲ್ಲದೆ ಇಲ್ಲ. "ಹಲವು ಕೊಂಬೆಗೆ ಹಾರದಿರು ಮರುಳೆ ಅಟ್ಟಿ ನೋಡುವ ತಟ್ಟಿ ನೋಡುವ ಮುಟ್ಟಿ ನೋಡುವ ಒತ್ತಿ ನೋಡುವ ಅಟ್ಟಿದಡೆ ತಟ್ಟಿದಡೆ ಮುಟ್ಟಿದಡೆ ಒತ್ತಿದಡೆ ನಿಷ್ಠೆ ಬರದಿರ್ದಡೆ ತನ್ನನ್ನೀವ ಮಹಾ ಕಲ್ಲೇಶ್ವರ" ಎಂಬ ಶರಣರ ಅಭಿಮತದಂತೆ "ತನುವ ಕೊಡುವಡೆ ಗುರುವಿನದದು, ಮನವ ಕೊಡುವುಡೆ ಲಿಂಗದ್ದದು, ಧನ ಕೊಡುವುಡೆ ಜಂಗಮದ್ದದು, ಅವರ ಪದಾರ್ಥವ ಅವರಿಗೆ ಕೊಟ್ಟು ಭಕ್ತನಾದೆನೆಂಬುದು ಹಿರಿಯ ತನದ ಕೇಡು ಎಂಬ ಸದ್ಭಾವ ಸದು ಹೃದಯ ಆವಲ್ಲಿ ಧೃಡವಾಗಿದೆ ಅಲ್ಲಿಯೇ ಗುರುದೇವನ ಕೃಪಾ ದೃಷ್ಟಿಯು. ಸುಜ್ಞಾನವು. ಭಕ್ತನ ಮರವರವನ್ನು ಅಟ್ಟಿ ತಟ್ಟಿ ಅರಿಯಬಾರದ

ಘನವಾಗಿಹ ತತ್ವದಿರುವು ಮುಟ್ಟಿ ತೋರಿಸಿಹನು. ತನ್ನ ಕರುಣಾರಸದಿಂದ ಒತ್ತೊತ್ತಿ ಭಕ್ತನ ಅನುಭವಕ್ಕೆ ಬರುವಂತೆ ಬೇಸರವಿರದ ಕೃಪೆ ಗೈದಲ್ಲಿ ಏನೆಂದೆನ್ನದ ಮುನ್ನ ತಾನಾದ ತನ್ನಿರುವು ಪ್ರಜ್ವಲಿಸಿಹದು. ಇದು ಆರು ಪ್ರಣವದ ಜಪವದು ಕಪಿಲಸಿದ್ದ ಮಲ್ಲಿಕಾರ್ಜುನನ ಒಲುಮೆ ನೋಡಾ ಎಂದು ಹೇಳಿಹರು.

ಕಪಿಲ ಸಿದ್ದ ಮಲ್ಲಿಕಾರ್ಜುನ ಒಲುಮೆ, ಅದು 'ಆರು ಪ್ರಣವ' ಜಪಿಸಿದ ಫಲವದು 'ಆರು ಪ್ರಣವ' ದ ಕಡೆಯ ಅಕ್ಷರ ಚಿದಾಕಾಶದ ಅಂಗವಾದಲ್ಲಿ ಸಹಿತ ಅಖಿಲ ಪ್ರಪಂಚ ಚಿದಾಕಾಶದ ಅಂಗವಾಯಿತ್ತು ಇದ್ದುದೊಂದೆ ಚಿನ್ಮಯ. ಎಲ್ಲಿ ನೋಡಿದಡಲ್ಲಲ್ಲಿ ಚಿನ್ಮಯ ಪ್ರಸಿದ್ದವಾಯಿತ್ತು. ನಡುವಿನ ನಾಲ್ಕಕ್ಷರ 'ಶಿವ ಶಕ್ತಿ' ಎಂದಲ್ಲಿ ಇದು ಚಿನ್ಮಯದ ವಿನೋದ, ಚಿದಾಕಾಶದ ವಿನೋದ, ಶಕ್ತಿಯಾಗಿ ತೋರಿದರೂ ಅದುವೇ, ಶಿವನಾಗಿ ತೋರಿದರೂ ಅದುವೇ. ಕ್ರಿಯಾ ಶಕ್ತಿ ಇಚ್ಛಾಶಕ್ತಿ ಜ್ಞಾನಶಕ್ತಿಯಾಗಿ ತೋರಿದರೂ ನುಡಿಗೆಡೆಗೊಡದ ಘನವು. ಕೇವಲ ಅರುವಾಗಿ ಜ್ಞಾನ ಸ್ವರೂಪವಾದರೂ ನುಡಿಗೆಡೆಗೊಡದ ಘನವು. ಎಂಬುದು ತನ್ನ ಹೃದಯಕ್ಕೆ ವೇದ್ಯವಾಗಿ ಅನುಸಂದಾನ ಮಾಡು, ನಂತರ ಗುರು ಕಾರುಣ್ಯದ ಅರಿವು ಆಗಿ "ಓಂ ನಮಃ ಶಿವಾಯ" ವದು ಎಲ್ಲಾ ಮಂತ್ರದಂತೆ ಇದಲ್ಲ, ಇದು ಸಕಲ ಜೀವಿಗಳ ತನ್ನಂತೆ ಮಾಡುವ ಮಹವು. ಎಂಬುದು ತನ್ನಿಂದ ತನಗೆ ಸಿದ್ಧವಾಗಿ ತನ್ನ ಅಂಗಾಂಗಗಳ ಕ್ರಿಯೆ ಶಕ್ತಿಯ ಕ್ರಿಯೆಯಾಗಿ, ತನ್ನಂಗವು ಶಿವಮಯವಾಗಿ, ಜ್ಞಾನಮಯವಾಗಿ ಕಂಡುದೆ, ದೇವನ ಒಲುಮೆಯೆಂದು ತಿಳಿವುದು.

ವಚನ - 20

> **ಯಥಾಃ ಷಡಕ್ಷರಂ ಮಂತ್ರಂ ದೇವ್ಯೆ ದೇವ ಸಮೀರಿತಂ**
> **ಎಂದ ಬಳಿಕ ಷಡಕ್ಷರವೆಂಬುದು ಶಿವಮಂತ್ರ**
> **ಪಂಚಾಕ್ಷರವು ಶಕ್ತಿಮಂತ್ರ ಇದರಂತುವನರಿಯಬಲ್ಲಡೆ ಗುರುವಿನಿಂದಲ್ಲದೆ**
> **ಪರನರರಿಂದಾಗದು ನೋಡಾ ಕಪಿಲಸಿದ್ದ ಮಲ್ಲಿಕಾರ್ಜುನ**

ತಾತ್ಪರ್ಯ : ಷಡಕ್ಷರಿ ಮಂತ್ರವಾಗಲಿ ಪಂಚಾಕ್ಷರಿ ಮಂತ್ರವಾಗಲಿ ಇವುಗಳ ನಿಜ ಜ್ಞಾನವು ಗುರುವಿನಿಂದಾಗುವುದು. ಇವುಗಳ ನಿಜ ಜ್ಞಾನವಾಗದ್ದರಿಂದ ಸೀಮಿತ ದೃಷ್ಠಿ ಸೀಮಿತ ಜ್ಞಾನವಾಗಿ, ಷಡಕ್ಷರಿ ಶಿವಮಂತ್ರವಾಗಿ, ಪಂಚಾಕ್ಷರಿ ಶಕ್ತಿ ಮಂತ್ರವಾಗಿ ತೋರಿತ್ತು. ಶ್ರೀ ಗುರುವಿನಿಂದ ತಿಳಿಯುವುದೆ ಅಕ್ಷರೋತ್ತಮದ ಅರಿವು ತನ್ನಿಂದ ತನಗೆ ಉದಯವಾಗಿ, ಪಂಚಾಕ್ಷರಿ ಎಂಬ ಶಕ್ತಿ ಮಂತ್ರವಾಗಲಿ, ಷಡಕ್ಷರಿ ಎಂಬ ಶಿವಮಂತ್ರವಾಗಲಿ ಸಮವಾಗಿ ಕಾಣುವನು. ಅದು ನಿಜವಾದ ಅರಿವು ಎನಿಸುವುದು.

ಷಡಕ್ಷರಿ ಮಂತ್ರವಾಗಲಿ, ಪಂಚಾಕ್ಷರಿ ಮಂತ್ರವಾಗಲಿ ಇವುಗಳನ್ನು ಶ್ರೀಗುರು ಏಕೆ ಬೋಧಿಸಿದ ? ಇವುಗಳಲ್ಲಿ ಅಂತರ್ಗತವಾದ ಜ್ಞಾನ ಅರಿವು ತಿಳಿಯುವುದೆ ನಾಮರೂಪಂಗಳ ಭ್ರಾಂತಿ ನಷ್ಟವಾಗಲು ಪಂಚಾಕ್ಷರಿ ಷಡಕ್ಷರಿ ಹೇಳಿದುದಲ್ಲದೆ, 'ತತ್ವ ಮಸಿ' ಮಹಾ ವಾಕ್ಯಾದಿಗಳ ಹೇಳಿದರು. ಈ ಮಹಾ ವಾಕ್ಯಂಗಳು ಮಹಾ ಶಕ್ತಿಯುತವಾಗಿಹವು. ಇವುಗಳಲ್ಲಿ ಭ್ರಾಂತಿ ನಷ್ಟ ಮಾಡುವ ಕ್ರಿಯಾ ಶಕ್ತಿ ಇದೆ. ಜೀವ ಶಿವ ರೇಕತ್ವ ಸಿದ್ಧ ಮಾಡುವ ಜ್ಞಾನ ಶಕ್ತಿಯಿಂದ

ಉಕ್ತವಾಗಿಹವು. ತ್ವಂಪದ ತತ್ವದ ವಾಚ್ಯಭಾಗ ನಿರಸನ ಮಾಡಿ ಲಕ್ಷ್ಯಭಾಗವಾಗಿಹ ಏಕತ್ವದರಿವು ಸಿದ್ದಿಸುವುದರಿಂದ ಶಕ್ತಿ ಮಂತ್ರವಾಗಿದೆ. ಏಕತ್ವದರುವಿನ ಜ್ಞಾನ ಬಲದಿಂದ ಇಲ್ಲದ ಜೀವದ ಅಲ್ಪಜ್ಞ, ಇಲ್ಲದ ಮಾಯಿಕ ಶಿವನ ಸರ್ವಜ್ಞತ್ವ ಇಲ್ಲ ಮಾಡಲು ಏಕತ್ವದರುವು ಅಂತರಂಗದಲ್ಲಿ ದೃಡವಾಗಿರಬೇಕು. ಜೀವ ಶಿವ ರೇಕತ್ವ ಮಾಡಿ ಸಚ್ಚಿದಾನಂದ ಸಿದ್ದ ಮಾಡಲು ಜ್ಞಾನಶಕ್ತಿ ಅವಶ್ಯಕವಾಗಿ ಬೇಕು.

ಜ್ಞಾನ ಶಕ್ತಿಯೇ ನಿಜವಾದ ಶಕ್ತಿ. ಇದು ತಾನಾರೆಂಬ ತನ್ನ ನಿಜದಿರುವ ತೋರಿಸುವ ಜ್ಞಾನ ಶಕ್ತಿ. ಇದುವೇ ''ನಮ್ಮ ಶಿವಾಯ'' ಇದುವೇ ''ತ್ವಂ ತತ್ ಅಸಿ,'' ಇದು ಬೋಧ ಶಕ್ತಿ. ಈ ಬೋಧಶಕ್ತಿಗಿಂತಲೂ ಮೀರಿದ ಘನವು ತನ್ನಿಂದ ತನಗೆ ಸಿದ್ದವಾಗಿಹ ಘನ ವೇದ್ಯವಾದುದು. ಅದು ತನ್ನಯ ಇರುವಾಗಿಹ ಸಮತತ್ವವು. ಇದುವೇ ಕಿವಿಗೆ ಕೇಳದ ಶಿವಮಂತ್ರ. ಬೇಧಿಸಬಾರದಿಪ್ಪ ಅಭೇದ್ಯ ಶಿವ. ಇದು ತನ್ನಯ ಇರುವುಳ್ಳ ಅರಿವು ತಾನೆ. ಇದ್ದುದು ತಾನೊಂದೆ ತನಗಿಂತನ್ಯ ಆವಾವುದು ಇಲ್ಲ, ಒಳಗೂ ತಾನೆ ಹೊರಗೂ ತಾನೆ. ಸುಮ್ಮನೆ ಹೇಳುವುದಕ್ಕಾದರೂ ನಾಮ ರೂಪಂಗಳಿಲ್ಲ.

ತನ್ನೊಡನೆ ಸೇರಿರುವ ಸಮಾನ ವಸ್ತುವಿಲ್ಲ ತನಗಿಂತ ಭಿನ್ನವಾಗಿರುವ. ವಸ್ತುವು ಇಲ್ಲ ಶಿವನೆಂದರೆ ತಾನು ತಾನೆಂದರೆ ಶಿವ ಈ ಶಿವಮಂತ್ರವೇ ಸೋಹಂ ಎಂಬುದೇ ಓಂ ಓಂ ಎಂಬುದೇ ಜ್ಞಾನ ಸ್ವರೂಪ ಅರಿವುಡೆ ತಾನೆ ಮಯವು. ತನ್ನಿರುವು ತಾನೆ ಅರಿವಿಂಗರುವು ಅರಿಯಬಾರದ ಘನ. ಇದುವೇ ತನ್ನಯ ಮಹದರುವು, ಮಹಾ ಜ್ಞಾನವು. ಇಂತಪ್ಪ ಮಹದರಿವು ತಾನಾಗಿರುವದರಿಂದ ಪಂಚಾಕ್ಷರವು ತನ್ನಿಂದ ಸಿದ್ಧವಾಗುವುದು, ಷಡಕ್ಷರಿ ಮಂತ್ರವು ತನ್ನಿಂದ ಸಿದ್ದವಾಗುವುದು. ಇದಲ್ಲದೆ 'ತತ್ವಮಸಿ' ಮಹಾವಾಕ್ಯಂಗಳು ತನ್ನಿಂದ ಸಿದ್ಧವಾಗುವವು. ತಾನು ಶೃತಿಗಗೋಚರನಾದುದರಿಂದ ಶೃತಿಗಳೆಲ್ಲವು ನನ್ನಿಂದ ಸಿದ್ದವಾಗುವವು. ನನ್ನನ್ನು ಇವಾವು ಸಿದ್ಧಮಾಡವು. ಗುರು ಲಿಂಗ ಜಂಗಮ ಪ್ರಸಾದ ಇವುಗಳು ಕೂಡಾ ನನ್ನಿಂದ ಸಿದ್ದವಾಗುವವು. ಏಕೆಂದರೆ ಇವು ಹೆತ್ತರಿವು ಆಗಿಹುದರಿಂದ ನಾನೇ ಸ್ವಯಂಜ್ಯೋತಿ ಲಿಂಗವಾಗಿದ್ದರೂ, ಜ್ಯೋತಿ ಲಿಂಗ ಎನಲಿಲ್ಲವಾದ್ದರಿಂದ ಶಬ್ದಮುಗ್ಧ ನಾನೆ.

ವಚನ - 21

ಶಿವಾ ಭವಾನಿ ರುದ್ರಾಣಿ ಶಿವೋ ಮಹೇಶ್ವರಃ ಶಂಭುಃ ಎಂಬಲ್ಲಿ ನಮ್ಮಮ್ಮನ
ಶಿವನ ನಾಮ ಒಂದೇ ನೋಡಾ. ವಿವೇಕ ದೃಷ್ಠಿಯಿಂದ ನೋಡಿದಡೆ
ಅದು ಶಿವನ ಶಕ್ತಿಮಂತ್ರವಾಗಿ ಅರಿಯಬಂದಿತ್ತು.
ಓಂ ನಮಃ ಶಿವಾಯ ನಮಃ ಶಿವಾಯಯ್ಯೆ
ಎಂಬ ಉಭಯ ಮಂತ್ರ ಒಂದೇ ನೋಡಾ ಕಪಿಲಸಿದ್ದ ಮಲ್ಲಿಕಾರ್ಜುನ.

ತಾತ್ಪರ್ಯ : ಶಿವಾ ಭವಾನಿ ರುದ್ರಾಣಿ ಶಿವೋ ಮಹೇಶ್ವರಃ ಶಂಭುಃ :
ನಮ್ಮಮ್ಮನ ನಾಮ ಶಿವನ ನಾಮ ಒಂದೇ ನೋಡಾ. ಬಹು ಜನ್ಮಂಗಳಲ್ಲಿ (ಅಮ್ಮನೆಂಬುದು) ಶಕ್ತಿ ನಾಮ ಬೇರೆ ಶಿವ ನಾಮ ಬೇರೆಂಬ ಬೇಧ ಜ್ಞಾನಿಗಳುಂಟು, ಭಾವುಕರು ಉಂಟು, ಭಕ್ತರು ಉಂಟು. ಅವರವರ ಮತಿಗನುಸಾರವಾಗಿ ಜ್ಞಾನವೂ ಉಂಟು.

ಇದು ಮರುವಿನಲ್ಲಿ ಆಗುವ ಕಾರ್ಯ, ಗುರು ಕಾರುಣ್ಯವಾಗದ ಹೃದಯ. ಗುರು ಕಾರುಣ್ಯಮಯನಾಗಿಹ ಸುಜ್ಞಾನಿ ಸಿದ್ದರಾಮ ಶಿವಯೋಗಿಯು. ಮರುವು, ಮರುವಿನ ಕಾರ್ಯವಾಗಿಹ ಬೇಧ ಜ್ಞಾನ ಹೊಡೆದೋಡಿಸಲು ಸಿದ್ದರಾಮ ಶಿವಯೋಗಿಗಳು ಸೀಮಿತ ಜ್ಞಾನ, ಸೀಮಿತ ಭಾವ, ಸೀಮಿತ ಭಕ್ತಿ ಕೆಡಿಸಿ, ಇವುಗಳಿಗೆ ಒಪ್ಪಿಕೊಂಡಿರುವ ಸಾಂಪ್ರದಾಯ ಕೆಡಿಸಿ, ನಿಸ್ಸೀಮತ್ವ ಕರುಣಿಸಿಹನು.

ಶಿವ ಭವಾನಿ ರುದ್ರಾಣಿ ಎಂದರೆ ಒಂದೇ. ಶಿವೋ ಮಹೇಶ್ವರ ಶಂಭುಃ ಎಂದರೂ ಒಂದೇ. ನಮ್ಮಮ್ಮ ಎಂದರೂ ಒಂದೇ, ಶಿವ ಎಂದರೂ ಒಂದೇ. ಇವೆಲ್ಲವೂ ವಾಕಶಕ್ತಿ, ಸರಸ್ವತಿ ಶಕ್ತಿಯಿಂದ ಹೊರಬಂದವುಗಳು. ಅಧಿಷ್ಠಾನದಲ್ಲಿ ತೋರುವ ಕಲ್ಪಿತ ಅಧಿಷ್ಠಾನವಲ್ಲದೆ ಅನ್ಯವಲ್ಲವೆಂಬ ಶೃತಿಗನುಸಾರವಾಗಿ ಇಲ್ಲಿ ವಾಕಶಕ್ತಿಯೇ ಅಧಿಷ್ಠಾನ. ಆ ಶಕ್ತಿಯಲ್ಲಿ ತೋರುವ ಅಖಿಲ ನಾಮರೂಪ ವಾಕ್‌ಶಕ್ತಿಯಲ್ಲದೆ ಅನ್ಯವಿಲ್ಲ. ಮಣ್ಣಿನಲ್ಲಿ ತೋರುವ ನಾನಾ ಘಟಗಳು ಮಣ್ಣಲ್ಲದೆ ಅನ್ಯ ಹೇಗಲ್ಲವೋ, ಹಾಗೆ ವಾಕ್ ಶಕ್ತಿಯಲ್ಲಿ ತೋರುವ ಶಿವ ನಾಮವಾಗಲಿ, ಶಕ್ತಿಯ ನಾಮವಾಗಲಿ ಒಂದಲ್ಲದೆ ಎರಡಲ್ಲ. ವಿವೇಕ ದೃಷ್ಠಿಯಿಂದ ನೋಡಿದಲ್ಲಿ ಅದು ಶಿವನ ಶಕ್ತಿ ಮಂತ್ರವಾಗಿ ಅರಿಯ ಬಂದಿತ್ತು ವಿವೇಕ ದೃಷ್ಠಿ ಒಂದು ನಾಶ ಮತ್ತೊಂದು ಅವಿನಾಶ ಒಂದು. ಜಡ ಒಂದು ಅಜಡ ಒಂದು, ದೃಶ್ಯ, ದೃಕ್ ಒಂದು ಹೀಗೆ ವಿಭಾಗ ದೃಷ್ಠಿಯಿಂದುಕ್ತವಾದುದು ವಿವೇಕದೃಷ್ಠಿಯಾಗದು. ಅರಿಯಬಾರದ ಘನದಲ್ಲಿ ಅರಿಯುವ ಅರುಹಿಸಿಕೊಂಬ ಈ ಉಭಯಂಗಳ ಅರಿಯದಂತಿದ್ದುದು ಅದು ವಿವೇಕ ದೃಷ್ಠಿ. ಇಂತಪ್ಪ ಸುಜ್ಞಾನದಿಂದುಕ್ತವಾಗಿಹ ವಿವೇಕ ದೃಷ್ಠಿಯಿಂದ ನೋಡಿದಲ್ಲಿ ಶಿವಶಕ್ತಿ ಮಂತ್ರವಾಗಿ ಅರಿಯ ಬಂದಿತ್ತು.

ಕಾರ್ಯ ಕಾರಣಗಳ ಕಲ್ಪಿಸಿ ನೋಡಿದಲ್ಲಿ, ಮಣ್ಣು ಕಾರಣ, ಘಟ ಕಾರ್ಯವಾಗಿ ಅರಿಯಬಂದಿತ್ತು. ಬಂಗಾರ ಕಾರಣ ಆಭರಣ ಕಾರ್ಯವಾಗಿ ಅರಿಯಬಂದಿತ್ತು. ಹಾಗೆ ಶಿವ ಕಾರಣನಾಗಿ ಶಕ್ತಿ ಕಾರ್ಯವಾಗಿ ಅರಿಯಬಂದಿತ್ತು. ಸರ್ವಜ್ಞತ್ವ ಕಾರ್ಯವಾಗಿ ಶಕ್ತಿಯೇ ಮಾಯೆಯಾಗಿ ಕಾರ್ಯವಾಗಿ ಅರಿಯಬಂದಿತ್ತು. ಶಿವನೇ ಕಾರಣನಾಗಿ ಜೀವನೆ ಕಾರ್ಯವಾಗಿ ಅರಿಯಬಂದಿತ್ತು. ವಿವೇಕ ದೃಷ್ಠಿಯಿಂದ ಇದ್ದುದನರಿಯದೆ ಇಲ್ಲದುದ ಕಲ್ಪಿಸಿದಲ್ಲಿ ಕಾರ್ಯಕಾರಣವೆಂಬ ವಿಭಾಗ ದೃಷ್ಠಿ ತೋರಿತ್ತು. ಸುಜ್ಞಾನದಿಂದ ಇದ್ದುದ ಅರಿಯಲು ಇಲ್ಲದುದ ಇಲ್ಲವಾಗಿ ಕಾರಣ ಕಾರ್ಯವೆಂಬ ಕಲ್ಪಿತ ನಿರಸನವಾಗಿ ನಿಸ್ಸೀಮತ್ವ ಸಿದ್ಧವಾಯಿತು.

ಅಜ್ಞಾನದಿಂದ ಅಧಿಷ್ಠಾನದಲ್ಲಿ ಕಲ್ಪಿತ ಕಲ್ಪಿಸಲು ನಾನಾ ಮುಖವಾಯಿತ್ತು. ಆ ಕಲ್ಪಿತನ ನಾನಾ ಮುಖವ ಸುಜ್ಞಾನದಿಂದ ಕೆಡಿಸಲು ಸುಜ್ಞಾನ ಅರಿವು ಅವಶ್ಯಕವಾಗಿ ಬೇಕು. ಇದ್ದ ವಸ್ತುವ ಇದ್ದಂತೆ ಅರಿವುದೆ ಸುಜ್ಞಾನ. ಅರಿದರುಹಿಸಿಕೊಂಬುದಕ್ಕೆ ಮೀರಿದ ಘನವಾವುದು ಅಂತಪ್ಪ ಅರಿಯಬಾರದ ಘನವರಿತು ಅರಿಯದಂತಿದ್ದುದೆ ಸುಜ್ಞಾನ. ಇಂತಪ್ಪ ಸುಜ್ಞಾನವ ವಿವೇಕ ದೃಷ್ಠಿಯಿಂದ ನೋಡಿದಲ್ಲಿ ಅದು ಶಿವಶಕ್ತಿ ಮಂತ್ರ ಒಂದೇಯಾಗಿ ಅರಿಯ ಬಂದಿತ್ತು.

ಮಣ್ಣು ಮಣ್ಣಿನಲ್ಲಿರುವ ಜಿಗಿ ಶಕ್ತಿ, ಮಣ್ಣಿಗಿಂತ ಹೇಗೆ ಅನ್ಯವಲ್ಲವೋ ಹಾಗೆ ಶಿವ ಶಿವನಲ್ಲಿರುವ ಶಕ್ತಿ ಶಿವನಿಗಿಂತನ್ಯವಲ್ಲ. ಅಧಿಷ್ಠಾನವಾಗಿಹ ಅರಿಯಬಾರದ ಘನದಲ್ಲಿ ಅರಿವ ಅರುಹಿಸಿಕೊಂಬ ಈ ಉಭಯಂಗಳು ಅರಿಯಬಾರದ ಘನವಲ್ಲದೆ ಅನ್ಯವಲ್ಲ. ಹಾಗೆ ಅರಿಯಬಾರದ ಘನವಾಗಿಹ ಅಧಿಷ್ಠಾನದಲ್ಲಿ ತನು ಇಂದ್ರಿಯಾದಿಗಳು ಪ್ರಾಣಾದಿ ಕರಣಂಗಳು

ಇತ್ತ ಸಾಕ್ಷಿ ಅಸಂಘ ದೃಕ್ ಪ್ರತ್ಯಗಾತ್ಮ ಪರಮಾತ್ಮನೆಂಬ ನಾನಾಭಾವಂಗಳು ತೆರಹಿಲ್ಲದ ಲಿಂಗ ಭರಿತವೆಂಬ ಅರಿಯಬಾರದ ಘನವಾಗಿ ಅಧಿಷ್ಟಾನವಲ್ಲದೆ ಮತ್ತೊಂದಲ್ಲವಾಗಿರುವಲ್ಲಿ ವಿಭಾಗ ದೃಷ್ಠಿ ಅರ್ಥಾತ್ ಅರಿವ ಅರುಹಿಸಿಕೊಂಬುದು ಸತ್ಯವಾದಲ್ಲಿ ಶಕ್ತಿ ರೂಪಾಗಿ ನಿಂದಿತ್ತು. ಅಧಿಷ್ಟಾನವನ್ನೇ ಮರೆತು ಕಲ್ಪಿತ ನಿಜವೆಂದು ತಿಳಿದಲ್ಲಿ ವಿವೇಕ ದೃಷ್ಠಿಯೇ ಅಳಿಯಿತ್ತು. ಆಗ ವಿವೇಕ ದೃಷ್ಠಿಯೇ ಶಕ್ತಿ ಮಂತ್ರವಾಗಿ ಅರಿಯಬಂದಿತ್ತು. ಭೇದ ಜ್ಞಾನ ತಲೆ ದೋರಿದ ಪರಿಣಾಮ ಪುನಃ ಗುರುವಾನುಗ್ರಹದಿಂದ ಸುಜ್ಞಾನ ದೃಷ್ಠಿಯುಳ್ಳವನಾಗಿ ನೋಡುವುಡೆ ಓಂ ನಮಃ ಶಿವಾಯ, ನಮಃ ಶಿವಾಯ ಎಂಬ ಉಭಯ ಮಂತ್ರ ಒಂದೆ ನೋಡಾ ಕಪಿಲಸಿದ್ದ ಮಲ್ಲಿಕಾರ್ಜುನ.

ನಮಃ ಶಿವಾಯ ಎಂಬ ತ್ವಂ ತತ್ ಅಸಿ ನೀನು ಎಂದು ಬೋಧಿಸುವ ಭೋದ ರೂಪ ಮಂತ್ರವಾಗಲಿ ಓಂ ನಮಃ ಶಿವಾಯ ಎಂಬ ಮಹಾಘನವೇ ಆಗಲಿ ತನ್ನಿಂದ ತನ್ನನರಿದು ತನ್ನನ್ನೇ ನೋಡುವ ತೆರಹಿಲ್ಲದ ಲಿಂಗ ಭರಿತವೆಂಬ ವ್ಯಾಪಕ ಅರು ಹೃದಯಮಾಡುವ ಘನ ಮಹಿಮೆಯುಳ್ಳ ಮಂತ್ರವಾಗಿರುವವು. ನಮಃ ಶಿವಾಯ ಎಂಬ ಲಿಂಗಾಂಗ ಸಮರಸ ಜ್ಞಾನ, ಓಂ ನಮಃ ಶಿವಾಯ ಎಂಬ ತೆರಹಿಲ್ಲದ ಮಹಾಘನವಾಗಿಹ ಅರಿಯಲಿಲ್ಲದ ಅರುವು, ತನ್ನ ನಿಜದೆಚ್ಚರಮಾಡುವ ಸೂಚಕ ಸೌಜ್ಞಯುಳ್ಳವುಗಳಾಗಿವೆ ಅಲ್ಲದೆ ಅನ್ಯವಲ್ಲ, ಇದುಕಾರಣ ಎರಡೆಂಬುದು ಒಂದು. ನಮಃ ಶಿವಾಯವೆ ಇರಲಿ ಷಡಕ್ಷರಿಯೇ ಇರಲಿ ತೆರಹಿಲ್ಲದ ಲಿಂಗ ಭರಿತವೆಂದರು ಅದುವೆ, ಲಿಂಗಾಂಗ ಸಮರಸವೆಂದರೂ ಅದುವೆ. ಇದ್ದುದು ಅದುವೆ ಇರುವಲ್ಲಿ ತೋರಬಾರದ ಘನದಲ್ಲಿ ತೋರುವುದೆಲ್ಲವು ತಾನೆ ಎಂಬುದು ನಿಶ್ಚಿತವಾದುದು. ಅದುವೇ ನಿಸ್ಸೀಮ ನಿಲುವು, ತನ್ನಯ ನಿಲುವು ತನ್ನ ಕಂಡ ಅಖಂಡಿತ ಘನ ಪೂರ್ಣವಪ್ಪ ತನ್ನಿರುವೆ ಅರುವೆಂದರಿದು ತನ್ನ ಕಂಡ ನಿಲುವು ಎಂದು ಹೇಳಿಹರು.

ವಚನ - 22

ಜಪವೆಂಬುದು ಪಾಪಕ್ಕೆ ಬಹು ತಾಪ ನೋಡಯ್ಯ,
ಜಪವೆಂಬುದು ಪುಣ್ಯದ ನಾಣ್ಯ ನೋಡಯ್ಯ.
ಜಪವೆಂಬುದು ಚನ್ನ ಬಸವನ ಪಾದದಲ್ಲಿಯೇ ಐಕ್ಯನೋಡಾ
ಕಪಿಲಸಿದ್ದ ಮಲ್ಲಿಕಾರ್ಜುನ.

ತಾತ್ಪರ್ಯ: ಜಪವೆಂಬುದು ಪಾಪಕ್ಕೆ ಬಹು ತಾಪ ನೋಡಯ್ಯ:

ಜಪ ಅದಾವ ಜಪ ಪಾಪವೆಂದರೇನು ಬಹು ತಾಪವಾವುದು? ಜಪ ಗುರು ಕಾರುಣ್ಯದಿಂದ ಲಭ್ಯವಾದ ಜಪ, ಮರವ ಅರಿವ ಹೊಡೆದೋಡಿಸುವ ಜಪ. ಜ-ಜನ್ಮಜಾಥಾ, ಪ-ಪವಿತ್ರ ಮಾಡುವ, ತಾನೆನ್ನುವುದೇ ಜಪ. ನಾ ನೀನೆಂಬುದಕ್ಕೆ ಎಡೆಗೊಡದ ಜಪ. ತೆರಹಿಲ್ಲದ ಲಿಂಗ ಭರಿತವೆಂಬ ಗುರುಕಾರುಣ್ಯದ ಜಪ. ವೇದ ವೇದಾಂತಗಳಿಗೆ ಅಸಾಧ್ಯವಾಗಿಹ ಅನುಪಮ ಲಿಂಗ ನೀನೆಂದು ಕರುಣಿಸಿದ ಜಪ, ಇದು ಪಾಪಕ್ಕೆ ಬಹು ತಾಪ ನೋಡಯ್ಯ.

ಅಂಗವನ್ನೆ ಲಿಂಗ ಮಾಡಿ ತೋರಿಸಿದ ಕಾರುಣ್ಯ. ಇಂದ್ರಿಯಂಗಳ ಶುಭಾ ಶುಭ ಕ್ರಿಯಂಗಳ ನಷ್ಟಮಾಡಿದ ಕಾರುಣ್ಯ, ಪ್ರಾಣಾದಿಗಳು ಹುಟ್ಟಿದುದು ಬದುಕಿದುದು ಸತ್ತದು

ಎಂಬ ಭಾವ ಭ್ರಮೆಯ ಕಳೆದು ಪ್ರಾಣಲಿಂಗಿಯ ಮಾಡಿದ ಕಾರುಣ್ಯ. ಕರಣಂಗಳ ಕಾರ್ಯಂಗಳ ಕೆಡಿಸಿ ಲಿಂಗ ಕಿರಣಂಗಳ ಮಾಡಿದ ಕಾರುಣ್ಯ. ಇದುವೇ ಪಾಪಕ್ಕೆ ಬಹು ತಾಪ ನೋಡಯ್ಯ ಎಂದು ಹೇಳಿಹರು. ಪಾಪ: ಮಾಂಸ ಪಿಂಡ ತಾನೆನ್ನುವುದೇ ಪಾಪ. ಅಣವ ಮಲ ಮಾಯಾ ಮಲ, ಕಾರ್ಮಿಕ ಮಲ ಈ ಮಲ ತ್ರಯಂಗಳುಳ್ಳ ದೇಹ ತಾನೆನ್ನುವುದೇ ದೇಹವದು ಷಡ್ವಿಕಾರ ಷಡ್ವಿಕಾರವುಳ್ಳ ಮಲಮಯ ದೇಹ ತಾನೆನ್ನುವುದೇ ಪಾಪ.

ದೇಹದ ವಿಕಾರಂಗಳೆ ತಾನೆಂದು ತನ್ನದೆಂದು ಚಿಂತೆ ಭಯ ಸಂತಾಪ ದುಃಖ ತನ್ನವಾಗಿ ಕೊರಗುವದೆ ಪಾಪ. ದೇಹದ ಸೊಕ್ಕುವಿಕೆ ಸೊರಗುವಿಕೆಯ ತನ್ನ ಮೇಲೆ ಆರೋಪಣೆ ಮಾಡಿಕೊಂಡು ಹಿಗ್ಗಿಕುಗ್ಗುಳ್ಳವನಾಗಿಹುದೇ ಪಾಪ. ಇಂದ್ರಿಯಂಗಳ ಶುಭಾ ಶುಭ ಕ್ರಿಯ ತಾನಾಗಿ ತನ್ನವಾಗಿ ತನ್ನ ಅತೀಂದ್ರಿಯ ತನವ ಮರೆತುದು ಮಹಾಪಾಪ. ಹೀಗೆ ಒಡಲ ಗುಣಂಗಳ ಕಾರ್ಯಕಂಡು ತನ್ನ ಮೇಲೆ ತಾನೆಂದು ಭ್ರಾಂತನಾಗಿ ರಾಗದ್ವೇಷಿಯಾಗಿ ಮಾನಾಪಮಾನ ಉಳ್ಳವನಾಗಿ ಲಾಭ ಹಾನಿ ಉಳ್ಳವನಾಗಿ ಸುಖ ದುಃಖಂಗಳ ಸುಳಿಗೆ ಸಿಕ್ಕು ದಿಗ್ಭ್ರಾಂತನಾಗಿ ತನ್ನ ಅಂತರಂಗದಲ್ಲಿ ತಾನು ಕುದಿಯುವುದು ಚಿಂತಿಸುವುದು, ಅಸಂತೋಷವೇ ತನ್ನ ನಿಲುವಾಗಿ ಹೃದಯ ಕಳವಳವುಳ್ಳದ್ದಾದುದೆ ಪಾಪ. ಇದುವೇ ಭವ ತಾಪವಾಗಿದೆ.

ಇಂತಹ ಭವ ತಾಪಕ್ಕೆ ಆವುದು ಬಹುತಾಪ ಕೊಡುವುದೇ ಜಪವಾಗಿದೆ. ಬೇಸಿಗೆಯ ಬಿಸಿ ತಾಪಕ್ಕೆ ಬಹುತಾಪ ಆವುದು ಕೊಡುವುದಾಗಿದೆ. ಆ ಮೇಘರಾಜನ ಕರುಣೆಯಾಗಿ ಮಳೆ ಸುರಿಯುವುದೆ ಬಿಸಿ ತಾಪಕ್ಕೆ ಬಹುತಾಪ ಕೊಡುವುದು ಮಳೆಯಾದಂತೆ. ಮಾನವ ಆದಿ ಭೌತಿಕ ತಾಪ, ಆದಿ ದೈವಿಕ ತಾಪ, ಆಧ್ಯಾತ್ಮ ತಾಪಗಳೆಂಬ ತ್ರಿವಿಧ ತಾಪಂಗಳಿಗೆ ಸಿಕ್ಕು ಒಂದಿಲ್ಲೊಂದು ಚಿಂತೆ ಭಯ ದುಃಖ ಸಂತಾಪದಿಂದ ಉಕ್ತವಾದ ತಾಪಕ್ಕೆ ಸದ್ಗುರುವೆಂಬ ಮೇಘರಾಜನ ಕರುಣೆ ತೋರಿ ತನ್ನ ಅರು ಹೃದಯದಿಂದ ಹೊರಹೊಮ್ಮಿಬರುವ ಸುಜ್ಞಾನಿರೂಪಿ ಮಳೆ ಸುರಿಯಲು ಅಂತಃಕರಣ ಸಮಾಧಾನ ಶಾಂತಿ ಕಾಣುವುದೇ ಪಾಪಕ್ಕೆ ಬಹುತಾಪಕೊಡುವ ಜ್ಞಾನಾಮೃತ ಧಾರೆಯೇ ಜಪವಾಗಿಹುದು. ಅಂಗದ ಮೇಲೆ ಲಿಂಗದ ಸಾಹಿತ್ಯವಾಗಿ ಅಂಗ ಭಾವ ನಷ್ಟವಾಗಿ ಲಿಂಗ ಭಾವ ಧರಿತ ಭಾವಿಯಾದುದೆ ಜಪ. ಕಂಡುದೆಲ್ಲ ಕೇಳಿದುದೆಲ್ಲ ಮುಟ್ಟಿದುದೆಲ್ಲ ಲಿಂಗವಾಗಿ ಕಂಡು ಭರಿತಭಾವಿಯಾದುದೆ ಜಪ. ''ಕಣ್ಗಳು ತುಂಬಿದ ಬಳಿಕ ನೋಡಲಿಲ್ಲ ಕಿವಿ ತುಂಬಿದ ಬಳಿಕ ಕೇಳಲಿಲ್ಲ ಕೈ ತುಂಬಿದ ಬಳಿದ ಹಿಡಿಯಲಿಲ್ಲ, ಮನ ತುಂಬಿದ ಬಳಿಕ ನೆನೆಯಲಿಲ್ಲ ಕೂಡಲಸಂಗಮದೇವಾ' ಎಂಬುದು ಜಪವೆಂಬುದು ಪಾಪಕ್ಕೆ ಬಹು ತಾಪ ನೋಡಯ್ಯ. ಜಪ ಮಾಡಿದರೆ ತೆರಹಿಲ್ಲದ ಲಿಂಗ ಭರಿತನೆಂಬ ಗುರುಕಾರುಣ್ಯದ ಸುಜ್ಞಾನರೂಪಿ ಮಂತ್ರ ಜಪಮಾಡು. ಇದು ಪುಣ್ಯದ ನಾಣ್ಯನೋಡಾ.

ಜಪವೆಂಬುದು ಪುಣ್ಯದ ನಾಣ್ಯ ನೋಡಯ್ಯ:

ಪುಣ್ಯದ ನಾಣ್ಯ, ಇದು ಗುರು ಕಾರುಣ್ಯದಿಂದುದಯಿಸಿದ ಪುಣ್ಯದ ನಾಣ್ಯ. ಅರಿವ ಅರಿಹೇಳಿ ಸದ್ಗುರುನಾಥ ಕುರುಹ ಕೈಯಲ್ಲಿ ಕೊಟ್ಟುದನ್ನು ಅರಿದರಿದು ನೋಡಿದ ಪುಣ್ಯದ ನಾಣ್ಯ ನೋಡಯ್ಯ. ಇದು ವೇದ ವೇದಾಂತಗಳಿಗಸಾಧ್ಯವಾಗಿಹ ಅನುಪಮ ಲಿಂಗ ತಾನಾಗಿಹ ಪುಣ್ಯದ ನಾಣ್ಯ. ನಾದ ಬಿಂದು ಕಲೆಗಳಿಗೆ ಅಭೇದ್ಯವಾಗಿಹ ಅಚಲಿತ ಲಿಂಗ ತಾನಾಗಿಹ ಪುಣ್ಯದ ನಾಣ್ಯ, ವಾಂಗ್ಮನಕ್ಕೆ ಬಾರದ ಅಖಂಡಿತ ಲಿಂಗ ತಾನಾಗಿಹ ಪುಣ್ಯದ ನಾಣ್ಯ. ಇದು ಅರಿಯಲಿಲ್ಲದ ಅರುವ ಸ್ವೀಕರಿಸಿ ಅರಿವ ಅರುಹಿಸಿ ಈ ಉಭಯಂಗಳ ಅರಿಯದಂತಿದ್ದು

ಅರಿಯಲಿಲ್ಲದ ಅರುವೆ ತಾನೆಂದು ಜಪಿಸಿದುದರಿಂದ ಜಪವೆಂಬುದು ಪುಣ್ಯದ ನಾಣ್ಯ ನೋಡಾ. ಕಂಡುದೆಲ್ಲ ಅರಿಯಲಿಲ್ಲದ ಅರು ಎಂದು ಜಪಿಸಿದುದರಿಂದ ಜಪವೆಂಬುದು ಪುಣ್ಯದ ನಾಣ್ಯನೋಡಾ. ಅರಿವ ಅರುಹಿಸಿಕೊಂಬ ಈ ಉಭಯ ಭಾವಂಗಳ ಅರಿಯಲಿಲ್ಲದ ಅರುವೆಂದು ಭಾವಿಸಿದ ಪುಣ್ಯದ ನಾಣ್ಯ ನೋಡಯ್ಯ.

ಪುಣ್ಯದ ನಾಣ್ಯವದು ಗುರು ಕಾರುಣ್ಯದಿಂದ ಹೊರಬಂದ ಪುಣ್ಯದ ನಾಣ್ಯ ಸಮತಾ ನಿಧಿಯಾಗಿಹ ಪುಣ್ಯದ ನಾಣ್ಯ. ಸಮತೆ ತಾನಾಗಿಹ ತನ್ನಿರುವಾಗಿಹ ಪುಣ್ಯದ ನಾಣ್ಯ. ಸಮಪ್ರಕಾಶದಿಂದ ಪ್ರಜ್ವಲಿಸುವ ಪುಣ್ಯದ ನಾಣ್ಯ. ತನ್ನಂತರಂಗದಲ್ಲಿ ಗುರು ಲಿಂಗ ಪ್ರಸಾದ ಕಂಡ ನಿಕ್ಷೇಪ ಅಕ್ಷಯ ಸಂಪತ್ತು ತಾನಾದ ತನ್ನದಾದ ಪುಣ್ಯದ ನಾಣ್ಯನೋಡಯ್ಯ ಎಂದು ಹೇಳಿಹರು.

ಜಪವೆಂಬುದು ಚನ್ನಬಸವನ ಪಾದದಲ್ಲಿಯೇ ಐಕ್ಯನೋಡಾ ಕಪಿಲಸಿದ್ದ ಮಲ್ಲಿಕಾರ್ಜುನ:

ಜಪ ನಿಜವಾದ ಜಪ ಚನ್ನಬಸವನ ಪಾದದಲ್ಲಿಯೇ ಐಕ್ಯವಾದುದು ನಿಜವಾದ ಜಪವೆನಿಸುವುದು. ಚನ್ನಬಸವನ ಪಾದ ಶಿಷ್ಯರ ಮುಖದಿಂದಾದ ಗುರುಪಾದವಲ್ಲ. ಗುರುವಿಂಗೆ ಗುರುವಾಗಿಹ ಗುರುಲಿಂಗವ ತನ್ನಂತರಂಗದಲ್ಲಿ ಕಂಡ ಸುಜ್ಞಾನವು. ಸುಜ್ಞಾನವೇ ಚನ್ನ ಬಸವನ ಪಾದವು. "ತಾನಿಲ್ಲದ ಮುನ್ನ ಗುರುವೆಲ್ಲಿಯದೋ, ತಾನಿಲ್ಲದ ಮುನ್ನ ಲಿಂಗವೆಲ್ಲಿಯದೋ, ತಾನಿಲ್ಲದ ಮುನ್ನ ಜಂಗಮವೆಲ್ಲಿಯದೋ, ತಾನಿಲ್ಲದ ಮುನ್ನ ಪ್ರಸಾದವೆಲ್ಲಿಯದೋ, ತಾನಿಲ್ಲದ ಮುನ್ನ ಸ್ವಯವೆಲ್ಲಿಯದೋ ಪರವೆಲ್ಲಿಯದೋ, ಸ್ವಯ ಪರ ವೆಂದರಿತವನು ತಾನೆ, ಇವೆಲ್ಲವು ಹೆತ್ತರಿವು, ಸ್ವಯಂಜ್ಯೋತಿ ಕಲ್ಲೇಶ್ವರ. ಚನ್ನಬಸವನ ಪಾದ ಸ್ವಯಂಜ್ಯೋತಿ ಲಿಂಗವಾಗಿಹ ಪಾದ ಗುರುಲಿಂಗವಾಗಿಹ ಪಾದ ಸ್ವಯ ಲಿಂಗವಾಗಿಹ ಪಾದ, ನಿರ್ಲಿಖಿತ ಜಂಗಮ ಲಿಂಗವಾಗಿಹ ಪಾದ, ನಿರ್ನಾಮವಾಗಿಹ ಜಂಗಮ ಪಾದ, ನಿಜೈಕ್ಯನಾಗಿಹ ಪಾದ, ಪ್ರಸಾದದ ಪರಿಣಾಮಿಯಾಗಿಹ ಪಾದ, ಪಾದವದು ಗುರುವಿಂಗೆ ಗುರುವಾಗಿಹ ಶಬ್ದಮುಗ್ದ ಕಾರುಣ್ಯ ಧ್ವನಿ ಮರೆಯಲ್ಲಿರ್ದುದ ಕಂಡರಿದ ಅನುಪಮ ಕಾರುಣ್ಯವೇ ಚನ್ನಬಸವನ ಪಾದ. ಅಂತಪ್ಪ ಮಹಾಘನವುಳ್ಳ ಪಾದದಲ್ಲಿಯೇ ಐಕ್ಯನೋಡಾ ಎಂದು ಹೇಳಿಹರು.

ವಚನ - 23

ಸತ್ತ ಗುರುವಿನ ಕಾರುಣ್ಯ ಸತ್ತುಕೊಂಬ ಶಿಷ್ಯಂಗೆ ಭಕ್ತಿ ವಿಸ್ತರಿಸುವದು.
ಕರ್ತಾರ ನೆಲೆಗೊಂಬ ಕೊಟ್ಟುದನೆ ಮರೆದು ಬಳಸುವ ಮಿಟ್ಟಿಯ ಭಂಡರನೇನೆಂಬೆ
ಹೇಳಾ ಕಲಿದೇವರ ದೇವಯ್ಯ

ತಾತ್ಪರ್ಯ: ಸತ್ತ ಗುರಿವಿನ ಕಾರುಣ್ಯವ ಸತ್ತುಕೊಂಬ ಶಿಷ್ಯಂಗೆ ಭಕ್ತಿ ವಿಸ್ತರಿಸುವದು : ಸತ್ತ ಗುರು, ಸತ್ತುಕೊಂಬ ಶಿಷ್ಯ ಇವರಾರು? ಸತ್ತ ಗುರು ಕಾರುಣ್ಯವಾವುದು? ಶಿಷ್ಯನೆಂಬ ಪ್ರತಿಭಾವವಿಲ್ಲದ ಗುರು, ಈ ಮಹಾಂತ ಸತ್ತಗುರು. ಗುರುವೆಂಬ ಪ್ರತಿ ಭಾವವಿಲ್ಲದ ಶಿಷ್ಯ, ಈ ಸದ್ಭಕ್ತ ಸತ್ತುಕೊಂಬ ಶಿಷ್ಯ. ಸತ್ತಗುರು ಕಾರುಣ್ಯವದು ಅರಿಯಲಿಲ್ಲದ ಅರುವ ನರುಹಿಸಿದುದು ಗುರು ಕಾರುಣ್ಯ. ಅರಿಯಲಿಲ್ಲದ ಅರುವೆ ತಾನಾಗಿಹ ಘನ ಮಹಿಮನೆ ಸತ್ತ

ಗುರು. ಆ ಮಹಾಂತನ ದಿವ್ಯದೃಷ್ಠಿ ಶಿಷ್ಯನ ಅರಿವ ಅರುಹಿಸಿಕೊಂಬುದನ್ನು ಅರಿಯದಂತಿದ್ದ ಸ್ವತೇಜ. ಅರಿಯಬಾರದ ಘನವೆ ತನ್ನಿರುವಾದ ಸ್ವಯಂಜ್ಯೋತಿರ್ಲಿಂಗ. ಗುರುಲಿಂಗ. ಆದಾರಿಗೆ ಉಪದೇಶ ಕೊಡುವುದು ? ಇದ್ದುದೊಂದೆ ಕಂಡ ಅಪ್ರತಿಮಲಿಂಗ, ಅದಾರ ಶಿಷ್ಯರ ಕಾಣುವುದು? ಗುರುವಿಂಗೆ ಗುರುವಾಗಿಹ ಗುರುಲಿಂಗದುದಯ. ಅಲ್ಲಿ ಗುರು ಶಿಷ್ಯರೆಂಬ ಪ್ರತಿಭಾವ ನಷ್ಟವಾದುದರಿಂದ ಗುರುವೆಂಬ ಪ್ರತಿಭಾವವಿಲ್ಲದ ಶಿಷ್ಯ, ಶಿಷ್ಯನೆಂಬ ಪ್ರತಿಭಾವವಿಲ್ಲದ ಗುರು. ''ಏನೆಂಬೇನೆಂಬೆ ? ಗುರು ಶಿಷ್ಯರೊಂದಾದ ಘನವ ಕೂಡಲ ಸಂಗಮದೇವಾ''

ಸತ್ತ ಗುರಿವಿನ ಕಾರುಣ್ಯ ನೋಡಿರೆ, ಸತ್ತುಕೊಂಬ ಶಿಷ್ಯ ಗುರು ಕಾರುಣ್ಯವ ಪಡೆಯುವ ಪರಿಯ ನೋಡಿರೆ, ಸತ್ತ ಗುರುವಿನ ಕಾರುಣ್ಯವದು ''ನಡೆ ನುಡಿಯಿಲ್ಲದ ಗುರುವ ಕಂಡು ಉಪದೇಶ ಪಡೆಯ ಹೋದರೆ, ಒಡನೆ ನುಡಿಯ, ನುಡಿಸಿದರೆ ಕೇಳ, ಕಡೆಮೊದಲಿಲ್ಲದ ಕಾರ್ಯವೆಂತಪ್ಪುದೋ ಅಯ್ಯ? ಮೂಗ ಮೂಗರ ಪ್ರಸಂಗದಂತೆ ಎನ್ನೊಳಗೆ ಅರುವಿನ ಪರಿಮಳ, ಹೊರಗೆ ನೋಡಿದರೆ ಮುಗ್ಧವಾಯಿತ್ತು. ಇದೆಂತುಪಮಿಸುವೆ ಅನಿಯಮದ ಬೆಡಗ ಇದು ತನ್ನಿಂದ ತಾನಪ್ಪುದಲ್ಲದೆ ಭಿನ್ನದಲುಂಟೆ? ಗುಹೇಶ್ವರ.''

ಸತ್ತ ಗುರುವಿನ ಕಾರುಣ್ಯ ಪಡೆಯ ಹೋದರೆ ಒಡನೆ ನುಡಿಯ, ನುಡಿಸಿದರೆ ಕೇಳ, ಕಡೆಮೊದಲಿಲ್ಲದ ಕಾರ್ಯ, ಎಲ್ಲರಂಥ ಪರಮಾರ್ಥ ಕಾರ್ಯವಿದಲ್ಲವಲ್ಲ. ಅರಿಯಲಿಲ್ಲದ ಅರುವೆ ತಾನಾಗಿಹ ಸ್ವಮಹಿಮ, ಅರಿವ ಅರುಹಿಸಿಕೊಂಬ ತಾನಿದಿರೆಂಬುದ ನರಿಯ, ಈ ಮಹಾಂತನಿಂದ ಉಪದೇಶ ಪಡೆಯುವದದೆಂತು? ಎಲ್ಲರಂಥವನಲ್ಲದ ಗುರುಘನವ ಕಂಡುದು ಎನ್ನಭಾಗ್ಯ. ಈ ಗುರುಲಿಂಗದ ಕಾರುಣ್ಯ ಪಡೆಯುವದು ಪುಣ್ಯದ ಪುಣ್ಯವು. ಏಕೆಂದರೆ ನಡೆನುಡಿಯಿಂದುಕ್ತನಾದ ಗುರುಸಿಕ್ಕುತ್ತಾನೆ ಅವನಿಂದ ಉಪದೇಶ ಪಡೆಯುವ ಶಿಷ್ಯರು ಸಿಕ್ಕುತ್ತಾರೆ. ಅವನ ಉಪದೇಶ ಪ್ರಾರಂಭವಾಗಿ ಮುಕ್ತಾಯವಾಗುತ್ತದೆ. ಅರು ಹೃದಯದ ಕಣ್ಣು ತೆರೆಯಲಿಲ್ಲವಲ್ಲ. ಅರುವಿಂಗರುವಾಗಿಹ ಮಹಾಘನ ಸುಖದಲ್ಲಿರಿಸಿ ಶಬ್ದಮುಗ್ದ ಮಾಡಲಿಲ್ಲವಲ್ಲ. ನನಗೆ ದೊರೆತ ಪರಮಗುರು ನಿಃಶಬ್ದ ವೇಧಿಸಿ ಮುಗ್ಧನಾಗಿರ್ದ ಘನಕ್ಕೆ ಘನ ತಾನಾರೆಂದರಿತು ತನ್ನ ಅರಿಯಬಾರದ ಘನದಲ್ಲಿರ್ದ ಸ್ವಮಹಿಮ.

''ಎಲ್ಲ ಎಲ್ಲವ ನರಿವರುಂಟು ತನ್ನ ತಾನರಿಯುವವರುಂಟೆ? ಅರಿದಿಹೆನೆಂಬುದು ಚಿದಹಮ್ಮಿನ ಮದ ನೋಡಾ ನಿರ್ಧರಿಸಿಹೆನೆಂಬುದು ಅನುಭವದ ಮದ ನೋಡಾ ಅರಿದರುಹಿಸಿಕೊಂಬುದಕ್ಕೆ ಮೀರಿದ ಘನವರಿವ ಪರಿ ಎಂತಯ್ಯ ? ನಿರಂಜನ ಪ್ರಭು ನಾಗೇಶ್ವರ ನಿನ್ನವರ ಪ್ರಸಾದ ಧನುವಿನಗಮ್ಯವ ಉಪಮಿಸಬಹುದೆ?'' ಅರಿಯಲಿಲ್ಲದ ಅರುವೆ ತಾನಾಗಿರ್ದ ಘನ ಮಹಿಮನ ಕಂಡು ಉಪದೇಶ ಪಡೆಯುವದದೆಂತು? ಅಖಂಡಿತ ಘನ ಪೂರ್ಣವಪ್ಪ ತನ್ನಿರುವೆ ಅರುವೆಂದರಿದು ತಾನೆ ತಾನಾಗಿರ್ದ ಮಹಾಂತನದು ಭಿನ್ನವಿಲ್ಲದ ದೃಷ್ಠಿ ಮನ ಮೇರೆದಪ್ಪಿದ ಅರುವಿನ ವಿಶ್ರಾಮ. ಸುಖದ ಸುಖವಾಗಿಹ ಸ್ವಸುಖಿ. ನೋಡಿಹೆನೆಂದರೆ ಪೂಜ್ಯನೆಂಬುದು ಮುನ್ನಿಲ್ಲ, ಅರಿದಿಹೆನೆಂದರೆ ಅರುವ ತಾನಾಗಿಹ ನಿಷ್ಕಳಂಕ ಅಪೂರ್ವಕ.

ಅಪೂರ್ವಕ :

ಏನೆಂದೆನ್ನದ ಮುನ್ನ ತಾನಾದ ಘನ ನಿಶಬ್ದವೇದಿ. ಶಬ್ದ ನಷ್ಟ ಮಾಡಿದ್ದ ಶಬ್ದಮುಗ್ಧ. ಮನ ನಷ್ಟಮಾಡಿದ ಸ್ವಯಂಜ್ಯೋತಿ. ಕೇವಲ ಜ್ಯೋತಿ ವರ್ಣಾತೀತ. ಸಾವಯವ

ನಿರವಯವೆಂಬುದು ತನ್ನೊಳಡಗಿಸಿ ಕೊಂಡ ಸಮತಾನಿಧಿ, ಸಮಪ್ರಕಾಶ. ಪೂಜಿಸಿಹೆನೆಂದರೆ ಪೂಜ್ಯ ಪೂಜಕವೆಂಬ ಭಾವಕ್ಕಿಂಬುಕೊಡದ ನಿರ್ಭಾವಿಯು. ಈ ಮಹಿಮನ ಪೂಜಿಸುವದದೆಂತು? ಘನ ಗುರು ಅರುಹಿಸಿಕೊಳ್ಳುವನಾಗಿಲ್ಲ ಅರಿಯುವವರನಾಗಿಲ್ಲ. ಈ ಅಪ್ರಮಾಣಗಮ್ಯನಿಂದ ಉಪದೇಶ ಪಡೆಯಲು ಘನವಂತನಿಗೆ ಸಮ್ಮತಿ ಇಲ್ಲ. ನುಡಿಗೆಡೆಗೊಡದ ಘನವೆ ತನ್ನಿರುವಾದುದನರಿತು, ನುಡಿಯುವ ನುಡಿಗಳು ರುಚಿಯೆ ಕೆಟ್ಟು, ಶಬ್ದಂಗಳು ಸಾರರಹಿತವಾಗಿವೆ ಶೃತಿಗಳ ನಾಚಿ ಮೌನವಾಗಿವೆಯಲ್ಲ. ಅಹಹ! ಘನಕ್ಕೆ ಘನನಾಗಿರ್ದ ಅನುಪಮ ಗುರುವೆ, ನೀವು ಅನುಗ್ರಹಿಸಲು ಒಪ್ಪದಿದ್ದರೂ ನೀನೆ ಗುರುವೆಂದು ನಾನೆ ಶಿಷ್ಯನೆಂದು ನಿಮ್ಮ ಕಾರುಣ್ಯವ ಪಡೆಯುವೆ. ಇದು ಸತ್ತ ಗುರಿವಿನ ಕಾರುಣ್ಯ, ಸತ್ತಕೊಂಬ ಶಿಷ್ಯನ ಪರಿಯು ! ತನಗೆ ತಾನೆ ಕಾರುಣ್ಯವ ಪಡೆಯುವ ಅರು ಹೃದಯ ಅದಾರಿಗೆ ?

ಗುರು ಶಿಷ್ಯರೀರ್ವರು ಅಪೂರ್ವಿಕರು. ಗುರುವಿನ ಗುರುತನ ನಷ್ಟವಾಗಿದೆ. ಶಿಷ್ಯರ ಶಿಷ್ಯತನ ನಷ್ಟವಾಗಿ ಒಡಲಿಲ್ಲದವರಾಗಿಹರು. ಸತ್ತ ಗುರುವಿನ ಕಾರುಣ್ಯವದು ಕಡೆ ಮೊದಲಿಲ್ಲದ ಕಾರ್ಯ. ಮೂಗ ಮೂಗರ ಪ್ರಸಂಗ! ಅಖಂಡ ದೃಷ್ಠಿ ! ಖಂಡಿತವಲ್ಲದ ಅಖಂಡಿತನ ನಿಲವು. ಕಡೆ ಮೊದಲಿಲ್ಲದ ಕಾರ್ಯವು, ಓಹೋ! ಗುರುಲಿಂಗವೆ ನಿನ್ನ ಮಹಾಭೋಧದನುವು. ಕಡೆ ಮೊದಲಿಲ್ಲದ ಕಾರ್ಯ ದನುವು. ಅಪ್ರತಿಮ ಅಗಮ್ಯದ ಅನುವು. ನೆನೆಯಲರಿಯೆ, ನಿರ್ಧರಿಸಲರಿಯೆ, ಮನವಿಲ್ಲಾಗಿ ಭಾವಿಸಲರಿಯೆ, ಭಾವ ನಿರ್ಭಾವ ವಾಯಿತ್ತಾಗಿ ಧ್ಯಾನ ಮೌನವನರಿಯೆ, ಜ್ಞಾತೃ ಜ್ಞಾನ ಜ್ಞೇಯಂಗಳ ಮೀರಿ ಅಭಿನವ ಮಲ್ಲಿಕಾರ್ಜುನನಲ್ಲಿ ಸುಖಿಯಾಗಿರ್ದೆ.

ಓಹೋ! ಪರಾತ್ಪರ ಗುರುವೆ ನಿನ್ನ ಕಾರುಣ್ಯ ಮೂಗ ಮೂಗರ ಪ್ರಸಂಗದಂತಿದೆ ಮೂಕನ ಶಬ್ದ ಶಬ್ದ ಮುಗ್ಧನಾಗಿರ್ದ ಬೋಧ, ಕಡೆ ಮೊದಲಿಲ್ಲದ ಕಾರ್ಯ, ಈ ಮೂಕನ ಮೌನ ಮುದ್ರೆ ನಿರ್ವಾಣದ ನಿಜದರುವಿನ ಇರವು. ಓ ಶಬ್ದಮುಗ್ಧ ಗುರುವೆ, ನಿಜದಲ್ಲಿರ್ದ ನಿಬ್ಬೆರಗುಳ್ಳ ನಿಷ್ಪತ್ತಿ ನಿರಾಳದ ನಿಲುವು ಅದು ನಿಮ್ಮಯ ಕಾರುಣ್ಯವಲ್ಲವೆ? ಓ ಗುರುವಿಂಗೆ ಗುರುವಾಗಿಹ ಗುರುಲಿಂಗವೆ ನಿಮ್ಮ ಅಚಿಂತ್ಯ ಪದವಾಗಿಹ ಸವೆಯದ ಸುಖ ನಿಶ್ಚಲತ್ವ, ಅದು ನಿಶ್ಚಿಂತದ ನಿಜಪದವಾಗಿಹ ನಿಮ್ಮ ಅನುಗ್ರಹವು. ಓಹೋ ಮೂಕನಿಂದ ಗುರು ಕಾರುಣ್ಯವಾಯಿತ್ತು. ಸತ್ತ ಗುರುವಿನ ಕಾರುಣ್ಯ ಸತ್ತಕೊಂಬ ಶಿಷ್ಯಂಗೆ ಭಕ್ತಿ ವಿಸ್ತರಿಸುವದು ಭಕ್ತಿಯು ವಿಸ್ತರಿಸಿದುದು ನೋಡಿರೆ? ನಾನು ಮೂಕನಾಗಿ, ಮಾತಿಲ್ಲದವನ ನೆಲೆಯಿಲ್ಲದ ನಿರ್ವಾಣದ ನಿಲುವನರಿತೆ. ಅದು ಮನ ಮೇರೆದಪ್ಪಿದ ನಿಲುವುಳ್ಳದ್ದಾದ್ದರಿಂದ, ನೆನೆಯಲರಿಯೆ, ನಿರ್ಧರಿಸಲರಿಯೆ, ಭಾವಿಸಲರಿಯೆ. ಭಾವಕ್ಕಗಮ್ಯನಾದುದರಿಂದ ನನಗೆ ಧ್ಯಾನವಿಲ್ಲ, ಮೌನವಿಲ್ಲ. ಘನಕ್ಕೆ ಘನ ತಾನಾಗಿ ಜ್ಞಾತೃವೆಂಬುದಿಲ್ಲ, ಜ್ಞಾನ ಜ್ಞೇಯಂಗಳಿಲ್ಲವಾದ್ದರಿಂದ ಅರಿಯಲಿಲ್ಲದ ಅರುವೆ ನಾನಾಗಿ ಪರಮ ಸುಖಿಯಾದುದು. ಇದು ಭಕ್ತಿ ವಿಸ್ತರಿಸಿದುದು ನೋಡಾ.

ಕರ್ತಾರ ನೆಲೆಗೊಂಬ ಕೊಟ್ಟುದನೆ ಮರೆದು ಬಳಸುವ ಭಂಡರ ನೇನೆಂಬೆ ಹೇಳಾ ಕಲಿ ದೇವರ ದೇವಯ್ಯ :

ಭಕ್ತಿ ವಿಸ್ತರಿಸಲು ಗುರುದೇವ ಅನುಪಮ ಲಿಂಗ ಕರುಣಿಸಿ ಅರಿಯ ಹೇಳಿ ಶಿಷ್ಯಂಗೆ ಕೊಟ್ಟು ಇದು ಅರಿದರಿದು ನೋಡು, ಇದರಿಂದ ಅರಿಯಬಾರದ ಘನವೆ ನಿನ್ನಿರುವಾಗಿ

ಕರ್ತಾರ ನೆಲೆಗೊಂಬ. ಎಂದು ಕರುಣಿಸಿದರೂ ಅರಿಯದೆ ಹೋದುದರಿಂದ ಪೂಜಾ ಲಿಂಗವಾಗಿ ತೋರಿದುದರಿಂದ ಇವರು ಪೂಜಿಸುವ ಪೂಜಕರಾದರು. ಲಿಂಗದೇವನು ಪೂಜಿಸಿಕೊಳ್ಳುವ ಪೂಜ್ಯನಾದ. ಇವರುಗಳು ಗುರುಕಾರುಣ್ಯವ ಮರೆತವರು. ಅರಿಯಬಾರದ ಘನವೆಂದು ಕರುಣಿಸಿ ಅರಿಯ ಹೇಳಿದರೂ ಅದನ್ನು ಮರೆತು ಪೂಜಾಲಿಂಗ ಮಾಡಿದವರೆ ಕೊಟ್ಟುದನೆ ಮರೆದು. ಲಿಂಗಾರ್ಚನೆಯು ಫಲ ಪದಂಗಳ ಪಡೆಯಲು ಪೂಜಕರಾದವರೆಲ್ಲ ಕೊಟ್ಟುದನೆ ಮರೆತವರು. ಸಟೆಯನ್ನೆ ಬಳಸುವ ನಾಚಿಕೆಯಿಲ್ಲದವರನೇನೆಂಬೆ ಎಂದು ಹೇಳಿಹರು.

ವಚನ - 24

ಯತೋ ವಾಚೋ ನಿವರ್ತಂತೆ ಅಪ್ರಾಪ್ಯ ಮನಸಾಸಹ ಎಂದೆನಿಸುವ ಲಿಂಗವು.
ಅತ್ಯತಿಷ್ಠ ದಶಾಂಗಲಂ ಎಂದೆನಿಸುವ ಲಿಂಗವು.
ಚಕಿತಮಭಿದಿತ್ತೆ ಎಂದೆನಿಸುವ ಅಯಂ ಮೆ ಹಸ್ತೊ
ಭಗವಾನ್ ಅಯಂ ಮೆ ಭಗವತ್ತರಂ ಎಂದೆನಿಸುವ ಲಿಂಗವು.
ಏಕೋ ಮೂರ್ತಿಃ ತ್ರಿದಾಭೇದಂ ಎಂದೆನಿಸುವ ಶ್ರೀಗುರು ಲಿಂಗ.
ಜಂಗಮ ರೂಪಾಃ ಇಷ್ಟಃ ಪ್ರಾಣ ಸ್ಥಥಾ ಭಾವಃ ತ್ರಿಧಾ ಮೈಕ್ಯವೆಂದು
ತ್ರಿವಿಧವೇಕೀ ಭವಿಸಿ ಲಿಂಗ ರೂಪಾಗಿ ಎನ್ನ ಕರಸ್ಥಲಕ್ಕೆ ಬಂದು
ಕರತಳಾಮಳಕದಂತೆ ತೋರುತ್ತಿದ್ದಾನೆ. ಆಹಾ ಎನ್ನ ಪುಣ್ಯವೆ !
ಆಹಾ ಎನ್ನ ಭಾಗ್ಯವೆ ಆಹಾ ಎನ್ನ ಸತ್ಯವೆ ಆಹಾ ಎನ್ನ ನಿತ್ಯವೆ,
ಶಿವ ಶಿವಾ ಮಹಾದೇವ ನೀವೆ ಬಲ್ಲಿರಿ ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ.

ತಾತ್ಪರ್ಯ : ಯ ತೋ ವಾಚೋ ನಿವರ್ತಂತೆ ಅಪ್ರಾಪ್ಯ ಮನಸಾ ಸಹ ಎಂದೆನಿಸುವ ಲಿಂಗವು :

ಲಿಂಗವೆಂದಲ್ಲಿಯೆ ತಪ್ಪಿತ್ತು. ಲಿಂಗವದು ಕಲ್ಪಿತವಲ್ಲ. ''ಲಿಂಗವ ಸ್ಥೂಲವೆಂಬರು ಕೆಲಬರು ಲಿಂಗ ಸ್ಥೂಲವಲ್ಲ, ಲಿಂಗ ಸೂಕ್ಷ್ಮವೆಂಬರು ಕೆಲರು ಲಿಂಗ ಸೂಕ್ಷ್ಮವಲ್ಲ. ಸ್ಥೂಲ ಸೂಕ್ಷ್ಮದ ಮೇಲಣ ಜ್ಞಾನರೂಪು, ಪರಾನಂದ ಪರಬ್ರಹ್ಮವೆ ಲಿಂಗವೆಂದರಿದ ಅರಿವು ಅಖಂಡ ರೂಪು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ನಿಲವು ತಾನೆ ಬೇರಲ್ಲ. ''ಲಿಂಗವದು ಸ್ಥೂಲ ವಲ್ಲ ಸೂಕ್ಷ್ಮವಲ್ಲ ಸ್ಥೂಲ ಸೂಕ್ಷ್ಮದ ಮೇಲಣ ಜ್ಞಾನರೂಪ ಪರಾನಂದ ಪರಬ್ರಹ್ಮವೆ ಲಿಂಗ ವೆಂದರಿದ ಅರಿವು ಅಖಡ ರೂಪು ನಿಜಗುರು ಗುರುವಿನ ಗುರು ಅದುವೆ ಸ್ವತಂತ್ರ, ಅದುವೆ ಸಿದ್ಧ, ಅದುವೆ ಲಿಂಗಕ್ಕೆ ಲಿಂಗವಾದುದು, ಲಿಂಗೇಶ್ವರ ನಿಲವು ತಾನೆ ಬೇರಲ್ಲ.

''ಅಂಗದ ಮೇಲಣ ಲಿಂಗವು ಲಿಂಗವಲ್ಲ, ಮನದ ಮೇಲಣ ಲಿಂಗವು ಲಿಂಗವಲ್ಲ ಭಾವದ ಮೇಲಣ ಲಿಂಗವು ಲಿಂಗವಲ್ಲ, ಅಂಗದ ಮೇಲಣ ಲಿಂಗ ವ್ಯವಹಾರ. ಮನದ ಮೇಲಣ ಲಿಂಗ ಸಂಕಲ್ಪ, ಭಾವದ ಮೇಲಣ ಭ್ರಾಂತು ತತ್ವ. ಆಳಿನ ಆಳು ಅರಸನಪ್ಪನೆ? ಆಳನಾಳುವನರಸನೆನ್ನಲೆ ಅಂಗ ಪ್ರಾಣ ಭಾವಂಗಳ ನೊಳಕೊಂಡಿರ್ಪುದೆ ಲಿಂಗ ಕಾಣಾ ಮಸ ಣಯ್ಯ ಪ್ರಿಯ ಗಜೇಶ್ವರ. ''ಲಿಂಗದ ವಿಷಯ ಲಿಂಗವರಿತವರಿಂದ ಲಿಂಗ ತಿಳಿಯುವದು. ಅದು ಅಂಗ ಮೇಲೆ ಧರಿಸಿಕೊಂಡರೆ ಲಿಂಗವ ತಿಳಿದಂತಾಯಿತೆ? ಮನಸ್ಸಿನಿಂದ ನಿರಂತರ

ಲಿಂಗ, ಲಿಂಗವೆಂದಾಗ ಲಿಂಗದ ನೆನಹಿನಲ್ಲಿದ್ದರೆ ಲಿಂಗವ ತಿಳಿದಂತಾಯಿತೆ ? ಭಾವಿಕನು ಲಿಂಗ ಲಿಂಗವೆಂದು ಭಾವಿಸಿದ. ಭಾವಿಸಿದಲ್ಲಿ ಭಾವಿಸಿದ ಭಾವ ಲಿಂಗವಾಯಿತೆ. ಇದು ಕಾರಣ ಶರಣ ಶರಣೆಯರು ಲಿಂಗವರಿತವರು, ಲಿಂಗಸ್ವರೂಪರು. ಈ ಭ್ರಾಂತರ ವಿಚಾರಕ್ಕೆ ಒಪ್ಪಲಿಲ್ಲ. ಅಂಗದ ಮೇಲಣ ಲಿಂಗವು ಲಿಂಗವಲ್ಲ, ಅಂಗದ ಮೇಲಣ ಲಿಂಗ ವ್ಯವಹಾರ. ಒಬ್ಬರನ್ನೊಬ್ಬರು ನೋಡಿ ಅಂಗದ ಮೇಲೆ ಹಾಕಿಕೊಂಡ ವ್ಯವಹಾರ ಲಿಂಗ ಹಾಕಿಕೊಳ್ಳುವುದೆ ಇವರ ವ್ಯವಹಾರ. ಈ ವ್ಯವಹಾರದಿಂದ ಅಂಗದ ಮೇಲೆ ಲಿಂಗ ಸಾಹಿತ್ಯವಾದಂತಾಯಿತೆ? ಲಿಂಗ ಸಾಹಿತ್ಯದಿಂದ ನಿಮ್ಮ ಸರ್ವಾಂಗ ಲಿಂಗವೆಂಬ ಅರಿವು ಆಯಿತ್ತೆ? ಲಿಂಗವಾಗಿ ಕಂಡು ಬಂದಿತ್ತೆ ? ಬಾರದಿದ್ದಲ್ಲಿ ಅಂಗದ ಮೇಲಣ ಲಿಂಗ ವ್ಯವಹಾರವೆಂದಾಯಿತ್ತು.

ಮನದ ಮೇಲಣ ಲಿಂಗವು ಲಿಂಗವಲ್ಲ :

ಮನದ ಮೇಲಣ ಲಿಂಗ, ಸಂಕಲ್ಪ ಮನಸ್ಸಿನಿಂದ ನಿರಂತರ ನೆನೆದರೂ ಅದು ಸಂಕಲ್ಪವಾಯಿತ್ತಲ್ಲದೆ ಮನ ಘನ ಮನವಾಗಲಿಲ್ಲ. ಆಗದಿದ್ದಲ್ಲಿ ಮನದ ಮೇಲೆ ಲಿಂಗ ಸಾಹಿತ್ಯವ ಮಾಡಿದಂತಾಯತ್ತೆ? ಲಿಂಗ ಸಾಹಿತ್ಯವಾಗದಿದ್ದಲ್ಲಿ ನಿರಂತರ ಲಿಂಗ ಲಿಂಗ ಎಂದು ನೆನೆದರೂ ಅದು ಸಂಕಲ್ಪವಾ ಯಿತ್ತಲ್ಲದೆ, ಕಲ್ಪನಾರಹಿತ ಲಿಂಗವಾಗಲಿಲ್ಲ. ಮನ ತನ್ನ ನಿಜದ ಇರವು ತನಗೆ ವೇದ್ಯವಾಗಲಿಲ್ಲ, ವೇದ್ಯವಾಗದ್ದರಿಂದ ಮನದ ಮೇಲಣ ಲಿಂಗ ಸಂಕಲ್ಪವಾಯಿತ್ತು.

ಭಾವದಿಂದ ಲಿಂಗ ಲಿಂಗವೆಂದು ಭಾವಿಸಿದಾಗಳೆ ಭಾವವು ತೆರಹಿಲ್ಲದ ಲಿಂಗ ಭಾವದಿಂದ ಲಿಂಗದ ಜ್ಞಾನರೂಪ ಪರಾನಂದವೆಂಬ ಅರಿವು ಅರಿತಂತಾಯಿತ್ತೆ? ಅರಿಯದಿದ್ದಲ್ಲಿ ಭಾವದಿಂದ ಭಾವಿಸಿದುದು ಭ್ರಾಂತು ಎಂಬುದೆ ಸಿದ್ಧವಾಯಿತಲ್ಲದೆ ಭಾವಕ್ಕಗಮ್ಯವಾಗಿಹ ಜ್ಞಾನ ರೂಪ ಲಿಂಗವದು ಭಾವವದು ಭಾವಿಸಲುಂಟೆ? ಭಾವ ಭಾವಿಸಲರಿಯದು ಅದೇನು ಕಾರಣ ಭಾವದಲ್ಲಿ ಮಾತಾಡುವ ಮಾತು ಅಲ್ಲ. ಮಾತು ನಷ್ಟ ಮಾಡಿದವರ ಕಾರುಣ್ಯದನುವು ಅವಶ್ಯವಾಗಬೇಕು. ಶಬ್ದ ನಷ್ಟ ಮಾಡಿದವರು ನಿಶಬ್ದವೇದಿಗಳು. ಅವರು ಧ್ವನಿಯ ಮೆರೆಯಲ್ಲಿರ್ದುದ ತಿಳಿದವರು. ಏನೆಂದೆನ್ನದ ಮುನ್ನ ತಾನೆ ಆದುದ ತಿಳಿದು ಅದೇ ಆದವರು. ನೀನು ಆಜಾತ ಮಹಾಂತರ ಒಲಿಸಿಕೊ ಅವರು ಕೃಪೆ ತೋರಿದಲ್ಲಿ ನೀನು ನಿಃಶಬ್ದಲಿಂಗಾನುಭವಿಯಾಗುವೆ ಆಗ ಅಂಗ, ಪ್ರಾಣ, ಭಾವಂಗಳನೊಳಕೊಂಡಿರ್ಪುದು ಲಿಂಗ ಕಾಣಾ ಎಂಬುದು ವೇದ್ಯವಾದುದೆ ಏಕೋ ರಾತ್ರಿ ಬಿಂದು ನೋಡಾ ಅದುವೆ ಗುಹೇಶ್ವರ ಲಿಂಗವ ಕೂಡಿದ ಕೂಟ ಇಂದು ಸುಖ ಮುಂದೆ ಲೇಸು ಎಂದು ಹೇಳಿಹರು.

ಇಂತಪ್ಪ ಲಿಂಗ ಸಕೀಲ ಸಂಯೋಗ ವರ್ಮಸ್ಥಲವರಿತಾಗ ಅತ್ಯತಿಷ್ಠದಶಾಂಗುಲಂ ಎಂದೆನಿಸುವ ಲಿಂಗ, ಚಕಿತ ಮಭಿದತ್ತೆ ಎಂದೆನಿಸುವ ಲಿಂಗ, ಅಣೋರಣಿಯಾನ ಮಹತೋ ಮಹಿಯಾನ ಎಂದೆನಿಸುವ ಲಿಂಗವು ವೇದ್ಯವಾಗುವದು. ಇದು ಕಾರಣ ನುಡಿಗೆಡೆಗೊಡದ ಲಿಂಗವ ಏನೆಂದೆನ್ನದ ಮುನ್ನ ತಾನೆ ಆದ ಲಿಂಗವ ಶರಣ ಶರಣೆಯರೆ ಬಲ್ಲವರಾದುದರಿಂದ ಶಿವ ಶಿವಾ ಮಹಾದೇವ ನೀವೆ ಬಲ್ಲಿರಿ ಎಂದು ಹೇಳಿಹನು.

ಅತ್ಯತಿಷ್ಠ ದಶಾಂಗುಲ ಎಂದೆನಿಸುವ ಲಿಂಗ, ಅಣೋರಣಿಯಾನ ಮಹತೋ ಮಹಿಯಾನ ಎಂದೆನಿಸುವ ಲಿಂಗವು ವೇದ್ಯವಾಗುವದು ಇದು ಕಾರಣ ನುಡಿಗೆಡೆಗೊಡದ ಲಿಂಗವ ಏನೆಂದೆನ್ನದ ಮುನ್ನ ತಾನೆ ಆದ ಲಿಂಗವ ಶರಣ ಶರಣೆಯರೆ ಬಲ್ಲವರಾದುದರಿಂದ

ಶಿವ ಶಿವಾ ಮಹಾದೇವ ನೀವೆ ಬಲ್ಲಿರಿ ಎಂದು ಹೇಳಿಹನು. ಅತ್ಯತಿಷ್ಠದಶಾಂಗುಲ ಎಂದೆನಿಸುವ ಲಿಂಗವ ಶಿವ ಶಿವಾ ಮಹಾದೇವ ನೀವೆ ಬಲ್ಲಿರಾಗಿ ಬಸವಾದಿ ಪ್ರಮಥರಾಗಿಹ ನೀವೆ ಬಲ್ಲಿರಿ ಓ ಬಸವದೇವನೆ! ಪ್ರಭುದೇವನೆ! ಚೆನ್ನ ಬಸವಯ್ಯನೆ ಮೊದಲಾದ ಮಹಾಂತರು ನೀವೆ ಬಲ್ಲಿರಾಗಿ ಇತ್ತ ನೀಲಾಂಬಿಕೆ ಅಕ್ಕಮಹಾದೇವಿ ಸತ್ಯಕ್ಕ ಲಿಂಗಮ್ಮ ಅಮುಗೆಯ ರಾಯಮ್ಮ ಮೊದಲಾದ ಶರಣೆಯರು ನೀವೆ ಬಲ್ಲಿರಿ.

ಗುರುವಿನ ಗುರುವಾಗಿಹ ಗುರುಲಿಂಗವ ನಿಮ್ಮ ಅಂತರಂಗದಲ್ಲಿ ಕಂಡು ಅದುವೆ ಆದವರು. ಲಿಂಗಕ್ಕೆ ಲಿಂಗವಾಗಿಹ ಶಿವಲಿಂಗವ ನಿಮ್ಮ ಅಂತರಂಗದಲ್ಲಿ ಅರಿತು ಅದುವೆ ಆದವರು, ಜಂಗಮಕ್ಕೆ ಜಂಗಮವಾಗಿಹ ನಿರ್ನಾಮ ಜಂಗಮದ ರಹಸ್ಯವರಿತು ಅದುವೆ ಆದವರು. ಇದು ಕಾರಣ ಶಿವ ಶಿವ ಮಹಾದೇವ ನೀವೆ ಬಲ್ಲಿರಾಗಿ ಓಹೋ! ನೀವು ಅರಿಯಲಿಲ್ಲದ ಅರುವಾಗಿಹ ಘನ ಲಿಂಗವರಿತುದರಿಂದ ನಿಮ್ಮ ದಿವ್ಯ ದೃಷ್ಠಿ ಅತ್ಯತಿಷ್ಠ ದಶಾಂಗುಲವೆಂದೆನಿಸುವ ಲಿಂಗವ ಕಂಡುದು ತೋರಬಾರದ ಘನ ಹೇಳುವದದೆಂತು? ಹೇಳಬಾರದ ಘನ ತೋರುವದದೆಂತು? ಇದು ಕಾರಣ ಒಳಗೂ ಲಿಂಗ ಹೊರಗೂ ಲಿಂಗ ಒಳಹೊರಗೆನ್ನದ ಭರಿತವಾದುದು ಲಿಂಗ. ಮುಂದೆ ಲಿಂಗ ಹಿಂದೆ ಲಿಂಗ ಮುಂದು ಹಿಂದುಗಳ ನಡುವಣವು ಲಿಂಗ ಎಡಕ್ಕೂ ಲಿಂಗ ಬಲಕ್ಕೂ ಲಿಂಗ ಸ್ಥೂಲ ಲಿಂಗ, ಸೂಕ್ಷ್ಮಲಿಂಗ ಲಿಂಗವು ಲಿಂಗ ಪ್ರಾಣವು ಲಿಂಗವೆಂದು ಅರಿತ ಶರಣ ಅತ್ಯತಿಷ್ಠ ದಶಾಂಗುಲ ಲಿಂಗವಬಲ್ಲವನಾಗಿ ಚಕಿತ ಮಭಿದತ್ತೆ, ಎಂದೆನಿಸುವ ಲಿಂಗ ಅದನೆಂತು ವರ್ಣಿಸುವದು ಇದು ತೆರಹಿಲ್ಲದ ಲಿಂಗಭರಿತವೆಂಬ ನಾಮದಿಂ ಪ್ರಜ್ವಲಿಸಿದುದು ಕಂಡು ಚಕಿತ ಮಭಿದತ್ತೆ ಎಂದೆನಿಸುವ ಲಿಂಗ ಇದುವೆ ನನ್ನ ಕರ ಕಮಲದಲ್ಲಿ ಬೆಳೆಗುವ ದೇವನಾದನೆ. ಈ ದೇವನೆ ನನ್ನ ಸ್ವರೂಪವಾದನೆ! ನನ್ನ ಸ್ವರೂಪವೆ, ಗುರು, ಲಿಂಗ, ಜಂಗಮ ಮೂರು ರೂಪಾಯಿತ್ತೆ! ಮತ್ತದುವೆ ಇಷ್ಟಲಿಂಗವಾಗಿ,ಪ್ರಾಣಲಿಂಗವಾಗಿ, ಭಾವಲಿಂಗವಾಗಿ ಮೂರೊಂದಾಯಿತ್ತೆ! ಮೂರೊಂದಾಗಿ ಎನ್ನ ಅನುಭವಕ್ಕೆ ಬಂದು ಎನ್ನ ಹೃದಯದಲ್ಲಿ ಬೆಳಗುತ್ತೈದಾನೆ ನೋಡಾ, ಆಹಾ ಎನ್ನ ಪುಣ್ಯದ ಪುಣ್ಯವೆ ಆಹಾ ಸತ್ಯದ ನೃತ್ಯವಾಗಿಹ ಶಬ್ದಮುಗ್ಧವೆ ಆಹಾ! ಅಂದು, ಇಂದು, ಎಂದೆಂದೂ, ಇದ್ದಂತಿದ್ದ ಮಹಾಘನವೆ, ಸಚ್ಚಿದ್ಘನವೆ ಆಹಾ ಎನ್ನ ಭಾಗ್ಯವೆ ಶಿವ ಶಿವಾ ಮಹಾದೇವ ನೀವೆ ಬಲ್ಲಿರಿ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರ ಎಂದು ಹೇಳಿಹರು.

ವಚನ - 25

ಸತ್ ರೂಪ ಲಿಂಗ, ಚಿತ್ ರೂಪ ಜಂಗಮ, ಆನಂದ ರೂಪ ಪ್ರಸಾದ
ಇಂತೀ ತ್ರಿವಿಧವಾದ ಅರುವನು ಶ್ರೀಗುರು ಇಷ್ಟಲಿಂಗದಲ್ಲಿ ತೋರಿ
ಬಿಜಯಂಗೈಸಿ ಕೊಟ್ಟ ಬಳಿಕ ಸತ್ತುಚಿತ್ತಾನಂದವೆಂಬ ಬಟ್ಟ ಬಯಲಲ್ಲಿಕ್ಕಯ್ಯ
ಉರಿ ಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ.

ತಾತ್ಪರ್ಯ : ಸತ್ತುರೂಪ ಲಿಂಗ ಚಿತ್ತ ರೂಪ ಜಂಗಮ ಆನಂದ ರೂಪ ಪ್ರಸಾದ ಇಂತೀ ತ್ರಿವಿಧರೂಪ ಅರುವನು, ಶ್ರೀಗುರು ಇಷ್ಟಲಿಂಗದಲ್ಲಿ ತೋರಿದ ಮೇಲೆ ಇನ್ನೇ ನಿನ್ನೇನು. ಶ್ರೀಗುರು ಕಾರುಣ್ಯ ತೋರುವ ನಾಮರೂಪ ತೋರಿಕೆಯುನ್ನ ತೋರಬಾರದ

ಘನವ ಮಾಡಿತ್ತೆ ! ಹುಸಿಯ ನಾಮ ರೂಪ ತೋರಿಕೆಯ ಕೆಡಿಸಿ ತೋರಬಾರದ ಘನವಾಗಿಹ ಸತ್ತು ರೂಪ ಲಿಂಗವ ಮಾಡಿತ್ತು, ಸದ್ರೂಪ ಲಿಂಗ, ಅಂದು ಇಂದು ಎಂದೆಂದೂ ಇದ್ದುದಾವುದು ಅದು ಲಿಂಗ. ಇದು ಹುಸಿ ತೋರಿಕೆ, ಹುಸಿ ಶಬ್ಧ ನಷ್ಟ ಮಾಡದವರಿಗೆ ತನ್ನಂತರಂಗದಲ್ಲಿ ಸದ್ರೂಪವಾಗಿಹ ಲಿಂಗ ಸದ್ರೂಪ ಲಿಂಗವ ಮಾತಿನ ಮೂರ್ತಿ ವಿವರಿಸುವದಕ್ಕೂ ಆಗುವದಿಲ್ಲ ವಿವರಿಸದೆ ಇರುವದಕ್ಕೂ ಆಗುವದಿಲ್ಲ ತಿಳಿದಿಲ್ಲವೆಂತಲೂ ಹೇಳುವದಕ್ಕೆ ಆಗುವದಿಲ್ಲ ತಿಳಿದಿದೆ ಎಂತಲೂ ಹೇಳುವದಕ್ಕೂ ಆಗುವದಿಲ್ಲ ನಿರಂತರವಾದ ಸರ್ವಮಂಗಳ ತತ್ವ ಒಂದೆ ಸದ್ರೂಪಲಿಂಗ ಇರುವಲ್ಲಿ ಶಬ್ದಾದಿ ವಿಷಯಗಳೆಲ್ಲಿ ? ಕರ್ಮೇಂದ್ರಿ ಜ್ಞಾನೇಂದ್ರಿಯಂಗಳೆಲ್ಲಿ ಮನಸ್ಸು ಬುದ್ಧಿ ಇವುಗಳೆಲ್ಲಿ ? ಕಾರಣ ಸತ್‌ರೂಪ ಲಿಂಗ. ದಿನ ರಾತ್ರಿ ಭೇದ ಗಳಿಲ್ಲದ, ಉದಯಾಸ್ತಗಳಿಲ್ಲದ ನಿರಂತರವಾಗಿರುವ ಸರ್ವಮಂಗಳ ತತ್ವವೊಂದೆ ಲಿಂಗವಾಗಿರುವಲ್ಲಿ ಅಲ್ಲಿ ಸೂರ್ಯ ಚಂದ್ರ ಅಗ್ನಿ ಇವುಗಳ ಮಾತೆಲ್ಲಿ ? ಸತ್‌ರೂಪ ಲಿಂಗ ರೂಪವನ್ನೆ ನಿರೂಪ ಮಾಡಿದ ಲಿಂಗ ಶಬ್ದವನ್ನೆ ನಷ್ಟ ಮಾಡಿ ನಿಶಬ್ದಲಿಂಗದನುವ ತೋರಿಸಿದ ಗುರುವೆ ರೂಪ ಮುಗ್ಧಾನುಭವವುಳ್ಳ ಜಂಗಮದಿರುವ ತೋರಿಸಿದ ಗುರುವೆ ರೂಪ, ಪರಿಣಾಮಾನುಭವವುಳ್ಳ ಪ್ರಸಾದದಿರುವ ತೋರಿದ ಗುರುವೆ ನಿನ್ನ ಕರುಣೆಯ ಘನವದೆಂತು ವರ್ಣಿಸುವದು.

ರೂಪ ಸದ್ವಸ್ತು ಮಾಡಿ ತೋರಿದ, ರೂಪ ಚಿದ್ವಸ್ತು ಮಾಡಿ ತೋರಿದ, ರೂಪ ಮಹದಾನಂದ ಮಾಡಿ ತೋರಿದ ಈ ಕರ್ತಾರ ಅರುವಿನ ಕರ್ತಾರ. ಅರುವಿನಲ್ಲಿ ಸದ್ರೂಪ ಲಿಂಗ ಸೃಷ್ಠಿಸಿದ. ಅರುವಿನಲ್ಲಿ ಚಿದ್ರೂಪ ಜಂಗಮ ಸೃಷ್ಠಿಸಿದಅರುವಿನಲ್ಲಿ ಆನಂದ ರೂಪ ಪ್ರಸಾದ ಸೃಷ್ಠಿಸಿದ. ಇವುಗಳಿಗೆ ಇಷ್ಟಲಿಂಗವೆಂದು ಹೆಸರಿಟ್ಟು ಹೃದಯಕ್ಕೆ ಬ್ರಹ್ಮ ಬೀಜ ಬಿತ್ತಿದನಲ್ಲ ಆಹಾ ಎನ್ನ ಗುರುವೆ! ಆಹಾ ಎನ್ನ ಮಹದರಿವೆ! (ನಾನೆ) ನೀವೆ ಮಹಾ ಕಾಲದಲ್ಲಿ ನಿಮ್ಮಿಂದ ನೀವೆ ಸ್ವಯಂಭುವಾದುದರಿಂದ ಅರುವಿನ ಘನವ ತೋರಿದಿರಿ. ಓಹೋ! ನಿಮ್ಮ ಕರುಣೆ ಅಪಾರ ವಿರುವಲ್ಲಿ ಅರುವಿಂಗರುವಾಗಿಹ ಅಖಂಡಿತ ಲಿಂಗದಿರುವ ಕರುಣಿಸಿದಿರಿ. ಘನ ಚೈತನ್ಯ ಜಂಗಮದಿರುವು ಅದು ಅರಿಯಲಿಲ್ಲದ ಅರುವು ಎಂದು ಕರುಣಿಸಿದುದ ಅದನೆಂತು ವರ್ಣಿಸುವದು.

ಆನಂದ ರೂಪ ಪ್ರಸಾದ :

ಮಹವು ಮಹದಾನಂದದಲಕ್ಕಾಡಿ ಮತ್ತಲ್ಲಿಯೆ ಲೀಯವಾಗಿರ್ದ ಮಹಾ ಪ್ರಸಾದ, ಪರಿಣಾಮ ಪ್ರಸಾದ, ಇದು ಶುದ್ಧವನರಿದ ಪ್ರಸಾದ, ಸಿದ್ಧವನರಿದ ಪ್ರಸಾದ, ಪ್ರಸಿದ್ಧವನರಿದ ಪ್ರಸಾದವಾದುದರಿಂದ ಅರಿಯಬಾರದ ಘನದಿರುವ ಕರುಣಿಸಿದ. ಇದು ಅರುವಿಂಗರುವಾ ದುದರಿಂದ ಸತ್ತು ಚಿತ್ತಾನಂದವೆಂಬ ಬಟ್ಟಬಯಲಲ್ಲಿಕ್ಕಯ್ಯ ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ. ಕೆಲವರು ಲಿಂಗ ಜಂಗಮ ಪ್ರಸಾದವರಿಯದೆ ಸತ್ತು ರೂಪ ಚಿತ್ ರೂಪ ಜಂಗಮ, ಆನಂದ ರೂಪ ಪ್ರಸಾದವೆಂದು ಅನುಸಂದಾನ ಮಾಡ ಹೋದರು. ಭಾವವೆ ಘನವೆಂದು ಭಾವಿಸಿದರು. ಇವರುಗಳು ತಮಗೆ ತಿಳಿಯದಿದ್ದರೂ ತಿಳಿಯದಿರಲಿ ಶ್ರೀ ಗುರುಘನನ್ನಾದರೂ ಪ್ರಶ್ನೆ ಮಾಡಲಿಲ್ಲ, ಮುಗ್ದರಾಗಿ ಮುಗ್ಧ ಭಾವದಿಂದ ತಮ್ಮ ತಮ್ಮ ಭಾವದಂತೆ ಕೆಲಬರು ಸ್ತುತಿಸಿಯೆ ಸಮ್ಮತಿಯಾದರೆ ಕೆಲಬರು ನೆನಹು ಪ್ರಧಾನವೆಂದು ನೆನಹೆ ಅವರ ಮತವಾಯಿತು. ಇವರಾರು ಲಿಂಗ ಜಂಗಮ ಪ್ರಸಾದ ತಿಳಿಯ ಹೋಗಲಿಲ್ಲ, ಇದು

ಕಾರಣ ಅರುವಿನಲ್ಲಿ ರಚಿಸಿದ ಲಿಂಗ ಜಂಗಮ ಪ್ರಸಾದ ರೂಪವಾದರೂ ಇವರ ದೃಷ್ಟಿಗೆ ಸೀಮಿತ ತತ್ವವಾದವು. ರೂಪ ಅರೂಪವೆಂಬುದಕ್ಕೂ ನಿಲುಕದ ಲಿಂಗ. ದೃಶ್ಯ ಅದೃಶ್ಯವೆಂಬುದಕ್ಕೂ ನಿಲುಕದ ಲಿಂಗ, ವ್ಯಾಪ್ಯ ವ್ಯಾಪ್ಯಕವೆಂಬುದಕ್ಕೂ ನಿಲುಕದ ಅವರ್ಣೀಯ ಲಿಂಗ ತಿಳಿಯುವುದೆ ಶಬ್ದಮುಗ್ದ ತಾನೆ.

ಮರವರುವಿಗೆ ಮೀರಿನಿಂದುದು ಜಂಗಮ. ಮರಣ ವೆಂಬುದಕ್ಕೂ ಮೀರಿ ನಿಂದುದು ಜಂಗಮ. ಪ್ರಕಾಶ ವೆಂಬುದಕ್ಕೂ ಮೀರಿನಿಂದುದು ಜಂಗಮ. ಅರಿವ ಅರುಹಿಸಿಕೊಂಬ ಈ ಉಭಯಂಗಳ ಕಾಣದೆ ಅರಿಯಲಿಲ್ಲದ ಅರುವೆ ತಾನಾಗಿ ನಿಂದುದೆ ಜಂಗಮವೆಂದು ಹೇಳಿಹರು. ಜಂಗಮ ಘನವದು ಘನ ಚೈತನ್ಯವೆ ಘನ ಜಂಗಮ ಅರಿವುಡೆ ಘನಕ್ಕೆ ಘನ ತಾನೆ, ಪ್ರಸಾದವದು ಪರಮಾನಂದ ಪರಮಾಮೃತ ಪರಮ ಜ್ಞಾನ. ಇದು ನಿರಂತರವಾಗಿಹ ಮಂಗಳಮಯ ಪರಮ ಸತ್ಯದ ಆನಂದ ಸಹಜಾನಂದ. ಇದು ಅರಿಯಲಿಲ್ಲದ ಅರುವೆ ತಾನಾಗಿ ನಿಂತ ಅಕ್ರಿಯ ನಿಲುವು. ಅರಿಯಲಿಲ್ಲದ ಅರುವ ಸ್ವೀಕರಿಸಿ ಅರಿಯಲಿಲ್ಲ ತನ್ನ ನಿಜದಿರುವ ಮರೆಯಲಿಲ್ಲದ ಜ್ಞಾನ ಕ್ರಿಯೆ ನೊಳಗೊಂಡು ನಿಂದ ನಿಜವು ಇಂತಪ್ಪ ನಿಜದಲ್ಲಿ ನಿಂದುದೆ ಸತ್ತು ಚಿತ್ತಾನಂದ ಬಟ್ಟ ಬಯಲಲ್ಲಿಕ್ಕಿದಂತೆ ಎಂದು ತಿಳಿವುದು ಎಂದು ಹೇಳಿಹರು.

ಶ್ರೀಗುರುವಿನಿಂದ ಪ್ರಾಪ್ತವಾದ ಅರುವು ಇಷ್ಟಲಿಂಗ. ಈ ಇಷ್ಟಲಿಂಗವ ತಿಳಿವುಡೆ ವಾಙ್ಮನಕ್ಕಗೋಚರ ತಾನೆ. ಅಲ್ಲಿ ಭೋಧವೂ ಇಲ್ಲ ಅಭೋಧವೂ ಇಲ್ಲ, ಭೋದಾಭೋಧ ಮಿಶ್ರವು ಇಲ್ಲ, ಇವೆಲ್ಲವುಗಳಿಗೆ ಮೀರಿ ನಿಂದ ನಿಲುವೆ ತನ್ನಿರುವು, ವರ್ಣಾತಿತವೆಂಬುದು. ತನ್ನಿಂದ ತನಗೆ ವೇದ್ಯವಾದುದೆ ಬಯಲು. ಅದುವೆ ತನ್ನ ನಿಜನಿವಾಸ, ಅದುವೆ ಅಚಿಂತ್ಯತ್ವ, ತೃಪ್ತರೂಪ ತೃಪ್ತಿ, ಪರಮಾನಂದ ಬಟ್ಟಬಯಲಲ್ಲಿಕ್ಕಯ್ಯ ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶರಾ.

ವಚನ - 26

ತತ್ವದ ಲಿಂಗ ವೆಂದರುಹಿ ತ್ವಂ ಪದ ಅಂಗವೆಂದರುಹಿ
ಅಸಿ ಪದ ಪ್ರಾಣವೆಂದರುಹಿ ಅಂಗವೆ ಲಿಂಗ ಲಿಂಗವೆ ಪ್ರಾಣವೆಂದು
ಶ್ರೀಗುರು ಇಷ್ಟಲಿಂಗ ಕೊಟ್ಟು ದೃಷ್ಟಲಿಂಗವ ಮಾಡಿದ ಬಳಿಕ
ತತ್ವಮಸಿ ಪದ ನಿಮ್ಮ ಶರಣರು.

ತಾತ್ಪರ್ಯ : ತತ್ವದ ಲಿಂಗವೆಂದರುಹಿ ತ್ವಂ ಪದ ಅಂಗವೆಂದರುಹಿ ಅಸಿ ಪದ ಪ್ರಾಣವೆಂದರುಹಿ ಅಂಗವೆ :

ಲಿಂಗ ಲಿಂಗವೆ ಪ್ರಾಣವೆಂದು ಶ್ರೀಗುರು ಇಷ್ಟಲಿಂಗವ ಕೊಟ್ಟು ದೃಷ್ಟಿ ಲಿಂಗ ಮಾಡಿದ ಬಳಿಕ ತತ್ವಮಸಿ ಪದ ನಿಮ್ಮ ಶರಣರು.ಶ್ರೀ ಗುರು ಇಷ್ಟಲಿಂಗವ ಕೊಟ್ಟ ಅನುವ ನೋಡಿರೆ ? ಅಂಗ ಲಿಂಗ ಪ್ರಾಣ ಒಂದು ಮಾಡಿದ ಘನವ ನೋಡಿರೆ ? ತತ್ವಮಸಿ ವಿವರಿಸಿದ ಕರುಣೆ ನೋಡಿರೆ? ಇದು ಗುರ್ವಾನುಗ್ರಹ ಇದುವೆ ಗುರು ತನ್ನ ನೆನೆಹನ್ನಬರ ತನ್ನಂತೆ ಮಾಡುವ ಕೃಪೆ. ಅರು ಹೃದಯ ಅರುವಿನ ಕರ್ತಾರ. ಜಗತ್ತು ಸೃಷ್ಟಿ ಮಾಡುವ ಕರ್ತಾರರು ಇರಬಹುದು. ಇರುವರು. ಅವರಿಂದ ಜೀವನಿಗೆ ನಿಜವಾದ ಕಲ್ಯಾಣ ವಿದೆಯೆ? ಸುಖವ್ದಾದರೂ ಇದೆಯಾ?

ಮಂಗಳಮಯವೆ? ಇಲ್ಲ ದ್ದನ್ನು ಕಲ್ಪಿಸುವ ಕರ್ತಾರರು ನಿಜವಾದ ಕರ್ತಾರರಲ್ಲ. ಏಕೆಂದರೆ ಇಲ್ಲದ್ದನ್ನು ಇಲ್ಲ ಮಾಡಿದರೆ? ಇಲ್ಲದ್ದನ್ನು ಮಾಡಿ ತೋರಿಸುವಾಗ ಇದರಿಂದ ಇದ್ದ ವಸ್ತುವಿನ ಜ್ಞಾನವಾಯಿತೆ?

ಅರುವಿನ ಕರ್ತಾರ ಕರುಣೆಯ ಕರ್ತಾರ. ಇದ್ದ ಅಕಲ್ಪಿತ ಘನದಿರುವ ತೋರಿಸಿ ಕೊಟ್ಟು ನಿಸ್ಸೀಮ ನಿಲಯವುಳ್ಳ ಸುಖದೇಕರಸ ಸಿದ್ದ ಮಾಡುವ ಮಂಗಳಮಯ ಕರ್ತಾರನೆ ಕರುಣೆಯ ಕರ್ತಾರ. ಈ ಮಹಾಂತ ಶ್ರೀಗುರು ತತ್ವದ ಲಿಂಗ ವೆಂದರುಹಿದ ತತ್ವದ ಲಿಂಗಿ. ಇದು ಅಕಲ್ಪಿತ ಘನ. ಇದುವೆ ತ್ವಂ ಪದ. ಅಂಗವೆಂದರುಹಿದುದು ಅಕಲ್ಪಿತ ಘನ ಅಸಿ ಪದ ಪ್ರಾಣವೆಂದರುಹಿದ. ಸಕಲರಿಗೂ ಪ್ರಿಯವಾದುದು ಪ್ರಾಣ. ಪ್ರಾಣದ ಪ್ರಾಣ ಸಕಲರಿಗೂ ಪ್ರಿಯವಾದುದು. ಅಸಿ ಪದ ಅಖಂಡವಾಗಿಹ ಏಕರಸ. ಕಲ್ಪಿತ ನಿರಸವಾದ ಜ್ಞಾನವೆ ನಿಜಪದ. ಅಸಿಪದ ತತ್ವದ ಲಿಂಗವದು. ನಿರಂತರವಾಗಿರುವ ಸರ್ವ ಮಂಗಳಮಯ ಸತ್ಯ. ಅಂಗವದು ನಿರಂತರವಾಗಿರುವ ಸರ್ವಮಂಗಳಮಯ ಸತ್ಯ. ಅಸಿಪದ ಪ್ರಾಣವದು ಪ್ರಣವ ಪ್ರಭೆಯ ಮೇಲಣ ಪರಂಜೋತಿಯು. ಅಗಣಿತ ಅಕ್ಷರೇಶ್ವರವದು ನಿರಂತರ ಮಂಗಳಮಯವು.

ಅಂಗವೆ ಲಿಂಗ ಲಿಂಗವೆ ಪ್ರಾಣವೆಂದು ಶ್ರೀಗುರು ಇಷ್ಟಲಿಂಗವ ಕೊಟ್ಟು ದೃಷ್ಟ ಲಿಂಗವ ಮಾಡಿದ ಬಳಿಕ ತತ್ವಮಸಿ ಎಂಬುದು ನಿಮ್ಮ ಶರಣರು :

ಇಷ್ಟಲಿಂಗವ ಕೊಟ್ಟು ದೃಷ್ಟಲಿಂಗವ ಮಾಡಿದ ಬಳಿಕ ಅಂಗ ಲಿಂಗ ಲಿಂಗ ಅಂಗ ಒಂದಾದ ಸಂಕೇತ. ಅಲ್ಲಿ ವಿಭಾಗ ದೃಷ್ಟಿಗಿಂಬಲ್ಲ ಕಲ್ಪಿತನೆಂಬುದು ಮುನ್ನಿಲ್ಲ. ನಿಸೀಮ ನಿಲುವಿನಲ್ಲಿ ಅಂಗವಾವುದೊ ಲಿಂಗವಾವುದೊ ಏರಡೊಂದು ಮಾಡಿದುದು, ತನ್ನ ದೃಷ್ಟಿ ಲಿಂಗ ದೃಷ್ಟಿ. ನಿರಂತರವಾಗಿಹ ಮಂಗಳಮಯ ಪರಮ ಸತ್ಯ ದೃಷ್ಟಿ. ಈ ದಿವ್ಯದೃಷ್ಟಿ ನಿಜದೃಷ್ಟಿ ತಾನೆ ಲಿಂಗವಾಗಿಹ ಲಿಂಗಮಯ ದೃಷ್ಟಿ ತತ್ವ ಮಸಿ ಪದ ನಿಮ್ಮ ಶರಣರು ಇಷ್ಟಲಿಂಗ ವೆಂಬುದು ತತ್ವ ಮಸಿ. ತತ್ವ ಮಸಿ ಅದು ನಿಮ್ಮ ಶರಣರು. ಶರಣನೆ ಕೂಟಸ್ತ ನಿರುಪಾಧಿ ನಿರಾಮಯ ನಿರಾಲಂಬ ನಿರಂತರವಾಗಿರುವ ಮಂಗಳಮಯ ಸತ್ ಸ್ವರೂಪರು. ಇಷ್ಟಲಿಂಗ ಧರಿಸಿದ ಬಳಿಕ ಕೂಟಸ್ತ ತಾನಾಗದಿದ್ದಲ್ಲಿ ಫಲವೇನು? ನಿರಾಲಂಬ ನಿಸ್ಸಂಗದರಿವು ಆಗದಿದ್ದಲ್ಲಿ ಅಂಗದ ಮೇಲೆ ಲಿಂಗವಧರಿಸಿ ಫಲವೇನು? ನಿರಂತರವಾಗಿರುವ ಮಂಗಳಮಯ ಸ್ವಯಂ ಜೋತಿ ಲಿಂಗವೆಂಬ ಅರಿವು ತನ್ನಿಂದ ತನಗೆ ಜ್ಞಾನೋದಯವಾಗದಿದ್ದಲ್ಲಿ ಇಷ್ಟಲಿಂಗವ ಧರಿಸಿ ಫಲವೇನು? ಇಷ್ಟಲಿಂಗವ ಕೊಟ್ಟು ಗುರು ಘನ ದೃಷ್ಟ ಲಿಂಗ ಮಾಡಿದ ಬಳಿಕ ತತ್ವ ರೂಪ ಈಶ್ವರತ್ವವಿಲ್ಲ, ತ್ವಂ ಪದವಾದ ಜೀವತ್ವವಿಲ್ಲ, ಪಂಚ ಪ್ರಕಾರವಾಗಿಹ ಭೇದ ಜ್ಞಾನವಿಲ್ಲ, ಜೀವ ಈಶ್ವರರೆಂಬ ಭೇದ ಜ್ಞಾನವಿಲ್ಲ, ಜೀವ ಜೀವಿಗಳೆಂಬ ಭೇದ ಜ್ಞಾನವಿಲ್ಲ, ಜೀವ ಜಡವೆಂಬ ಭೇದ ಜ್ಞಾನವಿಲ್ಲ, ಈಶ್ವರ ಜಡವೆಂಬ ಭೇದ ಜ್ಞಾನವಿಲ್ಲ, ಜಡಾಜಡವೆಂಬ ಭೇಧ ಜ್ಞಾನ ಇಂತಿ ಪಂಚ ಪ್ರಕಾರದ ಭೇಧ ಜ್ಞಾನವೂ ಇಲ್ಲ, ಆರಿಗೆ ಶ್ರೀಗುರುವಿನಿಂದ ಇಷ್ಟಲಿಂಗ ದೊರತಿದೆ ಅವರು ಲಿಂಗಾಂಗ ಸಮರಸ ಜ್ಞಾನಿಗಳು. ತತ್ವ ಮಸಿ ತಾನಾದ ಶರಣನಾದುದರಿಂದ ತಾನು ಲಿಂಗ.ಲಿಂಗದ ಲಿಂಗವಾಗಿಹ ಸ್ವಯ ಲಿಂಗಿ. ತನ್ನ ಸ್ವರೂಪ ಸ್ವಯ ಲಿಂಗ. ಘನ ಮಹಿಮನೆ ತತ್ವ ಮಸಿ ಪದ ತಾನಾದ ಶರಣ. ಇಂತಪ್ಪ ಶರಣನೆ ತೆರಹಿಲ್ಲದ ಲಿಂಗ ಭರಿತ ಶರಣ. ಎಲ್ಲೆಡೆಯಲ್ಲೂ ಕಾಣಬಾರದ ಘನದ ಘನಾನುಭವಿ.

ನಿರಂತರವಾಗಿರುವ ಮಂಗಳಮಯ ಪರಮ ಸತ್ಯವ ಕಾಣುವ ನಿಃಶಬ್ದ ಲಿಂಗಾನುಭವಿ. ಲಿಂಗದ ಹೊರ್ತು ಅನ್ಯವ ಕಾಣದ್ದರಿಂದ ಇಷ್ಟಲಿಂಗ ದೃಷ್ಟ ಲಿಂಗವ ಮಾಡಿದ ಮಹಾಂತನೆ ನಮ್ಮ ಶರಣರು ಉರಿಲಿಂಗ ಪೆದ್ಧಿ ಪ್ರಿಯ ವಿಶ್ವೇಶ್ವರಾ ಎಂದು ಹೇಳಿಹರು.

ವಚನ - 27

ಅಂತರಂಗ ದೊಳಿರ್ದ ನಿರವಯ ಲಿಂಗವನು ಸಾವಯವ ಲಿಂಗವ ಮಾಡಿ ಶ್ರೀಗುರುಸ್ವಾಮಿ ಕರಸ್ತಲಕ್ಕೆ ತಂದು ಕೊಟ್ಟ ಲಿಂಗವು ಅಂತರಂಗವ ನಾವರಿಸಿ ಅಂತರಂಗದ ಕರಣಂಗಳೆ ಕಿರಣಂಗಳಾಗಿ ಆ ಬೆಳಗುವ ಚಿದಂಶವೆ ಪ್ರಾಣ ಲಿಂಗವು. ಆ ಮೂಲ ಚೈತನ್ಯವೆ ಭಾವ ಲಿಂಗವು. ಇದ ನರಿದು ನೋಡುವ ನೋಟ ಭಾವ ಪೂರ್ಣವಾಗಿ ತಾನು ತಾನಹನಲ್ಲದೆ ಇದಿರಿಟ್ಟು ತೋರುವದಿಲ್ಲವಾಗಿ ಅಖಂಡ ಪರಿಪೂರ್ಣಮಪ್ಪ ನಿಲವು ತಾನೆ ಕೂಡಲ ಸಂಗಮದೇವಾ.

ತಾತ್ಪರ್ಯ : ಚಿನ್ಮಯಾನಂದ ಬಸವೇಶ ಶ್ರೀಗುರು ಸ್ವಾಮಿ ಕರಸ್ತಲಕ್ಕೆ ತಂದು ಕೊಟ್ಟ ಲಿಂಗ ತಾನು ತಾನಹದಲ್ಲದೆ ಇದಿರಿಟ್ಟು ತೋರುವದಿಲ್ಲವಾಗಿ ಅಖಂಡ ಪರಿಪೂರ್ಣಮಪ್ಪ ನಿಲುವು ತಾನೆ ಎಂದು ಲಿಂಗದ ಘನವ ಸಕಲರಿಗೂ ಅರುಹಿದ ಮಹಾಂತ. ಲಿಂಗದ ಘನವರಿಯಲು ಅದರ ಗುಟ್ಟು ಕರುಣಿಸಿಹನು.

ಓಹೋ ದಯಾಮಯನೆ, ಅಂತರಂಗದೊಳಿರ್ದ ನಿರವಯ ಲಿಂಗ , ತನ್ನ ಅಂತರಂಗದೊಳಿರ್ದ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯವೆಂಬ ಕೋಶದೊಳಗಿರ್ದ ಲಿಂಗ. ಇಂದು ನಿರವಯ ಲಿಂಗ ನಿರ್ವಿಕಾರ ಲಿಂಗ. ಇದು ಅಂದು ಇಂದು ಎಂದೆಂದೂ ಇದ್ದ ಲಿಂಗ. ಸತ್ ಸ್ವರೂಪ ಲಿಂಗ ತೋರಬಾರದ ಘನವಾಗಿಹುದನ್ನೇ ಸಾವಯವ ಮಾಡಿದನಲ್ಲ, ಸಾವಯವ ಲಿಂಗವದು ಹೆತ್ತುಪ್ಪ, ನಿರವಯ ಲಿಂಗವದು ಕರಗಿದ ತುಪ್ಪ, ನಿರವಯ ಲಿಂಗವದು ಸತ್‌ರೂಪ ಲಿಂಗ, ಸಾವಯವ ಲಿಂಗವದು ಸತ್‌ರೂಪ ಲಿಂಗ ಎಂದು ಕರಸ್ಥಲಕ್ಕೆ ತಂದುಕೊಟ್ಟ ಲಿಂಗ. ಈ ಲಿಂಗವರಿಯಹೋಗಿ ಅಂತರಂಗವೆಲ್ಲವ ಆವರಿಸಿತ್ತಲ್ಲ ತುಂಬಿತ್ತಲ್ಲಾ, ಪೂರ್ಣ ವ್ಯಾಪಕವಾಗಿ ಪ್ರಜ್ವಲಿಸಿತ್ತಲ್ಲ ಇದೇನಾಶ್ಚರ್ಯ. ಅಂತರಂಗವೆಲ್ಲಾ ಸತ್ತಾರೂಪ ಲಿಂಗವಾಯಿತ್ತಲ್ಲ, ಅಲ್ಲಿರುವ ಕರ್ಣಂಗಳು ತಮ್ಮ ಕಲ್ಪಿತವ ಮರೆತು ವಿಚಾರ ಕಿರಣಂಗಳಾದುದು ಏನಾಶ್ಚರ್ಯ.

ವಿಚಾರ ಕಿರಣ : ಸಾವಯವ ಲಿಂಗವ ನೋಡಿ ನಿರವಯ ಲಿಂಗದರುವಿನ ವಿಚಾರ ನಡೆಯಿತ್ತಲ್ಲ, ಈ ಅರುವಿನ ಲಿಂಗ ವಿಚಾರವೆ ಲಿಂಗ ಕಿರಣಂಗಳಾಗಿಹವು ನೋಡಾ.

ಅರುರೂಪ ಲಿಂಗ ಕಿರಣಂಗಳು : ಆ ಬೆಳಗುವ ಚಿದಂಶವೇ ಪ್ರಾಣ ಲಿಂಗವು. ಲಿಂಗ ವಿಚಾರವೇ ಅರುವಿನ ಲಿಂಗ ಕಿರಣಂಗಳು. ಲಿಂಗ ಕಿರಣಂಗಳೇ ತೋರದಡಗದ ವಿಚಾರ, ಅಭಾಧಿತ ವಿಚಾರ, ಉದಯಾಸ್ತಕ್ಕೆ ಮೀರಿದ ವಿಚಾರ, ಗುಣಾತೀತ ವಿಚಾರ, ಭಾವಾತೀತ ವಿಚಾರ. ಅರಿಯಲಿಲ್ಲದ ಅರುವ ಸ್ವೀಕರಿಸಿ , ಅರಿಯಲಿಲ್ಲ ಮರೆಯಲಿಲ್ಲದ ವಿಚಾರ. ಇದು ಚಿಂತನೆಗೆ ಮೀರಿ ನಿಲ್ಲುವ ವಿಚಾರ. ಅಲ್ಲಿ ಬೆಳಗುವ ಜ್ಞಾನ ಘನವೇ

ಚಿದಂಶವು. ಅಂತಪ್ಪ ಚಿದಂಶವೇ ಪ್ರಾಣಲಿಂಗ.

ಪ್ರಾಣಲಿಂಗವದು ತುಂಬಿದುದು. ಇದರ ನಂಬಿಗೆ ಅಚಲವಾದಲ್ಲಿ ಅನುಮಾನಕ್ಕಿಂಬಿಲ್ಲ. ಇದು ತಾನೇ ವಶವಾದಲ್ಲಿ ಬೇಸರವಾಗದು. ಇದು ಸುಖದ ಸುಖವಾಗಿಹ ಇರುವುಳ್ಳದ್ದಾಗಿರುವುದರಿಂದ ಮರವೇ ಬರದು. ಏಕೆಂದರೆ ಇದು ಮೂಲ ಚೈತನ್ಯವು. ಈ ಚೈತನ್ಯವೇ ಭಾವಲಿಂಗವು.

ಲಿಂಗ ಭಕ್ತರು ಲಿಂಗ ಪೂರ್ಣ ಅನ್ನುವುದುಂಟು. ಗಗನ ಸದೃಶವಾದುದೆಂದು ಉಪಮಿಸುವವರು ಸಿಕ್ಕಬಹುದು. ಇತ್ತ ನಂಬಿಗೆ ಇಲ್ಲದ ಭಕ್ತ ವರ್ಗವೂ ಸಿಕ್ಕುತ್ತದೆ. ಇವರು ತೋರಿ ಇಲ್ಲವಾಗುವ ಮಾಯಿಕಕ್ಕೆ ಮೋಸ ಹೋಗಿ ನಂಬಿಗೆ ಉಳಿಯದಂತಾಗಿದೆ. ನಿಜದ ನಂಬಿಗೆ ಉಳ್ಳವರು ಸಿಕ್ಕುವುದು ವಿರಳ. ನಿಜದ ನಂಬಿಗೆ ಪೂರ್ಣದ ನಂಬಿಗೆ. ಪೂರ್ಣ ನಂಬಿಗೆ ಅದು ಅರಿತು ಒಪ್ಪಿಗೆಯಾಗಿಹ ತನ್ನ ನಂಬಿಗೆ. ಪೂರ್ಣವೆಂಬುದು ಅರಿಯ ಹೋಗಿ ತಾನೇ ಪೂರ್ಣಾತ್ ಪೂರ್ಣನಾದುದರಿಂದ ಅಲ್ಲಿ ಸಂದೇಹ ಬರದು. ಪೂರ್ಣವದು ತೆರಹಿಲ್ಲದ ನಿಜ. ನಿರಂತರವಾಗಿಹ ಮಂಗಳಮಯ ಸ್ವಯಂ ಜ್ಯೋತಿ. ಇದನರಿದು ನೋಡುವುದೇ ನೋಡದ ನೋಟ ಲಿಂಗ ನೋಟ. ಅರುವು ಮರುವಿಂಗೆ ಮೀರಿದ ನೋಟ. ಅರಿವ ಅರುಹಿಸಿಕೊಂಬ ಈ ಉಭಯಂಗಳಾಗದಿದ್ದುದು ಮೂಲ ಚೈತನ್ಯ. ಅರಿಯಬಾರದ ಘನವರಿತು ಅರಿಯದಂತಿದ್ದುದೇ ಭಾವಲಿಂಗ. ಮೂಲ ಚೈತನ್ಯವೇ ಭಾವ ಲಿಂಗವು. ಇದನರಿದು ನೋಡುವ ನೋಟ ಭಾವಪೂರ್ಣವಾಗಿ ತಾನು ತಾನಹನಲ್ಲದೆ ಇದರಿಟ್ಟು ತೋರುವುದಿಲ್ಲವಾಗಿ ಅಖಂಡ ಪರಿಪೂರ್ಣಮಪ್ಪ ನಿಲುವು ತಾನೇ. ಕೂಡಲ ಸಂಗಮ ದೇವಾ.

ಮೂಲ ಚೈತನ್ಯವದು ಅರಿಯಬಾರದ ಘನ. ಅರಿಯಬಾರದ ಘನವರಿಯಲು ಅರಿಯಲಿಲ್ಲದ ಅರುವು ಅವಗ್ರಹಿಸಿದುದು. ಇದುವೇ ಭಾವ ಲಿಂಗವು. ಅರಿಯಲಿಲ್ಲದ ಅರುವ ಸ್ವೀಕರಿಸಿ ಅರುವ ಅರುಹಿಸಿಕೊಂಬುದು ಅರಿಯಲಿಲ್ಲ. ಅರಿಯದ ಅರುವೇ ಮರೆಯಲಿಲ್ಲವಾದ್ದರಿಂದ ನೋಡದ ನೋಟ. ಇದು ಕಣ್ಣಿನ ಕಣ್ಣಾದ ನೋಟ. ನಿಜದ ನೋಟ. ನಿಜದ ನೋಟದಲ್ಲಿ ಭಾವಪೂರ್ಣವಾಗಿ ತಾನೇ ತಾನಾಗಿಹುದರಿಂದ ಇದಿರಿಟ್ಟು ತೋರುವುದಿಲ್ಲವಾಗಿ ಅಖಂಡಿತ ಘನ. ಪೂರ್ಣಮಪ್ಪ ತನ್ನಿರುವು ಅರುವೆಂದರಿಯದ ಶರಣ ಅಖಂಡ ಪರಿಪೂರ್ಣ ನಿಲುವು ತಾನೇ. ಕೂಡಲ ಸಂಗಮ ದೇವಾ ಎಂದು ಹೇಳಿಹರು.

ವಚನ - 28

ಅರಿವನರಿದೆನೆಂಬುದು ಮರವೆ. ಮರಹ ಮರೆದೆನೆಂಬುದು ಮರವೆ.
ಸಾಕಾರ ನಷ್ಟ. ನಿರಾಕಾರ ದೃಷ್ಟನೆಂಬುದು ಭಾವದ ಬಳಲಿಕೆ.
ಗುರುವೆಂಬುದು ಶಿಷ್ಯನೆಂದಲ್ಲಿಗೆ ಹೋಯಿತ್ತು.
ಶಿಷ್ಯನೆಂಬುದು ಗುರುವೆಂದಲ್ಲಿಗೆ ಹೋಯಿತ್ತು.
ನಿರ್ಣಯದಲ್ಲಿ ನಿಜೈಕ್ಯನಾಗಿರ್ದೆನೆಂದಡೆ ಎಚ್ಚರಿಕೆಯಲ್ಲಿ ತಪ್ಪಿತ್ತು.
ಸಹಜ ಸಂಬಂಧಕ್ಕೆ ಗುರುವಲ್ಲದೆ, ಅಸಹಜಕ್ಕೆ ಗುರುವುಂಟೆ ?
ಗುಹೇಶ್ವರ ಲಿಂಗದಲ್ಲಿ ಪರವೆಂದಲ್ಲಿ ಗುರುವುಂಟಲ್ಲದೆ ಸ್ವಯವೆಂದಲ್ಲಿ ನುಡಿಯಲಿಲ್ಲ.

ತಾತ್ಪರ್ಯ : ಅರಿವನರಿದೆನೆಂಬುದು ಮರವೆ :

ಅರುವು ಅಂದು ಇಂದು ಎಂದೆಂದೂ ಇದ್ದಂತಿದ್ದ ಘನವು. ಅದು ಅರಿಯಬಾರದ ಘನವು. ಅದು ಅರಿಸಿಕೊಳ್ಳುವ ದೃಷ್ಯವೂ ಆಗಿಲ್ಲ, ಅರಿಯುವ ದೃಕ್ ಆಗಿಲ್ಲ, ಅರಿದರುಹಿಸಿಕೊಂಬುದಕ್ಕೂ ಮೀರಿದ ಘನ. ಅದನೆಂತು ಅರಿವುದು ?

ಕಣ್ಣು : ಸಕಲರನ್ನು ಕಾಣುವುದು ಕಣ್ಣು, ಕಣ್ಣನ್ನು ಕಾಣುವುದು ಅದಾವ ಸಾಧನೆಯಿಂದ. ಕನ್ನಡಿಯಿಂದ ಕಾಣಬಹುದು ಎಂದು ಹೇಳಿದರೂ, ಕನ್ನಡಿಯನ್ನು ಕಣ್ಣೇ ಕಾಣುವುದಲ್ಲದೇ, ಕಣ್ಣನ್ನು ಅದು ಕಾಣಲಿಲ್ಲ. ಹಾಗೆ ಬೆಳಕು ಕತ್ತಲೆಯ ಕಾಣುವುದು ಕಣ್ಣಲ್ಲವೇ. ಮರವೆಂಬ ಕತ್ತಲೆಯನ್ನು ಅರುವೆಂಬ ಬೆಳಕನ್ನು ಬೆಳಗುವದು ಅರಿಯಬಾರದ ಘನವು. ಅದು ಅರುವಿಂಗರುವಾಗಿಹ ಅರುವು. ತಾನೇ ತಾನಾಗಿಹ ಸ್ವಮಹಿಮವು. ಅದನ್ನು ಅರಿದೆನೆಂಬುದು ಮರವು.

"ಅರುವ ಅರಿದಿಹೆನೆಂಬುದು ಅರುವು ಮರಹಿಂಗೊಳಗಾಗಿತ್ತಾಗಿ ಆ ಅರುವಿನಿಂದ ಅರಿದಿಹೆನೆಂಬ ಅಜ್ಞಾನಿಯ ಮಾತು ಕೇಳಲಾಗದು. ಭಾವದಿಂದ ಭಾವಿಸಿಹೆನೆಂಬುದು ಭಾವ ಭ್ರಮಿತಕ್ಕೊಳಗಾಗಿ , ಆ ಭಾವದಿಂದ ಭಾವಿಸಿಹೆನೆಂಬ ಭ್ರಮಿತನ ಮಾತ ಕೇಳಲಾಗದು. ಜ್ಞಾನದಿಂದ ಅರಿದಿಹೆನೆಂಬುದು ಜ್ಞಾನ ಅಜ್ಞಾನಕ್ಕೊಳಗಾಗಿ, ಆ ಜ್ಞಾನದಿಂದ ಅರಿದಿಹೆನೆಂಬ ಅಜ್ಞಾನಿಯ ಮಾತ ಕೇಳಲಾಗದು. ಕೂಡಲಚೆನ್ನ ಸಂಗ ನಿಮ್ಮ ಶರಣ ಸುಜ್ಞಾನಭರಿತ ".

ಅರುವ ಅರಿವಿನಿಂದ ಅರಿದಿಹೆನೆಂಬುವರೆಲ್ಲರೂ ಅಜ್ಞಾನಿಗಳೇ. ಭಾವದಿಂದ ಭಾವಿಸಿಹೆನೆಂಬುವವರೆಲ್ಲರೂ ಭಾವಭ್ರಮಿತರೇ. ಜ್ಞಾನದಿಂದ ಅರಿದಿಹೆನೆಂಬುವರೆಲ್ಲರೂ ಅಜ್ಞಾನಿಗಳೆ. ಅರಿಯಬಾರದ ಘನವ ಅದಾವ ಅರುವಾಗಿ ಅರಿಯುವುದು ? ಖಂಡಾಖಂಡ ಸಂಯೋಗವಿಲ್ಲದ ಅಖಂಡಿತನ ನಿಲುವು ಅದಾವ ಜ್ಞಾನದಿಂದ ಅರಿಯುವುದು ?. ಅಸದ್ವಸ್ತುವ ಅರಿಯುವ ಸಟೆಯು ದಿಟವ ಅರಿಯಬಹುದೇ ?. ಶರಣರು ಅರಿಸಿಕೊಳ್ಳುವ ಅನಾತ್ಮವ ಕಂಡವರಲ್ಲ, ಅರಿಯುವ ದೃಕ್ ಕಂಡವರಲ್ಲ, ಕಾಣಬಾರದ ಘನವೇ ತಾವಾದ ಅನುಪಮರು. ಅರಿಯಬಾರದ ಘನವರಿತು ಅರಿಯದಂತಿದ್ದ ಅನುಪಮರು, ನಿಶ್ಚಬ್ದವೇದಿಗಳು. ತಾನಾರೆಂದರಿತು ಘನಕ್ಕೆ ಘನವಾಗಿಹ ಶಬ್ದಮುಗ್ದರು.

"ಸ್ಥಲವೆಂದೆನ್ನೆ ನಿಸ್ಥಲವೆಂದೆನ್ನೆ ನಿರ್ಣಯವೆನಗಾದ ಬಳಿಕ ಏನೆಂದರಿಯೆನಯ್ಯ ಇದು ಕಾರಣ ಕೂಡಲಚೆನ್ನ ಸಂಗಯ್ಯ ಲಿಂಗೈಕ್ಯವೆಂದೆನ್ನೆ " ಗಗನಕ್ಕೆ ಅದಾವ ಸ್ಥಲ ? ಅದಾವ ನಿಸ್ಥಲ ? ಅದಾವ ತನ್ನದೇಶ ಅನ್ಯದೇಶ ? ತಾನೇ ತಾನಾದ ತನ್ನಿರುವು ತನಗೆ ನಿರ್ಣಯವಾದ ಬಳಿಕ ಉಪಮಿಸುವುದದೆಂತು ? ಹಾಗೆ ತಾನಾರೆಂದರಿತ ಶರಣ ಅರಿಯಬಾರದ ಘನವರಿತು ಅರಿಯದಂತಿದ್ದ ನಿರುಪಮ. ಅರಿಯಲಿಲ್ಲದ ಅರುಹೇ ತಾನಾಗಿಹ ಸ್ವಯಂ ಜ್ಯೋತಿ. ಷಟ್‌ಸ್ಥಲವಾಗದವನು ನಿಸ್ಥಲವಾಗದವನು ಬೆಳಗುಳ್ಳ ಜ್ಯೋತಿ. ಅದು ನನ್ನ ನಾ ಅರಿತೆನೆಂದು ನುಡಿದಿರುವುದೇ ? ಅದು ಕತ್ತಲೆಯಾದರೂ ಕಂಡಿರುವುದೇ ? ಕಂಡಿಲ್ಲವೆಂದಲ್ಲಿ ಕತ್ತಲೆಯ ನಾನು ಕಂಡಿಲ್ಲವೆಂದು ಅದು ನುಡಿದಿರುವುದೇ ? ಅರುವ ಅರಿತವರು ಅರು ಸ್ವರೂಪರು ಚಿತ್ ಸ್ವರೂಪರು. ಚಿತ್ ಸೂರ್ಯನೇ ತಾನಾಗಿಹ ಸ್ವತೇಜ. ಸಚಿದ್ರೂಪವಾಗಿಹ ಮಹಾಂತ ಅರಿತವನೆನಲಿಲ್ಲ , ಅರಿಯದವನೆನಲಿಲ್ಲ, ಅರಿಯಲಿಲ್ಲದ ಅರುವೇ ತನ್ನಿರುವಾದಲ್ಲಿ ತನ್ನೊಳಗೆ ತೋರಿ ಇಲ್ಲವಾಗಿಹ ಮಾಯಿಕ ಕಾಣಬಹುದೇ ? ಕಾಣದ್ದರಿಂದ ತೋರಿ ಇಲ್ಲವಾಗಿಹ

ಮರವು , ಮರವಿನ ಕಾರ್ಯವಾದ ಪಿಂಡಾಂಡವಾಗಲಿ, ಅದರ ಕಾರ್ಯವಾಗಲಿ ಚಿದಹಮ್ಮು ಆಗಲಿ, ಚದಹಮ್ಮಿನ ಕಾರ್ಯವಾದ ಪಾರಮಾರ್ಥದ ತೋರಿಕೆಯಾಗಲಿ ಕಾಣಲಿಲ್ಲ. ಇದು ಕಾರಣ ಶರಣರು ಇದ್ದಂತಿದ್ದ ನಿರುಪಮರು. ನಿಜೈಕ್ಯರ ದೃಷ್ಟಿಗೆ ಅರುವ ಅರಿದಿಹೆನೆಂಬುದು ಮರವೆ, ಮರವ ಮರೆದಿಹೆನೆಂಬುದು ಮರವೆ ಎಂದು ಎಚ್ಚರಿಸಿಹರು.

ಸಾಕಾರ ನಷ್ಟ ನಿರಾಕಾರ ದೃಷ್ಟವೆಂಬುದು ಭಾವದ ಬಳಲಿಕೆ : ತೋರುವ ಸಾಕಾರ ನಷ್ಟ ತೋರದಡಗದ ನಿರಾಕಾರ ದೃಷ್ಟವೆಂಬುದು ಭಾವದ ಬಳಲಿಕೆ. ಅನಾತ್ಮವಾವುದು ಅದು ಅನಿತ್ಯ. ಆತ್ಮವಾವುದು ಅದು ನಿತ್ಯ. ಜಡವದು ಅನಿತ್ಯ, ಚೇತನವಾವುದು ಅದು ನಿತ್ಯ. ದೃಷ್ಯವೆಂಬುದು ನಷ್ಟ, ದೃಕ್‌ದೃಷ್ಟವೆಂಬುದು ಭಾವದ ಬಳಲಿಕೆ. ಎಲ್ಲಿಯವರೆಗೆ ಭಾವಕ್ಕಗಮ್ಯವಾಗಿಹ ತನ್ನಿರುವಿನ ಎಚ್ಚರವಾಗುವುದಿಲ್ಲ ಅಲ್ಲಿಯವರೆಗೆ ಈ ಭಾವದ ಬಳಲಿಕೆ ಹೋಗುವುದಿಲ್ಲ. ಬಳಲಿಕೆ ಹೋಗುವುಡೆ ಆಗ ತಾನು ನಿಸ್ಸೀಮನು. ನಿಸ್ಸೀಮಿಯು ಸೀಮಿತ ಉಳ್ಳದ್ದಾಗದು. ಅಖಂಡಿತವು ಖಂಡಿತವಾಗದು.

ಗುರುವೆಂಬುದು ಶಿಷ್ಯನೆಂದಲ್ಲಿಗೆ ಹೋಯಿತ್ತು. ಶಿಷ್ಯನೆಂಬುದು ಗುರುವೆಂದಲ್ಲಿಗೆ ಹೋಯಿತ್ತು : ಗುರು ಘನವದು ಗುರುಲಿಂಗವು. ಅಖಂಡ ಜ್ಯೋತಿಯು ಚಿದಾಕಾಶವು ಚಿದ್‌ಜ್ಯೋತಿಯಾದಲ್ಲಿ ತನಗಿಂತನ್ಯವ ಕಾಣಲುಂಟೆ ? ಕಾಣದಿರುವಲ್ಲಿ ಇಲ್ಲದ ಶಿಷ್ಯ ಕಾಣುವನಾದ್ದರಿಂದ ಗುರುವಾದವನು ಶಿಷ್ಯನೆಂದಲ್ಲಿಯೇ ಹೋಯಿತ್ತು. ಶಿಷ್ಯನೆಂಬುದು ಅಖಂಡ ಜ್ಯೋತಿ. ಅನುಪಮ ಜ್ಯೋತಿಯು ತಾನೇ ತಾನಾಗಿರುವಲ್ಲಿ ಇಲ್ಲದ ಮಾಯಿಕ ಗುರುವ ಕಂಡು ಶಿಷ್ಯನಾದವನು, ಗುರುವೆಂದಲ್ಲಿಯೇ ತನ್ನ ಅಖಂಡತ್ವದಿಂದ ದೂರಾಯಿತ್ತು. ಕಾರಣ ಶಿಷ್ಯನೆಂಬುದು ಗುರುವೆಂದಲ್ಲಿಯೇ ಹೋಯಿತ್ತು ಎಂದು ಹೇಳಿಹರು.

ನಿರ್ಣಯದಲ್ಲಿ ನಿಜೈಕ್ಯನಾಗಿಹೆನೆಂದಡೆ ಎಚ್ಚರಿಕೆಯಲ್ಲಿ ತಪ್ಪಿತ್ತು : ಆವುದು ಆದಿಯನ್ನಲು ಬರದು, ಅನಾದಿಯನ್ನಲು ಬರದು, ಆದಿ ಅನಾದಿಯಿಂದತ್ತತ್ತ ಮುನ್ನಲಾದ ಪರತತ್ವ ಅದಕ್ಕೆ ಪ್ರಕೃತಿಯನ್ನಲು ಬರದು ಪುರುಷನೆನ್ನಲೂ ಬರದು ನುಡಿಗೆಡೆಗೊಡದ ಘನನಾಜೀವನು. ನೀ ಪರಮನೆಂಬುದಕ್ಕೂ ತೆರಹಿಲ್ಲದ ಘನ. ಅದಾರು ನಿರ್ಣಯ ಮಾಡುವುದು. ನಿರ್ಣಯಕ್ಕೊಳಪಟ್ಟುದು ಅದು ಬುದ್ದಿಯ ಕಾರ್ಯ. ಮರವರುವಿಗೆ ಮೀರಿದ ಘನವು ಅದು ಬೆಳಗಿಂಗೆ ಬೆಳಗು. ನಿಸ್ಸೀಮ ಬೆಳಗು ನಿರಾತಂಕ ಬೆಳಗು, ಬುದ್ಧಿಯ ನಿರ್ಣಯ ಮಾಡುವುದದೆಂತು ? ಸಟೆಯು ದಿಟವ ಕಾಣಬಹುದೆ. ಇಲ್ಲದುದು ಇಲ್ಲವೇ ಇಲ್ಲ, ಇದ್ದುದು ಅಂದು, ಇಂದು, ಎಂದೆಂದೂ ಇದ್ದ ಪರಮ ಸತ್ಯದಲ್ಲಿ ನೀನಾವುದಾಗಿ ಲೀನವಾಗುವೆ. ಪರಮ ಸತ್ಯದಂತ ಇನ್ನೊಂದು ಸತ್ಯವಿದೆಯೇ ? ಅದರ ಸಮಾನವಾದರೂ ಇದೆಯೇ ಇದ್ದಲ್ಲಿ ನಿರ್ಣಯ ಮಾಡಬಹುದು. ನಿಜದಲ್ಲಿ ಲೀಯವಾಗಬಹುದು. ಸತ್ಯಾಸತ್ಯವೆಂಬುದಕ್ಕೂ ಎಡೆಗೊಡದ ನಿರಾತಂಕ ಘನವು ಅದು ನಿರಂತರವಾಗಿಹ ಮಂಗಳಮಯವಾಗಿಹ ಪರಮ ಸತ್ಯವು. ನಿಸ್ಸೀಮವಾದುದು. ಅದನ್ನು ಬುದ್ಧಿಯಿಂದ ನಿರ್ಣಯ ಮಾಡಿ ನಿಜದಲ್ಲಿ ಲೀಯವಾಗುವುದೆಂದಲ್ಲಿ ಎಚ್ಚರಿಕೆಯಲ್ಲಿ ತಪ್ಪಿತ್ತು ಎಂದು ಹೇಳಿಹರು. ನಿಜೈಕ್ಯನೆಂಬುದು ಎರಡಾಗಿ ನೋಡುವ ನೋಟವೂ ಇಲ್ಲ, ಒಂದಾಗಿ ಕೂಡುವ ಸಮರಸವೂ ಇಲ್ಲದ್ದರಿಂದ ತಾನೇ ತಾನಾಗಿಹ ಬೆಳಗುಳ್ಳ ಘನವೂ ಇದ್ದುದರಿಂದ ನಿರ್ಣಯದಲ್ಲಿ ನಿಜೈಕ್ಯನಾದೆನೆಂದರೆ ಎಚ್ಚರಿಕೆಯಲ್ಲಿ ತಪ್ಪಿತ್ತು ಎಂದು ಬಿತ್ತರಿಸಿಹರು.

ಸಹಜ ಸಂಬಂಧಕ್ಕೆ ಗುರುವಲ್ಲದೆ, ಅಸಹಜಕ್ಕೆ ಗುರುವುಂಟೆ ? : ಮರವಿನಲ್ಲಿ ನನ್ನ ನಾನು ಅರಿಯೆನೆಂಬುದು ಸಹಜ. ಹಾಗೆ ಅರುವಿನಲ್ಲಿ ನನ್ನ ನಾನು ಅರಿತೆನೆಂಬುದು ಸಹಜ. ಅರಿತೆ ಅರಿಯೆನೆಂಬುದು ಇದು ಮರವರುವಿನ ಕಾರ್ಯ. ಅರಿಯದವನಿಗೆ ಗುರು ಹೇಗೆ ಅವಶ್ಯಕವೋ ಹಾಗೆ ನನ್ನ ನಾನು ಅರಿತೆನೆಂಬುವವನಿಗೂ ಗುರು ಅವಶ್ಯಕವು. ಎಲ್ಲಿಯವರೆಗೆ ಮರುವುಳ್ಳವನಾಗಿಹನು ಅಲ್ಲಿಯವರೆಗೆ ಗುರುವುಂಟು. ಅರಿಯಬಾರದ ಘನವರಿತು ಅರಿಯದಂತಿದ್ದ ಶರಣ ಅನುಪಮ, ಅಸಹಜರು. ಅವರಿಗೆ ಗುರು ವುಂಟೆ ? .

ಗುಹೇಶ್ವರ ಲಿಂಗದಲ್ಲಿ ಪರವೆಂದಲ್ಲಿ ಗುರುವುಂಟಲ್ಲದೆ ಸ್ವಯವೆಂದಲ್ಲಿ ನುಡಿಯಲಿಲ್ಲ : ಆರು ಗುಹೇಶ್ವರ ಲಿಂಗ ಘನವಾಗಿ ತಾನು ಪೂಜಕನಾಗಿ ಕಾಣುವನೋ ಅವನಿಗೆ ಗುರು ಅವಶ್ಯವಾಗಿ ಉಂಟು. ತಾನೇ ಗುಹೇಶ್ವರ ಲಿಂಗವೆಂದಲ್ಲಿ ಗುರುವಿನ ಅವಶ್ಯಕತೆಯೇ ಇಲ್ಲ. ನುಡಿಗೆಡೆಗೊಡದ ಘನವೇ ತನ್ನಿರುವೆಂದ ಮಹಾಂತ. ತಾನೇ ತಾನಾದ ಸ್ವಯಂ ಜ್ಯೋತಿ ಲಿಂಗವೆಂದು ಹೇಳಿಹರು.

ವಚನ - 29

ಮನ ಮನ ಬೆರಸಿದವರಂತಿಪ್ಪವರ ಪರಿಯನರಿಯಬಾರದು ಕೇಳಾ,
ಇದಿರಿಂಗೆ ಇಚ್ಛೆಯರಿಯದಿಪ್ಪರು ಒಳಗೆ ನೋಡಿದರೆ ಬಟ್ಟಬಯಲಲ್ಲಿಪ್ಪರು.
ಗುಹೇಶ್ವರನ ಶರಣರು ತಾವಿಲ್ಲದ ಮಹಿಮರೆಂಬುದು
ನಿನ್ನಿಂದಲರಿದೆ ನೋಡಾ ಸಿದ್ಧರಾಮಯ್ಯ.

ತಾತ್ಪರ್ಯ : ಮನ ಮನ ಬೆರಸಿದವರಂತಿಪ್ಪವರ ಪರಿಯನರಿಯಬಾರದು ಕೇಳಾ :
ಮನ ಮನ ಇವಾವು ಉಪಾದಿಕ ಮನ, ಉಪಾದಿರಹಿತ ಮನ. ಅರಿಯಲಿಲ್ಲದ ಅರುವಾಗಿಹ ಅನುಪಮ ಲಿಂಗದಲ್ಲಿ ಲೀಯವಾಗಿಹ ಪರಿಯ ಅರಿಯಬಾರದು ಕೇಳಾ. ಅವಿಚಾರ ಮನ, ವಿಚಾರ ಮನ, ಅರಿಯಬಾರದ ಘನದಲ್ಲಿ ಲೀಯವಾದರೆ, ಸಾಕಾರ ನಿರಾಕಾರವೆಂಬೆರಡು ಅಧಿಷ್ಠಾನದಲ್ಲಿ ಲೀಯವಾಗಿಹವು ನೋಡಾ. ಅಧಿಷ್ಠಾನದಲ್ಲಿ ಬೆರೆತ ಮನ ತಮ್ಮ ತಮ್ಮ ಕಲ್ಪಿತವ ಮರೆತು ಅರುವಿಂಗರುವಾಗಿಹವೆ, ಇಲ್ಲದುದು ಇಲ್ಲವಾಗಿ ಇದ್ದುದು ಸಿದ್ಧವಾಯಿತೇ ? ಭ್ರಾಂತು ನಿಭ್ರಾಂತುವೆಂಬೆರಡು ಕಲ್ಪಿತವ ಕಳೆದುಕೊಂಡು ಮುನ್ನಲಾದ ಘನದಲ್ಲಿ ಲೀನವಾದವೆ ? ಮನ ಮನ ಬೆರಸಿದಂತಿಪ್ಪವರ ಪರಿಯ ನರಿಯಬಾರದು ಕೇಳಾ. ಮನವೆಂಬೆರಡು ಆವುದರಲ್ಲಿ ಬೆರಸಿದವರು. ಅದರ ಪರಿ ಹೇಗೆ ಅರಿಯಲು ಬಾರದಿದ್ದುದು ಅದನ್ನು ಬೆರಸಿದುದು ಹೇಗೆ ?

ನಾಮರೂಪ ತಾನೆನ್ನುವ ಮನ ಒಂದು. ಅಸ್ತಿ, ಭಾತಿ, ಪ್ರಿಯವೆ ನಾನೆನ್ನುವ ಮನ ಎರಡು. ಮುನ್ನ ಮುನ್ನಲಾದ ಘನದಲ್ಲಿ ಲೀಯವಾದುದು. ಇದರ ಪರಿಯ ಅರಿಯಬಾರದುದು ಎಂದು ಹೇಳಿರುವಲ್ಲಿ ಘಟಾಕಾಶ, ಮಠಾಕಾಶ, ತನ್ನ ಉಪಾಧಿ ಕಳೆದುಕೊಂಡು ಆಕಾಶ ವತ್ ಆಕಾಶವಾದುದು ಇದನೆಂತು ಅರಿವುದು ?

ಸಂಕಲ್ಪ ವಿಕಲ್ಪ ರೂಪ ಮನ ಅದು ಅವಿಚಾರವು. ಅರುವಿನ ಲಕ್ಷಣಾತ್ಮಕ ಮನ, ವಿಚಾರ ಮನ ಇವೆರಡೂ ನುಡಿಗೆಡೆಗೊಡದ ಘನದಲ್ಲಿ ಲೀಯವಾದುದು ಅರಿಯಬಾರದು.

ದೇಹವೆಂಬುದೊಂದು ಮನ, ದೇಹೀ ಎಂಬುದೊಂದು ಮನ. ಇವೆರಡೂ ದೇಹಿಗೆ ದೇಹಿಯಾಗಿರ್ಪುದಲ್ಲಿ ಅರಿಯಬಾರದು. ಮರವೆಂಬುದು ಮನ. ಅರುವೆಂಬುದು ಮನ. ಇವೆರಡು ಅರುವಿಂಗರುವಾಗಿಹ ಘನದಲ್ಲಿ ಲೀಯವಾದ ಪರಿಯ ನರಿಯಬಾರದು. ಮನ ಮನ ಬೆರೆಸಿಪ್ಪ ಘನವು ಅದು ಸರ್ವ ಸಮವಾದ ತತ್ವ. ಆ ತತ್ವಕ್ಕೆ ಕೆಳಗಿಲ್ಲ ಮೇಲಿಲ್ಲ, ಒಳಗಿಲ್ಲ , ಹೊರಗಿಲ್ಲ ಅದು ಒಂದಾದ ನಿಲುವು. ಅದು ಏಕವೆಂತಲೂ ಹೇಳಲಾಗುವುದಿಲ್ಲ, ಕಾರ್ಯಕಾರಣವೆಂದು ಹೇಳಲಾಗುವುದಿಲ್ಲ, ಇದು ಬೋಧವೇ ಬೆರಸದಿರುವಲ್ಲಿ ಅದು ಅಜ್ಞಾನವೆಂದು ಜ್ಞಾನವೆಂದು ಅಥವಾ ಮಿಶ್ರವೆಂದು ಹೇಗೆ ಹೇಳುವುದು ? ಇದು ನಿರಂತರವಾಗಿರುವ ಮಂಗಳಮಯ ತತ್ವವು. ತತ್ವದ ಹೊರತಾಗಿ ಅನ್ಯ ಆವುದು ಕಾಣದು. ಎಲ್ಲೆಲ್ಲೂ ತನ್ನ ಕಂಡ ನಿಲುವು. ತಾನೇ ತಾನಾದ ನಿಲುವು.

ಇದಿರಿಂಗೆ ಇಚ್ಛೆಯನರಿಯದಿಪ್ಪುದು :

ಗಗನವು ಅದಾವುದರ ಇಚ್ಛೆ ಮಾಡುವುದು ? ಮಠದ ಇಚ್ಛೆ ಮಾಡದು, ಘಟದ ಇಚ್ಛೆ ಮಾಡದು, ಮೋಡದ ಇಚ್ಛೆ ಮಾಡದು, ಮೇಘದ ಇಚ್ಛೆ ಮಾಡದು. ಅದು ಆವಾವುದರ ಅಂಟಿಲ್ಲದೆ, ತಂಟು ಇಲ್ಲದೆ ಇರುವ ಗಗನವು. ಹಾಗೆ ಚಿದಾಕಾಶನಾಗಿಹ ಶರಣಂಗೆ. ಅಖಂಡ ಜ್ಞಾನಾಮೃತವೇ ತಾನಾದವನು. ಇದಿರಿಂಗೆ ಇಚ್ಛೆಯನರಿಯದಿಪ್ಪನು. ಕೂಟವಿಲ್ಲದ ಪುರುಷನ ಕಂಡವಂಗೆ ಇದಿರಿಂಗೆ ಇಚ್ಛೆಯನರಿಯನಿಪ್ಪನು. ಗಗನಕ್ಕೆ ಇಚ್ಛೆಯಾಗಿರಲು ಗಗನದಂತಹ ಇನ್ನೊಂದು ಗಗನವಿದೆಯೇ ? ಇದ್ದರೆ ಇಚ್ಛೆಯಾಗುವುದು ಸಹಜ. ಗಗನ ಸದೃಷವಾಗಿಹ ಜ್ಞಾನಾಮೃತ ಶರಣಂಗೆ ಅದಾವ ಇಚ್ಛೆ ಇರಬೇಕು ? ತನ್ನ ಹೊರತು ಅನ್ಯವ ಕಾಣದಿಹ ಶರಣ. ನಿಸ್ಸೀಮನು. ನಿಸ್ಸೀಮಂಗೆ ಅದಾವ ಸೀಮಿತವು ? ಮರವು ಅರುಹೆಂಬ ಕುರುಹ ಕಾಣದವಂಗೆ ಇದಿರಿಂಗೆ ಇಚ್ಛೆಯ ಮಾಡುವುದದೆಂತು ಎಂದು ಹೇಳಿಹರು.

'ಸಚರಾಚರವೆಂಬುದು ಕಿಂಚಿತ್, ಚತುರ್ಯುಗವೆಂಬುದೊಂದು ಕಿಂಚಿತ್, ಅಪ್ಪುದೆಂಬುದೊಂದು ಕಿಂಚಿತ್, ಆಗದೆಂಬುದೊಂದು ಕಿಂಚಿತ್, ತನು ಶುದ್ಧವಾದ ಶರಣಂಗೆ ಗುಹೇಶ್ವರನೆಂಬುದೊಂದು ಕಿಂಚಿತ್. ' ತನು ಶುದ್ಧವಾದ ಶರಣಂಗೆ ಗುಹೇಶ್ವರನೆಂಬುದೊಂದು ಕಿಂಚಿತ್.

ತೋರುವ ಸಚರಾಚರ ಜಗವೆಂಬುದೊಂದು ತೃಣವು ಆಗಿರುವಲ್ಲಿ ಶರಣ ಇದಿರಿಂಗೆ ಇಚ್ಛೆ ಅದೆಂತು ಮಾಡುವನು. ಕೃತಯುಗ ತ್ರೇತಾಯುಗ ದ್ವಾಪರ ಯುಗ ಕಲಿಯುಗಂಗಳೆಂಬವು ತೃಣವಾಗಿರುವಲ್ಲಿ ಅವುಗಳಲ್ಲಿ ತೋರುವ ಭೂತ ಭವಿಷ್ಯತ್ ವರ್ತಮಾನ ಕಾಲಂಗಳಿಗೆ ಇಚ್ಛೆ ಮಾಡ ಬಹುದೆ? ಬಂಗಾರದ ಇಚ್ಛೆ ಮಾಡದವನು ನಯಾ ಪೈಸಗಳ ಇಚ್ಛಿಸಬಹುದೆ ಮಾಡಲರಿಯ. ನನ್ನ ನಾನು ಅರಿತು ನಾನು ನಾನಾದೆ ನೆನ್ನುವದು ತೃಣ ವಾಗಿಹುದು. ನಾನು ನಾನಾಗಿಲ್ಲವೆಂಬುದು ತೃಣವಾಗಿಹುದು ತನ್ನ ತಾನರಿತು ಅರಿಯಲಿಲ್ಲದ ಅರುವೆ ತಾನಾಗಿಹ ಶರಣಂಗೆ ಗುಹೇಶ್ವರ ನೆಂಬುದು ತೃಣವಾಗಿಹುದು.

ಒಳಗೆ ನೋಡಿದಡೆ ಬಟ್ಟ ಬಯಲಲಿಪ್ಪರು : ಬಟ್ಟ ಬಯಲು? ಇದು ನಿಸ್ಸೀಮವು ಕೊನೆ ಮೊದಲಿಲ್ಲದ ಬಯಲು ಅಪಾರ ಖಂಡಿತವಲ್ಲದ ಅಖಂಡಿತವು. ಇದಕ್ಕೆ ಆರಂಭವಾವುದು ಮುಕ್ತಾಯವಾದುದು ? ಮೇಲೆ ತಾನೆ ಕೆಳಗೆ ತಾನೆ, ಎಡ ತಾನೆ ಬಲ ತಾನೆ, ಎತ್ತ

ನೋಡಿದತ್ತತ್ತ ತಾನೆ ಗಗನ ಸದೃಶ ವಾಗಿಹ ಅಖಂಡ ಜ್ಞಾನಮೃತವು ಅಖಂಡವಾಗಿದ್ದಿತ್ತು

ಒಳಗೆ ನೋಡಿದಡೆ ಬಟ್ಟ ಬಯಲಲ್ಲಿಪ್ಪುದು ಶರಣಂಗೆ ವಿದಿತವು. ಬಟ್ಟ ಬಯಲಿನ ಘನತ್ವ ತಪಸ್ವಿ ತ್ಯಾಗಿ ಭೋಗಿ ಯೋಗಿ ಶಿಷ್ಯ ಗುರು ಭಕ್ತ ಮಹೇಶ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯನೆಂದು ಹಲುಬುವವರೆಲ್ಲ ಬಯಲಿಂಗೆ ಬಯಲಾದುದ ತಿಳಿಯರು ಶರಣರು ಬಟ್ಟ ಬಯಲಲ್ಲಿದ್ದುದು ಶರಣಂಗೆ ವಿದಿತವು.

ಬಟ್ಟ ಬಯಲು ದಿಟ, ದಿಟವ ಕಂಡವರು ಬಟ್ಟ ಬಯಲಲ್ಲಿಪ್ಪಗಮ್ಯ ಶರಣರು, ಕಾಣದುದ ಕಂಡವರು, ಕೇಳದುದ ಕೇಳದ ಮುಟ್ಟಬಾರದುದ ಮುಟ್ಟಿದವರು ಅವರು ದಿಟದಿಂದ ತನ್ನ ಕಂಡವರು. ದಿಟದಿಂದ ತನ್ನ ಕೇಳಿದವರು ದಿಟದಿಂದ ತನ್ನ ತಾ ಮಾಡಿದವರು. ತನ್ನಕಂಡವರಾದ್ದರಿಂದ ಏನೊಂದ ಕಾಣದವರು ಏನೊಂದು ಕೇಳದವರು ಏನೊಂದು ಮಾತಾಡದವರು, ನಿಃಶಬ್ದ ವೇದಿಗಳು. ನಿಃಶಬ್ದ ಲಿಂಗಾನುಭವಿಗಳು ಆದುದರಿಂದ ಅಪ್ರತಿಮ ಶರಣ ಅಗಮ್ಯ ಶರಣ ಅಕಲ್ಪಿತ ಶರಣ ನಾದುದರಿಂದ ಬಟ್ಟ ಬಯಲಲ್ಲಿಪ್ಪರು ಎಂದು ಹೇಳಿಹರು.

ಗುಹೇಶ್ವರನ ಶರಣರು ತಾವಿಲ್ಲದ ಮಹಿಮರೆಂಬುದ ನಿನ್ನಿಂದಲರಿದೆ ನೋಡಾ ಸಿದ್ಧರಾಮಯ್ಯ :

ಗುಹೇಶ್ವರನ ಶರಣ ದೇಹವೆಂಬ ಗುಹೆ ಯೊಳಗಿರ್ದ ಘನಲಿಂಗವರಿಯ. ತಾನಾಗಿಹ ಘನಕ್ಕೆ ಘನ ಅಹಮಿಲ್ಲದ ಚಿದ್ಘನವೆ ತನ್ನಯ ಇರುವು ಅರುವಾಗಿಪ್ಪ ನಿಷ್ಕಳಂಕರು.

ಮನಮೇರೆದಪ್ಪಿದ ಅನುಪಮರು. ಭಾವಕ್ಕೆಡೆಗೊಡದನಿರ್ಭಾವಿಗಳು ನುಡಿಗೆಡೆಗೊಡದ ನಿಃಶಬ್ದ ವೇದಿಗಳು ಚಿಂತನಕ್ಕೆಡೆಗೊಡದ ನಿಃಶ್ಚಿಂತರು ನಿರಾಮಯರು ಎಂದು ಕೊಂಡಾಡಿಹನು.

ವಚನ - 30

ಮನ ಉಂಟೆ ? ಮರುಳೆ ಶಿವಯೋಗಿಗೆ ಮತ್ತೊಮ್ಮೆ ಮನ ಮಗ್ನ ಉಂಟೆ ?
ಶಿವಯೋಗಿಗೆ ಇಲ್ಲದ ಮನವನುಂಟೆಂದು ನುಡಿದು
ಅಡಗಿಸಿದೆನೆಂಬ ಮಾತು ಮನವ ನೆಲೆಮಾಡಿ ತೋರುತ್ತಿದೆ .
ಗುಹೇಶ್ವರ ನರಿದ ಶರಣಂಗೆ ತೋರಲಿಲ್ಲ ಅಡಗಲಿಲ್ಲ

ತಾತ್ಪರ್ಯ- ಮನ ಉಂಟೆ ಮರುಳೆ ಶಿವಯೋಗಿಗೆ ? ಮತ್ತೊಮ್ಮೆ ಮನ ಮಗ್ನ ಉಂಟೆ ಶಿವಯೋಗಿಗೆ ? ಮನ ಉಂಟೆ ಮರುಳೆ ? ಶಿವಯೋಗಿ ಯಾರು ? ಮನ ವಿದ್ದವನು ಶಿವಯೋಗಿಯಾಗಲಾರ. ಕೆಲಬರು ಶಿವನಿ ಗೆ ಸಾಕಾರನೆಂದು ನಿರಾಕಾರನೆಂದು ಕಲ್ಪಿಸಿ ನೆನಹಿನಿಂದುಕ್ತರಾದ ಧ್ಯಾನಾಸಕ್ತನಾದ ಹಠಯೋಗಿ ರಾಜಯೋಗಿ, ಜ್ಞಾನ ಚಿಂತನ ಮಾಡುವ ಜ್ಞಾನ ಯೋಗಿಗಳು ಸಿಕ್ಕುತ್ತಾರೆ ಗುಹೇಶ್ವರ ನರಿದ ಶರಣ ಸಿಕ್ಕುವದು ವಿರಳ.

ಮನವಿದ್ದ ಯೋಗಿ ದೊರೆಯತ್ತಾನೆ. ಮನ ನಷ್ಟ ಮಾಡಿದ ಯೋಗಿ ಸಿಕ್ಕುವುದು ವಿರಳ. ಸಂಕಲ್ಪರಾಗಿ ಕಲ್ಪಿತಕ್ಕೆಡೆ ಮಾಡಿಕೊಂಡು ಚಿಂತನವುಳ್ಳವರೆಲ್ಲ ಮನವುಳ್ಳವರು. ಇವರು ಭ್ರಮಿತ ಭಾವದವರು. ಇವರ ಯೋಗವು ಕೂಡುವ ಅಗಲುವ ಭಾವದಿಂದುಕ್ತರಾದುದರಿಂದ

ಭ್ರಾಮಕವು. ತಾನಾರೆಂಬ ತನ್ನಿರುವಿನ ಅರುವಿನ ದೇವನನ್ನು ತನಗಿಂತನ್ಯವಾಗಿ ತಿಳಿದವರು ಇವರು ದೇವನು ತಾನು ಒಂದೆ ಎಂದು ತಾನು ಸಚ್ಚಿದಾನಂದ ದೇವನು ಸಚ್ಚಿದಾನಂದವೆಂದು ಅಭೇದ ಚಿಂತನವುಳ್ಳವರು ಇವರು. ಇವರೀರ್ವರಿಗೆ ಮನವಿದ್ದುದಾಗಿದೆ. ಆವಲ್ಲಿ ಚಿಂತನಕ್ಕೆಡೆ ಮಾಡಿಕೊಂಡ ಯೋಗವಾಗಿದೆ ಅಲ್ಲಿ ಮನವಿದೆ ಎಂದು ತಿಳಿವುದು .

ವಿಶ್ವಾಮಿತ್ರನ ಯೋಗ ಮನವುಳ್ಳ ಯೋಗ. ವಶಿಷ್ಠರ ಯೋಗ ಮನ ನಷ್ಟವಾಗಿಹ ಯೋಗ. ಗೋರಖನಾಥ ಚಾಂಗದೇವ ನಾಮದೇವ ಇವರದು ಮನವುಳ್ಳ ಯೋಗ. ಜ್ಞಾನೇಶ್ವರಿ ಪ್ರಭುದೇವ ಚನ್ನಬಸವಣ್ಣ ಸಿದ್ದರಾಮಯ್ಯ ಅಕ್ಕಮಹಾದೇವಿ ನೀಲಾಂಬಿಕೆ ಅಮುಗೆಯ ರಾಯಮ್ಮ ಸತ್ಯಕ್ಕ ಮೊದಲಾದವರ ಯೋಗ ಮನ ನಷ್ಟ ಮಡಿದ ಮಹಾಯೋಗ ಘನ ಯೋಗ. ಮನ ಉಂಟೆ ಮರುಳೆ ಶಿವಯೋಗಿಗೆ ಎಂದು ಪ್ರಭುದೇವ ಎಚ್ಚರಿಸಿಹನು ಶಿವ ಯಾರು ? ಗುಹೇಶ್ವರನೆ ಶಿವ ಗುಹೇಶ್ವರನ ಅರಿತ ಶರಣನೆ ಶಿವ .ಆದಿ ಆಧಾರ ವಿಲ್ಲದಂದು ಹಮ್ಮು ಬಿಮ್ಮುಗಳಿಲ್ಲದಂದು ಸುರಾಳ ನಿರಾಳವಿಲ್ಲದಂದು ಶೂನ್ಯ ನಿಶೂನ್ಯ ವಿಲ್ಲದಂದು ಸಚರಾಚರವೆಲ್ಲ ರಚನೆಗೆ ಬಾರದಂದು ಗುಹೇಶ್ವರ ನೀನೊಬ್ಬನೆ ಇದ್ದೆಯಲ್ಲ ಇಲ್ಲದಂತೆ.

ಪ್ರಭುವಿನ ಶಿವಯೋಗವು ಶಿವನ ತಿಳಿದ ಶಿವಯೋಗವು. ಶಿವನ ತಿಳಿದುದು ಹೇಗೆ ಆದಿ ಆಧಾರ ವಿಲ್ಲದಂದೆ ಇದ್ದವನೆಂದು ಹೇಗೆ ತಿಳಿದ ? ಆದಿ ಆಗದಂತೆ ಆಧಾರವಾಗದಂತೆ ಇದ್ದವನು ಎಂದು ತಿಳಿದ ತೋರುವ ತೋರಿಕೆ ಸಟೆಯಾದುದು ತೋರುವಿಕೆ ಎಲ್ಲವು ನಾಮರಾಪವು ಹುಸಿಯು. ಇದು ಬಂಜೆಯ ಮಗನು, ಇದ್ದುದು ನಿಜವೆ ನಾಮರೂಪ ಜಗದ ತೋರಿಕೆಯೆ ಸಟೆಯಾದಲ್ಲಿ ಆದಿ ಆಧಾರವೆಂದು ಆರಿಗೆ ಹೇಳುವದು ? ನಾಮರೂಪ ಜಗತ್ತು ನಿಜವಾಗಿದ್ದಲ್ಲಿ ಇದಕ್ಕಿಂತ ಮುನ್ನವೆ ಇದ್ದುದರಿಂದ ಆದಿ ಎಂದು ನಾಮರೂಪ ಜಗತ್ತಿಗೆ ಆಧಾರ ನೆಂದು ಹೇಳಲು ಬರುತ್ತಿತ್ತು. ನಾಮರೂಪ ತೋರಿಕೆಯೆಲ್ಲವು ಹುಸಿ, ಜಗವು ಹುಸಿ, ಜಗತ್ತಿಗೆ ಆದಿ ಎಂಬುದು ಹುಸಿ, ಆಧಾರವೆಂಬುದು ಹುಸಿ ಇಲ್ಲವೆಂದು ಸೂಚಿಸಿದುದು ನೋಡಿದಡೆ ಪ್ರಭುದೇವರು ದೇವನಾಗಿ ದೇವರ ತಿಳಿದಿದ್ದರಿಂದ ಆದಿ ಆಧಾರವಿಲ್ಲದಂದೆ ಇದ್ದವನೆಂದು ಹೇಳಿದ ಇದು ಕಾರಣ ಆದಿ ಆಗದಂತೆ ಆಧಾರವಾಗದಂತೆ ಇದ್ದವನು ಇಂತಪ್ಪ ಪರತತ್ವ ಶಿವನಲ್ಲಿ ಬೆರೆಯಲು ಮನಸ್ಸಿ ನಿಂದ ಹೇಗೆ ಸಾಧ್ಯ ಕಲ್ಪನಾರಹಿತವಾಗಿಹ ಘನದಲ್ಲಿ ಮನದ ಸಂಕಲ್ಪ ವಿಕಲ್ಪಕ್ಕವಕಾಶ ವೆಲ್ಲಿಯದು ನೆನಹಿಂಗೂ ನಿಲುಕದ ನಿಲುವು ನೆನೆಯುವದದೆಂತು ಭಾವಕ್ಕಗಮ್ಯವಾದುದನ್ನು ಭಾವಿಸುವದದೆಂತು?

ಇದು ಆದಿ ಆಧಾರ ಕಲ್ಪಿಸದೆ ಇದ್ದವನ ಯೋಗ, ಮಹಾಯೋಗ ಗಗನ ಯೋಗ. ಅಲ್ಲಿ ಕೂಡುವದಿಲ್ಲ ಅಗಲುವದಿಲ್ಲ, ಅದು ಕೂಡದಗಲದ ಯೋಗ, ನಿಯೋಗವಾದ್ದರಿಂದ ಗಗನದ ಯೋಗ ವೆಂದು ಹೇಳಿದುದು.

ಗಗನದ ಯೋಗ ನಿಯೋಗ ಮಠಾಕಾಶ ಘಟಾಕಾಶವೆನಿಸಿಕೊಂಡರು ಆಕಾಶವು ಇದ್ದಂತಿದೆ' ಅಲ್ಲಿ ಘಟದೊಳಿದ್ದ ಆಕಾಶ ಮಠಾಕಾಶ ಕೂಡಲಿಲ್ಲ. ಮತ್ತು ಘಟದೊಳಿದ್ದ ಆಕಾಶ, ಮಠದೊಳಿದ್ದ ಆಕಾಶ ಬೇರೆ ಬೇರಾಗಿ ಅಗಲಿಲ್ಲ ಆಕಾಶವತ್ ಆಕಾಶವು ಅದು ನಿರಂತರ ಇದ್ದಂತಿದ್ದ ಘನ. ಅದರಲ್ಲಿ ಬದಲಾವಣೆಯಿಲ್ಲ, ಹಾಗೆ ಸಂಯೋಗ ವಿಯೋಗ ವೆಂಬೆರಡಿಲ್ಲದ ನಿಜವ ನಾರಯ್ಯ ಬಲ್ಲವರು ಅದು ಕೂಡಿ ಬೆರಸದು ಅಗಲಿ

ಹೀಂಗದು, ತೆಗಹಕ್ಕೆಬಾರದು, ಮೊಗಹಕ್ಕೆ ನಿಲುಕದು, ಸಗುಣ ನಿರ್ಗುಣವೆಂಬ ಬಗೆ ಗೆಡಗೊಡದ ಸೌರಾಷ್ಟ್ರ ಸೋಮೇಶ್ವರ ಲಿಂಗ ನರಿವುದೇನು ಮರಿವುದೇನು.

ಅರಿಯಲಿಲ್ಲದ ಅರುವೆ ತಾನಾದವಂಗೆ ಅದಾವ ಸಂಯೋಗ ಅದಾದ ವಿಯೋಗ ? ತನಗಿಂತನ್ಯ ವಾವುದು ಇಲ್ಲ, ತನ್ನ ಸಮಾನವಾದುದು ಇಲ್ಲದಿರುವದರಿಂದ ಅಖಂಡಿತ ಘನ ಪೂರ್ಣವಪ್ಪ ತನ್ನಿರುವೆ ಅರುವೆಂದವಂಗೆ ಸ್ವೀಕರಿಸಬೇಕಾದಿದಿಲ್ಲ ತ್ಯಜಿಸಬೇಕಾದುದಿಲ್ಲ, ಸಗುಣ ವೆಂಬುದಿಲ್ಲ ನಿರ್ಗುಣ ವೆಂಬುದಿಲ್ಲ, ಅರಿಯಬಾರದ ಘನವೆ ತಾನಾಗಿರುವಲ್ಲಿ ಅರಿವುದೇನು ? ಮರೆವುದೇನು ? ಎಂದು ಹೇಳಿಹರು.

ಹಮ್ಮು ಬಿಮ್ಮು ಗಳಿಲ್ಲದಂದು : ಓಹೋ । ಅಹಂ ಮಮಗಳಿಲ್ಲದಂದೆ ಇದ್ದ ಪರಾತ್ಪರಕ್ಕೇನನ್ನಬೇಕು ಸಗುಣ ವೆನ್ನಬೇಕೆ ? ನಿರ್ಗುಣವೆನ್ನಬೇಕೆ ? ಸಕಾರವೆನ್ನ ಬೇಕೆ ? ನಿರಾಕಾರ ಎನಬೇಕೆ ? ಇವಾವುಗಳು ಇಲ್ಲದಂದೆ ಇದ್ದ ಘನವ ಅದೆಂತು ಚಿಂತಿಸುವದು? ಅದೆಂತು ಭಾವಿಸುವದು? ಅದೆಂತು ನೆನೆಯುವದು.

ಇಲ್ಲದ ಮನವ ನುಂಟೆಂದು ನುಡಿದು ಅಡಗಿಸಿದೆ ನೆಂಬ ಮಾತು ಮನವ ನೆಲೆ ಮಾಡಿ ತೋರುತ್ತಿದೆ ಗುಹೇಶ್ವರ ನರಿದ ಶರಣಂಗೆ ತೋರಲಿಲ್ಲ ಅಡಗಲಿಲ್ಲ : ಗುಹೇಶ್ವರ ನರಿದ ಶರಣಂಗೆ ಮನವು ತೋರಲಿಲ್ಲ ಅಡಗಲಿಲ್ಲ. ಇಲ್ಲದ ಮನ ಉಂಟಾದಲ್ಲಿ ಯೋಗ ಹೇಳಲು ಆಧಾರವಾಯಿತ್ತು. ಯೋಗವದು ಕೂಡ ಬೆರೆ ಒಂದಾಗು ಎಂದು ಸಿದ್ದವಾಗುವದು ಈರ್ವರು ಇದ್ದಲ್ಲಿ ಕೂಡವದು ಉಂಟು ಅಗಲಿದುದು ಉಂಟು. ಇದ್ದ ಈ ರ್ವರು ಆರು? ಶಿವ ಜೀವರೆಂದು ಲಿಂಗ ಅಂಗವೆಂದು ಗುರು ಶಿಷ್ಯರೆಂದು ಸಿದ್ದವಾಗುವದು. ಇವರುಗಳಿದ್ದಲ್ಲಿ ಯೋಗವು. ಈ ಮಹಾಂತನ ಮಹಾನುಭವ ಕಲ್ಪಿತರಾಗಿ ತಿಳಿಯ ಹೋದವರಿಗೆ ಅಸಾಧ್ಯವು. ಕಲ್ಪನಾರಹಿತರಾಗಿ, ಅರಿಯಬಾರದ ಘನವೆ ತನ್ನಿರುವಾಗಿ, ಅರಿವ ಅರುಹಿಸಿಕೊಂಬುದಕ್ಕೆ ನಷ್ಟವಾಗಿ, ಅರಿಯದಂತಿದ್ದವರಿಗೆ, ಅರಿಯಲಿಲ್ಲದ ಅರುವೆ ತಾನಾದವಂಗೆ, ಇಲ್ಲದ ಮನವ ನುಂಟೆಂದು ನುಡಿದು, ಅಡಗಿಸಿದೆನೆಂಬ ಮಾತು ಮನವ ನೆಲೆಮಾಡಿ ತೋರುತ್ತಿದೆ. ಎಂಬುದು ಸಹಜ ವಿದಿತವಾಗುವದು. ಇಲ್ಲದ ಮನ ಉಂಟು ಮಾಡಿ ಕೊಂಡವರಿಗೆ ಅದು ಇದ್ದು ದಾಗಿರುವಲ್ಲಿ ಅದರ ಕಾರ್ಯಂಗಳಾಗಿಹ ನೆನಹು, ನಿರ್ಣಯ, ಚಿಂತನ, ಭಾವ ಅಷ್ಟು ದೃಢವಾಗಿರುವದರಿಂದ ಮನಕಲ್ಪಿ ಸಿದುದೆಲ್ಲ ನಿಜವಾಗಿರುವದರಿಂದ ಪೂಜ್ಯ ಪೂಜಕ ನಾನು ಸೇವಕ ನೀನು ಸ್ವಾಮಿ, ಬೇಡಿದ ಇಷ್ಟಾರ್ಥಗಳ ಪೂರೈಸುವ ದೇವ ನೀನು. ಫಲ ಪದಂಗಳ ಪಡೆಯುವ ಜೀವ ನಾನು. ಸ್ವಾಮಿ ನೀನು. ಎಂಬ ಕಲ್ಪಿತ ಜ್ಞಾನ ದೃಢವಾಗಿ, ಭೇದ ಜ್ಞಾನವಾಯಿತ್ತು. ಇತ್ತ ಸತ್ಯರು ಮುಕ್ತರು ನಿತ್ಯರು ಎಂಬುವರಿಗೆ ಚಿದಹಮ್ಮು ದೃಢವಾಗಿ, ಅಭೇದ ಜ್ಞಾನಕ್ಕಿಂಬಾಗಿ, ಕೆಲಬರು ದ್ವೈತವನ್ನು ಇಚ್ಛಿಸುವರಾಗಿ ದ್ವೈತಾದ್ವೈತ ವಿವರ್ಜಿತವಾಗಿಹ ಸಮ ಸ್ವರೂಪವಾದುದು ತತ್ವ ಇಂತಪ್ಪ ತತ್ವ ತಿಳಿಯದೆ ಹೋದರು. ಬಸವಾದಿ ಪ್ರಮಥರಾಗಿಹ ಶರಣ ಶರಣೆಯರೆಲ್ಲ ಏನೆಂದೆನಲಿಲ್ಲದ ಅಖಂಡ ಪರಿಪೂರ್ಣ ಪರಮಾನಂದ ಪರಬ್ರಹ್ಮ ತಾನೆಂಬರುವಿನ ಬಲದ ಅಹಂಕಾರ ವಿಲ್ಲವಾಗಿ ಅದ್ವೈತಿಯಲ್ಲ ಉಭಯವಿಟ್ಟರಸುವ ಗಜಿಬಿಜಿಯಲ್ಲಿ ಸಿಲುಕನಾಗಿ ದ್ವತಿಯಲ್ಲ, ಇಂತಿ ದ್ವೈತಾ ದ್ವೈತವೆಂಬ ಉಭಯ ನಷ್ಟವಾದ ಅಭೇದ್ಯ ಮಹಿಮನ ಕಪಿಲಸಿದ್ದ ಮಲ್ಲಿಕಾರ್ಜುನ ನಿಮ್ಮ ಶರಣರೆ ಬಲ್ಲರು.

ಶರಣರಿಗೂ ದ್ವೈತಾದ್ವೈತ ಭಾವಿಗಳಿಗೂ ಬಹು ಅಂತರವಿದೆ. ದ್ವೈತಿಗಳಲ್ಲಿದ್ದ ಅಜ್ಞ

ತ್ವರೂಪಿ ಜೀವ ಸರ್ವಜ್ಞ ತ್ವರೂಪಿ ಈಶ್ವರ ನೆಂಬುದು ಕಲ್ಪಿಸಿ ಭೇದ ಜ್ಞಾನಿಗಳಾಗಿ ಇಲ್ಲದ ಮಾಯಿಕ ಪದಂಗಳ ಪಡೆದು ತಮ್ಮ ನಿಜವ ತಿಳಿಯದೆ ಭ್ರಾಂತರಾದರು. ಅತ್ತ ಅದ್ವೈತಿಗಳಲ್ಲಿ ಇಲ್ಲದ ಶೃತಿ ಪ್ರಮಾಣಂಗಳನೊಪ್ಪಿ ಮಹಾ ವಾಕ್ಯಗಳೆ ಪ್ರಧಾನವಾಗಿ ಲಕ್ಷಣಾತ್ಮಕ ಜ್ಞಾನವೆ ಪ್ರಧಾನವಾಗಿ ಅಖಂಡ ಪರಿಪೂರ್ಣ ಪರಬ್ರಹ್ಮ ತಾನೆಂಬರುವಿನ ಬಲದ ಹಂಕಾರಿಯಾಗಿ ಅದ್ವೈತಿಗಳಾಗಿ ತನ್ನ ನಿಜದಿರಿವ ತಿಳಿಯದಾದರು.

ಶರಣರು ತಾನಾರೆಂದು ಆವಾವುದರ ಹಂಗಿಲ್ಲದೆ ತನ್ನಿಂದ ತನ್ನ ಕಂಡು ಜ್ಞಾನ ತನ್ನೊಳಗೆ ಅಜ್ಞಾನ ತನ್ನೊಳಗೆ ಇವು ಎರಡುವ ನರಿಯದ ಸಹಜ ಸುಜ್ಞಾನಿ ಲಿಂಗ ವಶಗತ ನಾಗಿರ್ದಲ್ಲಿ ಪರಿಣಾಮಿ ಕೂಡಲ ಚೆನ್ನಸಂಗಾ ನಿಮ್ಮ ಶರಣ. ಶರಣ ಅರಿಯ ಬಾರದ ಘನ ವರಿತು ಅರಿಯದಂತಿದ್ದ ಅನುಪಮ ಲಿಂಗ ವಾದುದರಿಂದ ಅರಿವ ಅರುಹಿಸಿಕೊಂಬ ಎರಡುವ ನರಿಯದ ಸಹಜ ಸುಜ್ಞಾನಿಯಾದುದರಿಂದ ಇಲ್ಲದ ಮನವನುಂಟೆಂದು ನುಡಿದು ಅಡಗಿಸಿದೆನೆಂಬ ಮಾತು ನೆಲೆ ಮಾಡಿ ತೋರುತ್ತಿದೆ ಎಂದು ಗರ್ಜಸಿದ ಗುಹೇಶ್ವರ ನರಿದ ಶರಣಂಗೆ ತೋರಲಿಲ್ಲ ಅಡಗಲಿಲ್ಲ ಶರಣಂಗೆ ಕಲ್ಪಿತವಾದ ದ್ವೈತ ರೂಪ ಭಾವ ಇದಾವುದು ತೋರಲಿಲ್ಲ. ಅದ್ವೈತವಾದ ಅಖಂಡ ಪರಿಪೂರ್ಣ ಪರಮಾನಂದ ಪರಬ್ರಹ್ಮ ತಾನೆಂಬರುವಿನ ಅಹಂಕಾರ ತೋರಲಿಲ್ಲ. ಅರಿಯಲಿಲ್ಲದ ಅರುವೆ ತನ್ನಿರುವಾದುದು ಅಡಗಲಿಲ್ಲವೆಂದು ಹೇಳಿದುದರಿಂದ ಇವರು ದ್ವೈತಾ ದ್ವೈತವ ನರಿಯದ ಸಹಜ ಸುಜ್ಞಾನಿಗಳು ಸುಖದ ಸುಖ ವಾಗಿಹ ಸ್ವಸ್ವರೂಪದ ಪರಿಣಾಮಿಗಳು ಶಿವಯೋಗಿ ಶರಣ ಮನವುಂಟೆ ಮರುಳೆ ಶಿವಯೋಗಿಗೆ ಮತ್ತೊಮ್ಮೆ ಮನಮಗ್ನ ಉಂಟೆ ? ಎಂದು ಹೇಳಿಹರು .

ವಚನ - 31

ನಡದಡೆ ನಡೆ ಗೆಟ್ಟ ನಡೆಯ ನಡೆವುದಯ್ಯ
ನುಡಿದಡೆ ನುಡಿಗೆಟ್ಟ ನುಡಿಯ ನುಡಿವುದಯ್ಯ
ಒಡಲ ಹಿಡಿದಡೆ ಹಿಡಿಯದೆ ಹಿಡಿವುದಯ್ಯ
ಕೂಡುವುಡೆ ಕೇಡಿಲ್ಲದ ಕೂಟವ ಕೂಡುವದಯ್ಯ
ಗುಹೇಶ್ವರ ನಿಮ್ಮಲ್ಲಿ ನಿಲುವದಯ್ಯ.

ತಾತ್ಪರ್ಯ : ನಡದಡೆ ನಡೆ ಗೆಟ್ಟ ನಡೆಯ ನಡೆವುದಯ್ಯ : ನಡದಡೆ ನಡೆಗೆಟ್ಟ ನಡೆ ಆವುದು ? ಗುಹೇಶ್ವರ ನಿಮ್ಮಲ್ಲಿ ನಿಂತವರು ನಡೆಗೆಟ್ಟ ನಡೆದವರು ನುಡಿಗೆಟ್ಟ ನುಡಿಯು ಗುಹೇಶ್ವರ ನಲ್ಲಿ ನಿಂತವರೆಂದರೆ ಗುಹೇಶ್ವರ ನರಿಯ ಹೋಗಿ ಗುಹೇಶ್ವರ ತಾನಾದವನು. ತನ್ನಲ್ಲಿ ತನ್ನ ಸ್ವರೂಪದಲ್ಲಿ ನಿಂತವರು. ಇವರ ಅಹಂ ಮಮತ್ವವೆ ನಷ್ಟವಾಗಿದೆ.. ಗುಹೇಶ್ವರ ನರಿದವರು ಅಹಮಿಲ್ಲದ ಚಿದ್ಘನರು ಶಬ್ದ ಮುಗ್ದರು. ತನ್ನಿಂದ ತನ್ನ ಅರಿತವರು ಮಿಗೆಮಿಗೆ ಮೀಸಲವಾಗಿಹ ತತ್ವ ಬಲ್ಲವರು ಎಂಜಲ ಮಾತ ಸೇರದವರು. ಶಬ್ದದ ಹಂಗು ಹರಿದವರು. ಗೆಹೇಶ್ವರ ನೆಂಬುದು ದೇಹ ವೆಂಬ ಗುಹೆಯೊಳಗಿದ್ದ ಚೈತನ್ಯ ಘನವು ದೇಹವೆಂಬ ಗುಹೆಗೆ ಈಶ್ವರ ನೆನಿಸಿಕೊಂಡಿರುವ ಮಹಾಲಿಂಗವು. ಇದು ಅನುಪಮ ಲಿಂಗ ವೇದ ವೇದಾಂತ ಗಳಿಗಸಾದ್ಯವಾದುದು. ಈ ಅಖಂಡ ಲಿಂಗವೆ ತಾವಾಗಿಹ ಮಹಾಂತರು

ಗುಹೇಶ್ವರ ನಲ್ಲಿ ನಿಂತವರು. ಅವರದು ನಡೆಕೆಟ್ಟ ನಡೆ, ಸಂಸಾರ ಸೂತಕ ವು ಅವರನ್ನು ಮುಟ್ಟದ್ದರಿಂದ ನಡೆಕೆಟ್ಟ ನಡೆ ಎಂದು ಹೇಳಿದೆ.

ಸಂಸಾರ ಸೂತಕ ಮುಟ್ಟದವರು ಆರು ಗೊತ್ತೆ ? ''ಪ್ರಪಂಚ ಸತ್ಯ ವೆನ್ನುವವರು ಕೋಟ್ಯಾನುಕೋಟಿ ಪ್ರಪಂಚ ಮಿಥ್ಯೆ ಎನ್ನುವವರು ಕೋಟ್ಯಾನು ಕೋಟಿ ಪರಮಾರ್ಥ ಸತ್ಯ ಎನ್ನುವವರು ಕೋಟ್ಯಾನು ಕೋಟಿ ಸಮದೃಷ್ಟಿಯಲ್ಲಿ ನಿಂತು ತಮ್ಮ ತಾವರಿತವರ ನೊಬ್ಬರನು ಕಾಣೆ ಕೂಡಲಸಂಗಮದೇವಾ,'' ಆರು ಸಮದೃಷ್ಟಿಯುಳ್ಳವರಾಗಿ ತಮ್ಮ ತಾವರಿತಿಹರು ಅವರದು ನಡೆ ಕೆಟ್ಟ ನಡೆ ನುಡಿ ಕೆಟ್ಟ ನುಡಿಯ ಒಡಲು ಹಿಡಿಯದ ಒಡಲುಳ್ಳವರು. ಕೇಡಿಲ್ಲದ ಕೂಟವ ಕೂಡಿದವರು ಗುಹೇಶ್ವರನ ನಿಲುವಿನಲ್ಲಿ ನಿಂತವರು.

ಸಮದೃಷ್ಟಿ ಎಂಬುದು ಅಹಮತ್ವ ಕೆಟ್ಟ ಸಂಕೇತ. ಅವರಲ್ಲಿ ದೇಹೋಹಂ ಎಂಬುದಿಲ್ಲ ನಾಹಂ ಕೋಹಂ ಸೋಹಂ ಚಿದಹಮ್ಮು ಅಹಂಕಾರಗಳ ನತಿಗಳೆದು ಅಹಮತ್ವ ನಷ್ಟಮಾಡಿದ ಸುಜ್ಞಾನಿ. ನಿರಾಲಂಬ ದೃಷ್ಟಿ ನಿಜದೃಷ್ಟಿ, ಅಹಂತ್ವವೆ ನಷ್ಟವಾಗಿ ''ಕರ್ತೃತ್ವ ವಿಲ್ಲಾಗಿ ಕರ್ಮವಿಲ್ಲ , ಕರ್ಮವಿಲ್ಲಾಗಿ ಜನನವಿಲ್ಲ ಜನನವಿಲ್ಲಾಗಿ ಮರಣವಿಲ್ಲ ಮರಣವಿಲ್ಲಾಗಿ ಭೂತಾತ್ಮ ಪ್ರಕೃತಿ ಕರಣಾದಿ ಗುಣಗಳು ಮುನ್ನವೆ ಇಲ್ಲ, ಹಿಂದಣ ಸ್ಥಿತಿ ಇಲ್ಲ ಮುಂದಣ ಲಯವಿಲ್ಲ ಆದಿ ಮಧ್ಯಾವಸಾನ ವಿಲ್ಲ ಬಿಚ್ಚಿ ಬೇರಿಲ್ಲ ಬೆರಸಿ ಬಂದಿಲ್ಲ ಉಪಮಾತೀತ ಕೂಡಲಚೆನ್ನಸಂಗಾ ನಿಮ್ಮ ಶರಣ.''

ಅಂತರಂಗದಲ್ಲಿ ಭಾವಿಸುವನಲ್ಲ ಬಹಿರಂಗದಲ್ಲಿ ಬಳಸುವನಲ್ಲ ಎರಡವನತಿಗಳೆದ ತನ್ನಲ್ಲಿ ತಾನೆ ಸಹಜ ನೋಡಾ ಅಂತರಂಗವಿಲ್ಲ ಬಹಿರಂಗವಿಲ್ಲ ನಿಮ್ಮ ಶರಣಂಗೆ ಅಹಮತ್ವವೆ ನಷ್ಟವಾದುದರಿಂದ ಪ್ರವೃತ್ತಿ ಪ್ರಪಂಚದ ಕರ್ತೃತ್ವವು ನಷ್ಟವಾಗಿದೆ ಇತ್ತ ನಿವೃತ್ತಿಯ ಪರಮಾರ್ಥದ ಕತೃತ್ವ ನಷ್ಟವಾದುದರಿಂದ ಅಕರ್ತಾರೂಪನಾಗಿಹ ಪರಬ್ರಹ್ಮ ನುಡಿಗೆಡೆ ಗೊಡದ ಘನ ನಡೆ ಗೆಡೆ ಗೊಡದ ಘನ ತನ್ನಿಂದ ತಾನಾದ ಅನುಪಮಂಗೆ ಅದಾವ ನಡೆ? ಅದಾವ ನುಡಿ? ಅದಾವ ಒಡಲು. ಗಗನವು ಬಂದುದಲ್ಲ ಹೋದುದಲ್ಲ, ಅದು ಘಟದಲ್ಲಿರಲಿ ಮಠದಲ್ಲಿರದಲಿ ಮೋಡದಲ್ಲಿರಲಿ ಆವಲ್ಲಿದ್ದರೂ ಅದು ಬಂದುದಲ್ಲ ಹೋದುದಲ್ಲ, ಇದ್ದಂತಿದ್ದ ಘನವು ಕೊಂಡಿರುವಾಗ ಅದಕ್ಕಾವ ಒಡಲು .

ಶರಣ ಚಿತ್ ಸ್ವರೂಪನಾಗಿದ್ದು, ಚಿದಾಕಾಶವೇ ತಾನಾಗಿಹ ಶಬ್ದಮುಗ್ಧ ಅವನೆಂತು ಬಂದನು ? ಅವನೆಂತು ಹೋದನು? ಅವನೆಂತು ಮೂಕನಾದನು ? ಮೌನದ ಮೌನವಾಗಿಹ ಮಾನೇಶ ಅವನೆಂದು ಮಾತನಾಡಿದನು? ಅವನೆಂತು ಕೇಳಿದನು? ಕಿವಿಯ ಕಿವಿಯಾಗಿಹ ಘನ ಘ್ರಾಣದ ಘ್ರಾಣವಾಗಿಹ ಘನ. ಜಿಹ್ವೆಯ ಜಿಹ್ವೆಯಾಗಿಹ ಘನ. ತ್ವಕ್ಕಿನ ತ್ವಕ್ಕಾಗಿಹ ಘನ, ಮನದ ಮನ, ಪ್ರಾಣದ ಪ್ರಾಣವಾಗಿಹ ಘನ. ಜೀವದ ಜೀವಿಯಾಗಿಹ ಸರ್ವಾಂಗ ಲಿಂಗಿ. ಅವನಿಗಾವ ಕರ್ತೃತ್ವ ಭೋಕ್ತೃತ್ವ. ಅವನಿಗೆ ಶುಭಾಶುಭ ಕ್ರಿಯೆಗಳು ನಷ್ಟವಾಗಿಹುದರಿಂದ ಒಡಲಿಲ್ಲದವನೆಂದು ಹೇಳಿಹನು.

ಒಡಲಿಲ್ಲದವಂಗೆ ಅಂತರಂಗ ಆವುದು ಬಹಿರಂಗ ಆವುದು ? ಅಂತರಂಗ ಕಾಣಾ ಬಹಿರಂಗ ಕಾಣ. ಪ್ರವೃತ್ತಿ ನಿವೃತ್ತಿ ಅಹಮತ್ವವೇ ನಷ್ಟವಾಗಿರುವಲ್ಲಿ ಆ ಮಹಾಂತಂಗೆ ಪ್ರಪಂಚದ ಕರ್ತೃತ್ವವಿಲ್ಲ, ಪರಮಾರ್ಥದ ಕರ್ತೃತ್ವವಿಲ್ಲ, ಕರ್ತೃತ್ವ ನಷ್ಟವಾಗಿರುವಲ್ಲಿ ಸತ್ಯವಾವುದು ? ಮಿಥ್ಯವಾವುದು? ನಾನಾವುದು ? ನೀನಾವುದು ? ಕರ್ಮವಾವುದು ?

ಮರ್ಮವಾವುದು ? ಜನನವಾವುದು? ಮರಣವಾವುದು? ಪಂಚಭೂತಂಗಳಾವುವು? ಆ ಭೂತಂಗಳಿಂದೊಡಗೂಡಿದ ಭೂತಾತ್ಮವೆಲ್ಲಿ? ಪ್ರಕೃತಿಯೆಲ್ಲಿ ? ಕರ್ಣಂಗಳ ಗುಣಾದಿಗಳು ಮುನ್ನವೇ ಇಲ್ಲ. ಹಿಂದಣ ಸ್ಥಿತಿ ಇಲ್ಲ. ಮುಂದಣ ಗತಿ ಇಲ್ಲ. ಆದಿಯಿಲ್ಲ, ಮಧ್ಯವಿಲ್ಲ, ಅವಸಾನವಿಲ್ಲ. ಈತನ ದಿವ್ಯ ದೃಷ್ಟಿಯಲ್ಲಿ ಪ್ರಪಂಚ ಪರಮಾರ್ಥಗಳೆರಡು ನುಡಿ ಮಾತ್ರವು.

ಬಂಜಿ ಮಗ ಗಗನ ಕುಸುಮ, ನುಡಿಮಾತ್ರವು. ವಿವರಿಸಿ ನೋಡುವಡೆ ಸಕಳ ತಾನೇ ನಿಖಳ ತಾನೆ. ಏನ ಕಂಡರೂ ತನ್ನ ಕಂಡವನು. ತನ್ನಲ್ಲಿ ತಾನು ನಿಂತುದರಿಂದ ಎರಡೆಂಬುದಿಲ್ಲ, ಒಂದೆಂಬುದಿಲ್ಲ ಉಪಮಾತೀತ ನೋಡಾ. ಉಪಮಾತೀತನ ನಡೆ ನಡೆ ಕೆಟ್ಟ ನಡೆ. ನುಡಿಕೆಟ್ಟ ನುಡಿ. ನಡೆದು ನಿರ್ಗಮನಿಯಾದುದರಿಂದ ನಡೆಕೆಟ್ಟ ನಡೆ. ನುಡಿದು ನಿಶ್ಚಬ್ಧನಾಗಿರುವುದರಿಂದ ನುಡಿ ಕೆಟ್ಟ ನುಡಿ. ಒಡಲಿನ ಪೂರ್ವಾಶ್ರಯವೆ ಕೆಟ್ಟು ಕರ್ಣಂಗಳು ಗುಹೇಶ್ವರ ನಿಂತ ನಿಲುವುಳ್ಳವುಗಳಾಗಿರುವುದರಿಂದ ಒಡಲಹಿಡಿದಡೆ ಹಿಡಿಯದೆ ಹಿಡಿವುದಯ್ಯ ಎಂದು ಹೇಳಿಹನು.

ಶರಣನ ಇರುವು ನುಡಿಗೆಡೆಗೊಡದ ಘನವಾಗಿಹುದರಿಂದ ನುಡಿಕೆಟ್ಟ ನುಡಿಯಾಗಿಹವು. ಅತೀಂದ್ರಿಯಾಗಿಹುದರಿಂದ ನಡೆಕೆಟ್ಟ ನಡೆಯಾಗಿಹವು. ಎಡೆಯಿಲ್ಲದ ಪರಿಪೂರ್ಣ ತಾನಾಗಿಹುದರಿಂದ ಒಡಲು ಇಲ್ಲವಾಗಿಹುದು.

ಕೂಡುವಡೆ ಕೇಡಿಲ್ಲದ ಕೂಟವ ಕೂಡುವುದಯ್ಯಾ ಗುಹೇಶ್ವರಾ ನಿಮ್ಮಲ್ಲಿ ನಿಲುವುದಯ್ಯಾ: ಆರು ಗುಹೇಶ್ವರನಲ್ಲಿ ನಿಂತಿಹರು ಅವರು ಕೇಡಿಲ್ಲದ ಕೂಟವ ಕೂಡಿದವರು. ಕೇಡಿಲ್ಲದ ಕೂಟ ಕೂಡುವ ಅಗಲುವ ಕೂಟವಲ್ಲ, ಕೂಡಿ ಅಗಲುವ ಕೂಟ ಕಲ್ಪಿತರ ಕೂಟ. ಎರಡಾಗಿ ಕೂಡಿದ ಕೂಟ. ಭಾವ ಭ್ರಮಿತರ ಕೂಟ. ನೆನಹಿಂಗೆ ಚಿಂತನಕ್ಕೆ ಒಳಪಟ್ಟ ಕೂಟ. ತುಸು ಕಾಲ ಕೂಡಿದಂತಾಗುವದು ಪುನಃ ಅಗಲಿದಂತಾಗುವ ಕೂಟ. ಭ್ರಾಂತರ ಕೂಟ. ತನ್ನ ತಾ ಮರೆತವರ ಕೂಟ. ಕೇಡುಳ್ಳ ಕೂಟ ಎನಿಸುವದು.

ತನ್ನ ಅರಿತವರ ಕೂಟ ಕೇಡಿಲ್ಲದ ಕೂಟ. ತನ್ನಯ ಕೂಟ ಆರಾರಿಂದಲೂ ಕೂಡದ ಕೂಟ. ತನ್ನಿಂದಗಲದ ಕೂಟ, ಕೂಡದಗಲದ ಕೂಟ. ಮರವರುವಿಂಗೆ ಮೀರಿದ ತನ್ನಯ ಕೂಟ ತಾನೇ ತಾನಾದ ಕೂಟ. ಗುಹೇಶ್ವರ ನಿಮ್ಮಲ್ಲಿ ನಿಂತ ಕೂಟ. ಗುಹೇಶ್ವರ ತಾನಾಗಿಹ ಕೂಟ. ತನ್ನಲ್ಲಿ ತಾನೇ ತಾನಾಗಿ ನಿಂತ ಕೂಟ. ನಿಶ್ಚಿಂತ ಕೂಟ. ತಾನು ಅಚಿಂತ್ಯನಾಗಿಹ ಕೂಟ. ಮನ ಮೇರೆ ದಪ್ಪಿದ ಕೂಟ. ಭಾವಕ್ಕಿಂಬು ಕೊಡದ ಕೂಟ. ಶಬ್ಧವೇ ಮೀಸಲಾಗಿ ನುಡಿ ನಡೆಗಳಿಗಿಂಬುಕೊಡದ ಕೂಟ. ಗುಹೇಶ್ವರ ಲಿಂಗವರಿತವರ ಕೂಟ. ಇದು ತನ್ನಲ್ಲಿ ತಾನು ನಿಂತ ಕೂಟ. ಇಂತಪ್ಪ ಕೇಡಿಲ್ಲದ ಕೂಟವ ಕೂಡುವುದು.

ಕೇಡಿಲ್ಲದ ಕೂಟವ ಕೂಡಿದ ಮಹಾಂತ ನಡೆಗೆಟ್ಟ ನಡೆಯ ನಡಿಯುವ ಘನ ಗಂಭೀರ. ನುಡಿಕೆಟ್ಟ ನುಡಿಯ ನುಡಿಯುವ ನಿರ್ವಾಣಿ. ಒಡಲ ಹಿಡಿಯದೆ ತನ್ನನ್ನೇ ಹಿಡಿದ ಮಹಾಂತ. ಗುಹೇಶ್ವರನಲ್ಲಿ ನಿಂತ ನಿಲುವುಳ್ಳ ತೆರಹಿಲ್ಲದ ಮಹಾ ಘನ. ಈ ಮಹಾಂತನೆ ನಡೆದು ನಿರ್ಗಮನಿ, ನುಡಿದು ನಿಃಶಬ್ಧಿ. ಮಾತೆಂಬುದು ಜ್ಯೋತಿರ್ಲಿಂಗವಾಗಿ ನೋಡದ ನೋಟವಾಗಿ , ಕೇಳದ ಕಿವಿಯಾಗಿ, ನಡೆಯದ ನಡೆಯಾಗಿ, ಹಿಡಿಯದ ಕೈಯಾಗಿ, ನೆನೆಯದ ಮನವಾಗಿ, ಅಚಿಂತ್ಯಪದವೇ ತನ್ನಿರುವಾಗಿ, ತಾನೇ ತಾನಾಗಿಹ ಸ್ವಮಹಿಮನೇ ಕೇಡಿಲ್ಲದ ಕೂಟವ ಕೂಡಿದನಯ್ಯ ಎಂದು ಹೇಳಿಹನು.

ವಚನ - 32

ಗುರುವಿಂಗೂ ಶಿಷ್ಯಂಗೂ ಆವುದು ದೂರ,
ಆವುದು ಸಾರೆ ಎಂಬುದನಾರು ಬಲ್ಲರು ?
ಗುರುವೇ ಶಿಷ್ಯನಾದ ತನ್ನ ವಿನೋದಕ್ಕೆ.
ಆ ಶಿಷ್ಯನೇ ಗುರುವಾದ ತನ್ನ ವಿನೋದಕ್ಕೆ.
ಕರ್ಮವೆಂಬ ಕೌಟಿಲ್ಯ ವೆಡೆವೊಕ್ಕ ಕಾರಣ,
ಭಿನ್ನವಾಗಿ ಇದ್ದಿತ್ತೆಂದರೆ ಅದು ನಿಶ್ಚಯವಹುದೇ ?
ಆದಿ ಅನಾದಿಯಿಂದತ್ತತ್ತ
ಮುನ್ನಲಾದ ಪರತತ್ವವಂ ತಿಳಿದು ನೋಡಲು
ನೀನೇ ಸ್ವಯಂ ಜ್ಯೋತಿ ಪ್ರಕಾಶವೆಂದರಿಯಲು ನಿನಗೆ ನೀನೇ ಗುರುವಲ್ಲದೆ,
ನಿನ್ನಿಂದ ಅಧಿಕಮಪ್ಪ ಗುರುವುಂಟೆ ? ಇದು ಕಾರಣ ಗುಹೇಶ್ವರ ಲಿಂಗ
ತಾನೇ ಎಂಬುದನು ತನ್ನಿಂದ ತಾನೇ ಅರಿಯಬೇಕು ನೋಡಾ.

ತಾತ್ಪರ್ಯ : ಪ್ರಭುದೇವ ದೇವರ ದೇವ. ಘನಕ್ಕೆ ಘನನಾದುದರಿಂದ ನಿಜದ ನಿಲುವಿನಲ್ಲಿ ಸಿದ್ಧನಾದ ಸ್ವತಃ ಸಿದ್ಧನು. ಜ್ಞಾನದೇವ , ಜ್ಞಾನೇಶ್ವರ. ಈ ಮಹಾಂತನ ಮಹಾನು ಭಾವವದು ಜ್ಞಾನಗಂಗಾ .

ಗುರುವಿಂಗೂ ಶಿಷ್ಯಂಗೂ ಆವುದು ದೂರ, ಆವುದು ಸಾರೆ ಎಂಬುದನಾರು ಬಲ್ಲರು ?: ಆಧುನಿಕ ಸಮಾಜದಲ್ಲಿ ಗುರುಶಿಷ್ಯರಾಗುವ ವ್ಯವಹಾರ ನಡೆದಿದೆ. ಈ ವ್ಯವಹಾರ ಅಲೌಕಿಕವಾಗಬೇಕು. ಪರಮಾರ್ಥದ ಪರಿಣಾಮವುಳ್ಳ ನಿಜಾನಂದದಿರುವುಳ್ಳದ್ದಾಗಬೇಕು.

ಗುರುಶಿಷ್ಯರ ವ್ಯವಹಾರ ಗುಟ್ಟು ಪರಮಾರ್ಥದ ಪರಿಣಾಮವ ತಿಳಿದವರುಅದೆಷ್ಟು ಜನ ಎಂಬುದು ಅದಾರು ಬಲ್ಲರು ? ಗುರುವಿಂಗೂ ಶಿಷ್ಯಂಗೂ ಎಷ್ಟು ಅಂತರ? ದೂರವೆನಬೇಕೆ ಸಮೀಪವೆನಬೇಕೆ ? ಮಧ್ಯವರ್ತಿ ಎನಬೇಕೆ ? ಇವುಗಳಲ್ಲಿ ಆವುದು ಸತ್ಯವೆನಬೇಕು ? ಗುರು ಶಿಷ್ಯರು ತಿಳಿಯುವ ತಿರುಳು ಅದಾವುದು ? ಈ ರಹಸ್ಯವನಾದರೂ ಅರಿತವರಿರಬೇಕು. ಇವರೀರ್ವರು ನಿಜವ ತಿಳಿಯುವುದಕ್ಕಾಗಿ, ತಿಳಿಸುವುದಕ್ಕಾಗಿ. ಇಲ್ಲಿ ಸಮತೆಯೇ ತನ್ನಿರುವು ಆಗಿದುದು ಸಿದ್ಧವಾಗಬೇಕು. ಸಮಗೋಷ್ಠಿಯು ಸಮತಾನಿಧಿಯು. ಗುರುವಿಂಗೆ ಗುರುವಾಗಿಹ ಶ್ರೀಗುರುವಿಂಗಲ್ಲದೆ ಅನ್ಯರಿಗೆ ಅಸಾಧ್ಯವು.

ಮುಕ್ತಾಯಕ್ಕ ಅಜಗಣ್ಣನಿಂದ ತತ್ವೋಪದೇಶ ಪಡೆದಿದ್ದಳು. ಪಡೆದರೂ ಗುರುವಿಂಗೂ ಶಿಷ್ಯಂಗೂ ಆವುದು ದೂರ , ಆವುದು ಸಾರವೆಂಬುದು ಗೊತ್ತಾದಂತೆ ಕಾಣುವುದಿಲ್ಲವಲ್ಲ ? . ಗುರು ಶಿಷ್ಯರೆಂಬುದು ವಿನೋದ, ಲೀಲೆ ಎಂಬುದು ತಿಳಿದಂತೆ ಕಾಣದಾಗಿದೆ. ಗುರುವಾದವನು ತನ್ನ ವಿನೋದಕ್ಕೆ ಶಿಷ್ಯನಾದ. ಶಿಷ್ಯನಾದವನು ತನ್ನ ವಿನೋದಕ್ಕೆ ಗುರುವಾದ. ಗುರು ಶಿಷ್ಯರೆಂಬುವುದು ಪರಬೊಮ್ಮದ ಆಟ. ಪರಮಾನಂದದ ಆಟ. ನಿರ್ವಿಕಾರದ ನಿಜ ಕೂಟ. ಅಹಮಿಲ್ಲದವರ ಆಟ. ಹಸುಗೂಸುಗಳ ಆಟ. ಭ್ರಹ್ಮವಾಗಿ ಆಡುವ ಆಟ. ಹಮ್ಮು ಬಿಮ್ಮು ಅಳಿದವರ ಆಟ. ಹೇಳುವವನಾದರೇನು? ಕೇಳುವವನಾದರೇನು? ತಿಳಿಯುವವನಾದರೇನು? ತಿಳಿಸುವವನಾದರೇನು? ಅಭಿನಯ ಪಾತ್ರಧಾರಿ.

ಶಿಷ್ಯನಾದವನು ಗುರುವಾಗಬಹುದು. ಗುರುವಾದವನು ಶಿಷ್ಯನಾಗಬಹುದು. ಪರಬ್ರಹ್ಮವು ಪರಬೊಮ್ಮವೇ. ಅರುವು ಅರುವೇ. ಇಲ್ಲಿ ಕಳಕೊಂಡುದಿಲ್ಲ. ಪಡೆಯಬೇಕಾದುದಿಲ್ಲ. ಇದು ಪರತತ್ವದ ಪರಿಣಾಮ. ಇದ್ದಂತಿದ್ದ ನಿರಾಲಂಬ. ನಿಜದಿರುವಿನ ಅರುವುಳ್ಳ ಆಟ. ಆನಂದವೇ ಆನಂದ. ಪರಾನಂದ. ಆವ ಆಟವಾಡಿದರೂ ತನ್ನಾಟವೇ. ತನ್ನ ಆನಂದ. ನಿಜಾನಂದ. ಗುರುವಾಗಿ ಭಾವಿಸಿದರೂ ವಿನೋದವೇ. ಶಿಷ್ಯನಾಗಿ ಶ್ರವಣ ಮಾಡಿದರೂ ವಿನೋದವು. ಕರ್ಮವೆಂಬ ಕೌಟಿಲ್ಯ ಎಡೆವೊಕ್ಕ ಕಾರಣ ಭಿನ್ನವಾಗಿ ಇದ್ದಿತ್ತೆಂದರೆ ಅದು ನಿಶ್ಚಯವಹುದೇ ?

ಕರ್ಮವೆಂಬ ಕೌಟಿಲ್ಯ : ಇದೆಂಥ ಮೋಸದ ಕರ್ಮವಿರಬೇಕು ? ಮರವರುವಿನ ಕರ್ಮ. ಗುರುವಾಗಿ ಶಿಷ್ಯರಾಗಿ ಮಾಡುವ ಕರ್ಮ. ಇದು ಕರ್ಮವೆಂಬ ಕೌಟಿಲ್ಯ. ಇದು ಗುರುವಾದವನಿಗೂ ಮೋಸ ಮಾಡುತ್ತದೆ. ಶಿಷ್ಯನಾದವನಿಗೂ ಮೋಸ ಮಾಡುತ್ತದೆ. ಇದೆಂಥ ಮೋಸವೆನಬೇಕು ಅಲ್ಲವೇ? ಇದು.... ಅಂದು, ಇಂದು, ಎಂದೆಂದೂ ಇದ್ದಂತಿದ್ದ ತನ್ನ ಸ್ವಸ್ವರೂಪ ಮರೆಯಿಸಿ ಬೋಧವೆಂಬ ಜ್ಞಾನ ತೂರ್ಯವ ತೋರಿ ಇಲ್ಲವಾಗುವ ಮಾಯಿಕದ ಮಾಟವೇ ಸಿದ್ಧವಾಗುವುದರಿಂದ ತನ್ನ ದಿಟವೆ ಕಾಣದಂತಾಗಿ ಸಟೆಯೆ ಸಿದ್ಧಿಸುವುದರಿಂದ ಈ ಬೋಧರೂಪ ಕರ್ಮವು ಕೌಟಿಲ್ಯವಾಗಲಿಲ್ಲವೆ ? ತಿಳಿದುನೋಡಿ, ಸ್ವ ಸ್ವರೂಪದ ಸ್ವಮಹಿಮೆಯನ್ನೆ ಹಿಂದಕ್ಕಿಕ್ಕಿ , ತೋರಿ ಇಲ್ಲವಾಗುವ ತೂರ್ಯ ಜ್ಞಾನಕ್ಕೆ ದಿಟವೆನ್ನುವದು. ಕರ್ಮವೆಂಬ ಕೌಟಿಲ್ಯವಲ್ಲವೆ ! ನಿರ್ವಾಣದಿರುವ ಕೆಡಿಸಿ, ವಾಣಿಯ ಹಗರಣಕ್ಕೆ ಒಪ್ಪಿದುದು ಬೆರಗಾದುದು, ಕರ್ಮವೆಂಬ ಕೌಟಿಲ್ಯವಲ್ಲವೆ !

ತೋರಬಾರದ ಘನ ಹೇಳಲೆಂದೇನೋ ? ಹೇಳಬಾರದ ಘನ ತೋರಲೆಂದೇನೋ ? ಈ ಯತಾರ್ಥದಿರುವ ಕೆಡಿಸಿ, ತೋರುವ ಕಥನವೆ ದಿಟವೆಂದು, ಒಪ್ಪಿತಲ್ಲಾ ?. ಇದೆಂಥ ಆಶ್ಚರ್ಯ. ತೋರಬಾರದ ಘನವು, ಹೇಳಲು ಬಾರದ ಇರವು ತೋರಿಸುವದಾಗಿದೆ ಹೇಳುವುದಾಗಿದೆ ಎಂದಲ್ಲಿ ಕರ್ಮದ ಕೌಟಿಲ್ಯವು. ತೋರದಡಗದ ಘನದೋಳ್ ಮರವರುವೆಂಬ ಮೋಸದ ಕರ್ಮಕ್ಕವಕಾಶವಾಗಿ, ಗುರುಶಿಷ್ಯನಾಗಿ ಇದ್ದಿತ್ತೆಂದರೆ ಅದು ಸತ್ಯವೆ ! ಗುರು ಘನವದು ಹೇಳಬಾರದ ಘನ. ಅದು ಬೋಧವ ಹೇಳಿ, ತನ್ನ ಸ್ವ ಸ್ವರೂಪದಿಂದ ಭಿನ್ನವಾಗಿ ಇದ್ದವನೆಂದರೆ ನಿಶ್ಚಯವಲ್ಲ.

ಶಿಷ್ಯನು ಕೇಳಬಾರದ ಘನ. ಕೇಳಿದವನಾಗಿ ಶ್ರವಣ ಮಾಡಿದವನಾಗಿ, ತನ್ನ ಸ್ವರೂಪದಿಂದ ಭಿನ್ನವಾಗಿ ಇದ್ದವನೆಂದರೆ ಅದು ನಿಶ್ಚಯವೆ ? ನಿಶ್ಚಯವಲ್ಲ. ಆದಿ ಅನಾದಿಯಿಂದತ್ತತ್ತ ಮುನ್ನಲಾದ ಪರತತ್ವಮಂ ತಿಳಿದು ನೋಡಲು ನೀನೇ ಸ್ವಯಂ ಜ್ಯೋತಿ ಪ್ರಕಾಶನೆಂದರಿಯಲು ನಿನಗೆ ನೀನೆ ಗುರುವಲ್ಲದೆ ನಿನ್ನಿಂದಧಿಕ ಮಪ್ಪ ಗುರುವುಂಟೆ? ಇದು ಗುರುವಿಂಗೆ ಗುರುವಾಗಿಹ ಘನತ್ವ. ಇದು ತನ್ನಿಂದ ತನ್ನಿರುವಿನ ಅರುವಾದ ಘನತ್ವ ನುಡಿಯ ಅರುವು ನಷ್ಟವಾಗಿ ನುಡಿಗೆಡೆಗೊಡದ ಘನದಿರುವೆ ತನ್ನಿರುವಿನ ಅರುವಾದ ಘನತ್ವ ಇದು ಘನಕ್ಕೆ ಘನ. ಇದುವೆ ಆದಿ ಅನಾದಿಯಿಂದತ್ತತ್ತ. ಮುನ್ನಲಾದ ಪರತತ್ವವ ತಿಳಿದ ಸಂಕೇತ ತಾನೆ ಸ್ವಯಂ ಜ್ಯೋತಿ ಪ್ರಕಾಶನೆಂದರಿತ ಸಂಕೇತ. ತನಗೆ ತಾನೆ ಗುರುವಾದ ಸಂಕೇತ, ಇಂತಪ್ಪ ಯತಾರ್ಥ ಜ್ಞಾನ ಜ್ಯೋತಿ ತನಗೆ ಲಭ್ಯವಾಗಬೇಕೆಂದಲ್ಲಿ ಆದಿ, ಅನಾದಿಯಿಂದತ್ತತ್ತ ಮುನ್ನಲಾದ ಪರತತ್ವ ತಿಳಿದು ನೋಡಬೇಕು ಆದಿ ಎಂದರೆ ಕುರುಹಿಂಗೆ

ಬಂದಿತ್ತು. ಅನಾದಿ ಎಂದರೆ ನಾಮಕ್ಕೆ ಬಂದಿತ್ತು. ನಾಮರೂಪದಿಂದುಕ್ತವಾದುದು. ಆದಿ ಅನಾದಿಯಾಯಿತ್ತು.

ಆದಿ ಅನಾದಿಯಿಂದತ್ತತ್ತ ಎಂಬುದು ವ್ಯಷ್ಠಿ, ಸಮಷ್ಠಿ ಪ್ರಪಂಚದಿಂದತ್ತತ್ತ ಪ್ರಕೃತಿಯಿಂದತ್ತತ್ತ, ಪುರುಷನಿಂದತ್ತ, ಪ್ರಕೃತಿ ಪುರುಷವಾಗದ ಮುನ್ನವೆ ಪರತತ್ವ ಅರಿವುಡೆ ತಾನೆ ವ್ಯಷ್ಠಿ, ಸಮಷ್ಠಿ ಪ್ರಪಂಚಕ್ಕೂ, ಪ್ರಕೃತಿ ಪುರುಷ ವೆಂಬುದಕ್ಕೂ ಬೆಳಗುವ ಸ್ವಯಂಜ್ಯೋತಿ ಪ್ರಕಾಶನೆಂದರಿತ ಸಂಕೇತ . ಇದು ತನ್ನಿಂದ ತನ್ನ ನರಿದ ಅರಿವು. ಅರುವಿಂಗರುವು.

ಆದಿಯಾಗಲಿ , ಅನಾದಿಯಾಗಲಿ, ಪರಪ್ರಕಾಶವು. ಪ್ರಕೃತಿ ಪುರುಷನಾಗಲಿ ತನ್ನಿಂದ ಬೆಳಗಿಸಿಕೊಳ್ಳತಕ್ಕವುಗಳು. ತಾನು ಇವೆಲ್ಲಕ್ಕು ಬೆಳಗುವ ಬೆಳಗುಳ್ಳ ಮಹಾ ಬೆಳಗು. ಇದು ತನ್ನಯ ಬೆಳಗು. ಸ್ವಯಂ ಬೆಳಗು. ಆದುದರಿಂದ ತನ್ನಿಂದ ತನ್ನಯ ಸ್ವಯಂ ಬೆಳಗು ಅರಿದುದೆ ತಾನೆ ಸ್ವಯಂ ಜೋತಿ ಪ್ರಕಾಶ ನೆಂದರಿಯಲು ನಿನಗೆ ನೀನೆ ಗುರುವಲ್ಲದೆ ನಿನ್ನಿಂದ ಅಧಿಕ ಮಪ್ಪ ಗುರುವುಂಟೆ? ಎಂದು ನಿಜದಿರುವನ್ನೆ ಇದ್ದ ಕ್ಕಿದ್ದಂತೆ ಸಿದ್ದ ಮಾಡಿದ ಸ್ವತಃ ಸಿದ್ದ ವಸ್ತುವೆ ತಾನಾಗಿಹ ಪ್ರಭು. ಈ ಮಹಾಂತ ನಿಸ್ಸೀಮ. ಸೀಮಿತ ಜ್ಞಾನ ಸೀಮಿತ ಭಾವ ಕೆಡಿಸಿ ನಿಸ್ಸೀಮತ್ವ ಸಿದ್ದ ಮಾಡುವ ಸ್ವಯಂ ಜೋತಿ ಪ್ರಭುವಾಗಿಹನು.

ಪರಮಾರ್ಥ ಜ್ಞಾನ ಸಂಪನ್ನರು ಬಹಳಷ್ಟು ಇದ್ದಾರೆ ತನಗೆ ತಾನೆ ಗುರುವಾದವರು ಶಿಕ್ಕುವದು ವಿರಳ ತನಗೆ ತಾನೆ ಗುರುವಾಗಿಹ ಘನತ್ವ ತಿಳಿಯದ್ದರಿಂದ ಸೀಮಿತ ಜ್ಞಾನವಾಗಿ ಶಿಷ್ಯರ ಮಾಡಿಕೊಂಡು ತಾನು ಗುರುವಾಗಲು ಹಾತೊರೆಯುತ್ತಾನೆ ನಿಸ್ಸೀಮದಿರುವು ತನ್ನಯ ಇರುವು ಎಂಬ ಅರುವಾದಲ್ಲಿ ಸೀಮಿತವ ಸೇರನು. ತನ್ನ ನಿಸ್ಸೀಮ ದಿರುವು ನಿಲುವಿಗಿಂತ ಹೆಚ್ಚಾದ ಗುರುತನ ವಿಲ್ಲವೆಂಬುದು ಚೆನ್ನಾಗಿ ತಿಳಿದಿಹನು. ಇದು ಕಾರಣ ಗುಹೇಶ್ವರ ಲಿಂಗ ತಾನೆ ಎಂಬುದು ನಿನ್ನಿಂದ ನೀನೆ ಅರಿಯಬೇಕು ನೋಡಾ ಎಂದು ಎಚ್ಚರಿಸಿದಲ್ಲಿ ಗುಹೇಶ್ವರ ಲಿಂಗ ಏನೊಂದಾಗದ ಘನ, ಕಥನಕ್ಕೆ ಬೆಳಗುವ ಘನವಾದುದರಿಂದ ತನ್ನಿಂದ ತಾನೆ ತಿಳಿಯುವದು.

ಮರವು ಎಂಬುದಕ್ಕು ಮುನ್ನವೆ ಇದ್ದವನು. ಅರುವೆಂಬುವದಕ್ಕೂ ಮುನ್ನವೆ ಇದ್ದವನು. ಮರುವುವರುವುಗಳೆಂಬಿವು ಒಂದು ಇದ್ದಲ್ಲಿ ಇನ್ನೊಂದಿಲ್ಲ. ತಾನು ಮರುವರುವಿಂಗೂ ಮೀರಿ ನಿರಂತರ ಇದ್ದವನು ತಾನೆ ಮಂಗಳಮಯ ನಿರಂತರ ಸ್ವಯಂ ಜೋತಿ ಇರುವದರಿಂದ ಮರವಿನ ಅಖಿಲ ನಾಮರೂಪ ಪ್ರಪಂಚ ಪರಪ್ರಕಾಶವು. ಅರುವಿನಲ್ಲಿ ತೋರುವ ತೂರ್ಯಾದಿ ಜ್ಞಾನ ಅವಸ್ತೆಗಳೆಲ್ಲ ಪರಪ್ರಕಾಶ ಹೆತ್ತರಿವು. ಇವೆರಡಕ್ಕೂ ನಿರಂತರ ಸಮಪ್ರಕಾಶನಾಗಿಹ ಮಂಗಳಮಯನು ಸ್ವಯಂ ಜೋತಿ ಪ್ರಕಾಶ ತನ್ನದಾದುದರಿಂದ ಗುಹೇಶ್ವರ ಲಿಂಗ ತಾನೆ ಎಂಬುದು ಸ್ವತಃ ಸಿದ್ದವಹುದು.

ವಚನ - 33

ಆದಿಗೆ ಅನಾದಿಗೆ ಭೇದ ಉಂಟೆ ?
ಆದಿ ಲಿಂಗ ಅನಾದಿ ಶರಣನೆಂಬುದು ತನ್ನಿಂದ ತಾ ಮಾಡಲಾಯಿತ್ತು
ಧರೆಯಾಕಾಶ ಭುವನ ಭುವನಂಗಳು ಹುಟ್ಟದ ಮುನ್ನ
ಅನಾದಿ ಪರಶಿವನು ತಾನೆ ತನ್ನ ಲೀಲೆಗೆ

ಸಾಕಾರವ ಧರಿಸಿದಡೆ ಆ ಸಾಕಾರವೆ ಈ ಸಾಕಾರವಾಯಿತ್ತು
ಎನ್ನ ಸಾಕಾರದ ಆದಿಯನು ಎನ್ನ ನಿರಾಕಾರದ ಅನಾದಿಯನು
ಬಸವಣ್ಣ ಬಲ್ಲನಾಗಿ ಗುಹೇಶ್ವರ ಲಿಂಗದ ಘನವು
ಬಸವಣ್ಣ ನಿಂದೆನಗೆ ಸಾಧ್ಯವಾಯಿತ್ತು ಕಾಣಾ ಚನ್ನಬಸವಣ್ಣ

ತಾತ್ಪರ್ಯ : ಆದಿಗೆ ಅನಾದಿಗೆ ಭೇದ ಉಂಟೆ ? ಆದಿ ಲಿಂಗ ಅನಾದಿ ಶರಣನೆಂಬುದು ತನ್ನಿಂದ ತಾ ಮಾಡಲಾಯಿತ್ತು : ಪ್ರಭುವಿನ ದೃಷ್ಟಿ ಸುದೃಷ್ಟಿ ಒಂದಾದ ದೃಷ್ಟಿ ಎಲ್ಲೆಲ್ಲೂ ತನ್ನಕಂಡ ದೃಷ್ಟಿ ಚಿನ್ಮಯ ದೃಷ್ಟಿ ಆದಿ ಅನಾದಿ ಭೇದವ ಕಾಣದ ದೃಷ್ಟಿ ಆದಿ ಆವುದು ಅನಾದಿ ಆವುದು? ತಾ ಮಾಡಲಾದ ಆದಿ, ತನ್ನಿಂದ ಲಾದ ಆದಿ ಆಧಾರ ವಿಲ್ಲದಂದು ಇದ್ದ ಆದಿ, ಹಮ್ಮು ಬಿಮ್ಮುಗಳಿಲ್ಲಂದದೆ ಇದ್ದ ಆದಿ, ಸುರಾಳ ನಿರಾಳ ರಚನೆಗೆ ಬಾರದಂದೆ ಇದ್ದ ಆದಿ, ಸಚರಾಚರ ರಚನೆಗೆ ಬಾರದಂದೆ ಇದ್ದ ಆದಿ, ಗುಹೇಶ್ವರ ನೀನೊಬ್ಬನೆ ಇದ್ದೆಯಲ್ಲ ಇಲ್ಲದಂತೆ.

ಆದಿ ಅನುಪಮ ಖಂಡಾಖಂಡ ಸಂಯೋಗವಿಲ್ಲದ ಅಖಂಡಿತವಾಗಿಹ ಆದಿ, ಇದು ಲಿಂಗ ವಾಗಿಹ ಆದಿ, ತನ್ನ ಲೀಲೆಗೆ ತನೆ ಆದಿಯಾಗಿಹ ಆದಿ ತಾನೆ ಅನಾದಿ. ''ಘಟ್ಟಿದುಪ್ಪ ತಿಳಿದುಪ್ಪಕ್ಕೆ ಭೇಧ ಉಂಟೆ ? ದೀಪಕ್ಕೆ ದೀಪ್ತಿಗೆ ಭೇದ ಉಂಟೆ ? ಅಂಗಕ್ಕೆ ಆತ್ಮಕ್ಕೆ ಭೇದ ಉಂಟೆ? ಎನ್ನಂಗವನು ಶ್ರೀಗುರು ಮಂತ್ರ ಮಾಡಿ ತೋರಿದನಾಗಿ ಸಾವಯವ ನಿರವಯಕ್ಕೆ ಭೇದ ವಿಲ್ಲವಯ್ಯ ಚೆನ್ನ ಮಲ್ಲಿಕಾರ್ಜುನ.''

ಘಟ್ಟಿದುಪ್ಪ ತಿಳಿದುಪ್ಪ ಸಕಲರು ಕಂಡುದುಂಟು. ಅದರ ಸಾರಭೂತ ತಿಳಿದವರು ಉಂಟು. ಅಲ್ಲಿ ಭೇದವೆ ಅಯ್ಯ? ಘಟ್ಟಿದುಪ್ಪ ವಾವುದು ಅದುವೆ ತಿಳಿದುಪ್ಪವಲ್ಲವೆ? ಘಟ್ಟಿದುಪ್ಪದಂಗ ಅದುವೆ ಅಲ್ಲವೆ? ನೋಡಲು ಒಂದು ಘಟಿಯಾಗಿ, ಇನ್ನೊಂದು ತಿಳಿಯಾದರೇನಾಯಿತು. ಸಾರಭೂತ ತುಪ್ಪವಲ್ಲವೆ? ಹಾಗೆ ಅಂಗ ವಾಗಲಿ ಆತ್ಮ ವಾಗಲಿ ಭೇದವೆ? ಸಾರಭೂತ ಒಂದೆ ಅಲ್ಲವೆ? ಮೂಲ ಭೂತ ಒಂದೆ ಅಲ್ಲವೆ? ಮೂಲ ಅದಾವ ಮೂಲ, ಮುನ್ನ ಮುನ್ನಲಾದ, ಮೂಲ ತನ್ನಿಂದ ತಾನಾದ ಮೂಲ ಸಕಲರ ಹೃದಯದಲ್ಲಿ ನ್ಯಸ್ತವಾಗಿಹ ಮೂಲ, ಇದರ ಘನವು ತನ್ನಿಂದ ತನಗೆ ಪ್ರಜ್ವಲಿಸದವರಿಗೆ ನಾನವಿಧವಾಗಿ ಕಾಣುತ್ತಾನೆ. ತನ್ನಯ ಮೂಲಭೂತ ವಾಗಿಹ ಇರವು ತನ್ನಿಂದ ತನಗೆ ವೇದ್ಯವಾಗುವುಡೆ ಆಗ ಎಲ್ಲೆಲ್ಲೂ ತನ್ನನ್ನೆ ಕಾಣುವನು.

ತುಪ್ಪದ ಸಾರಭೂತ ವೇದ್ಯ ವಾದುದರಿಂದ ಅದು ಘಟ್ಟಯಾಗಿ ತೋರಲಿ ತಿಳಿಯಾಗಿ ತೋರಲಿ ಅದಕ್ಕೆ ಪ್ರಾಧಾನ್ಯತೆ ಇರದು. ಹಾಗೆ ತನ್ನಯ ಇರುವಾಗಿಹ ಸಾರಭೂತ ವೇದ್ಯವಾಗುವುಡೆ ಆಗ ತಾನು ಏನನ್ನು ಕಂಡರೂ ತನ್ನನ್ನೆ ಕಾಣುವ ದಿವ್ಯದೃಷ್ಟಿ ಸಿದ್ದವಾಗುವದು. ಇದು ನಿಃಶಬ್ದ ವೇದಿಗಳ ನಿಲುವು ತನ್ನಯ ನಿಜ ನಿಲುವು. ಅವರಿಗೆ ಲಿಂಗ ಆತ್ಮ ಬೇರಾಗಿಲ್ಲ ಅಂಗ ಸಾವಯವ ವಾದರೇನಾಯಿತು ಆತ್ಮ ನಿರವಯವಾದ ರೇನಾಯಿತು ತನ್ನಯ ನಿಃಶಬ್ದ ಬ್ರಹ್ಮವಾಗಿಹ ಮಹದಿರುವು ಇದ್ದಂತೆ ಇದೆ.

ಇಲ್ಲಿ ಶ್ರೀಗುರುವಿನ ಪಾತ್ರ ಬಹುಮುಖ್ಯವಾಗಿದೆ. ಗುರು ಶಿಷ್ಯ ರಾದವರು ಶಿಕ್ಕುವರು. ಏನೊಂದಾಗದ ಘನ ಶ್ರೀಗುರು ಸಿಕ್ಕವದು ವಿರಳ. ಆ ಘನಾಂಗನು ತನ್ನಂತೆ

ಮಾಡುವ ಮಹಾ ಮಹಿಮ. ಎಲ್ಲೆಲ್ಲೂ ತನ್ನ ಮೂಲದಿರುವು ಪ್ರಜ್ವಲಿಸುವ ಸ್ವಯಂ ತೇಜ. ಶಿಷ್ಯನನ್ನು ಕಾಣನು ಗುರುವು ಆಗನು. ಮರವು ಕಾಣನು ಅರುವು ಕಾಣನು ಬಂಧವು ಕಾಣ. ಮೋಕ್ಷವು ಕಾಣ ಅಂಗವು ಕಾಣ ಲಿಂಗವು ಕಾಣ ಘಟ್ಟಿದುಪ್ಪವೂ ಕಾಣ ತಿಳಿದಿಪ್ಪವೂ ಕಾಣ. ಸಾರಭೂತ ಮಾತ್ರ ಕಂಡವನು, ಕಾಣದುದ ಕಂಡವನು, ಎಲ್ಲೆಲ್ಲೂ ಅದುವೆ ಕಂಡವನು ತನ್ನ ಕಂಡವನು ಈ ಮಹಾಂತ ಸತ್ ಗುರು ಈ ತನ ಗುರ್ವಾನುಗ್ರಹ ಸತ್ಯ ಶಿಷ್ಯನಿಗೆ ಸಾಧ್ಯವು ಅಲ್ಲಿ ಗುರುವಿನ ಇರುವು. ಶಿಷ್ಯನ ಇರುವು ಶಬ್ದಕ್ಕೆ ತೆರಹಿಲ್ಲದ ಇರುವು. ಅದು ಒಂದಾದ ಇರುವು. ನಾನೀ ನೆಂಬುದಕ್ಕು ಇಂಬು ಗೊಡದ ಇರುವು. ಇದು ಎನ್ನಂಗ ಮಾಡಿ ತೋರಿದ ಶ್ರೀಗುರು ಮಂತ್ರ ಇದು ಮೂಕ ಮೂಕರು ಸವಿದ ಸುಧೆ. ಇದು ಕಿವಿಗೆ ಕೇಳದ ಮಂತ್ರ. ಕಿವಿಯ ಕಿವಿಯಾಗಿಹ ಮಂತ್ರ. ಇದು ಕಣ್ಣಿನ ಕಣ್ಣಾಗಿ ನೋಡಿದವರಿಗೆ ಯತಾರ್ಥವು. ಇದು ಕಾರಣ ಆದಿ ಅನಾದಿಗೆ ಭೇದವಿಲ್ಲ ವೆಂದು ಹೇಳಿಹರು.

ಆದಿ ಲಿಂಗ ಅನಾದಿ ಶರಣನೆಂಬುದು ತನ್ನಿಂದ ತಾ ಮಾಡಲಾಯಿತ್ತು. ಇದು ತನ್ನಯ ವಿನೋದ, ತನ್ನಯ ಲೀಲೆ. ನೆಲಸಿ ಲಿಂಗವಾದುದು ಲೀಲೆ. ಚರಿಸಿ ಜಂಗಮ ಲಿಂಗವಾದುದು ಲೀಲೆ. ಅನುಪಮನಾಗಿ ಶರಣನಾಗಿಹ ಲೀಲೆ. ಈ ಲೀಲೆಯ ರಹಸ್ಯ ಶಬ್ದ ಮುಗ್ದ ರಹಸ್ಯ. ಮುಗ್ದಾನು ಭವಿಯಾಗಿಹ ರಹಸ್ಯ.

ಧರೆಯಾಕಾಶ ಭುವನ ಭುವನಂಗಳು ಹುಟ್ಟದ ಮುನ್ನ ಅನಾದಿ ಪರಶಿವನು ತಾನೆ ತನ್ನ ಲೀಲೆಗೆ ಸಾಕಾರವ ಧರಿಸಿ ದಡೆ ಆ ಸಾಕಾರವೆ ಈ ಸಾಕಾರವಾಯಿತ್ತು: ಈ ತೋರುವ ಭುವನ ಬಹು ವಿಚಿತ್ರ ವಾದುದು ಇದು ಪಂಚ ಭೂತಂಗಳಾಗಿಹ ತೋರುವ ಭುವನ ಪಿಂಡಾಂಡ ಬ್ರಹ್ಮಾಂಡವಾಗಿ ತೋರುವ ಭುವನ, ಪ್ರಕೃತಿ ಪುರುಷರಾಗಿ ತೋರುವ ಭುವನ,' ಅಜ್ಞಾನಿಗೆ ನಾಮರೂಪಾಗಿ ತೋರುವ ಭುವನ, ಜ್ಞಾನಿಗೆ ಪ್ರಕೃತಿ ಪುರುಷರಾಗಿ ತೋರುವ ಭುವನ, ಶಕ್ತಿ ಶಿವನಾಗಿ ತೋರುವ ಭುವನ, ಸುರಾಳ ನಿರಾಳ ವಾಗಿ ತೋರುವ ಭುವನ ಸಚರಾಚರ ವಾಗಿ ತೋರುವ ಭುವನ, ಈ ಭುವನಂಗಳು ಹುಟ್ಟದ ಮುನ್ನ ಪರಶಿವ ತಾನೆ ನುಡಿಗೆಡೆ ಗೊಡದ ಘನ. ಅಕಥನೀಯವಾಗಿ ಪರಶಿವ ತಾನೆ ತನ್ನ ಲೀಲೆಗೆ ಸಾಕಾರವ ಧರಿಸಿದಡೆ ಆ ಸಾಕಾರವೆ ಈ ಸಾಕಾರ ವಾಯಿತ್ತು.

ಪರಶಿವನ ಲೀಲೆ ಇದು ವಿನೋದ. ಅಭಿನಯ ಕಾರನು ತಾನಾವ ಪಾತ್ರ ಮಾಡಿದರು ತನ್ನ ಮೂಲವ ಮರೆಯನು. ಮೂಲದಿರುವ ತೋರಿಸುವ ಕರುಣೆ, ಮುನ್ನೆಲ್ಲಿಂದ ಬಂದ ನಲ್ಲಿಗೆ ಮುಟ್ಟಸುವ ಪರಶಿವ ಲೀಲೆ. ಇದು ಸಾಕಾರ ವಾಗಿಹ ಲೀಲೆ, ಲಿಂಗ ಲೀಲೆ ಶರಣನಾಗಿಹ ಲೀಲೆ, ಸುಚೈತನ್ಯವಾಗಿಹ ಲೀಲೆ, ಇದುವೆ ನಿಜ ಚೈತನ್ಯ ಪ್ರಜ್ವಲಿಸುವ ಲೀಲೆ ಇದು ಅಗಮ್ಯ ವಾಗಿಹ ಲೀಲೆ, ನಿಶ್ಚಿಂತವಾಗಿಹ ನಿರುಪಮ ಲೀಲೆಯು. ಪರಶಿವ ತಾನೆ ತನ್ನ ಲೀಲೆಗೆ ಸಾಕಾರವ ಧರಿಸಿದಡೆ ಆ ಸಾಕಾರವೆ ಈ ಸಾಕಾರವಾಯಿತ್ತು ಎಂದು ಹೇಳಿಹರು.

ಎನ್ನ ಸಾಕಾರದ ಆದಿಯನು ಎನ್ನ ನಿರಾಕಾರದ ಅನಾದಿಯನು ಬಸವಣ್ಣ ಬಲ್ಲನಾಗಿ ಗುಹೇಶ್ವರ ಲಿಂಗದ ಘನವು ಬಸವಣ್ಣ ನಿಂದೆನಗೆ ಸಾಧ್ಯವಾಯಿತ್ತು ಕಾಣಾ ಚೆನ್ನ ಬಸವಣ್ಣ: ಪ್ರಭು ಎನ್ನ ಸಾಕಾರದ ಆದಿಯನು ಎನ್ನ ನಿರಾಕಾರದ ಅನಾದಿಯನು ಬಸವಣ್ಣ ಬಲ್ಲ ನಾಗಿ ಎಂದು ಬಿತ್ತರಿಸಿದುದು ನೋಡಿದಡೆ ಬಸವಣ್ಣ ಗುರುವಿಂಗೆ ಗುರುವಾಗಿಹ ಗುರು ಪ್ರಸಾದ ಕೊಂಡ ಬಸವಣ್ಣ. ಲಿಂಗಕ್ಕೆ ಲಿಂಗವಾಗಿಹ ಲಿಂಗ ಪ್ರಸಾದವ ಕೊಂಡ ಬಸವಣ್ಣ. ಜಂಗಮಕ್ಕೆ

ಜಂಗಮು ವಾಗಿಹ ಜಂಗಮು ಪ್ರಸಾದ ಕೊಂಡ ಬಸವಣ್ಣ. ಇಂತಪ್ಪ ಮಹದನುವ ಬಲ್ಲ ಮಹಾ ಮಹಿಮ ಬಸವಣ್ಣ ಬಲ್ಲ. ಇದು ಕಾರಣ ಪ್ರಭು ಸಾಕಾರದ ಆದಿ ಲಿಂಗ ಎಂಬುದು ಘನ ಗಂಭೀರ ವನು ಎನ್ನ ನಿರಾಕಾರದ ಅನಾದಿಯಾಗಿಹ ಮಹಾಘನ ಬಸವಣ್ಣ ಬಲ್ಲನೆಂಬುದು ಬಹು ಗುಟ್ಟಾಗಿಹ ರಹಸ್ಯ. ಬಸವರಸ ದೇವರ ದೇವ. ಮಹದರಿವು ಇರುವು ಇದನೆಂತು ವರ್ಣಿಸುವದು.

ಅ ಪ್ರಮಾಣನ ಪ್ರಮಾಣಿಸುವರೆ? ಅಕಲ್ಪಿತನ ಕಲ್ಪಿಸುವರೆ? ನಿರಾಳವೆಂಬ ಕೂಸಾಗಿಹ ಬಸವದೇವ ಈ ಮಹಾಂತಂಗೆ ಬೆಣ್ಣೆಯ ನಿಕ್ಕಬಹುದೆ? ಮಹದರಿವು ನಿರಾಕಾರದ ಅನಾದಿ ಯಾಗಿಹ ಘನಕ್ಕೆ ಘನ ಇಲ್ಲಿ ಭಾಷೆ ಪ್ರಸಾದಕ್ಕಿಂಬಿಲ್ಲ ನೋಡಾ. ಭಾಷೆ ಪ್ರಸಾದವದು ಶಬ್ದದ ಲಜ್ಜೆಯು ಗುಹೇಶ್ವರ ನರಿಯದವರನೆಲ್ಲ ತರಕಟ ಕಾಡಿತ್ತು ಘನ ಗಂಭೀರ ಮಹಾಘನವೆಂಬ ಎನ್ನ ಸಾಕಾರದ ಆದಿ ಲಿಂಗರೂಪ ಅರಿಯ ಹೋಗಿ ಅರುವಿಂಗರುವಾಗಿಹ ಅನಾದಿಯನು ಅರಿಯಬಹುದೆ? ವರ್ಣಿಸಬಹುದೆ? ಬಸವಣ್ಣ ಗುಹೇಶ್ವರ ಲಿಂಗವನು ಶಬ್ದ ಮುಗ್ದನಾಗಿ ಬಲ್ಲ, ಮನ ವರಿಯದವನಾಗಿ ಬಲ್ಲ, ಧ್ವನಿಯ ಮರೆಯಲ್ಲಿರ್ದುದ ಬಲ್ಲ, ಬಸವಣ್ಣ ಘನಗಂಭಿರ ಮಹಾಘನದೊಳಗೆ ಘನಕ್ಕೆ ಘನ ವಾಗಿರ್ದನಯ್ಯ ಕೂಡಲಸಂಗಯ್ಯನೆಂಬ ಬೆಳಗಿನೊಳಗೆ ಬೆಳಗಾಗಿರ್ದು ಶಬ್ದ ಮುಗ್ದವಾದುದ ನೇನೆಂಬೆ ಎಂದು ಪ್ರಭುವಿನ ಮುಂದೆ ತನ್ನ ಮಹಾನುಭವ ಬಿತ್ತರಿಸಿರುವದು ಕಂಡು ಕೇಳಿ ತಿಳಿದುದರಿಂದ ಬಸವಣ್ಣನಿಂದೆನಗೆ ಸಾಧ್ಯವಾಯಿತ್ತು ಕಾಣಾ ಚೆನ್ನಬಸವಣ್ಣ ಎಂದಿಹರು.

ವಚನ - 34

ಆದಿ ಅನಾದಿ ಎಂಬೆರಡು ಮೂಲವ ನೆತ್ತಿ ತೋರಿದನಯ್ಯ ಬಸವಣ್ಣನು
ಆದಿ ಲಿಂಗ ಅನಾದಿ ಜಂಗಮವೆಂಬ ಭೇದವ ವಿವರಿಸಿ ತೋರಿದನಯ್ಯ ಬಸವಣ್ಣನು
ಕಾಯದ ಜೀವದ ಸಂಬಂಧವ ಅಸಂಬಂಧವ ಮಾಡಿ ತೋರಿದನಯ್ಯ ಬಸವಣ್ಣನು
ಎನ್ನ ಆದಿ ಅನಾದಿಯನು ಬಸವಣ್ಣನಿಂದ ತಿಳಿದು
ನಮ್ಮ ಗುಹೇಶ್ವರ ಲಿಂಗದಲ್ಲಿ ಸುಖಿಯಾದೆನು ಕಾಣಾ ಚೆನ್ನ ಬಸವಣ್ಣ.

ತಾತ್ಪರ್ಯ- ಆದಿ ಅನಾದಿ ಎಂಬುದರ ಮೂಲವನೆತ್ತಿ ತೋರಿದನಯ್ಯ ಬಸವಣ್ಣನು: ಆದಿ ಗುರು ಘನ ಸ್ಥಲ, ಲಿಂಗ ಸ್ಥಲ, ಜಂಗಮ ಸ್ಥಲ, ಪ್ರಸಾದ ಸ್ಥಲಂಗಳನಾರು ಬಲ್ಲರು? ಆದಿಯ ತೋರಿಸಿದ ಅನಾದಿ ನರುಹಿ ನಾದ ಬಿಂದು ಕಳೆಗಳ ಭೇದಮಂ ಭೇದಿಸಿ ತೋರಿದ ಹುಟ್ಟುವದ ಮುಟ್ಟದೆ ತೋರಿದ, ಹುಟ್ಟದೆ ಇದ್ದುದ ಮುಟ್ಟದೆ ತೋರಿದ ಎನ್ನಂತರಂಗ ವನನು ಮಾಡಿ ನಿಜಲಿಂಗವ ನೆಲೆಗೊಳಿಸಿದ ಗುಹೇಶ್ವರನ ಶರಣ ಸಂಗನ ಬಸವಣ್ಣ ನಿಂದ ಸಕಲ ಸನುಮತವ ನರಿದೆನಯ್ಯ.

ಗುರು ಸ್ಥಲವೆಂಬುದು ಆದಿ. ಅದುವೆ ಗುರು ಸ್ಥಲವಾಗಿ ಲಿಂಗ ಸ್ಥಲ ಜಂಗಮ ಸ್ಥಲ ಪಾದೋದಕ ಸ್ಥಲವಾಯಿತ್ತು ನೋಡಾ ಸ್ಥಲವೆಂದರೆ ಸುಖ ಸ್ಥಲ ಸಚ್ಚಿದಾನಂದ ಸ್ಥಲ ಪೂರ್ಣ ಸ್ತಲ ಚೈತನ್ಯ ಸ್ಥಲ ತೋರದಡಗದ ಸ್ವಯ ಸ್ಥಲ ಗುರು ಸ್ಥಲವು ಆದಿ ಯಾದುದರಿಂದ ಸೀಮೆ ಸಾಯುಜ್ಯವ ಮೀರಿದಾತ ಗುರುವೈ ನಾಮ ನಿರ್ನಾಮ ವಾದಾತ ಗುರುವೈ ಸೋಮ

ಪ್ರಭೆಯಿಂದತ್ತತ್ತ ಪಾವನ ನಾದಾತ ಆದಿ ಅಕ್ಷರವ ನರಿದಾತ ಗುರುವೈ, ನಾದ ಬಿಂದು ಕಳೆಯಾದಿ ಅರಿದಾತನ ಅಭೇಧ್ಯ ಗುರು ಬಸವಣ್ಣ ಶ್ರೀಮಲ್ಲಿಕಾರ್ಜುನ.

ಆದಿ ಗುರು ಸ್ಥಲವಾದುದರಿಂದ ಗುರು ಘನಕ್ಕೆ ಸೀಮೆ ಸಾಯುಜ್ಯ ವಾವುದು? ಪ್ರವೃತ್ತಿ ನಿವೃತ್ತಿಯೆಂಬ ಸೀಮೆ ಯಾದರೂ ಉಂಟೆ? ಅಹುದು ಅಲ್ಲವೆಂಬ ಸೀಮೆಯಾದರೂ ಯಂಟೆ? ಸೀಮೆಯ ಮೀರಿದ ಘನವೆ ಗುರು ಘನ ಮರವರುವೆಂಬ ಸೀಮೆಯ ಮೀರಿದ ಘನ ಸತ್ಯ ಅಸತ್ಯ ವೆಂಬುದಕ್ಕಿಂಬು ಗೊಡದ ಘನ ಅಕ್ಷರಾಕ್ಷರವ ಮೀರಿದ ಘನ.

ಬಂಧ ಮೋಕ್ಷಗಳ ಆದಿ ಗುರು ಸ್ಥಲ, ಸೇವಕ ಸ್ವಾಮಿ, ಪೂಜ್ಯ ಪೂಜಕ, ದೇವ ಭಕ್ತನೆಂಬ ಮಾಯಿಕವ ಕಾಣದಾತ ಆತ ಆದಿ ಗುರುಸ್ತಲ ಸಾಲೋಕ್ಯ ಸಾಯುಜ್ಯ ಸಾಮಿಪ್ಯ ಸಾರೂಪ್ಯವೆಂಬ ಚತುರ್ವಿಧ ಪದಂಗಳಿಗೆ ಮೀರಿದಾತನೆ ಆದಿಗುರು ಸ್ಥಲವಾದುದರಿಂದ ನಾಮ ನಿರ್ನಾಮವಾದಾತ ಗುರುವೈ ಗುರು ಘನ ದೃಷ್ಟಿಯಲ್ಲಿ ಆನೆಂಬುದಿಲ್ಲ ನೀನೆಂಬುದಿಲ್ಲ ಸ್ವಯವೆಂಬುದಿಲ್ಲ ಪರವೆಂಬುದಿಲ್ಲ ಅಧೋಶೂನ್ಯ ಊರ್ಧ್ವ ಶೂನ್ಯಂ ಮಧ್ಯ ಶೂನ್ಯಂ ಈ ಮೂರು ಶೂನ್ಯವಾಗಿ ನಾಮ ನಿರ್ನಾಮ ವಾದಾತ ಗುರುವೈ ಸೋಮ ಪ್ರಭೆಯಿಂದತ್ತತ್ತ ಪಾವನ ನಾದಾತ ಪರಪ್ರಕಾಶ ಸ್ವಯಂ ಪ್ರಕಾರವೆಂಬುದಕ್ಕೂ ನುಡಿಗೆಡೆ ಗೊಡದವ ನಾದುದರಿಂದ ತರಹಿಲ್ಲದಭವ ಗುರುಪ್ರಭೆ ಸಕಲ ತತ್ವ ಅತತ್ವ ಗಳಿಗೆಲ್ಲ ಬೆಳಗುವ ಪ್ರಭೆ ಸೋಮ ಪ್ರಭೆಯಿಂದತ್ತತ್ತ ಪಾವನ ನಾದಾತ. ಆದಿ ಅಕ್ಷರ ವನರಿದಾತ ನಾದುದರಿಂದ ಆದಿಗುರು ಸ್ಥಲ ಅಕ್ಷರಾಕ್ಷರ ಮೀರಿದ ಘನವ ನರಿದುದರಿಂದ ಆದಿ ಗುರುಸ್ಥಲ.

ನಾದ ಬಿಂದು ಕಳೆಯಾದಿಯರಿದಾತ ಗುರುಘನನು: ನಾದ ವಾಗದಾತ ಬಿಂದುವಾಗದಾತ ಕಳೆಯಾಗದಾತ ಈ ಮೂರಕ್ಕೂ ಮೀರಿದ ಚೈತನ್ಯ ಘನ ನಿಸ್ಸೀಮ ನಿರುಪಾಧಿ ನಿಶಬ್ದ ವೇದಿ ಯಾದುದರಿಂದ ಅಭೇಧ್ಯ ಗುರುತನವ ತೋರಿದನಯ್ಯ ಬಸವಣ್ಣನು.

ಲಿಂಗ ಸ್ಥಲದ ಆದಿಯ ತೋರಿಸಿದ ಅಂತರಂಗ ದೊಳಿರ್ದ ನಿರವಯ ಲಿಂಗವನು ಸಾವಯವ ಲಿಂಗ ಮಾಡಿ ಶ್ರೀಗುರುಸ್ವಾಮಿ ಕರಸ್ಥಲಕ್ಕೆ ತಂದು ಕೊಟ್ಟ ಲಿಂಗವು ಅಂತರಂಗವ ನಾವರಿಸಿ ಕರಣಂಗಳೆ ಕಿರಣಂಗಳಾಗಿ ಆ ಬೆಳಗುವ ಚಿದಂಶವೆ ಪ್ರಾಣ ಲಿಂಗ ಆ ಮೂಲ ಚೈತನ್ಯವೆ ಭಾವ ಲಿಂಗ ಅದನರಿದು ನೋಡುವ ನೋಟ ಭಾವ ಪೂರ್ಣವಾಗಿ ತಾನು ತಾನಹದಲ್ಲದೆ ಇದಿರಿಟ್ಟು ತೋರುವ ವದಿಲ್ಲವಾಗಿ ಅಖಂಡ ಪೂರ್ಣಮಪ್ಪ ನಿಲುವು ತಾನೆ ಕೂಡಲಸಂಗಮದೇವಾ.

ಅಂತರಂಗದೊಳಿರ್ದ ನಿರವಯ ಗುರು ಕರುಣೆಯಿಂದ ಕರಸ್ಥಲದಲ್ಲಿ ಬೆಳಗುವ ಚಿಜ್ಯೋತಿ ಜ್ಞಾನ ಸ್ವರೂಪ ತನ್ನ ಅಂತರಂಗದಲ್ಲಿ ಗುರು ಕಾರುಣ್ಯ ರೂಪಿ ದಿವ್ಯ ದೃಷ್ಟಿಯಿಂದ ನೋಡುವುಡೆ ಅಂತರಂಗವೆಲ್ಲ ಹರಡಿ ವ್ಯಾಪಿಸಿದ ಘನವನಾರು ಬಲ್ಲರು ? ಅಂತರಂಗವು ಪರಂಜ್ಯೋತಿ ಪ್ರಕಾಶಿಸುವ ಪ್ರಕಾಶ ವಾದುದರಿಂದ ಕರಣಂಗಳು ಕಿರಣಂಗಳು ಮನವು ಅಮ ನವಾಗಿ ಬುದ್ದಿ ಮನವಿಂಗೆ ಮೀರಿದ ಚಿತ್ತ. ಪ್ರಭೆ ಚಿತ್ತಾ ಅದು ಅಚಿಂತ್ಯದ ನಿಲುವಾಗಿ ಚಿದಂಶವೆ ಪ್ರಾಣಲಿಂಗ ಚಿದಂಶವಾಗಿಹ ಪ್ರಾಣಲಿಂಗ. ಅದುವೆ ಚಿತ್ತ ಸ್ವರೂಪವಾಗಿ ಬೆಳಗುವ ಮೂಲ ಚೈತನ್ಯ ಘನ ಭಾವಲಿಂಗ. ಇದನರಿದು ನೋಡದ ನೋಟ, ಅರಿಯದರುವು ಪೂರ್ಣಾತ್ ಪೂರ್ಣವಾಗಿಹ ತಾನು ತಾನಹದಲ್ಲದೆ ಇದಿರಿಟ್ಟು ತೋರುವ

ತನಗಿಂತನ್ಯವಾವುದು ತೋರುವುದಿಲ್ಲಾಗ್ಗಿ, ಅಖಂಡಿತ ಪರಿಪೂರ್ಣ ಮಪ್ಪ ನಿಲುವು ತಾನೆ ಕೂಡಲ ಸಂಗಮದೇವಾ. ಹೀಗೆ ಲಿಂಗ ಸ್ಥಲದ ಆದಿಯ ತೋರಿದೆನಯ್ಯ ಬಸವಣ್ಣ ನಿರವಾಣನು.

ಜಂಗಮ ಸ್ಥಲದ ಅನಾದಿಯ ತೋರಿದನಯ್ಯ ಬಸವಣ್ಣನು. ನಿರಾವರಣ ನಿರ್ಜನಿತ ನಿರ್ಲೇಪ ನಿಃಕಪಟ ನಿರ್ವಚನೀಯ ನುಪಮಿಸಲಿಲ್ಲ ನಿಲ್ಲೊ ನಿರಾಳ ನಿರ್ಮಾಯ ನಿಸ್ಸಂಗಿ ನಿರ್ಲಿಖಿತ ನಿರವಯನ ಅವಯವಕ್ಕೆ ನಿಲ್ಲೊ ಸಿಮ್ಮಲಿಗೆಯ ಚೆನ್ನರಾಮನೆಂಬ ಜಂಗಮ ಲಿಂಗವ ನುಪಮಿಸಲಿಲ್ಲನಿಲ್ಲೊ.ಬಸವರಸರು ಅದಾವ ಜಂಗಮ ಸ್ಥಲ ಸಾಧಕರು ಓಹೋ। ನಿರಾವರಣ ಜಂಗಮ ಲಿಂಗದ ಸಾಧಕ ಲಿಂಗ ಒಂದಾಗಿರ್ದ ಜಂಗಮ ಸಾಧಕ. ನಿರ್ಜನಿತ ಜಂಗಮ ಸಾಧಕ. ನಿರ್ಲೇಪ ಜಂಗಮ ಸಾಧಕನ. ನಿರ್ಮಾಯ ಜಂಗಮ ಸಾಧಕನಾದುದರಿಂದ ಸ್ವಯ ಲಿಂಗಿಯಾದನು. ಬಸವಯ್ಯನ ಸಾಧನೆ ಇದಾರಿಗೆ ಸಾಧ್ಯವು ಹೇಳಾ ನಿರ್ಲಿಖಿತ ಜಂಗಮ ಸಾಧಕ ನಾಗಿಹನೆ ನಿರ್ಜನಿತ ಜಂಗಮ ಸಾಧಕ ನಾಗಿಹನೆ? ನಿರಾಲಂಬ ಜಂಗಮ ಸಾಧಕ ನಾಗಿಹನೆ? ಅಸಾಧ್ಯವ ಸಾಧಿಸಿದ ಸಾಧಕನಾಗಿಹನು. ಇದು ಕಾರಣ ಅವಯವಕ್ಕೆ ತರಲಿಲ್ಲ ನೋಡಾ ಸುಚೈತನ್ಯಕ್ಕೆ ನಿಜ ಚೈತನ್ಯ ಸಾಹಿತ್ಯವ ತೋರಿ ಆದಿ ಗುರುಲಿಂಗ ಅನಾದಿ ಜಂಗಮ ವೆಂಬ ಭೇಧವ ವಿವರಿಸಿ ತೋರಿಸಿದನಯ್ಯ ಬಸವಣ್ಣನು.

ಕಾಯದ ಜೀವದ ಸಂಬಂಧವ ಅಸಂಬಂಧವ ತೋರಿದನಯ್ಯ ಬಸವಣ್ಣನು. ಕಾಯಕ್ಕೂ ಜೀವಕ್ಕೂ ಸಂಬಂಧವ ತೋರಿದನಯ್ಯ ಬಸವಣ್ಣ. ಗುರುವೆಂಬ ಘನ ಕಾಯ ರೂಪನಾಗಿ ಕಂಡರೂ ತೋರಬಾರದ ಘನ ತಾನು ತೋರದಂತಿದ್ದರೂ ತನ್ನ ಕರುಣೆಯು ತನ್ನಿರುವ ಸೂಚಿಸಿಹುದು ನೋಡಾ.

ಲಿಂಗವೆಂಬುದು ತೋರಬಾರದ ಘನವಾಗಿದ್ದರೂ ಕರಸ್ಥಲ ದೋಳ್ ನಿರಾಳವೆಂಬ ಕೂಸಾಗಿ ಪ್ರಜ್ವಲಿಸುತ್ತಿಹುದು ಜಂಗಮವದು ತೋರಬಾರದ ಘನವಾಗಿದ್ದರೂ ಚರಿಸಿ ತನ್ನಿರುವಿನ ಘನವರೂಪಿ ಭಾವಕ್ಕಗಮ್ಯನ ಮಾಡಿಹುದು.

ಕಾಯದ ಜೀವದ ಸಂಬಂಧ ಅಸಂಬಂಧ ಮಾಡಲು, ಆದಿಯ ತೋರಿ ಅನಾದಿಯ ಅರುಹಿ ನಾದ ಬಿಂದು ಕಲೆಗಳಿಗೆ ನಿಲುಕದ ತತ್ವವ ತೋರಿಸದ. ಕಾಯ ರೂಪಿ ಹುಟ್ಟುವದು ಮುಟ್ಟದೆ ತೋರಿದೆ. ಜೀವವೆಂಬುದು ಹುಟ್ಟದೆ ಇದ್ದುದ ಮುಟ್ಟಿ ತೋರಿದೆ. ಆದಿಗುರು ಸ್ಥಲ ಅನಾದಿ ಜಂಗಮ ಸ್ಥಲ ಇವು ಅಜಾತ ತತ್ವ ಗುಣಕ್ರಿಯೆಗಳಿಂದ ಹುಟ್ಟಿದವುಗಳಲ್ಲ ನಾಮರೂಪಾಂದುಕ್ತ ವಾದವುಗಳಲ್ಲ, ಜ್ಯಾತ್ಯಾದಿ ಸೂತಕ ಸಂಬಂಧ ವಿಲ್ಲದೆ (ಸದ್ಗುರುವಿನಂದವೆ) ಗುರುವಾಗಿ ಲಿಂಗವಾಗಿ ಜಂಗಮವಾಗಿ ಇವುಗಳ ಬಸವದೇವನು ಮುಟ್ಟದೆ ತೋರಿದ. ತಾನು ಏನೊಂದಾಗದ ಘನನಾದುದರಿಂದ ಮುಟ್ಟದೆ ತೋರಿದನೆಂದು ಹೇಳಿಹರು.

ಬಸವದೇವ ಅಖಂಡಿತ ಘನ ಪೂರ್ಣವಪ್ಪ ನಿಲುವುಳ್ಳ ಘನ ಮಹಿಮನಾದುದರಿಂದ ಹುಟ್ಟದೆ ಇದ್ದುದ ಮುಟ್ಟಿ ತೋರಿದ. ಎನ್ನಂತರಂಗವನನುವ ಮಾಡಿ ನಿಜವ ನೆಲೆ ಗೊಳಿಸಿದುದರಿಂದ ನಮ್ಮ ಗುಹೇಶ್ವರ ಲಿಂಗದಲ್ಲಿ ಸುಖಿಯಾದೆನು ಕಾಣಾ ಚನ್ನ ಬಸವಣ್ಣ ಎಂದು ಬಸವದೇವರ ಮಹಾನುಭವ ಪ್ರಭುದೇವ ಕೊಂಡಾಡಿಹನು .

ಆದಿ ಶಕ್ತಿ ಅನಾದಿ ಶಕ್ತಿ ಎಂಬುದ ಅದನಾರು ಬಲ್ಲರು ?
ಆದಿ ಎಂದರೆ ಕುರುಹಿಂಗೆ ಬಂದಿತ್ತು. ಅನಾದಿ ಎಂದರೆ ನಾಮಕ್ಕೆ ಬಂದಿತ್ತು
ಆದಿಯೂ ಅಲ್ಲ ಅನಾದಿಯೂ ಅಲ್ಲ ನಾವಿಲ್ಲದ ಸೀಮೆಯಿಲ್ಲದ ನಿಜ ಶಕ್ತಿಯೆ
ಚಿಚ್ಚ ಕ್ತಿಯಾಯಿತ್ತು. ಅಂತರಂಗ ಪ್ರಭೆ ಬಹಿರಂಗವೆಲ್ಲ ತಾನೆ ಆಗಿ
ಗುಹೇಶ್ವರ ಲಿಂಗದಲ್ಲಿ ಸಂದಿಲ್ಲದಿಪ್ಪ ಮಹಾದೇವಿಯಕ್ಕನ ಶ್ರೀಪಾದಕ್ಕೆ
ನಮೋ ನಮೋ ಎಂಬೆನು.

ತಾತ್ಪರ್ಯ - ಆದಿ ಶಕ್ತಿ ಅನಾದಿ ಶಕ್ತಿ ಎಂಬುದ ಅದನಾರು ಬಲ್ಲರು :

ಪ್ರಭೆ ಶಕ್ತಿಯ ಬಲ್ಲಾತ ಆದಿ ಶಕ್ತಿಯ ಬಲ್ಲಾತ, ಅನಾದಿ ಶಕ್ತಿಯ ಬಲ್ಲಾತನೆ ಬಲ್ಲ ಮಹಾಂತ, ನಿಜ ಶಕ್ತಿಯ ಮಹದಿರುವ ಬಲ್ಲ ಮಹಾಮಹಿಮ.ಆದಿ ಶಕ್ತಿ ಅನಾದಿ ಶಕ್ತಿಯಂಬುದು ಮಾಯೆ. ಮಾಯೆಯ ಕೋಲಾಹಲ ಮಾಡಿದ ಸ್ವಪ್ರಭೆ ಸ್ವಯಂ ಶಕ್ತಿ. ಈತನ ದಿವ್ಯ ದೃಷ್ಟಿಗೆ ಆದಿ ಶಕ್ತಿಯು ದೊಡ್ಡದಾಗಿ ಕಾಣಲಿಲ್ಲ ಕಾಣದ್ದರಿಂದ ಆದಿ ಎಂದರೆ ಕುರುಹಿಂಗೆ ಬಂದಿತ್ತು, ಅನಾದಿ ಎಂದರೆ ನಾಮಕ್ಕೆ ಬಂದಿತ್ತು. ಪ್ರಭು ಈ ಶಕ್ತಿಗೆ ಮೋಸ ಹೋಗಬಾದೆಂದು, ನಿಜ ಶಕ್ತಿ ಘನದಿರುವ ತೋರಿದುದಲ್ಲದೆ ಆದಿ ಶಕ್ತಿಯ ಮೂಲವ ತಿಳುಹಿದ ಕುರುಹಿಂಗೊಳ ಪಟ್ಟುದು ಆದಿ ಶಕ್ತಿಯು ನಾಮಕ್ಕೊಳ ಪಟ್ಟುದು, ಅನಾದಿ ಶಕ್ತಿಯೆಂದು ಶಕ್ತಿಯ ಇರುವು ತೋರಿಹನು.

''ಹರಿಯ ಹೊಲಬ ನರಿಯ, ಬ್ರಹ್ಮ ಮುಂದ ನರಿಯ ರುದ್ರ ಲೆಕ್ಕವ ಮರೆದು ಜಪವನೆಣೆಸು ತ್ತೈದಾನೆ. ಈಶ್ವರ ಪವನ ಯೋಗದಲ್ಲಿ ಮಗ್ನನಾದ ಸದಾಶಿವ ಭಾವದಲ್ಲಿ ಭರಿತನಾದ. ಒಂದಂಡಹದೋಳ್ ಬಾಲಕ ರೈವರು ನಿಮ್ಮ ನೆತ್ತ ಬಲ್ಲರು ಗುಹೇಶ್ವರಾ.''

ಒಂದಂಡಜವೆಂಬಿದು ಕುರುಹಿಂಗೊಳ ಪಟ್ಟುದು ನೀವೆ ತಿಳಿದು ನೋಡಿ. ಹರಿ, ಬ್ರಹ್ಮ ರುದ್ರ, ಈಶ್ವರ, ಸದಾಶಿವ ನೆಂಬುದು ನಾಮಕ್ಕೊಳ ಪಟ್ಟುದು. ನೀವೆ ತಿಳಿದು ನೋಡಿ. ಇವರು ತಮ್ಮ ಆದಿ ಶಕ್ತಿಯ ಒಪ್ಪಿಕೊಂಡವರು. ಅನಾದಿ ಶಕ್ತಿಯ ಒಪ್ಪಿಕೊಂಡವರು ಕಾರಣ ತೆರಹಿಲ್ಲದಭವ ನುಡಿಗೆಡೆ ಗೊಡನು ಎಂಬ ಪರತತ್ವದ ಹೊಲಬ ನರಿಯ. ಬ್ರಹ್ಮ ತನ್ನ ಮುಂದಿರುವ ಬ್ರಹ್ಮವ ತಿಳಿದು, ಅದು ತನ್ನ ಮುಂದಿರುವ ಜಗತ್ತೆಂದು, ಜೀವಿಗಳೆಂದು, ತಾನು ಸೃಷ್ಟಿಸಿದವನಾಗಿ ಜೀವಿಗಳ ರಕ್ಷಕನಾದ. ಇದಲ್ಲದೆ ಬೋಗ ಮೋಕ್ಷಂಗಳ ಕೊಡುವ ಒಡೆಯನೆಂದು, ನಿಃಶಬ್ದ ಬ್ರಹ್ಮ ಘನವ ನರಿಯದೆ ಭೇಧ ಜ್ಞಾನ ವುಳ್ಳವ ನಾದುದರಿಂದ ಬ್ರಹ್ಮಮುಂದ ನರಿಯ ಎಂದು ಹೇಳಿಹರು.

ರುದ್ರ ತಾನಾರೆಂಬುದ ಅರಿಯಲಿಲ್ಲ, ತನ್ನಿರುವಿನ ಮರುವು, ಆದುದರಿಂದ ತಾನೆ ರುದ್ರನೆಂಬ ಅನಾದಿ ಶಕ್ತಿಯು ಘನವಾಗಿಹುದು ಇದು ಕಾರಣ ಲೆಖ್ಖವ ಮರೆದು ಜಪವನೆಣೆಸುತ್ತೈದಾನೆ ಎಂದು ಹೇಳಿಹರು.

ಈಶ್ವರ ತನ್ನ ಕಲ್ಪನಾರಹಿತವಾಗಿಹ ಮೂಲ ಸ್ವರೂಪ ತಿಳಿಯದ್ದರಿಂದ, ತಾನು ಕಲ್ಪಿತ ಈಶ್ವರನೆಂದು, ಪವನ ಯೋಗದಲ್ಲಿ ಮಗ್ನನಾಗಿಹನು. ಸದಾಶಿವ ತನ್ನ ನಿರಂತರವಾಗಿರುವ ಮಂಗಳಮಯ ತತ್ವ ತಿಳಿಯದ್ದರಿಂದ ಭಾವಕ್ಕೊಳಪಟ್ಟ ಸದಾಶಿವ ನಾದ. ಭಕ್ತರ ಭಕ್ತಿಗೆ ಭಾವ

ಭ್ರಮಿತನಾದ. ಇದು ಒಂದಂಡಜದೊಳ್ ಐವರು ಬಾಲಕರು ಗುಹೇಶ್ವರ ನಿಮ್ಮ ನೆತ್ತ ಬಲ್ಲರು ಎಂದು ಕುರುಹಿಂಗೊಳ ಪಟ್ಟ ಶಕ್ತಿಯ ಮಂಡಿಸಿಹನು. ನಾಮಕ್ಕೊಳ ಪಟ್ಟ ಅನಾದಿ ಶಕ್ತಿಯಿಂದ ಪ್ರಕಟವಾದ ಜ್ಞಾನದ ಇರುವು ಕೂಡಾ ವಿವರಿಸಿಹನು.

"ವೇದಗಳೆಂಬಿವು ಬ್ರಹ್ಮನ ಭೂತಾಟ ಶಾಸ್ತ್ರವೆಂಬುದು ಸರಸ್ವತಿಯ, ಗೊಡ್ಡಾಟ ಆಗಮಗಳೆಂಬಿವು ಋಷಿಯ ಮರುಳಾಟ, ಪುರಾಣಗಳೆಂಬಿವು ಗುದ್ಯಾಟ. ಇಂತಿರುವ ನರಿದವರ ನೇತಿಗಳೆದು ನಿಜದಲ್ಲಿ ನಿಂದಿಪ್ಪಾತನೆ ಗುಹೇಶ್ವರನಲ್ಲಿ ಅಚ್ಚ ಲಿಂಗೈಕ್ಯನು."

ಅನಾದಿ ಶಕ್ತಿಯೆಂಬುದು ನಾಮಕ್ಕೆ ಬಂದಿತ್ತು, ವೇದ ವೆಂಬುದು ನಾಮಕ್ಕೆ ಬಂದಿತ್ತು, ಬ್ರಹ್ಮ ನೆಂಬುದು ನಾಮಕ್ಕೆ ಬಂದಿತ್ತು ವೇದವೆಂಬುದು ಅನಾದಿ ಶಕ್ತಿಯು ಶಾಸ್ತ್ರವೆಂಬುದು ಅನಾದಿ ಶಕ್ತಿಯು. ಆಗಮ ಗಳೆಂಬುವು ಅನಾದಿ ಶಕ್ತಿಯು. ಸರಸ್ವತಿ ಯೆಂಬುದು ಆದಿ ಶಕ್ತಿಯು. ಋಷಿಗಳೆಂಬವರು ಆದಿ ಶಕ್ತಿಯು. ಇವುಗಳೆಲ್ಲ ನೇತಿಗಳೆಂದು ನಿಜದಲ್ಲಿ ನಿಂದಿಪ್ಪಾತನೆ ಗುಹೇಶ್ವರ ಲಿಂಗದಲ್ಲಿ ಅಚ್ಚಲಿಗೈಂಕ್ಯನು.

ಬಹು ಭಾವಿಕರು ಗುರುಪುತ್ರರು ಆದಿ ಶಕ್ತಿ ಅನಾದಿ ಶಕ್ತಿಗೆ ಒಪ್ಪಿಕೊಂಡಿರುವರಲ್ಲದೆ ಈ ಆದಿಯು ಇಲ್ಲದ್ದು ಅನಾದಿ ಶಕ್ತಿಯು ಇಲ್ಲದ್ದು ಎಂದು ತಿಳಿದವರು ಶಿಕ್ಕುವದು ವಿರಳ. ಆರು ನಿಃಶಬ್ದ ವೇದಿಗಳು ನಿಜವರಿತವರು ಅವರು ಮಾತ್ರ ಆದಿ ಶಕ್ತಿಯ ಒಪ್ಪಿಕೊಂಡವರಲ್ಲ ಅನಾದಿ ಶಕ್ತಿಗು ಒಪ್ಪಿಕೊಂಡವರಲ್ಲ ಏಕೆಂದರೆ, ವೇದ ಘನವೆಂಬುದೊಂದು ಸಂಪಾದನೆ ಶಾಸ್ತ್ರ ಘನವೆಂಬುದೊಂದು ಸಂಪಾದನೆ ಪುರಾಣ ಘನವೆಂಬುದೊಂದು ಸಂಪಾದನೆ, ಆಗಮ ಘನವೆಂಬುದೊಂದು ಸಂಪಾದನೆ, ಗುಹೇಶ್ವರ ನೆಂಬ ನಿಜಾನುಭವದ ಸಂಪಾದನೆಯ ನರಿಯದ ಕಾರಣ ಹಲವು ಸಂಪಾದನೆಗಳಾಗಿಹವು.

ತಾನಾರು ತನ್ನ ನರಿಯ ಬೇಕೆಂಬ ಜಿಜ್ಞಾಸು ಎಲ್ಲಿಯವರೆಗೆ ಗುಹೇಶ್ವರನೆಂಬ ನಿಜಾನುಭವದ ಸಂಪಾದನೆಯ ಅರಿಯವದಿಲ್ಲ ಅಲ್ಲಿಯವರೆಗೆ ಹಲವು ಸಂಪಾದನೆಗಳಾಗಿಹವು. ಗುಹೇಶ್ವರ ನೆಂದರೆ ಈ ದೇಹದಿಗಳಿಗೆ ಒಡೆಯನಾಗಿಹ ಈಶ್ವರ, ಚೈತನ್ಯನೆಂದರ್ಥವಾಗುವದು. ತನ್ನ ದೇಹದೊಳಗಿರುವ ಚೈತನ್ಯ ಸ್ವರೂಪ ಯತಾರ್ಥ ಅರಿತವರೆ ನಿಜಾನುಭವಿಗಳು. ಅವರಿಗೆ ಬೇರಾವ ಸಂಪಾದನೆಗಳಿದ್ದರೂ ತನ್ನ ಸಂಪಾದನೆಯಲ್ಲ, ತನ್ನ ಸ್ವರೂಪವರಿತುದೆ ನಿಜ ಸಂಪಾದನೆ.

ಅಕ್ಕ ತನ್ನ ತಾನರಿತ ಸ್ವಯ ಶಕ್ತಿ, ನಿಜ ಶಕ್ತಿಯಾದಿದರಿಂದ ಆದಿಯೂ ಅಲ್ಲ ಅನಾದಿಯೂ ಅಲ್ಲ ನಾಮವಿಲ್ಲದ ಸೀಮೆ ಇಲ್ಲದ ನಿಜಶಕ್ತಿಯೆ ಚಿಚ್ಛಕ್ತಿಯಾಯಿತ್ತು. ಮಹಾದೇವಿಯಕ್ಕ ನಾಮ ವಿಲ್ಲದ ಸೀಮೆ ಇಲ್ಲದ ನಿಜ ಶಕ್ತಿಯಾದುದರಿಂದ ನಾಮವ ನಿರ್ನಾಮವ ಮಾಡಿದ ಸ್ವತಃ ಸಿದ್ದ ಶಕ್ತಿ. ಶರಣಸತಿ ಲಿಂಗಪತಿ ಎಂಬ ಸೀಮೆ ಇಲ್ಲದ ನಿಸೀಮಳು. ಅಖಂಡಿತ ಘನ ಪೂರ್ಣವಪ್ಪ ತನ್ನಿರುವೆ ಅರುವೆಂದರಿದ ಚಿಚ್ಛಕ್ತಿ. ಏನೊಂದಾಗದ ಘನ ಶಕ್ತಿ. ಚಿತ್ ಸ್ವರೂಪ ವರಿತು ಚಿದಾಕಾಶವೆ ತಾನಾಗಿಹ ಮಹಾಶಕ್ತಿ. ಆಕಾಶವದು ಆಕಾಶವೆನಲಿಲ್ಲ, ಹಾಗೆ ಅಕ್ಕ ಜ್ಞಾನ ಸ್ವರೂಪ ವರಿತವಳಾದುದರಿಂದ ಚಿದ್ಘನವೆನಲಿಲ್ಲ .

"ಲಿಂಗವೆನ್ನೆ ಲಿಂಗೈಕ್ಯವೆನ್ನೆ ಸಂಗವೆನ್ನೆ ಸಮರಸವೆನ್ನೆ ಆಯಿತೆನ್ನೆ ಆಗದೆನ್ನೆ ಚೆನ್ನ ಮಲ್ಲಿಕಾರ್ಜುನ ನಲ್ಲಿ ಏನೊಂದಾಗದೆ ಶಬ್ದ ಮುಗ್ದವಾಗಿದ್ದೆ" ಎಂದು ಸ್ವತಃ ತಾನೆ ಬಿತ್ತರಿಸಿರುವಲ್ಲಿ ಇದಕ್ಕಾವ ಶಕ್ತಿ ಎನಬೇಕು ? ಲಿಂಗವರಿತುದರಿಂದ ಲಿಂಗಕ್ಕೆ ಲಿಂಗವಾಗಿಹ

ಲಿಂಗಪತಿ ಯಾಗಿದ್ದರೆ ಸಂಗಿ ಎನುತಿದ್ದಳು. ನಿಜವರಿತು ತನ್ನಹೊರ್ತು ಮತ್ತೊಂದಾವುದು ಇಲ್ಲದ್ದರಿಂದ ಸಂಗವೆನ್ನೆ ಸಮರಸವೆನ್ನೆ ಎಂದು ಹೇಳಿಹಳು.

ಆಯಿತೆನ್ನೆ ಆಗದೆನ್ನೆ ತಾನು ಎಂದೆಂದೂ ಇದ್ದಂತಿದ್ದ ಘನ ಅರಿಯಲಿಲ್ಲದ ಅರುವೆ ತಾನಾಗಿದ್ದುದು ಉಪಮಿಸಲಳವಲ್ಲವಾಗಿ, ಉಪಮಿಸುವದದೆಂತು ? ಸ್ವರೂಪವದು ನಿರಂತರ ಮಂಗಲಮಯವಾಗಿಹ ಸ್ವಯಂಜ್ಯೋತಿ ತಾನಾದುದು ತನ್ನಿಂದ ತನಗದು ವಿಧಿತವಾಗಿ ಸ್ವರೂಪ ಸಾಕ್ಷಾತ್ಕಾರ ಆಯಿತೆನ್ನಲು ಬರದು, ಆಗದೆನ್ನಲು ಬರದು. ತನ್ನಿರುವದು ನಿರಂತರವಿರುವಲ್ಲಿ ಅಲ್ಲಿ ಬೋಧ, ಅಬೋಧ, ಬೋಧಾ ಬೋಧಗಳ ಮಿಶ್ರವೆಂದು ಕಥನಕ್ಕವಕಾಶವೆಲ್ಲಿಯದು.

ಚೆನ್ನ ಮಲ್ಲಿಕಾರ್ಜುನಯ್ಯ ಏನೂ ಎನ್ನದೆ ಶಬ್ಧ ಮುಗ್ಧವಾಗಿದ್ದೆ ಎಂದು ಹೇಳಿರುವಲ್ಲಿ ತಾನು ನಿಶಃಬ್ದಬ್ರಹ್ಮವಿರುವಲ್ಲಿ ತನ್ನಿರುವು ಅದು ಹೊಗಳಿಕೆಗೆ ನಿಲುಕದ ನಿಲುವು. ಆದುದರಿಂದ ಶಬ್ದಮುಗ್ಧ ಎಂದು ಹೇಳಿಹಳು.

ಅಂತರಂಗ ಪ್ರಭೆ, ಬಹಿರಂಗವೆಲ್ಲ ತಾನೆ ಆಗಿ ಗುಹೇಶ್ವರ ಲಿಂಗದಲ್ಲಿ ಸಂದಿಲ್ಲದಿಪ್ಪ ಮಹಾದೇವಿಯಕ್ಕನ ಶ್ರೀಪಾದಕ್ಕೆ ನಮೋ ನಮೋ ಎಂಬೆನು.

ಅಕ್ಕನ ಅಂತರಂಗ ಪ್ರಭೆ, ಗುಹೇಶ್ವರ ಲಿಂಗದಲ್ಲಿ ಸಂದಿಲ್ಲದಿಪ್ಪ ಪ್ರಭೆ. ಗುಹೇಶ್ವರ ಲಿಂಗವೆ ತಾನಾಗಿಹ ಪ್ರಭೆ. ಖಂಡಾ ಖಂಡ ಸಂಯೋಗವಿಲ್ಲದ ಅಖಂಡಿತನ ನಿಲುವು. ತನ್ನಲ್ಲಿ ಕಂಡು ತಾನು ಅದುವೆ ಆಗಿಹ ಪ್ರಭೆ. ಸ್ವಯ ಪ್ರಭೆಯಾದುದರಿಂದ ಬಹಿರಂಗವೆಲ್ಲ ತಾನೆ ಆಗಿಹ ಘನವು ಒಳಗೂ ಪ್ರಭೆ ಹೊರಗೂ ಪ್ರಭೆ. ಒಳಗೂ ತಾನೇ, ಹೊರಗೂ ತಾನೆ. ಒಳಹೊರಗೆನ್ನದೆ ಸಂದಿಲ್ಲದಿಪ್ಪ ಅಪಾರ ಪ್ರಭೆಯು ತಾನಾಗಿಹ ಮಹಾದೇವಿಯಕ್ಕನ ಶ್ರೀಪಾದಕ್ಕೆ ನಮೋ ನಮೋ ಎಂಬೆನು ಎಂದು ಪ್ರಭುದೇವ ಕೊಂಡಾಡಿಹನು. ಅಕ್ಕ ಲಿಂಗವರಿತು, ಲಿಂಗವಾಗಿಹ ಒಡೆತನ. ಸುಖದ ಸುಖವಾಗಿಹ ಒಡೆತನ. ಅಚಿಂತ್ಯ ಪದವೆ ತನ್ನದಾಗಿಹ ಒಡೆತನವಾದ್ದರಿಂದ ನಮೋ ನಮೋ ಎಂಬೆನು ಎಂದು ಹೇಳಿಹನು.

ವಚನ - 36

> **ಆಕಾಶವ ಮೀರುವ ತರುಗಿರಿಗಳುಂಟೆ ?**
> **ನಿರಾಕಾರವ ಮೀರುವ ಸಾಕಾರವುಂಟೆ ?**
> **ಗುಹೇಶ್ವರ ಲಿಂಗವ ಮೀರುವ ಒಡೆತನ ಉಂಟೆ?**

ತಾತ್ಪರ್ಯ : ಆಕಾಶವ ಮೀರುವ ತರುಗಿರಿಗಳುಂಟೆ ? : ಬಯಲನ್ನು ಮೀರುವ ಅದಾವ ತರು ? ಅದಾವ ಗಿಡ ? ಅದಾವ ಮರ ? ಅದಾವ ಪರ್ವತ ? ಕಲ್ಪವೃಕ್ಷವಾದರೂ ಆಕಾಶದೊಳಗಲ್ಲವೆ ? ಅಗಣಿತ ಅಖಂಡವಾಗಿಹ ಆಕಾಶವೆತ್ತ ? ಗಣಿತವುಳ್ಳ ಗಿಡ ಮರಗಳೆತ್ತ ? ಕೊನೆ ಮೊದಲಿಲ್ಲದ ಗಗನವೆತ್ತ ? ಆದಿ ಅಂತ್ಯಗಳಿಂದುಕ್ತವಾಗಿಹ ತರು ಗಿರಿಗಳೆತ್ತ ? ಅಣುವೆನ್ನಲು ಬಾರದ ಗಗನವೆತ್ತ ? ಸ್ಥೂಲಾತಿ ಸ್ಥೂಲವಾದ ಪರ್ವತವೆತ್ತ ? ಕಂಗಳಿಗೆ ಕಾಣದ ಆಕಾಶವ ಮೀರುವ ಕಣ್ಣಿಂಗೆ ತೋರುವ ತರುಗಿರಿಗಳಿರಬಹುದೆ ? ಕಾರಣ ನಿರೂಪ ಮೀರುವ ರೂಪವುಂಟೆ ? ಮಾತಿಲ್ಲದವನ ಮೀರುವ ಮಾತುಗಳುಂಟೆ ? ದೃಕ್ ಮೀರುವ ದೃಷ್ಯಗಳಿರಬಹುದೆ ? ಸೂರ್ಯನ ಮೀರುವ ಕತ್ತಲೆಯುಂಟೆ ? ಕಣ್ಣಿನ ಕಣ್ಣು

ಮೀರುವ ಬೆಳಕು ಕತ್ತಲೆಗಳಿರಬಹುದೆ ? ಮೌನವನ್ನು ಮೀರುವ ಶಬ್ಧಗಳಿರಬಹುದೆ ? ಘ್ರಾಣೇಂದ್ರಿಯ ಮೀರುವ ವಾಸನೆಗಳಿರಬಹುದೆ ? ಪಿಂಡಾಂಡ ಬ್ರಹ್ಮಾಂಡ ಮೀರುವ ಜಗತ್ತೆ ಇರಬಹುದೆ ? ನಿರ್ನಾಮವ ಮೀರುವ ನಾಮವಿರಬಹುದೆ ? ವ್ಯಾಪಕವ ಮೀರುವ ರೂಪಂಗಳಿರಬಹುದೇ ? ನಿಶಃಬ್ಧ ಬ್ರಹ್ಮ ಮೀರುವ ಹೊಗಳಿಕೆ ಇರಬಹುದೆ ? ಸುಜ್ಞಾನವ ಮೀರುವ ಜ್ಞಾನಂಗಳು ಇರಬಹುದೇ ? ಸ್ವಯಂ ಪ್ರಕಾಶವ ಮೀರುವ ಪರ ಪ್ರಕಾಶವಿರಬಹುದೆ?.

ಅರುವ ಮೀರುವ ಭಾವವಿರಬಹುದೆ ? ಚೇತನವ ಮೀರುವ ಜಡವಿರಬಹುದೆ ? ಬ್ರಹ್ಮ ಜ್ಞಾನವ ಮೀರುವ ಭ್ರಾಂತಿ ಇರಬಹುದೆ ? ಸುಮನವ ಮೀರುವ ಕಲ್ಪಿತವಿರಬಹುದೆ ? ಬ್ರಹ್ಮಾಕಾರವ ಮೀರುವ ತನುವಿರಬಹುದೆ ? ತನ್ನ ಮೀರುವ ಉಪದೇಶವಿರಬಹುದೆ ?

ನಿರಾಕಾರವ ಮೀರುವ ಸಾಕಾರವುಂಟೆ ?: ಸಾಕಾರವು ನಿರಾಕಾರದ ಸಮವಾಗಬಹುದೆ ? ಸಮವಾಗದಿದ್ದಲ್ಲಿ ನಿರಾಕಾರವ ಮೀರುವ ಕುರುಹು ಕೂನಂಗಳಿರಬಹುದು. ಘನವ ಮೀರುವ ನರರ ನೀತಿಯುಂಟೆ? ಸುರಾಸುರರ ತಪ ಉಂಟೆ ? ಜಿಜ್ಞಾಸುಗಳ ವಿಚಾರ ಉಂಟೆ? ಉಪಾಸಕರ ಉಪಾಸನೆ ಉಂಟೆ ? ಭಕ್ತರ ಧ್ಯಾನಾದಿಗಳುಂಟೆ? ಪರಬ್ರಹ್ಮವ ಮೀರುವ ದೇವಗಣ, ರುದ್ರಗಣ, ಪ್ರಮಥಗಣ ಉಂಟೆ ? ಪುರುಷಾರ್ಥವ ಮೀರುವ ಮುಮುಕ್ಷುಗಳುಂಟೆ ?. ಅಕ್ಷರೋತ್ತಮವ ಕಂಡ ಅಕ್ಷರಸ್ಥರು ಉಂಟೆ?ನಿರ್ಬೋಧವ ಮೀರುವ ಬೋಧ ಉಂಟೆ ? ಮಧ್ಯದಲ್ಲಿರ್ದ ಸ್ವಯಂ ಜ್ಯೋತಿಯ ಮೀರಿರುವ ಗುರು ಶಿಷ್ಯರುಂಟೆ? ಗುರುಲಿಂಗ ಮೀರುವ ಗುರುತನ ಉಂಟೆ? ಗುರುಲಿಂಗ ತನ್ನೊಳಿದ್ದುದ ಅರಿತವಂಗೆ ಗುರುಶಿಷ್ಯರಾದುದುಂಟೆ? ಕೆಡುವ ಸಾಕಾರವೆತ್ತ, ಕೆಡದ ನಿರಾಕಾರವೆತ್ತ ? ಎತ್ತಣದಿಂದೆತ್ತ ಸಂಬಂಧ. ಮಲಮಯ ದೇಹ ಭಾವವೆತ್ತ? ಮಂತ್ರಾರೂಢವೆತ್ತ ? ದೋಷವೆತ್ತ ? ನಿರ್ದೋಷವೆತ್ತ ? ವಾಸನೆ ಕಂಡುದೆತ್ತ, ವಾಸನೆಯ ಕಾಣದುದೆತ್ತ ? ನಿರ್ವಿಷಯವೆತ್ತ, ವಿಷಯವೆತ್ತ ? ಸುಮನವಾಗಿಹ ಸಮವೆತ್ತ ?.

ಸುಗಂಧ ದುರ್ಗಂಧಗಳ ನೆನಸುವ ಮನವೆತ್ತ ? ನಾಮರೂಪವೆತ್ತ ? ಅಸ್ಥಿ, ಭಾತಿ, ಪ್ರಿಯವೆತ್ತ ? ಭ್ರಾಂತಿಯೆತ್ತ, ಭ್ರಮವೆತ್ತ ? ಕ್ಷಯರೋಗಿಯತ್ತ, ನಿರೋಗಿಯೆತ್ತ? ಭವರೋಗಿಯೆತ್ತ ? ಭವವಿರಹಿತನೆತ್ತ ? ಭಯದಿಂದುಕ್ತವಾದುದೆತ್ತ ? ನಿರ್ಭಯವಾದುದೆತ್ತ ? ಮರಣವೆತ್ತ ? ಮರುಜವಣಿಯೆತ್ತ ? ಅಮರತ್ವ ಮೀರಿದ ಭವವುಂಟೆ? ನಿಶ್ಚಿಂತತೆಯ ಮೀರಿದ ಪರಿತಾಪವುಂಟೆ ? ಸಚ್ಚಿದಾನಂದ ಮೀರಿದ ಪದವಿಗಳುಂಟೆ? ಅಗಣಿತವ ಮೀರಿದ ಪ್ರಕೃತಿ ಪುರುಷರುಂಟೆ? ನಿರವಯ ಮೀರಿದ ಅವಯವಂಗಳುಂಟೆ? ನಿರಾಲಂಬವ ಮೀರಿದ ತತ್ವ ಅತತ್ವವೆಂಬ ವಿವೇಕವುಂಟೆ? ಕಲ್ಪನಾರಹಿತಕ್ಕೆ ಕಲ್ಪಿತವುಂಟೆ? ಅವಿಮುಕ್ತ ನಿಲುವಿಂಗೆ ಬಂಧ ಮೋಕ್ಷದ ನಿಲುವುಂಟೆ? ಬಯಲ ಮೀರಿದವಂಗೆ ಘಟ ಮಠಗಳ ಹಂಗುಂಟೆ ? ಅತ್ಯಾಶ್ರಮಿಗೆ ಆಶ್ರಮಂಗಳ ಹಂಗುಂಟೆ? ಮಂತ್ರ ಮೀರಿದವಂಗೆ ಮಾಂತ್ರಿಕತನ ಉಂಟೆ? ಭ್ರಮ ನಿರಸವಾದವಂಗೆ ಬ್ರಹ್ಮ ಭಾವದ ತವಕ ಉಂಟೆ? ಅರಿದವಂಗೆ ಮರವರುವಿನ ಗಜಬಿಜಿ ಉಂಟೆ? ಶುಭಾ ಶುಭವ ಮೀರಿದವಂಗೆ ಮಾನಾಪಮಾನದ ಹಂಗುಂಟೆ? ಅತೀಂದ್ರಿಯವಾದವಂಗೆ ಅಹುದಾವುದು ? ಅಲ್ಲವಾವುದು ? ಒಡಲು ನಷ್ಟವಾದವಂಗೆ ಹಮ್ಮಾವುದು , ಬಿಮ್ಮಾವುದು ?.

ಗುಹೇಶ್ವರ ಲಿಂಗವ ಮೀರುವ ಒಡೆತನ ಉಂಟೆ ? : ಚರಾಚರವೆಂಬ ಜಗದ ಗುಹೆಗೆ ಒಡೆಯನಾಗಿಹ ಘನಮಹಿಮಂಗೆ ಅದಾವ ಒಡೆತನ ? ಗುಹೆಗೆ ಒಡೆಯನಾಗಿಹ ಘನವೆಂಬುದು ಗುಹೇಶ್ವರ ಲಿಂಗವು. ಗುಹೇಶ್ವರ ಲಿಂಗವರಿತವಂಗೆ ಗುಹೇಶ್ವರ ಲಿಂಗವೇ ತಾನಾಗಿಹ ಒಡೆತನ. ಲಿಂಗಕ್ಕೆ ಲಿಂಗವಾಗಿಹ ಸ್ವಯ ಲಿಂಗದ ಒಡೆತನ. ಅವರ್ಣನೀಯ ಒಡೆತನ, ತನ್ನ ಒಡೆತನ, ತಾನೇ ಒಡೆಯ. ಮಿಕ್ಕವುಗಳು ಹಂಗಿನ ಒಡೆತನ. ವಿಶ್ವದ ಒಡೆಯನಾದರೂ ಹಂಗಿನದೇ. ಸ್ವರ್ಗದ ಒಡೆತನವಿರಲಿ, ಬ್ರಹ್ಮ ಪದವಿ, ವಿಷ್ಣು ಪದವಿ, ರುದ್ರ ಪದವಿ ನಾನಾ ಪದವಿಗಳಿದ್ದರೂ, ಹಂಗಿನವು. ಸತ್ಯರು ನಿತ್ಯರು ಮುಕ್ತರೆಂಬ ಮಹಾಮಹಿಮರ ಒಡೆತನ ಗುಹೇಶ್ವರ ಲಿಂಗ ಮೀರುವ ಒಡೆತನವಲ್ಲ. ಗುಹೇಶ್ವರ ಲಿಂಗದ ಒಡೆತನ ತನ್ನಿಂದ ತನ್ನನರಿದ ಒಡೆತನ, ತನ್ನ ಒಡೆತನ.

ಗುರುವಿಡಿದ ಅರುವು ಅರುವಲ್ಲ. ಲಿಂಗವಿಡಿದ ಅರುವು ಅರುವಲ್ಲ. ಇಲ್ಲದ ಗುರುವು, ಇಲ್ಲದ ಲಿಂಗ ಕಲ್ಪಿತಕ್ಕೆ ಅರುವೆ ? ತನ್ನಿಂದ ತನ್ನ ಅರುವುದೆ ಅರುವು ಗುಹೇಶ್ವರ. ಗುಹೇಶ್ವರ ಲಿಂಗದ ಒಡೆತನ ಗುರುವಿಡಿದ ಅರುವಿನಿಂದ ಲಭ್ಯವಾದ ಒಡೆತನವಲ್ಲ. ಲಿಂಗವಿಡಿದ ಅರುವಿನಿಂದ ದೊರೆತ ಒಡೆತನವೂ ಅಲ್ಲ. ಏಕೆಂದರೆ ಇವು ಗುಹೇಶ್ವರ ಲಿಂಗದಲ್ಲಿ ಇಲ್ಲದವುಗಳು. ಇಲ್ಲದ ಅರುವಿನಿಂದ ಇದ್ದ ತನ್ನ ಅರಿವುದು ಹೇಗೆ ? ತನ್ನಿಂದ ತನ್ನ ಅರಿವು ಇದು ಗುಹೇಶ್ವರ ಲಿಂಗದ ಒಡೆತನ. ಇದನ್ನು ಮೀರುವ ಒಡೆತನವಿಲ್ಲ. ತನ್ನಿಂದ ತನ್ನನರಿದ ಒಡೆತನ ಶ್ರೇಷ್ಠ ಒಡೆತನ. ಇದು ಭಾವಕ್ಕಿಂಬು ಕೊಡದ ಒಡೆತನ. ನುಡಿಗೆಡೆಗೊಡದ ಘನದ ಒಡೆತನವಾದ್ದರಿಂದ ಇದರಿರುವು ಅಕಥನೀಯವು.

ವಚನ - 37

ಮನಸ್ಸಂದಲ್ಲಿ ಬೇರೊಂದು ನೆನಹುಂಟೆ?
ನೆನಹು ನಿಶ್ಪತ್ತಿಯಾದಲ್ಲಿ ಉಭಯವೆಂಬುದಕ್ಕೆ ಒಡಲಿಲ್ಲ ಅದು ಸಲ್ಲದ ನೇಮ.
ಗುಹೇಶ್ವರ ಲಿಂಗ ಅಲ್ಲಿ ಇಲ್ಲವೆಂಬುದಕ್ಕೆ ಅದೇ ಕುರುಹು.

ತಾತ್ಪರ್ಯ : ಮನಸ್ಸಂದಲ್ಲಿ ಬೇರೊಂದು ನೆನಹುಂಟೆ?: ಮನ ನಷ್ಟವಾದವಂಗೆ ಬೇರೊಂದು ನೆನಹುಂಟೆ? ಶರಣ ಮನನಷ್ಟ ಮಾಡಿದ ಮಹಾಂತ . ನಿಶಃಬ್ದವೇಧಿ. ಶೃತಿಗಗೋಚರ. ಅರಿಯಲಿಲ್ಲದ ಅರುವೇ ತಾನಾಗಿಹ ಘನವಂತನಲ್ಲಿ ಮನವಿರಲು ಸಂದುಂಟೆ? ಇಲ್ಲದುದು ಇಲ್ಲವಾಗಿ ಇದ್ದ ನಿಜಪದ ಸಿದ್ಧವಾದುದರಿಂದ ಮನ ಸಂದಿದೆ. ಬೇರೊಂದು ನೆನೆಯಲು ಒಡಲು ಇಲ್ಲವಾಗಿದೆ.

ಶರಣನ ನೆನಹು ನೆನಹುಗೆಟ್ಟ ನೆನಹು. ಇದು ಸುಖದ ಸುಖವಾಗಿಹ ಸುಖವು. ಎಲ್ಲಿಯವರೆಗೆ ಕಲ್ಪಿತ ತಾನಾಗಿಹನೋ ಅಲ್ಲಿ ನೆನಹಿಂಗಿಂಬುಂಟು. ಅಲ್ಲಿ ಮನನಷ್ಟವಾಗಿದೆ ಎಂದು ಹೇಗೆ ತಿಳಿವುದು ? ಮನವಿದ್ದಲ್ಲಿ ನೆನಹು ನೆನಹು ಇದ್ದಲ್ಲಿ ಮನ. ಹಾಲು ಇದ್ದಲ್ಲಿ ಸವಿ ರುಚಿ, ಸವಿರುಚಿ ಇದ್ದಲ್ಲಿ ಹಾಲು ಹಾಗೆ , ಮನವಿದ್ದಲ್ಲಿ ಸಂಕಲ್ಪ ವಿಕಲ್ಪ. ಸಂಕಲ್ಪ ವಿಕಲ್ಪವಿದ್ದಲ್ಲಿ ನೆನಹು. ಕಲ್ಪಿತ ಮನವೆ ನಷ್ಟವಾದಲ್ಲಿ ಭೇದ ಜ್ಞಾನ, ಭೇದ ಭಾವವೂ ನಷ್ಟ ಅದರ ಜೊತೆಗೆ ನೆನಹೂ ನಷ್ಟ ಇದಲ್ಲದೆ, ಅಭೇದ ಜ್ಞಾನ ಅಭೇದ ಭಾವ ನಷ್ಟವಾಗಿರುವಲ್ಲಿ

ಸ್ವಾಮಿ ಬೇರೆ, ಸೇವಕ ಬೇರೆ ಎಂಬ ನೆನಹಿಂಗೂ ಇಂಬಿಲ್ಲ. ಜೀವ ಪರಮರೆಂಬ ಭಾವವೇ ನಷ್ಟವಾಗಿರುವಲ್ಲಿ ಅಲ್ಲಿ ಎರಡೆಂಬುದಿಲ್ಲ ಒಂದೆಂಬುದಿಲ್ಲ. ಶಬ್ಧಕ್ಕೆ ತೆರಹಿಲ್ಲದ ಅರುವಿನಲ್ಲಿ ಬೇರೊಂದು ನೆನಹುಂಟೆ? ಎಂದು ಪ್ರಭು ಪ್ರಶ್ನಿಸಿಹನು.

ಭಕ್ತರು ಸಿಕ್ಕುವರು ಮನನಷ್ಟ ಮಾಡಿದ ಭಕ್ತರು ಸಿಕ್ಕುವುದು ವಿರಳ. ಆರ್ತ, ಅರ್ಥಾರ್ಥಿ , ಜಿಜ್ಞಾಸು, ಜ್ಞಾನಿ ಭಕ್ತರೆಂದು ಚತುರ್ವಿಧ ಭಕ್ತರಿಹರು. ಇವರುಗಳಿಗೆ ಮನ ನಷ್ಟವಾಗಿರುವುದಿಲ್ಲ. ಮನವೇ ತಾವಾಗಿರುವರು. ಆರ್ತ ಭಕ್ತನಲ್ಲಿ ಮನವು ಪ್ರಧಾನವಾದಂತೆ, ಅರ್ಥಾರ್ಥಿ, ಜಿಜ್ಞಾಸು, ಜ್ಞಾನಿ ಭಕ್ತರಲ್ಲಿ ಮನವೇ ಮುಖ್ಯವಾಗಿದೆ. ಇದ್ದ ಒಂದೇ ಮನ ರೂಪಾಂತರ ಹೊಂದಿ ನಾಲ್ಕುವಿಧ ರೂಪದಲ್ಲಿ ತೋರುವುದು.

ಬೇಧ ಜ್ಞಾನ ಬೇಧ ಭಾವವುಳ್ಳುದು ಮನಸ್ಸು, ಅಬೇಧ ದೃಷ್ಟಿಯುಳ್ಳುದು ಮನಸ್ಸು. ಆರ್ತ, ಅರ್ಥಾರ್ಥಿ ಭಕ್ತರು ಬೇಧ ಜ್ಞಾನದಿಂದುಕ್ತರಾದವರು. ಇವರು ಕಾರ್ಯ ಕಾರಣವನ್ನೊಪ್ಪಿಕೊಂಡವರು. ಸ್ವಾಮಿಯು ಕೊಡುವ ಕರ್ತಾರನಾಗಿಹನು. ಜೀವರುಗಳು ದೇವನೆಂಬ ಕರ್ತಾರನಿಂದ ಫಲಪದಂಗಳ ಪಡೆಯುವ ಸೇವಕರಾಗಿಹರು. ಈ ಕಾರಣವನ್ನಿಟ್ಟುಕೊಂಡ ಆರ್ತ ಭಕ್ತರಾಗಲಿ, ಅರ್ಥಾರ್ಥಿ ಭಕ್ತರಾಗಲಿ, ಬೇಧ ಜ್ಞಾನಿಗಳಾಗಿ ದೇವನು ಸರ್ವಜ್ಞ, ಸರ್ವ ಶಕ್ತ, ಸರ್ವಾಂತರ್ಯಾಮಿ, ಸಕಲ ಜೀವಿಗಳ ಬೇಡಿದಿಷ್ಟಾರ್ಥವ ಪೂರ್ತಿ ಮಾಡುವ ಸಮರ್ಥ, ಕರುಣಾಮಯನಾಗಿರುವುದರಿಂದ ಪೂಜ್ಯನಾಗಿ, ಪೂಜಕರಾಗಿದ್ದುದು ದಿಟವೆಂದೆನಿಸಿ, ಸ್ವಾಮಿ, ಸೇವಕ ಭಾವದಿಂದ ಅರ್ಚಿಸುವುದು, ಅರ್ಪಿಸುವುದು ದಿಟವಾಗಿದೆ.

ಮನಸಂದಲ್ಲಿ ಬೇರೊಂದು ನೆನಹುಂಟೆ? ನೆನಹು ನಿಶ್ಪತ್ತಿಯಾದಲ್ಲಿ ಉಭಯವೆಂಬು ವುದಕ್ಕೆ ಒಡಲಿಲ್ಲ, ಅದು ಸಲ್ಲದ ನೇಮ. ಗುಹೇಶ್ವರ ಲಿಂಗ ಅಲ್ಲಿ ಇಲ್ಲವೆಂಬುದಕ್ಕೆ ಅದೇ ಕುರುಹು : ಮನವದು ಕೇವಲ ಜ್ಯೋತಿ . ವರ್ಣಾತೀತವಾದಲ್ಲಿ ಬೇರೊಂದು ನೆನಹುಂಟೆ? ತನ್ನ ನಿಜದಿರುವು ಕಾಣದ್ದರಿಂದ ಸಂಕಲ್ಪ ವಿಕಲ್ಪಕ್ಕೊಳಪಟ್ಟು ಮನವೆನಿಸಿತ್ತು. ಗುರುಕಾರುಣ್ಯದಿಂದ ಮನದ ನಿಜದಿರುವು ತಿಳಿವುಡೆ ಅದು ಸಂಕಲ್ಪವಾಗಿಲ್ಲ ವಿಕಲ್ಪವಾಗಿಲ್ಲ, ಅದು ಕಲ್ಪನಾರಹಿತವಾಗಿಹ ಕೇವಲ ಜ್ಯೋತಿ. ವರ್ಣಾತೀತವೆಂಬುದು ತನಗೆ ವೇದ್ಯವಾಗುವುಡೆ , ಆಗ ಪೂರ್ವದ ಮನನಷ್ಟವಾಗುವುದರಿಂದ ಬೇರೊಂದು ನೆನಹಿಂಗಿಂಬಿಲ್ಲದಿರುವಾಗ ಬೇರೊಂದು ನೆನಹುಂಟೆ? ನೆನಹು ನಿಶ್ಪತ್ತಿಯಾದಲ್ಲಿ ಉಭಯವೆಂಬುದಕ್ಕೆ ಒಡಲಿಲ್ಲ. ನೆನಹಿನ ಕಾರ್ಯವೇ ಕೊನೆಗೊಂಡಲ್ಲಿ ಕೊಡುವ ಸ್ವಾಮಿಗಾದರೂ ಒಡಲು ಇದೆಯಾ ? ಫಲಪದಂಗಳ ಪಡೆಯುವ ಭಕ್ತನಿಗಾದರೂ ಒಡಲಿದೆಯಾ? ಭಕ್ತನಿಗೂ ಒಡಲಿಲ್ಲ ಕಲ್ಪನಾರಹಿತನು. ದೇವನಿಗೂ ಒಡಲಿಲ್ಲ ಕಲ್ಪನಾರಹಿತನು. ಇದು ಕಾರಣ ಇಲ್ಲಿ ನೆನಹಿನ ಕಾರ್ಯ ಮುಕ್ತಾಯವಾಗಿದೆ. ಮುಕ್ತಾಯದ ಮುಕ್ತಾಯವಾಗಿದೆ.

ದೇವನು ಅರಿಯಲಿಲ್ಲದ ಅರುವು. ಭಕ್ತನು ಅರಿಯಲಿಲ್ಲದ ಅರುವ ಸ್ವೀಕರಿಸಿ ಅರಿಯಲಿಲ್ಲ. ತನ್ನ ಅರಿಯಲಿಲ್ಲದ ಅರುವ ಮರೆಯಲಿಲ್ಲ. ಗುರುಘನನು ಅರಿಯಲಿಲ್ಲದ ಅರುವು. ಶಿಷ್ಯನು ಅರಿಯಲಿಲ್ಲದ ಅರುವನರಿತು ಮರೆಯಲಿಲ್ಲ. ಈರ್ವರು ನಿಜದಿರುವುಳ್ಳವರಾದುದರಿಂದ ನೆನಹು ನಿಶ್ಪತ್ತಿಯಾಗಿ ಉಭಯವೆಂಬುದಕ್ಕೆ ಒಡಲಿಲ್ಲ. ಅದು ಸಲ್ಲದ ನೇಮ.

ಕರುಣಾಮಯನಾಗಿಹ ಗುರು ಘನ . ಅರಿಯಲಿಲ್ಲದ ಅರುಹನರುಹಿಸಿದ ನಿರುಪಮನನು ಉಪಮೆಗೆ ತರಬಾರದು. ಇತ್ತ ಶಿಷ್ಯನಾದವ ಅರಿಯಲಿಲ್ಲದ ಅರುವರಿತು ನಿರುಪಮನಾಗಿಹ ಭಕ್ತನ ಉಪಮೆಗೆ ತರಬಾರದು. ಇದು ಕಾರಣ ಗುರುಶಿಷ್ಯರೆಂಬುದಕ್ಕಾಗಿಲಿ, ಭಕ್ತ ಜಂಗಮರೆಂಬುದಕ್ಕಾಗಲಿ, ಸ್ವಾಮಿ ಸೇವಕರೆಂಬುದಕ್ಕಾಗಲಿ, ಈ ಉಭಯವೆಂಬುದಕ್ಕೆ ಒಡಲಿಲ್ಲ, ಅದು ಸಲ್ಲದ ನೇಮ.

ನಿರುಪಾಧಿಗೆ ಉಪಾದಿ ಕಲ್ಪಿಸುವುದು ಅದು ಸಲ್ಲದ ನೇಮ. ನೆನಹು ನಿಶ್ಪತ್ತಿಯಾದವಂಗೆ ಪುನಃ ಕಲ್ಪಿತ ಕಾಣಲು ಮನವು ನಷ್ಟ ಮನದ ನೆನಹು ನಷ್ಟವಾಗಿರುವಲ್ಲಿ ಎರಡು ಮಾಡಿ ನೆನೆವ ನೆನಹು ಅದು ಸಲ್ಲದ ನೇಮ. ಕಲ್ಪನಾರಹಿತವಾಗಿರುವ ಘನದಲ್ಲಿ ಕಲ್ಪಿತರ ಮಾಡಿ ಅರ್ಪಿಸುವ ಭಕ್ತನ ಅರ್ಪಣೆ ದೇವನಿಗೆ ಸಲ್ಲದ ನೇಮ. ಧ್ಯಾನಾತೀತಂಗೆ ಧ್ಯಾನವ ಕಲ್ಪಿಸಿ , ಧ್ಯಾನವ ಮಾಡುವುದು ಸಲ್ಲದ ನೇಮ. ಗುಹೇಶ್ವರ ಲಿಂಗ ಅಲ್ಲಿ ಇಲ್ಲವೆಂಬುದಕ್ಕೆ ಅದೇ ಕುರುಹು.

ಆವಲ್ಲಿ ಮನ ಕಲ್ಪಿತಕ್ಕೊಪ್ಪಿದೆ ಅದು ಮತ್ತೊಂದು ನೆನೆಯುವುದಾಗಿದೆ. ಅಲ್ಲಿ ನೆನಹಿನ ನಿಶ್ಪತ್ತಿ ಇಲ್ಲವೆಂದಲ್ಲಿ ಭಕ್ತನ ಪರಿಚಯ ಗುಹೇಶ್ವರನಿಗಿಲ್ಲ, ಗುಹೇಶ್ವರನ ಪರಿಚಯ ಭಕ್ತನಿಗಿಲ್ಲ. ಆದುದರಿಂದ ಕಲ್ಪಿತವೇ ಇಲ್ಲಿ ದಿಟವಾಗಿದೆ. ಗುಹೇಶ್ವರ ಲಿಂಗ ಅಲ್ಲಿ ಇಲ್ಲವೆಂಬುದಕ್ಕೆ ಅದೇ ಕುರುಹು ಎಂದು ಹೇಳಿಹರು.

ವಚನ - 38

ತನ್ನಿಂದ ತನ್ನ ನೋಡಲು ತನಗೆ ತಾನೇ ಪ್ರತ್ಯಕ್ಷನಾಗೆ
ಆ ಪ್ರತ್ಯಕ್ಷವೆಂಬುದು ಭ್ರಾಂತು ನೋಡಾ.
ಅದೇನು ಕಾರಣವೆಂದಡೆ? ತನಗೆ ತಾನನ್ಯವಲ್ಲಾಗಿ ಎನಗೆ ಅನ್ಯವಿಲ್ಲ,
ಅನ್ಯ ನಾನಲ್ಲವೆಂದು ಬ್ರಹ್ಮವು ನಾನೆಂಬುದುದು
ಅತಿಶಯದ ಭ್ರಾಂತೆಂದು ತಿಳಿದು ನೋಡಾ.
ಅದೇನು ಕಾರಣವೆಂದಡೆ ಭ್ರಹ್ಮಕ್ಕೆ ನಾ ಬ್ರಹ್ಮವೆಂದು ಘಟಿಸದಾಗಿ
ಅತಿಶಯದ ಸುಖವಳಿದು ನಿರಂತರ ಸುಖವೆಂತುಂಟೆಂದರೆ,
ಗುರು ಮುಗ್ಧನಾದಡೆಯೂ ತಿಳಿದು ನೋಡಲು
ಗುಹೇಶ್ವರ ಲಿಂಗದ ನಿಲುವು ತಾನೆ.

ತಾತ್ಪರ್ಯ : ತನ್ನಿಂದ ತನ್ನ ನೋಡಲು ತನಗೆ ತಾನೆ ಪ್ರತ್ಯಕ್ಷನಾಗೆ ಆ ಪ್ರತ್ಯಕ್ಷ ವೆಂಬುದೆ ಭ್ರಾಂತು ನೋಡಾ : ತನ್ನಿಂದ ತನ್ನ ನೋಡಲು ತನಗೆ ತಾನೆ ಯತಾರ್ಥದರ್ಶನವು ಶಬ್ದಮುಗ್ದ ವಾದುದು ಶಬ್ದಮುಗ್ದವೆನಲಿಲ್ಲ ನಿಶಬ್ದ ವೇದಿಯಾದುದು ತನ್ನಯ ಇರುವು. ಇದು ನುಡಿದುದಕ್ಕದೆ ಕೊರತೆ ಎಂಬುದು ನಿನ್ನಿಂದ ನೀನೆ ಅರಿ. ಕಣ್ಣಿನಿಂದ ಕಣ್ಣು ಕಂಡುದು ಅದು ಮೂಕನ ಇರುವು. ಮೂಕವೆಂಬುದರ ಮೂಕವ ತಿಳಿವುದು ಕಣ್ಣಿನಿಂದ. ಕಣ್ಣು ಕಂಡು ನಿಃಶಬ್ದನಾದುದು ಅದನಾರು ಬಲ್ಲರು ? ಅಲ್ಲಿ ಶಬ್ದದ ಬಳಕೆ ನಗೆಗೀಡಲ್ಲವೆ ? ಕಣ್ಣೆಂಬುದು ಕಣ್ಣ ಕಂಡವಂಗೆ ಆಶ್ಚರ್ಯವು ! ನುಡಿಯದ ಕಣ್ಣಿನಲ್ಲಿ ನುಡಿಗಳ ಕಂಡುದು ಆಶ್ಚರ್ಯ !

ಅದು ಅಜ್ಞಾನ. ಅದು ಭ್ರಾಂತಿ ಅಲ್ಲವೆ?.

ಕಣ್ಣಿನ ನಿಲುವು ಕಣ್ಣಾಗಿ ನೋಡಿದಲ್ಲಿ ತಾನು ತಾನೆ ಕಣ್ಣೆಂಬುದು ಜಿಂಹ್ವೆಗೆ ಒಳಪುದೆ ನಿಲುವು. ಜಿಹ್ವೆ ಕಣ್ಣು ಕಂಡುದಲ್ಲ ಕಾಣದ ಜಿಹ್ವೆ ಅದರಿರುವ ಏನು ಬಲ್ಲದು ? ಇದು ಕಾರಣ ಕಂಡುದು ಕಥನ ಮಾಡಿರುವದಿಲ್ಲ. ಕಾಣದ ಜಿಹ್ವೆ ಕಥನಕ್ಕವಕಾಶ ಮಾಡಿಕೊಂಡಿರುವಾಗ ಅದು ಹೇಗೆ ನಿಜವಾಗ ಬಲ್ಲದು ಹಾಗೆ.

ತನ್ನಿಂದ ತನ್ನ ನೋಡಲು ಅದನಾರು ವರ್ಣಿಸುವದು ನೋಡಿದ ತನಗೆ ವಾಣಿಯಿಲ್ಲ ನಿರ್ವಾಣವು. ತಾನೆ ಏನೆಂದೆನ್ನದ ಮುನ್ನ ತಾನಾದುದು. ಧ್ವನಿಯ ಮರೆಯಲಿರ್ದ ತನ್ನಿಂದ ತನ್ನ ಕಂಡುದು ತನ್ನಿಂದ ತನ್ನ ನೋಡಿದುದು. ಅದು ಇದ್ದಂತಿರುವ ನಿರಂತರ ಮಂಗಲಮಯ ತಾನಾಗಿಹ ನಿರ್ವಾಣವು. ತನ್ನಿಂದ ತನಗೆ ವೇದ್ಯವಾದುದಾಗಿ ತನ್ನಿಂದ ತನಗೆ ತನ್ನ ನೋಡಿ ತಾನೆ ಪ್ರತ್ಯಕ್ಷವಿರುವಲ್ಲಿ ಪುನಃ ಮಾತಿನ ಬಳಕೆ ಭ್ರಾಂತು. ಪ್ರತ್ಯಕ್ಷವೆಂಬುದು ಭ್ರಾಂತಿ ಎಂಬುದು ತಿಳಿದು ತಾನು ಅರಿಯಲಿಲ್ಲದ ಅರುವ ಸ್ವೀಕರಿಸಿ ಅರಿವ ಅರುಹಿಸಿಕೊಂಬುದ ಅರಿಯಲಿಲ್ಲ ಅರಿಯಲಿಲ್ಲದ ಅರುವೆ ತಾನಾದುದು, ತನ್ನಿಂದ ತನ್ನ ಕಂಡ ಪ್ರತ್ಯಕ್ಷ ತನಗೆ ತಾನೆ ಶಬ್ದಮುಗ್ಧ ನಾಗಿ, ಸುಖದ ಸುಖಿಯಾದ. ಇಂತಪ್ಪ ಪರಮಾನಂದವೆ ತಾನು ಇದ್ದುದ ತನಗದು ವೇದ್ಯವಾದುದು. ತನ್ನಿರುವು. ಆಗ ಕಥನ ಮಾಡುವದೆಲ್ಲವು ಭ್ರಮವು ಎಂಬುದು ತನಗೆ ತಿಳಿದಲ್ಲಿ ಎನಗೆ ಅನ್ಯವಿಲ್ಲವೆಂಬುದಾದರೂ ಇದೆಯೆ? ಅನ್ಯ ನಾನಲ್ಲ ವೆಂಬುದಾದರೂ ಇದೆಯೆ? ಕೊನೆಗೆ ಬ್ರಹ್ಮನಾನೆಂಬುದಾಗಿ ಇದೆಯೆ?.

ನಿಃಶಬ್ದ ಬ್ರಹ್ಮದಲ್ಲಿ ಶಬ್ದವ ಕಾಣುವದು ಹೆಚ್ಚಿನ ಭ್ರಾಂತಿ ಅಲ್ಲವೆ? ಎನಗೆ ಅನ್ಯ ವಿಲ್ಲವೆಂಬುದು ಭ್ರಾಂತಿಯ ನುಡಿಯೊ? ನಿಶಬ್ದದ ನಿಲುವೊ? ತಿಳಿದು ನುಡಿಯುವಿಯೊ? ತಿಳಿಯದೆ ನುಡಿಯುವಿರು ? ಖಂಡಾಖಂಡ ಸಂಯೋಗವಿಲ್ಲದ ಅಖಂಡಿತನ ನಿಲುವಿನಲ್ಲಿ ನುಡಿಯಲು ಸಂದುಂಟೆ? ಸಂದಿಲ್ಲವಾದಲ್ಲಿ ಏನಗೆ ಅನ್ಯವಿಲ್ಲವೆಂದುದು ಹೇಗೆ ಅನ್ಯ ನಾನಲ್ಲ ವೆಂದುದು ಹೇಗೆ? ಕೊನೆಗೆ ಬ್ರಹ್ಮ ನಾನೆಂದುದಾದರು ಹೇಗೆ?. ಖಂಡಿತ ವಲ್ಲದ ಅಖಂಡಿತನದ ತನ್ನಿರುವುಳ್ಳ ಅರಿವು ಆಗುವುಡೆ ಬ್ರಹ್ಮಕ್ಕೆ ನಾ ಬ್ರಹ್ಮ ಎಂಬುದು ಘಟಿಸದಾಗಿ ತನ್ನಿಂದ ತನಗೆ ಸಹಜ ವೇದ್ಯವು. ಇದು ತನ್ನಿಂದ ತನ್ನ ಕಂಡ ನಿರಂತರವಾಗಿಹ ನೆಲೆಯಿಲ್ಲದ ನಿಲುವು ಇದುವೆ ನಿಃಶಬ್ದ ವೇದ ಕರಗತವಾದವರ ಇರವು ಅರಿವು.

ಅತಿಶಯ ಸುಖ ವಳಿದು ನಿರಂತರ ಸುಖವೆಂತುಂಟೆಂದಡೆ, ಗುರು ಮುಗ್ದನಾದಡೆಯೂ ತಿಳಿದು ನೋಡಲು ಗುಹೇಶ್ವರ ಲಿಂಗದ ನಿಲುವು. ಆರಿಗೆ ಅತಿಶಯ ಸುಖವಳಿದು ನಿರಂತರ ಸುಖ ಎಂತುಂಟು ಎಂಬ ಬಯಕೆಯಾಗಿ ಶ್ರೀಗುರು ಲಿಂಗವ ಪ್ರಶ್ನಿಸುವುಡೆ ಆಗ ಶ್ರೀಗುರು ತನ್ನ ಅರಿಯಬಾರದ ಘನವುಳ್ಳ ಅರುವಾಗಿ ತಾನೆ ತಾನಾದುದು ಗುರು ಮುಗ್ದವ ತಿಳಿದು ನೋಡಲು ಗುಹೇಶ್ವರ ಲಿಂಗವು ತಾನೆ.

ಅತಿಶಯ ಸುಖ ಸೇರದಿರುವಲ್ಲಿ ತನ್ನ ನಿರಂತರ ಸುಖದ ಸುಖವು ಶಬ್ದ ಸಂಭ್ರಮದಿಂದುಕ್ತವಾದುದಲ್ಲ ನುಡಿಗೊಳಪಟ್ಟುದೆಲ್ಲವು ಅತಿಶಯ ಸುಖವೆಂದು ತಿಳಿಯುವುದು ಆತ್ಮನ ಲಕ್ಷಣಾತ್ಮಕ ಬೋಧವೆಲ್ಲ ಅತಿಶಯ ಭ್ರಾಂತಿ ಸುಖವೆಂದು ತಿಳಿಯುವುದು ಸಾಕ್ಷಿ ಅಸಂಗ ಕೂಟಸ್ತ ಸಚ್ಚಿದಾನಂದ ನಿತ್ಯ ಪರಿಪೂರ್ಣ ಅಖಂಡ ಅಚಲ ವೆಂಬ ಬೋಧದಿಂದ ಲಭ್ಯವಾಗುವ ಲಕ್ಷಣಾತ್ಮಕ ಅನುಸಂದಾನದಲ್ಲಿ ತೋರುವ ಸುಖವು, ಅದು ಅತಿಶಯದ

ಸುಖವೆಂದು ತಿಳಿಯುವದು. ಇದು ದೃತ್ಯಾತ್ಮಕದಲ್ಲಿ ಜನ್ಯವಾದ ಸುಖವಾದುದರಿಂದ ಇದು ನಿರಂತರ ಸುಖವಾಗದು. ನಿರಂತರ ಸುಖವೆಂತುಂಟೆಂದೊಡೆ ಗುರುವಿನಂತರಂಗದೊಳಗೆ ಶಿಷ್ಯನಂತರಂಗದೊಳಗೆ ಈ ಗುರುಶಿಷ್ಯ ಸಂಬಂಧ ಶರೀರ ಪ್ರಾಣವಿಲ್ಲದಾತ ಗುರುವೆಂಬ (ಪ್ರತಿ)ಭಾವ ತೋರದಿರ್ದಾತ ಶಿಷ್ಯ ಶಿಷ್ಯನೆಂಬ ಭಾವ ತೋರದಿರ್ದಡೆ ಆತ ಗುರು ಇಂತು ಭಾವ ಭೇದ ಗೆದ್ದಿರಲು ಮೌನ ಮುದ್ರೆಯಿಂದುಪದೇಶವ ಮಾಡಿದ ಗುರು ಸೇವೆಯಿಂ ತತ್ ಶಿಷ್ಯನಸಂಶಯ ವಿನ್ನಚ್ಚವಾಗಿ ಉಪಮಾತೀತ ವಾದ ಉಪದೇಶದಿಂ ಲಿಂಗ ಸೇವ್ಯದಲ್ಲಿ ತನ್ನಂಗವ ಮೆದ್ದಿಪ್ಪ ಸುಖವನುಪಮಿಸ ಬಾರದಯ್ಯ ಸೌರಾಷ್ಟ್ರ ಸೋಮೇಶ್ವರಾ.

ಗುರುವಿನಂತರಂಗದೊಳಗೆ ಶಿಷ್ಯ ಶಿಷ್ಯನಂತರಂಗದೊಳಗೆ ಗುರು ಈ ಗುರು ಶಿಷ್ಯ ಸಂಬಂಧ ಶರೀರ ಪ್ರಾಣದಂತೆ ಭಿನ್ನವಿಲ್ಲದೆ ಗುರುವೆಂಬ ಭಾವ ತೋರದಿರ್ದಡೆ ಆತ ಶಿಷ್ಯ. ಶಿಷ್ಯನೆಂಬ ಭಾರ್ವ ತೋರದಿರ್ದಡೆ ಆತ ಗುರು ಗುರುವಿನಂತರಂಗದೊಳಗೆ ಶಿಷ್ಯ. ಇದು ಅರಿಯಬಾರದ ಘನ ನಾಗಿರ್ದ ಶಿಷ್ಯ ಶಿಷ್ಯನಂತರಂಗದೊಳಗೆ ಗುರು ಅರಿಯಲಿಲ್ಲದ ಅರುವಾಗಿಹ ಗುರು, ಇದು ಕಲ್ಪಿತ ಜ್ಞಾನ, ಕಲ್ಪಿತ ಭಾವಕ್ಕೆ ಒಪ್ಪಿಕೊಂಡ ಮರವರುವಿನ ಪ್ರತಿಭಾವವುಳ್ಳ ಗುರು ಶಿಷ್ಯರ ಕೂಡಿರುವದಿಲ್ಲ ಇಲ್ಲಿ ಅರುಹೃದಯದ ಕಾರುಣ್ಯ ಅರುಹೃದಯವಾಗಿ ಸ್ವೀಕರಿಸುವದು ಇದು ಗುರು ಶಿಷ್ಯರಂತರಂಗ ದೊಳಿರ್ದ ನಿಕ್ಷೇಪವಾದ್ದರಿಂದ ಗುರು ಘನ ಅರಿಯಬಾರದ ಘನ ವರಿತು ಅರಿಯದಂತಿದ್ದ ಸ್ವಯಂ ಜೋತಿ ವರ್ಣಾತೀತ. ಇಂತಪ್ಪ ಗುರು ಲಿಂಗ ತಿಳಿಯಹೋದ. ಅರಿಯಲಿಲ್ಲದ ಅರುವ ಸ್ವೀಕರಿಸಿ ಅರಿಯಲಿಲ್ಲ, ಮರೆಯಲಿಲ್ಲದ ಮಹದರುವು ಇಂತಪ್ಪ ಸುಜ್ಞಾನ ತೇಜದಲ್ಲಿದ್ದರಿಂದ ಗುರು ಶಿಷ್ಯರೆಂಬ ಭಾವ ಕಾಣದಂತಾಗಿ ಅರಿಯಬಾರದ ಘನವರಿತು ಅರಿಯದಂತಿದ್ದ ಮಹದಿರುವೆ ಮೌನಮುದ್ರೆಯಿಂದುಪದೇಶ ಮಾಡಿದ ಗುರು ಸೇವೆಯು. ಇಂತಪ್ಪ ಮೌನಮುದ್ರೆಯ ಘನ ಕಾರುಣ್ಯವ ಅರಿಯಿಲಿಲ್ಲದ ಅರುವಿನಿಂದ ಸ್ವೀಕರಿಸಿ ಅರಿಯದರುವೆ ತಾನಾಗಿ ತನ್ನ ಸುಖದ ಸುಖವಾಗಿಹ ಸ್ವಸುಖದಲ್ಲಿ ತನ್ನಂಗವು ಮರೆದಿಪ್ಪುದು, ಗುಹೇಶ್ವರ ಲಿಂಗದ ನಿಲುವು ತಾನೆ ನೋಡಾ ಎಂದು ಹೇಳಿಹರು.

ವಚನ - 39

> **ಕಂಡುದೆಲ್ಲ ಪಾವನ. ಕೇಳಿತ್ತೆಲ್ಲ ಪರಮ ಬೋಧೆ. ಮುಟ್ಟಿತ್ತೆಲ್ಲ ಪರುಷದ ಸೋಂಕು. ಒಡನೆ ನುಡಿದವಲ್ಲ ಸದ್ಯೋನ್ಮುಕ್ತರು. ಸುಳಿದ ಸುಳುಹೆಲ್ಲ ಜಗತ್ಪಾವನ. ಮೆಟ್ಟಿದ ಧರೆಯೆಲ್ಲ ಅವಿಮುಕ್ತ ಕ್ಷೇತ್ರ ಸೋಂಕದ ಜಲವೆಲ್ಲ ಪುಣ್ಯತೀರ್ಥಂಗಳು. ಶರಣೆಂದು ಭಕ್ತಿ ಮಾಡಿದವರೆಲ್ಲ ಸಾಯುಜ್ಯರು. ಗುಹೇಶ್ವರ ನಿಮ್ಮ ಸುಳುಹಿನ ಸೊಗಸನುಪಮಿಸಬಾರದು.**

ತಾತ್ಪರ್ಯ - ಕಂಡುದೆಲ್ಲ ಪಾವನ : ಏನು ಕಂಡುದೆಲ್ಲ ಪಾವನ? ಗುಹೇಶ್ವರ ಸುಳುಹಿನ ಸೊಗಸ ಕಂಡುದೆಲ್ಲ ಪಾವನ. ಶರಣನು ಲಿಂಗವರಿತು ಲಿಂಗವಾಗಿಹ ಸೊಗಸು. ಇದು ತನ್ನ ಸುಳುಹಿನ ಸೊಗಸು, ಅನುಪಮ ಅರಿವುಡೆ ಅರಿಯಲಿಲ್ಲದ ಅರುವು ತಾನೆ.

ಆರನ್ನಾದರೂ ಕಾಣಬಹುದು ಗುಹೇಶ್ವರ ಸುಳುಹಿನ ಸೊಗಸು ಶರಣರನು ಕಾಣುವದು ವಿರಳ. ನಡೆನುಡಿವುಳ್ಳವರು ಸಿಕ್ಕುವರು ನೆಡದಡೆ ನಡೆಗೆಟ್ಟ ನಡೆವುದಯ್ಯ ನುಡಿದಡೆ ನುಡಿಗೆಟ್ಟ ನುಡಿಯ ನುಡಿವುದಯ್ಯ, (ಒಡಲಹಿಡಿಯದೆ) ಒಡಲುಹಿಡಿದಡೆ ಹಿಡಿಯದೆ ಹಿಡಿವುದಯ್ಯ ಕೂಡುವುಡೆ ಕೇಡಿಲ್ಲದೆ ಕೂಟವ ಕೂಡುವದಯ್ಯ ಗುಹೇಶ್ವರ ನಿಮ್ಮಲ್ಲಿ ನಿಲುವದಯ್ಯ.

ಗುಹೇಶ್ವರ ನಿಮ್ಮಲ್ಲಿ ನಿಂತವರು ನುಡಿದಡೆ ನುಡಿಗೆಟ್ಟ ನುಡಿಯ ನುಡಿವರು. ನಡೆದಡೆ ನಡೆಗೆಟ್ಟ ನಡೆ ನಡೆವರು, ಒಡಲು ಹಿಡಿಯದೆ ಹಿಡಿದವರು, ಕೇಡಿಲ್ಲದ ಕೂಟವ ಕೂಡಿದ ಶರಣರು ಸಿಕ್ಕುವದು ವಿರಳ.

ಪವನ ಸೊಗಸನುಮಿಸಬಾರದು, ಸೋಹಂ ಭಾವಿಗಳು ಕಾಣಬಹುದು ಸತ್ಯರು ನಿತ್ಯರು ಮುಕ್ತರೆಂಬ ಚಿದಹಮ್ಮುಳ್ಳ ಶರಣ ಶಿಕ್ಕುವದು ದುಸ್ತರ. ಕಂಡರೆ ಪಾವನ ನೋಡಾ. ಇವರುಗಳು ತನ್ನಿಂದ ತನ್ನ ಕಂಡವರು ಪರಬ್ರಹ್ಮವೆಂಬುದು ದಾಂಟಿದ ಹಂಗಿಲ್ಲದ ಶರಣರು ಸ್ವಯಂ ಜ್ಯೋತಿಗಳು. ಏನೊಂದಾಗದ ಘನವಂತರು ನುಡಿಗೆಡೆಗೊಡದ ಜ್ಯೋತಿಗಳು ಇಂತಪ್ಪ ಶರಣನ ಕಂಡುದೆಲ್ಲ ಪರಮಪಾವನ ಎಂದು ಹೇಳಿಹರು.

ಕೇಳಿತ್ತೆಲ್ಲ ಪರಮಬೋಧೆ : ಶರಣರಿಂದ ಹೊರಹೊಮ್ಮಿಬಂದ ಜ್ಞಾನಾಮೃತ ಅದು ಮಹಾ ಪ್ರಸಾದ ಅವರ ಬೋಧ ನಿಜದೊಳಿರ್ದ ನಿಧಿ ಅವರದು ಭಾಷೆ ಪ್ರಸಾದವನಿಕ್ಕದ ಕಾರುಣ್ಯ. ಇದು ಶೃತಿವಂತರಿಗೆ ನಿಲುಕದ ಸಂಜ್ಞ ಗುರು ಶಿಷ್ಯರ ಏಕತ್ವ ನಿಲುವುಳ್ಳದಾದುದರಿಂದ ಪರಮಬೋಧೆ ಈ ಬೋಧೆಯ ನೋಡ ಹೋದವರೆಲ್ಲ ನಿಸ್ಸೀಮರು, ವಾಙ್ಮನೋತೀತರು, ಅನುಪಮ ಅಖಂಡಿತ ಘನ ಪೂರ್ಣಮಪ್ಪ ತನ್ನಿರುವೆ ನಿಜವೆಂದರಿತವರು. ಅಲ್ಲಿ ಖಂಡದೃಷ್ಟಿ ಗಿಂಬಿಲ್ಲ, ಗುರುವಾರೊ ಶಿಷ್ಯರಾರೊ?ಉಭಯ ನಾಮವುಳ್ಳ ಸೀಮೆಯುಳ್ಳ ಕರ್ಮವೆಂಬ ಕೌಟಿಲ್ಯ ನಷ್ಟವಾಗಿರುವಲ್ಲಿ ಉಪಮಿಸುವದದೆಂತು ಈ ಪರಮ ಬೋಧದ ರಹಸ್ಯವು ಮುನ್ನೆಲಿಂದ ಬಂದನಲ್ಲಿಗೆ ಹೋಗಿ ನಿತ್ಯನಾಗಿಪ್ಪ ಪರಮಬೋಧ ಇದನೆಂತುಸುರುವುದು ಅಜಾತ ಸಂಬಂಧ ಮುನ್ನ ಮುನ್ನಲಾದ ಘನವ. ಈ ರಹಸ್ಯವು ಶರಣನ ಕಾರುಣ್ಯದಿಂದ ಲಭ್ಯವಾಗುವದಾಗಿ ಪರಮ ಬೋಧವೆಂದು ಹೇಳಿಹರು.

ಮುಟ್ಟಿತ್ತೆಲ್ಲ ಪರಷದ ಸೋಂಕು : ಪರುಷ ಮುಟ್ಟಿದ ಲೋಹವು ಬಂಗಾರವು ಎಂಬುದು ಸಾಕಾರ ಅಭಿಮತವು. ಶರಣನ ಸ್ವಾನುಭವರೂಪಿ ಪರುಷ ಮುಟ್ಟಿ ಮಾಂಸಪಿಂಡವೆಲ್ಲ ಮಂತ್ರಪಿಂಡವು, ಅಂಗವೆಲ್ಲ ಸರ್ವಾಂಗಲಿಂಗ. ಕರಣಗಳೆಲ್ಲ ಲಿಂಗ ಕಿರಣಂಗಳು. ಇಂದ್ರಿಯಂಗಳೆಲ್ಲ ಅತೀಂದ್ರಿಯಂಗಳು. ಪ್ರಾಣವದು ಪ್ರಾಣದ ಪ್ರಾಣವಾಗಿಹ ಪ್ರಾಣಲಿಂಗನು ಅವನು ಮುಟ್ಟಿದಂತೆಲ್ಲ ನಿತ್ಯ ನಿತ್ಯ ನೂತನ. ಪರುಷ ಮುಟ್ಟಿದ ಲೋಹದ ಬದಲಾವಣೆಯಾದುದು ವರ್ಣಿಸಬಹುದು ಶರಣನೆಂಬ ಕೈಯ ಕೈಯಾಗಿಹ ಪರುಷ ಮುಟ್ಟಿದ ಘನವ ವರ್ಣಿಸಲಸಾಧ್ಯವು. ಏಕೆಂದರೆ ಕಾಣಬಾರದ ಘನವ ಕಾಣಿಸುವದು ಮುಟ್ಟಬಾರದುದ ಮುಟ್ಟಿಸುದದು ಅಸಾಧ್ಯವ ಸಾಧಿಸಿದುದನೆಂತು ವರ್ಣನೆ ಮಾಡುವುದು ? ಗಗನ ಉದ್ದಳತೆ ಅಗಲ ಎತ್ತರದಳತೆ ಅದಾವ ಮಾತಿಗೆ ನಿಲುಕುವದು ? ಹಾಗೆ ಗಗನ ಸದೃಶನಾಗಿಹ ಜ್ಞಾನಾಮೃತ ಮಯನು ಅನುಪಮ ಶರಣ ಮುಟ್ಟಿಹುದೆಲ್ಲ ಅನುಪಮ ನೋಡಾ.

ಒಡನೆ ನುಡಿದವರೆಲ್ಲ ಸದ್ಯೋನ್ಮುಕ್ತರು : ಶರಣನ ನಡೆ ತೆರಹಿಲ್ಲದ ನಡೆ, ತೆರಹಿಲ್ಲದ

ನುಡಿ, ತೆರಹಿಲ್ಲದ ವಿಶ್ರಾಮ. ತೆರಹಿಲ್ಲದ ಗಂಭೀರ ತೆರಹಿಲ್ಲದ, ಮಹಾಮಹಿಮ ಶರಣನ ನಡೆ ಇದು ಕಾರಣ ಸುಳಿಯಬಲ್ಲಡೆ ತೆರಹಿಲ್ಲದನಡೆ ನಡೆಯುವನಾಗಿ, ಸುಳಿವು ಆ ಸುಳುಹೇ ಪರಮಲೇಸು. ಗಮನವಿಲ್ಲದೆ ಸುಳಿಯಬಲ್ಲವರು ನಿರ್ಗಮನಿಯಾಗಿ ನಿಲ್ಲಬಲ್ಲವರಾಗಿ ಅವರಿಗದುವೆ ಪರಮ ಸಂತೋಷ. ತನ್ನಿಂದ ತನ್ನಯ ಅರುವಿನ ಇರುವಾದುದರಿಂದ ಜಗದಾರಾಧ್ಯರು ನೋಡಾ ಎಂದು ಬಿತ್ತರಿಸಿದಂತೆ,

ಶರಣರೊಡನಾಟ ಗಮನವಿಲ್ಲದೊಡನಾಟ ಪ್ರಾಣದ ಪ್ರಾಣವಾಗಿಹ ಪ್ರಾಣಲಿಂಗ ದೊಡನಾಟ. ನಿರ್ಗಮನಿಯಾಗಿ ನಿಂತ ಅಚಲಿತ ಲಿಂಗದೊಡನಾಟ. ದೇಹವಾದವರಲ್ಲ ದೇಹಿಯಾದವರಲ್ಲ ದೇಹಿಗೆ ದೇಹಿಯಾಗಿರ್ಪ ಭೇಧವನರಿತವರು. ಅರುವಿಂಗರುವಾಗಿರ್ಪ ಮಹಾಂತರು. ಅವರ ಒಡನಾಟ ಬಯಲು ಒಡನಾಟ. ನಡೆದು ನಿರ್ಗಮನಿಯಾಗಿಹ ಒಡನಾಟ. ನುಡಿದು ನಿಃಶಬ್ದರಾಗಿಹ ಒಡನಾಟ. ಅವರದು ಬಂಧ ಮೋಕ್ಷವ ಕಾಣದ ಒಡನಾಟ. ಪೂರ್ಣಮದಃ ಪೂರ್ಣಮಿದು ಪೂರ್ಣಾತ್‌ಪೂರ್ಣವಾಗಿಹ ಪರಿಪೂರ್ಣತ್ವವುಳ್ಳ ಶರಣರು, ಲಿಂಗದಲ್ಲಿ ಉದಯವಾದ ಲಿಂಗೈಕ್ಯರು. ಹುಟ್ಟು ಸಾವ ನರಿಯದ ಸದ್ಯೋನ್ಮುಕ್ತರು. ಬಂಧ ಮೋಕ್ಷ ಕಾಣದುದರಿಂದ ಅವರೊಡನೆ ನುಡಿದವರೆಲ್ಲ ಸದ್ಯೋನ್ಮುಕ್ತರು ಎಂದು ಹೇಳಿಹರು.

ಸುಳಿದ ಸುಳುಹೆಲ್ಲ ಜಗತ್ಪಾವನ : ಶರಣ ಸುಳಿದ ಸುಳುಹು ಜಗತ್ಪಾವನದ ಸಂಕೇತದ ಸುಳುಹು. ಇದು ಲಿಂಗವರಿತು ಲಿಂಗವಾಗಿಹ ಸುಳುಹು, ಅರುವಿಂಗರುವಾಗಿಹ ಸುಳುಹು, ಇದು ನಿಶಬ್ದ ವೇದಿಗಳ ಸುಳುಹು ವಿಷಮ ದೃಷ್ಟಿಯ ಕೆಡಿಸಿ ಸಮತತ್ವ ಸಿದ್ದಮಾಡಲು ಸುಳಿದ ಸುಳುಹು, ಇದು ಪುಣ್ಯರುಗಳಿಗೆ ಅಚಿಂತ್ಯಪದ ಲಭ್ಯದ ಸುಸಂಧಿಯ ಸುಳುಹು, ಶರಣರ ಸುಳಿದ ಸುಳುಹು ಅರಿತಾಗ ನಿಷ್ಕಾಮವಂತರು, ಪುರುಷಾರ್ಥಜ್ಞಾನಿಗಳು, ಜಿಜ್ಞಾಸು ಅನಿಭವಿ ವೃಂದವು, ನಿಶ್ಚಿಂತರು ನಿರ್ಭಯರು ತೃಪ್ತರೂಪ ತೃಪ್ತರು, ಪರಿತ್ರಾಣಾಯ ಸಾಧುನಾಂ ವಿನಾಶಾಯ ಚದುಷ್ಕೃತಾಂ ಧರ್ಮಸಂಸ್ಥಾಪ ನಾರ್ಥಾಯ ಸಂಭವಾಮಿ ಯುಗೆ ಯುಗೆ.

ಶರಣರು ಸುಳಿದ ಸುಳುಹು ಜಗತ್ಪಾವನ. ಅಲ್ಲಿ ಪವಿತ್ರವೆ ಪವಿತ್ರವು ಉತ್ಥಾನವೆ ಉತ್ಥಾನ ಸಾಧುಗಳಿಗೂ ಕಲ್ಯಾಣ ಅಸಾಧುಗಳಿಗೂ ಕಲ್ಯಾಣ ಧರ್ಮಸಂಸ್ಥಾಪನೆಯೆಂಬುದು ಸಕಲರ ಕಲ್ಯಾಣದ ಕಾರ್ಯ. ಅದು ಸಮದೃಷ್ಟಿ ನಿಲಯ, ಸಕಲರಿಗೂ ಸಮವಾಗಿರುವ ತತ್ವದರ್ಶನದ ಗುರಿಯೆ ಜಗತ್ಪಾವನ ಈ ಸಮ ತತ್ವ ಸಕಲ ಹೃದಯದಲ್ಲಿ ಯತಾರ್ಥ ಜ್ಞಾನ ಬೆಳಗಿಸಲು ಸುಳಿದ ಸುಳುಹು. ಇದು ಜಗತ್ಪಾವನದ ಸುಳುಹು, ನಿಶ್ಚಂತತೆಯೆ ಸುಳುಹು, ತಾವಾರೆಂದು ತಮ್ಮ ತಾವರಿಯುವ ಸುಳುಹು. ಇದು ಕಾರಣ ಸುಳಿದ ಸುಳುಹೆಲ್ಲ ಜಗತ್ಪಾವನವೆಂದು ಹೇಳಿಹರು.

ಮೆಟ್ಟಿದ ಧರೆಯೆಲ್ಲ ಅವಿಮುಕ್ತ ಕ್ಷೇತ್ರ : ಶರಣರು ಮೆಟ್ಟಿದ ಧರೆಯಲ್ಲ ಅವಿಮುಕ್ತ ಕ್ಷೇತ್ರ, ಎರಡೊಂದಾದ ಕ್ಷೇತ್ರ ಅರಿಯಲಿಲ್ಲದ ಅರುವಾಗಿಹ ಕ್ಷೇತ್ರ, ಅರಿಯಬಾರದ ಘನವಾಗಿಹ ತನ್ನಿರುವಿನ ಕ್ಷೇತ್ರ, ನಿರುಪಮ ಕ್ಷೇತ್ರ, ನಿಸ್ಸೀಮ ಕ್ಷೇತ್ರ, ಅರಿವ ಅರಿಹಿಸಿಕೊಂಬುದು ಕಾಣದಾಗಿ ಕಾಣಬಾರದ ಘನವೆ ತನ್ನಿರುವಾಗಿಹ ಸುಕ್ಷೇತ್ರವು. ಅವಿಮುಕ್ತ ಕ್ಷೇತ್ರವು.

ಆಚಾರವನಾಚಾರ ವಾಯಿತ್ತು ಸೀಮೆ ನಿಸೀಮೆಯಾಯಿತ್ತು ಪ್ರಾಣ ಸಂಚಯ ತಪ್ಪಿ

ಲಿಂಗ ಸಂಚಯುವಾಯಿತ್ತು ಎಲ್ಲಿ ರೂಪಲ್ಲಿಯೆ ಲಿಂಗಸ್ವಾಯತ ವಾಯಿತ್ತು ಎಲ್ಲಿ ಸೋಂಕುಲ್ಲಿಯೆ ಲಿಂಗಸ್ವಾಯುತವಾಯಿತ್ತು ಎಲ್ಲಿ ರುಚಿ ಅಲ್ಲಿಯೆ ಲಿಂಗಸ್ವಾಯತವಾಯಿತ್ತು ಎಲ್ಲಿ ಗಂಧವಲ್ಲಿಯೆ ಲಿಂಗಸ್ವಾಯುತವಾಯಿತ್ತು ಎಲ್ಲಿ ಶಬ್ದವಲ್ಲಿಯೆ ಲಿಂಗಸ್ವಾಯತವಾಯಿತ್ತು ಶರಣಂಗೆ ಪಂಚ ವಿಷಯಂಗಳಾಗಲಿಲ್ಲ ಅವು ಘನ ಲಿಂಗವು ಜ್ಞಾನಾನಂದವು ಜ್ಞಾನಾಮೃತವಾಗಿ ಎಲ್ಲೆಲ್ಲೂ ಚಿನ್ಮಯ ಚಿದಾನಂದವೆ ಬೆಳಗುವಲ್ಲಿ ಮಹಾಂತ ಮೆಟ್ಟಿದ ಧರೆ ಅದು ಅವಿಮುಕ್ತ ಕ್ಷೇತ್ರ ಅದು ಪರತತ್ವದ ನಿಲಯ ಪರಮಾಮೃತ ವಾದ್ದರಿಂದ ಅವಿಮುಕ್ತ ಕ್ಷೇತ್ರವೆಂದಿಹರು.

ಸೋಂಕಿದ ಜಲವೆಲ್ಲ ಪುಣ್ಯ ತೀರ್ಥಂಗಳು : ಶರಣನು ಸೋಂಕಿದ ಜಲವದು ಜ್ಞಾನ ಗಂಗಾ, ಆ ಮಹಾಂತ ಸೋಂಕಿದ ಜಲವೆಲ್ಲ ಪುಣ್ಯತೀರ್ಥಂಗಳು. ಅದು ತ್ರಿವೇಣಿ ಸಂಗಮವು. ಈ ಪವಿತ್ರ ಪುಣ್ಯತೀರ್ಥಂಗಳಲ್ಲಿ ಸ್ನಾನ ಮಾಡುವದರಿಂದ ಮನ ಶುದ್ದಿ ಭಾವ ಶುದ್ದಿಯು, ಇಂದ್ರಿಯಂಗಳ ಶುದ್ದಿವಾಗುವದರಿಂದ ಮಹಾತೀರ್ಥವಾಗಿದೆ. ಅದರಿಂದ ಮರವು ನಷ್ಟ ಭ್ರಾಂತಿ ನಷ್ಟ, ಭಾವರೂಪ ನಷ್ಟ ಶರಣರ ಸೋಂಕಿದ ಜಲವದು ಚಿದ್ರಸ ಈ ಚಿದ್ರಸ ಸೇವಿಸಿದವರು ಅಮರರು ಜ್ಞಾನಾನಂದ ಮಯರಾಗುವರು.

ಶರಣೆಂದು ಭಕ್ತಿ ಮಾಡಿದವರೆಲ್ಲ ಸಾಯುಜ್ಯರು : ಶರಣರಿಗೆ ಶರಣೆಂದು ಭಕ್ತಿ ಮಾಡಿದವರೆಲ್ಲ ಸಾಯುಜ್ಯರು. ಶರಣರೆಂಬುದು ಪರತತ್ವ, ಶರಣರಿಗೆ ಶರಣಾಗತರಾಗುವುದು. ಎರಡು ಬಗೆಯಲ್ಲಿ, ಫಲ ಪದಂಗಳ ಗುರಿಯನ್ನಿಟ್ಟುಕೊಂಡು ಶರಣಾಗತರಾಗುವದು. ಸಕಾಮಿ ಭಕ್ತರ ಗುರಿಯು. ಪರತತ್ವ ಪ್ರೇಮಿಗಳು ಶರಣಂಗೆ ಶರಣಾಗತವಾಗಿಹ ಭಕ್ತರು ಸದ್ಭಕ್ತರಾಗುವರು. ಶರಣಾಗತಿ ಭಾವ ಶ್ರೇಷ್ಟವಾದುದು, ಗುರುದೇವನಿಗೆ ಪೂರ್ಣಭಾವದಿಂದ ಪ್ರಥಮರು ತಮ್ಮ ಅತಂರಂಗದಲ್ಲಿ ★ನಸ್ತವಾಗಿಹ ನಿಕ್ಷೇಪ ಗಳಿಸಿಕೊಂಡರು. ಇದರಿಂದ ಧ್ವನಿಯ ಮರೆಯಲ್ಲಿರ್ದ ಘನದಿರುವಿನ ದರ್ಶನ ಸ್ವರೂಪ ದರ್ಶನ ಸತ್‌ಸ್ವರೂಪ ತಾವಾಗಿಹ ಭಾಗ್ಯ ಮಹಾಭಾಗ್ಯವೆ ಸಾಯುಜ್ಯದ ನಿಲುವು.

ಗುಹೇಶ್ವರ ನಿಮ್ಮ ಸುಳುಹಿನ ಸೊಗಸ ನುಪಮಿಸಬಾರದು : ಉಪಮಿಸಬಾರದುದ ಉಪಮಿಸುವಡೆಯೆ ಗುಹೇಶ್ವರನು ಅನುಪಮ, ಗುಹೆಯು ಅನುಪಮವು ಈಶ್ವರನು ಶಬ್ದಮುಗ್ದ ಆತನ ಗುಹೆಯು ಶಬ್ದ ಮುಗ್ದ, ಈಶ್ವರನು ಮೌನಮುದ್ರಿತನು, ಘನವಂತನು. ಗುಹೆಯು ಮೌನಮುದ್ರಿತವು, ಆವಾವುದನ್ನಾದರೂ ಉಪಮಿಸಬಹುದೆ? ಮೌನಮುದ್ರಿತ ಘನವ ಅದನೆಂತು ಉಪಮಿಸುವದು ? ಇದು ಕಾರಣ ಗುಹೇಶ್ವರನ ಸುಳುಹು. ಶಬ್ದಮುಗ್ದ ಸುಳುಹು ನುಡಿ ಗೆಡೆಗೊಡದ ಸುಳುಹು, ಮೂಕನ ಭಾಷೆ ಮೂಕನಾಗಿ ಅರಿವುದು ಗುಹೇಶ್ವರನ ಅರಿವುಡೆ ಗುಹೇಶ್ವರನಾಗಿ ಅರಿಯುವದು.

ವಚನ - 40

ಕಾಯಗೊಂಡ ಮಾನವರಂತೆ ಕೈಗೆ ಸಿಲುಕ ಪ್ರಾಣವಿಡಿದ
ಜೀವಿಗಳಂತೆ ಎಡೆಯಾಡದಿಪ್ಪ ಕಾಂಬಡೆ ಕಂಗಳತೆಯಲ್ಲ,
ಕೇಳುವುಡೆ ಕಿವಿಗಳತೆಯಲ್ಲ ಗುಹೇಶ್ವರನ ನಿಲುವು ಬರಿಯ
ಸ್ತೋತ್ರಕ್ಕೆ ನಿಲುಕದು ಸಿದ್ದರಾಮಯ್ಯ.

ತಾತ್ಪರ್ಯ- ಕಾಯಗೊಂಡ ಮಾನವರಂತೆ ಕೈಗೆ ಸಿಲುಕ : ಗುಹೇಶ್ವರ ನಿಲುವುಳ್ಳ ಶರಣ ಕಾಯಗೊಂಡ ಮಾನವರಂತೆ ಅವನೆಂತು ಕೈಗೆ ಸಿಕ್ಕುವನು ? ಕಾಯಗೊಂಡ ಮಾನವರು ಕಾಯವೆ ತಾವೆಂದು ಒಪ್ಪಿಕೊಂಡವರು ಅದನ್ನು ಅಪ್ಪಿಕೊಂಡವರು.

ಕಾಯಗೊಂಡವರು ಆರೆ ಆಗಿರಲಿ ನರರಿರಲಿ ಸುರರಿರಲಿ ಆರಾದರೂ ಇರಲಿ ಇವರು ಭವ ಮಾಲೆಗೊಳಪಟ್ಟವರು ಇಂದ್ರಿಯಂಳಿಗಾ ಹುತಿಯಾದವರು, ವಿಷಯಾಸಕ್ತರು ಹೊನ್ನು ಮಣ್ಣಿಗಾಗಿ ಅಲೆದಾಡಿ ಸಿಕ್ಕರೆ ಹಿಗ್ಗುವರು ಸಿಗದಿದ್ದಲ್ಲಿ ಕುಗ್ಗುವರು ಇವರು ರಾಗ ದ್ವೇಷವುಳ್ಳವರಾಗಿ ದ್ವಂದ್ವದ ಪೇಚಿನಲ್ಲಿ ಸಿಕ್ಕವರು. ಷಡ್ವಿಕಾರವುಳ್ಳವರು ಶರೀರ ಸೊಕ್ಕಲಿ ಸೊರಗಲಿ ಅದಕ್ಕೆ ಮಾನಾಪಮಾನವಾದಲ್ಲಿ ಹಿಗ್ಗುವರು ಕುಗ್ಗುವರು ಕಾಯದ ಆಗುಹೋಗುಗಳೆ ತಾನೆಂದು ಒಪ್ಪಿಕೊಂಡವರು ಇವರ ಅರಿವು ಜಡ ಶರೀರದ ಅಹಂವುಳ್ಳದ್ದಾಗಿಹುದು.

ತಾನಾರೆಂದರಿತ ಶರಣ ಕಾಯಗೊಂಡ ಮಾನವರಂತೆ ಕೈಗೆ ಸಿಲುಕನು. ಅಂಗದ ಮೇಲೆ ಲಿಂಗ ಸಾಹಿತ್ಯವಾಗಿ ಲಿಂಗವರಿತು ಲಿಂಗವಾಗಿಹ ಸರ್ವಾಂಗಲಿಂಗಿ ಅವನೆಂತು ಕಾಯಗೊಂಡ ಮಾನವರಂತೆ ದೇಹ ಭಾವಿಯಾಗುವನು.

ಬಯಲು ಬಯಲೆ ಅದು ಘಟದೊಳಿದ್ದಂತೆ ತೋರಿದರೂ ಇದ್ದಂತಿಹ ಬಯಲು ಅದು ಮಠದೊಳಿದ್ದರೇನು ದೇಶ ವಿದೇಶ ದೊಳಿದ್ದರೇನು ಅದು ಇದ್ದಂತಿಹ ಬಯಲು. ಆವಾವುದರೊಳ ಸಿಕ್ಕುದುದಲ್ಲ ಹಾಗೆ ಚಿತ್‌ಸ್ವರೂಪವನರಿತು ಚಿದಾಕಾಶನಾಗಿಹ ಶರಣ ಆವಾವ ಕಾರ್ಯ ಕಾರಣದಲ್ಲಿ ಸಿಕ್ಕಿಕೊಂಡವನಲ್ಲ, ಭ್ರಮಾತ್ಮಕ ಬುದ್ಧಿಯೆ ನಷ್ಟವಾದುದರಿಂದ ಬಂಧನಕ್ಕೊಳ ಪಟ್ಟವನಲ್ಲ, ಬಂಧನವೆ ಕಾಣದವಂಗೆ ಮೋಕ್ಷವ ಹೇಗೆ ಹೇಳುವದು, ಅನುಪಮ ಶರಣ ಸಮತೆಯೆ ತನ್ನಿರುವಾಗಿ ತಾನಾಗಿಹ ಶರಣ ಅವನಿಗಾವ ಮರವು. ಅವನಿಗಾವ ಅರಿವು ? ಅವನಿಗಾವ ಬಂಧ, ಅವನಿಗಾವ ಮೋಕ್ಷ ? ಅರಿಯಲಿಲ್ಲದ ಅರುವೆ ತಾನಾಗಿಹ ಘನವಂತನಿಗೆ ಇಷ್ಟಾವುದು? ಅನಿಷ್ಟಾವುದು? ಅಹುದಾವುದು? ಅಲ್ಲಾವುದು? ಬೇಕಾವುದು ಬೇಡಾವುದು ವಿಷಮ ದೃಷ್ಟಿಯೆ ನಷ್ಟವಾಗಿಹ ಮಹಾಂತಂಗೆ ಅರಿತೆನೆಂಬುದಿಲ್ಲ, ಅರಿಯೆನೆಂಬುದಿಲ್ಲ, ನಿಸ್ಸೀಮಂಗೆ ಸೀಮಿತ ಉಂಟೆ ? ಅಖಂಡಿತ ಘನ ಪೂರ್ಣವಪ್ಪ ತನ್ನಿರುವೆ ಅರುವೆಂದರಿದ ಶರಣ ಕಾಯಗೊಂಡ ಮಾನವರಂತೆ ಮರುವಿಂಗೊಳಪಡನು. ದೇಹ ಬುದ್ದಿಗೆ ಸಿಗನು, ಅಹಮ್ ಮಮದ ಗುಲಾಮನಾಗನು. ಶರಣನೆಂದರೆ ನಿಜವರಿತ ಘನಲಿಂಗೈಕ್ಯ, ಅವನ ಕಾಯವದು ಚಿತ್ಕಾಯ. ನಾನೀನೆಂಬುದಕ್ಕೂ ತೆರಹಿಲ್ಲದ ಘನವಾಗಿದೆ. ಮಹಾಪ್ರಸಾದವಾಗಿದೆ. ಅರುವಿಂಗರುವಾಗಿದೆ, ದೇಹಿಗೆ ದೇಹಿಯಾಗಿರ್ಪ ಭೇಧದ ರಹಸ್ಯವರಿತ ಪ್ರಸಾದ ಕಾಯವಾಗಿದೆ.

ಶರಣ ತನ್ನೊಳ್ ಆವಾವುದನ್ನು ಕಾಣನು. ದೇಹವ ಕಾಣನು, ದೇಹಿ ಎಂಬುದ ಕಾಣನು, ಏಕೆಂದರೆ ದೇಹಿಗೆ ದೇಹಿಯಾದ ಗುಟ್ಟನ್ನು ಅರಿತ ಶರಣ "ಅರಿದೆವರಿದೆವೆಂಬಿರಿ ಅರಿದ ಪರಿ ಎಂತು ಹೇಳಿರೆ ಅರಿದವರು ಅರಿದೆವೆಂಬರೆ ಅರಿಯಬಾರದ ಘನ ವರಿತವರು ಅರಿಯದಂತಿಪ್ಪರು ಗುಹೇಶ್ವರಾ."

ಶರಣರು ಅರಿಯ ಬಾರದ ಘನವರಿತು ಅರಿಯದಂತಿಪ್ಪ ಸಹಜರು. ಇವರುಗಳ ಕಾಯಗೊಂಡ ಮಾನವರಂತೆ ಕಾಣಬಹುದೆ? ಪ್ರಾಣವಿಡಿದ ಜೀವಿಗಳಂತೆ ಎಡೆಯಾಡದಿಪ್ಪ ಶರಣ.

ಪ್ರಾಣವಿಡಿದ ಜೀಗಳು ಇವರಾರು ಪ್ರಾಣವೆ ತಾವೆಂದು ತಿಳಿದವರು ಇವರಿಗೆ ಪ್ರಾಣವೆ ಬ್ರಹ್ಮ ಮಯವಾಗಿದೆ ಇವರು ಪ್ರಾಣ ವಿಡಿದ ಅಭ್ಯಾಸಿಗಳು, ಹಠಯೋಗಿಗಳು ಪ್ರಾಣಯಾಮ ಅಭ್ಯಾಸ ಬಲದಿಂದ ಕೇವಲ ಕುಂಭಕ ಸಾಧಿಸುವವರು ಕುಂಭಕ ಬಲದಿಂದ ಸಹಸ್ರಾರು ವರ್ಷಗಳವರೆಗೆ ತಮ್ಮ ಪ್ರಾಣವಿಡಿದವರು ಇವರು ಹಠಯೋಗಿಗಳು ಪ್ರಾಣವಿಡಿಯಲು ಕುಂಭಕಕ್ಕೆ ಬಹು ಪ್ರಾಧಾನ್ಯತೆ ಕೊಟ್ಟವರು ಇದರಿಂದ ಅಮರತ್ವ ಸಿದ್ದಿಸುವದೆಂದು ತಿಳಿದು, ಇದು ಹುಟ್ಟು ಸಾವು ಗೆಲಿಯುವ ಗುಟ್ಟು ಎಂದು ನಂಬಿದವರಾಗಿಹರು.

ಶರಣರು ಮಾತ್ರ ಪ್ರಾಣವಿಡಿದ ಜಿವಿಗಳಂತೆ ಎಡೆಯಾಡದಿಪ್ಪರು ಇವರು ಹಠಯೋಗದ ಕ್ರಿಯೆಗೆ ಬಹು ಪ್ರಧಾನ ಕೊಡದವರು ಲಿಂಗ ಸಕೀಲ ಸಂಯೋಗದಂಥ ಸ್ಥಲ ವರಿತವರು ಪ್ರಾಣವಿಡಿವ ಕಾರ್ಯಕ್ಕೆ ಒಪ್ಪುವರೆ? ಪ್ರಾಣವೆಂಬುದು ಶ್ವಾಸೋಚ್ವಾಸ ಪ್ರತಿದಿನ 21600 ಶ್ವಾಸೋಚ್ವಾಸ ಆಗುವ ಕ್ರಿಯೆ ಅದರ ಸ್ವಭಾವವೆ ಉಸುರಾಟ (ಪ್ರಾಣದಲ್ಲಿ) ಪವನದಲ್ಲಿ ಪಂಚಪ್ರಾಣ ಉಪಪ್ರಾಣ ಹೀಗೆ ಹತ್ತು ಪ್ರಾಣಂಗಳು ಪ್ರಾಣದ ಕ್ರಿಯೆಂಗಳು ತಾನೆಂದೂ ಆಗಲಾರ.

''ಪ್ರಾಣ ಲಿಂಗ ಲಿಂಗಪ್ರಾಣ ವೆಂಬುದು ಸಮನಿಸದು ನೋಡಾ, ದಶಪ್ರಾಣ ವಾಯುವಳಿದು ಲಿಂಗವೆ ತಾನೆಂದರಿವುಡೆ ಅದೆ ಪ್ರಾಣಲಿಂಗ ನೋಡಾ ಗುಹೇಶ್ವರಾ.''

ಶರಣರು ಲಿಂಗವೆ ತಾನೆಂದರಿತವರು. ಅವರು ಪ್ರಾಣವೆ ತಾವೆಂಬ ಭಾವಕ್ಕೆ ಒಪ್ಪುವರೆ ? ಲೋಕದವರು ಪ್ರಾಣ ಪ್ರೇಮಿಗಳು. ಶರಣರು ಲಿಂಗವರಿತು ಲಿಂಗವಾಗಿಹ ಲಿಂಗ ಸುಖಿಗಳು. ಅಗಣಿತ ಅಕ್ಷರೇಶ್ವರ ತಾನೆಂದರಿತವರು. ಪ್ರಾಣದ ಕ್ರಿಯೆ ತಾವಾಗಬಹುದೆ ? ಪ್ರಣವದ ಪ್ರಭೆಯ ಮೇಲಣ ಪರಂಜೋತಿ ತಾವೆಂದು ತಿಳಿದವರು. ಅವರು ಖಂಡಾಖಂಡ ಸಂಯೋಗವಿಲ್ಲದ ಅಖಂಡಿತ ಘನರು, ಸಾವನರಿಯರು.

ಪ್ರಾಣವಿಡಿದ ಜೀವಿಗಳು ಸಾವ ಕಾಣುವವರು, ಇವರು ಭಾವ ಭ್ರಮಿತರು. ಶರಣರು ಭಾವಕ್ಕಗಮ್ಯವಾಗಿಹ ನಿರ್ಭಾವಿಗಳು. ಭಾವವೆಂಬುದು ಜನ್ಮಕ್ಕೆ ಈಡು. ನಿರ್ಭಾವ ವೆಂಬುದು ಜನ್ಮಕ್ಕೆ ಕಾಡುಗಿಚ್ಚು ಆಗಿದೆ. ಇದು ಕಾರಣ ಶರಣರು ಭವ ರಹಿತರು. ಭಾವವನ್ನೆ ಕೆಡಿಸಿ ತೆರಹಿಲ್ಲದ ಲಿಂಗ ಭರಿತ ಭಾವ ತೋರಿಸುವವರು. ನಿಃಶಬ್ದ ವೇದಿಗಳು, ನುಡಿಗೆಡೆ ಗೊಡದ ಘನವೆ ತನ್ನಿರುವಾದ ಮಹಾಂತರು. ಅವರೆಂತು ಪ್ರಾಣವಿಡಿದ ಜೀವಿಗಳಂತೆ ಇರುವರು.

ಕಾಂಬಡೆ ಕಂಗಳಳತೆಯಲ್ಲ. ಕೇಳುವುಡೆ ಕಿವಿಗಳಳತೆಯಲ್ಲ, ದೇಹವಾದವರು, ದೇಹ ಭಾವಿಗಳಾದವರು ಕಣ್ಣುಗ್ಗಳಿಗೆ ಅಳತೆಯಾಗುವುದು ಸಹಜ. ನಿರ್ದೇಹಿಗಳು ಕಣ್ಣಿಂಗೆ ಅಳತೆ ಅದೆಂತು ಸಾಧ್ಯ. ರೂಪದ ಅಳತೆ ಕಣ್ಣಿಗೆ ಸಹಜ.

ನಿರೂಪದ ಅಳತೆ ಅದೆಂತು ಸಾಧ್ಯ! ಗುಹೆಯು (ದೇಹ) ಕಂಗಳತೆಗೆ ಒಳಪಟ್ಟುದು. ಈಶ್ವರನು ಗುಹೆಯ ಅವಲಂಬನೆ ಇಲ್ಲದೆ, ನಿರಾಲಂಬವಾಗಿಹನು. ಬೆಳಗುಳ್ಳ ಚಿದ್ಘನದ ಅಳತೆ ಅದೆಂತು ಸಾಧ್ಯ. ಪ್ರಕೃತಿ ಪುರುಷರೆಂಬುದು ವಿಚಾರಕ್ಕೊಳಗು, ಸಾವಯವ ನಿರವಯವೆಂಬುದು ಜ್ಞಾನಕ್ಕೊಳಗು. ತತ್ವ ಅತತ್ವವೆಂಬುದು ನಿತ್ಯಾನಿತ್ಯವೆಂಬ ವಿಭಾಗಕ್ಕೊಳಗು. ಶಬ್ದ ಬ್ರಹ್ಮವು ನುಡಿಗೊಳಗು ನಿಃಶಬ್ದ ಬ್ರಹ್ಮವು ಹೊಗಳಿಕೆಗೆ ಒಳಪಡದು.

ಗುಹೇಶ್ವರನ ನಿಲುವು ಬರಿಯ ಸ್ತೋತ್ರಕ್ಕೆ ನಿಲುಕದು ಕಾಣಾ ಸಿದ್ಧರಾಮಣ್ಣಾ

ಗುಹೇಶ್ವರನ ನಿಲುವು. ಶೃತಿಗಗೋಚರವಾಗಿಹ ನಿಲುವು. ವೇದ ವೇದಾಂತಗಳಿಗೂ, ಶಾಸ್ತ್ರ ಪುರಾಣಂಗಳಿಗೂ ನಿಲುಕದ ನಿಲುವು. ಗುಹೇಶ್ವರನ ನಿಲುವು, ಶಬ್ಧ ಮುಗ್ಧ ನಿಲುವು. ವಾಙ್ಮನೋತೀತವಾದುದರಿಂದ ಅದು ಬರಿಯ ಸ್ತೋತ್ರಕ್ಕೆ ನಿಲುಕದು ಎಂದು ಪ್ರಭುದೇವ ಬಿತ್ತರಿಸಿಹನು.

ವಚನ - 41

ನರ ಲೋಕದ ನರರುಗಳೆಲ್ಲರು ನರ ಸಂಸಾರಕ್ಕೊಳಗಾದರು.
ಸುರ ಲೋಕದ ಸುರರುಗಳೆಲ್ಲರೂ ಸುರ ಸಂಸಾರಕ್ಕೊಳಗಾದರು.
ಮುನಿ ಲೋಕದ ಮುನಿಗಳೆಲ್ಲರು ತಪಃ ಸಂಸಾರಕ್ಕೊಳಗಾದರು.
ರುದ್ರ ಲೋಕದ ರುದ್ರಗಣಂಗಳೆಲ್ಲರು ರುದ್ರಪದವೆಂಬ ಸಂಸಾರಕ್ಕೊಳಗಾದರು.
ಲಿಂಗಧರಿಸಿದವರೆಲ್ಲ ಲಿಂಗಸಂಸಾರಕ್ಕೊಳಗಾದರು.
ಜಂಗಮ ಪೂಜಿಸಿದವರೆಲ್ಲ ಸಾಯುಜ್ಯ ಸಂಸಾರಕ್ಕೊಳಗಾದರು.
ಪ್ರಸಾದ, ಪಾದೋದಕ ಸಂಬಂಧಿಗಳೆಲ್ಲರು ಪ್ರಸಾದ ಸಂಸಾರಕ್ಕೊಳಗಾದರು.
ಗುಹೇಶ್ವರ ಲಿಂಗದಲ್ಲಿ ಸರ್ವಸಂಸಾರ ವಿರಹಿತ ಚೆನ್ನಬಸವಣ್ಣಂಗೆ
ನಮೋ ನಮೋ ಎಂಬೆನು.

ತಾತ್ಪರ್ಯ: ನರ ಲೋಕದ ನರರುಗಳೆಲ್ಲರು ನರ ಸಂಸಾರಕ್ಕೊಳಗಾದರು : ನರಲೋಕವು ಆವುದು ? ನರರು ವಾಸಿಸುವ ಲೋಕವೇ ನರ ಲೋಕವು. ನರರುಗಳೆಲ್ಲರು ವಿಷಯ ವ್ಯಾಮೋಹಿಗಳಾಗಿ, ಇಂದ್ರಿಯ ಬುದ್ಧಿಯುಳ್ಳವರು. ಇಂದ್ರಿಯ ಜನ್ಯ ವಿಷಯೋಪಭೋಗ ಸುಖವೆ ನಿತ್ಯವೆಂದು ತಿಳಿದವರು. ವಿಷಯ ಲಂಪಟಿಗಳು. ಇಂದ್ರಿಯಂಗಳ ಪ್ರೇಮವೆ ಅಧಿಕವಾಗಿ ಹೊನ್ನು , ಹೆಣ್ಣಿಗಾಗಿ, ಮಣ್ಣಿಗಾಗಿ ಸತ್ತವರು.

ಮಾನವ ಹೆಣ್ಣಿಗಾಗಿ, ಮಣ್ಣಿಗಾಗಿ, ಹೊನ್ನಿಗಾಗಿ ಹೋರಾಡಿ, ಹೋರಾಡಿ ಸಾಯುತ್ತಾನೆ. ಅರುವಿನ ಜನ್ಮ ಧರಿಸಿಯು, ಅರುವ ಅರಿಯುವ ಮುಖದವರಾಗದೆ, ಮರವಿನ ಮುಖದವರಾಗಿ ಹುಟ್ಟು ಸಾವುಗಳಿಗೀಡಾದರು. ಇದು ಕಾರಣ ನರರುಗಳೆಲ್ಲರು ನರ ಸಂಸಾರಕ್ಕೊಳಗಾದರು.

ಸುರಲೋಕದ ಸುರರುಗಳೆಲ್ಲರು, ಸುರ ಸಂಸಾರಕ್ಕೊಳಗಾದರು : ಇವರು ಸ್ವರ್ಗಲೋಕದಲ್ಲಿ ವಾಸಿಸುವ ದೇವತೆಗಳು. ಈ ದೇವತೆಗಳೆಲ್ಲರು ಸ್ವರ್ಗ ಸುಖದ ಸಂಸಾರಕ್ಕೊಳಗಾದರು. ಸ್ವರ್ಗದಲ್ಲಿರುವ ರಂಭಾ, ಊರ್ವಶಿ, ಮೇನಕೆ, ತಿಲೋತ್ತಮೆ ನಾನಾ ಸುಂದರ ಸ್ತ್ರೀಯರು, ಇತ್ತ ಕಾಮಧೇನು, ಕಲ್ಪವೃಕ್ಷ, ಐರಾವತ, ಚಿಂತಾರತ್ನಗಳಿಂದುಕ್ತವಾದ ನಾನಾ ದಿವ್ಯಭೋಗಗಳಿಂದ ಶೋಭಿಸುವ ಸ್ವರ್ಗವು, ದೇವತೆಗಳೆಲ್ಲರು ಸ್ವರ್ಗ ಸುಖದ ಸಂಸಾರಕ್ಕೊಳಗಾದರು. ಸ್ವರ್ಗಲೋಕವಾದರೂ ವಿಷಮ ದೃಷ್ಟಿಯಿಂದುಕ್ತವಾದುದು. ಅಲ್ಲಿರುವ ದಿವ್ಯ ಭೋಗಂಗಳು ವಿಷಮ ರೂಪವಾಗಿಹವು. ಅವುಗಳು ಮೂರು ವರ್ಣದಿಂದುಕ್ತವಾಗಿಹ ಭೋಗಂಗಳು. ಉತ್ತಮ, ಮಧ್ಯಮ, ಕನಿಷ್ಠವೆಂಬ ತ್ರಿ ಶ್ರೇಣಿಯಲ್ಲಿ ಕಂಗೊಳಿಸುವ ಭೋಗಂಗಳು. ಕನಿಷ್ಠ ಪುಣ್ಯ ಮಾಡಿದವರಿಗೆ ಕನಿಷ್ಠ ಭೋಗ, ಮಧ್ಯಮ ಪುಣ್ಯವಂತರಿಗೆ ಮಧ್ಯಮ ಭೋಗ,

ಉತ್ತಮ ಪುಣ್ಯ ಮಾಡಿದವರಿಗೆ ಉತ್ತಮ ಭೋಗ. ಹೀಗೆ ಅವರವರ ಕರ್ಮಾನುಸಾರ ಫಲದ್ರೂಪವಾಗಿಹ ಭೋಗಂಗಳು.

ಕನಿಷ್ಠ ಪುಣ್ಯಗಳಿಸಿದ ಸುರನು ತನಗಿಂತ ಅಧಿಕ ಭೋಗವ ಕಂಡು ನನಗೆ ಆ ದಿವ್ಯ ಭೋಗಂಗಳ ಉಪಭೋಗಿಸುವ ಭಾಗ್ಯ ನನಗಿಲ್ಲ. ನಾನು ಕೀಳನು. ಅವರು ಶ್ರೇಷ್ಠರು. ಅವರ ಪದವಿ ನನಗಿಲ್ಲವಲ್ಲವೆಂದು ಕುದಿಯುವನು. ವ್ಯಾಕುಲನಾಗುವನು. ದುಃಖಿಯಾಗಿ ಮನವು ಚಿಂತಿಸುತ್ತಿರುತ್ತದೆ. ಮಧ್ಯಮ ಪುಣ್ಯಗಳಿಸಿದ ಸುರನು, ಕನಿಷ್ಟ ಪುಣ್ಯ ಮಾಡಿ ಗಳಿಸಿದ ಸುರನ ಭೋಗವ ಕಂಡು ತಾನು ಅವನಿಗಿಂತಲೂ ಅಧಿಕ ಭೋಗದ ಭಾಗ್ಯವಂತನು. ಅವನ ಭೋಗಕ್ಕಿಂತಲೂ ನನ್ನವು ದಿವ್ಯ ಭೋಗಂಗಳು. ನನ್ನ ಭೋಗ ಸುಖ ಅವನಿಗೆಲ್ಲಿಯದು. ನಾನು ಅವನಿಗಿಂತ ಶ್ರೇಷ್ಟನು. ಅವನು ಕೀಳು ಎಂದು ಅಹಂಕಾರಿಯಾಗಿ ಗರ್ವಿಷ್ಟನಾಗುವನು. ತನಗಿಂತ ಉತ್ತಮ ಭೋಗಿಯಾಗಿಹ ಶ್ರೇಷ್ಟ ಪುಣ್ಯವಂತನ ದಿವ್ಯ ಬೋಗವ ಕಂಡು, ಒಳಗೊಳಗೆ ಮಿಡಕುವನು. ನನಗೆ ಆ ದಿವ್ಯ ಭೋಗವ ಭೋಗಿಸುವ ಭೋಗ ಇಲ್ಲವಲ್ಲ, ಕಡಿಮೆ ಪುಣ್ಯವಂತನ ಕಂಡು ಗರ್ವಿಷ್ಟನಾಗುವನು. ಶ್ರೇಷ್ಟ ಪುಣ್ಯವಂತನ ಕಂಡು ಕುಗ್ಗುವನು. ಚಿಂತನ ಮಾಡುವನು ಅಪ್ರಸನ್ನ ನಾಗುವನು.

ಇತ್ತ ಶ್ರೇಷ್ಟ ಪುಣ್ಯವಂತನು ತನಗಿಂತ ಕೀಳಾಗಿರುವ ಆ ಪುಣ್ಯವಂತರ ಕಂಡು ತಾನೊಬ್ಬ ಶ್ರೇಷ್ಟ ಪುಣ್ಯವಂತ, ನನ್ನಲ್ಲಿರುವ ಭೋಗೋಪ ಭೋಗಂಗಳು ಶ್ರೇಷ್ಟ ವೆಂದು, ತಾನು ಆ ದಿವ್ಯ ಭೋಗಂಗಳ ಭೋಗಿಸುವವ ಶ್ರೇಷ್ಟನೆಂದು ಅವರೆಲ್ಲರನ್ನು ಕೀಳಾಗಿ ಕಂಡು ಗರ್ವಿಷ್ಟನಾಗಿ ವರ್ತಿಸುವನು. ಹೀಗೆ ಸ್ವರ್ಗ ಲೋಕದಲ್ಲಿರುವ ಉಪಭೋಗವ ನುಂಡು ದೇವತೆಗಳ ಹೃದಯ ಕಲ್ಮಷವಾಗುವದಲ್ಲದೆ ಪರಿಶುದ್ದವಾಗಲರಿಯದು. ಹೃದಯ ದೋಷದಿಂದ ಮುಂದೆ ನಾನಾಹೀನ ಜನ್ಮಂಗಳು ಧರಿಸಲು ಈ ಸ್ವರ್ಗದ ಉಪಭೋಗವೆ ಕಾರಣವಾಯಿತಲ್ಲದೆ ಆತ್ಮೋನ್ನತಿಗೆ ಕಾರಣವಾಗಲಿಲ್ಲ, ಇದು ಕಾರಣ ಸುರ ಲೋಕದ ಸುರರುಗಳೆಲ್ಲರೂ ಸುರಲೋಕದ ಸಂಸಾರಕ್ಕೊಳಗಾದರು.

ಮುನಿ ಲೋಕದ ಮುನಿಗಳೆಲ್ಲರೂ ತಪಃ ಸಂಸಾರಕ್ಕೊಳಗಾದರು : ಮುನಿಗಳೆಂದರೆ ತಪಸ್ಸು ಮಾಡುವ ಆದರ್ಶರು, ಅಗ್ರಗಣ್ಯರು. ಇಂದ್ರಿಯ ನಿಗ್ರಹದಲ್ಲಿ ಸಮರ್ಥರು. ಮನಸ್ಸಿನ ಸಂಯಮತಾ ಮೂರ್ತಿಗಳು. ದೇವನಾಮದಲ್ಲಿ ಹಗಲಿರಳೆನ್ನದೆ ಧ್ಯಾನಾಸಕ್ತರಾಗಿಹ ಪೂರ್ಣಭಾವಿಗಳು, ನೈಷ್ಠಿಕ ಬ್ರಹ್ಮಚರ್ಯವಂತರು. ಸತ್ಯಪಾಲಿಸುವ ನಿಜಕಾಮಿಗಳು. ಅಹಿಂಸೆಯ ಪಾಲಿಸುವ ಶಾಂತಾತ್ಮರು. ಆಸ್ತೇಯ ಅಪರಿಗ್ರಹ ಧರ್ಮ ಪಾಲಿಸುವ ನೇತಾಜಿಗಳು, ಇವರುಗಳ ಒಂದೊದೆ ಗುಣಂಗಳು ವಿಶ್ವವನ್ನೆ ಶಾಂತಿಯಲ್ಲಿಡಿಸುವ ಪೌರ್ಣಿಮಿ ಚಂದ್ರನ ಪ್ರಕಾಶ ದಂತಿರುವ ಸದ್ಗುಣಗಳು, ಸಧ್ಭಾವ, ಸದ್ದರ್ಮ, ಸದಾಚಾರ ತಮ್ಮದಾಗಿಹ ಧರ್ಮ ಇದುವೆ ಇವರುಗಳಿಗೆ ತಪಸ್ಸು ಅಧಿಕ ಪ್ರಿಯವಾಗಿರುವದರಿಂದ ಮುನಿಗಳು ತಪಃ ಸಂಸಾರಕ್ಕೊಳಗಾದರು.

ವಿಶ್ವಾಮಿತ್ರನಿಗೆ ಚಾಂಗದೇವನಿಗೆ ತಪಸ್ಸು ಶ್ರೇಷ್ಟವೆಂದೆನಿಸಿ ತಪಸ್ಸಿನಿಂದ ಅನೇಕ ಸಿದ್ಧ್ಯಾದಿಗಳ ಪಡೆದು ತಪಃಪ್ರಭಾವಕ್ಕೆ ಮರುಳಾಗಿ ತಾವಾರೆಂದರಿಯದೆ ತಪಕ್ಕೆ ಮೆಚ್ಚಿ ತಪಃ ಸಂಸಾರಕ್ಕೊಳಗಾಗಿ ಹೀಗೆ ಬಹುವಿಧದಲ್ಲಿ ತಪಃಸ್ಸು ಮಾಡುವಲ್ಲಿ ಪ್ರೀತಿ ನಿಷ್ಟೆ ಅಧಿಕವಾಗಿ ಅದುವೆ ಅವರಿಗೆ ಸಂಸಾರವಾಗಿದೆ. ರುದ್ರ ಲೋಕದ ರುದ್ರಗಣಂಗಳೆಲ್ಲರು ರುದ್ರಪದವೆಂಬ ಸಂಸಾರಕ್ಕೊಳಗಾದರು: ರುದ್ರಲೋಕವದು ರುದ್ರರು ವಾಸಿಸುವ ಲೋಕ. ರುದ್ರ ಲೋಕ.

ಅಲ್ಲಿರುವ ರುದ್ರಗಣಂಗಳೆಲ್ಲರು ರುದ್ರೋಪಾಸಕರು. ಅವರಿಗೆ ರುದ್ರಪದವಿ ಶ್ರೇಷ್ಠವಾಗಿದೆ. ಆ ಪದವಿ ಪ್ರಾಪ್ತಿಗಾಗಿ ಅವರು ರುದ್ರೋಪಾಸನ ರಾಗಿಹರು, ರುದ್ರಪದವೆಂಬದು ಶ್ರೇಷ್ಠವು.

''ಆರು ಕೋಟಿ ಬ್ರಹ್ಮರು ಮಡಿದಲ್ಲಿ ನಾರಾಯಣಂಗೆ ಒಂದು ದಿನವಾಯಿತ್ತು. ನಾರಾಯಣ ರೊಂದು ಕೋಟಿ ಮಡಿದಲ್ಲಿ ರುದ್ರನ ಕಣ್ಣೆವೆ ಹಳಚಿತ್ತು'' ಎಂದು ಬಸವಣ್ಣನವರು ಬಿತ್ತರಿಸಿದುದು ನೋಡಿದಡೆ ಬ್ರಹ್ಮಪದವಿಗಿಂತಲೂ ವಿಷ್ಣು ಪದವಿ ಶ್ರೇಷ್ಠವಾಗಿದೆ ವಿಷ್ಣುವಿಗಿಂತಲೂ ರುದ್ರಪದವಿ ಅತ್ಯಧಿಕವಾಗಿದೆ. ಇದು ಕಾರಣ ಇಂಥ ರುದ್ರಪದದ ಪ್ರಾಪ್ತಿಗಾಗಿ ರುದ್ರೋ ಪಾಸಕರಾಗಿಹ ರುದ್ರ ಭಕ್ತರು ರುದ್ರಗಣಂಗಳು ಅವರಿಗೆ ರುದ್ರದೇವನ ಒಲಿಸಿಕೊಳ್ಳುವ ಉಪಾಸನೆಯೇ ಅವರಿಗೆ ಸಂಸಾರವಾಗಿದೆ. ಇವರು ರುದ್ರ ಪದವೆಂಬ ಸಂಸಾರಕ್ಕೊಳಗಾದವರು ಎಂದು ತಿಳಿಯುವದು.

ಲಿಂಗಧರಿಸಿದವರೆಲ್ಲ ಲಿಂಗ ಸಂಸಾರಕ್ಕೊಳಗಾದರು. ಜಂಗಮ ಪೂಜಿಸಿದವರೆಲ್ಲರು ಸಾಯುಜ್ಯ ಸಂಸಾರಕ್ಕೊಳಗಾದರು. ಪ್ರಸಾದ ಪಾದೋದಕ ಸಂಬಂಧಿಗಳೆಲ್ಲರು ಪ್ರಸಾದ ಸಂಬಂಧಿಗಳಾಗಿ ವಿರಹಿತ ಚನ್ನಬಸವಣ್ಣಂಗೆ ನಮೋ ನಮೋ ಎಂಬೆನು :

ಲಿಂಗ ಧರಿಸಿದರು ಲಿಂಗವು ಪೂಜಿಸಿದರು, ವೀರಶೈವರಲ್ಲಿ ಬಹು ಲಿಂಗವಂತರು ಲಿಂಗ ಧರಿಸಿಹರು ಲಿಂಗ ಧರಿಸಿದುದು ಏಕೆ? ಲಿಂಗವ ಪೂಜಿಸುವ ಕಾರಣವೇನು? ಎಂದು ಪ್ರಶ್ನಿಸಿದರೆ ಸರಿಯಾದ ಉತ್ತರ ಎಷ್ಟು ಲಿಂಗವಂತರಿಂದ ಸಿಕ್ಕುತ್ತದೆ, ಹೇಳ ಲಿಕ್ಕಾಗದು. ಈ ವಿಷಯದ ಬಗ್ಗೆ ಬಸವರಾಜ ದೇವರು ಹೀಗೆ ಬಿತ್ತರಿಸಿಹರು.

''ಲಿಂಗಾರ್ಚನೆ ಮಾಡುವೆನಯ್ಯ ಜಂಗಮ ಮನೆಗೆ ಬರಬೇಕೆಂದು ಲಿಂಗಾರ್ಚನೆಯಲ್ಲಿ ಫಲವುಂಟು, ಪದವುಂಟು, ಭವಉಂಟು, ಜಂಗಮಾರ್ಚನೆಯೆ ಲೇಸು ಪಲಂನಾಸ್ತಿ ಪದಂನಾಸ್ತಿ ಭವಂನಾಸ್ತಿ ಕುಲಂನಾಸ್ತಿ ಯಾದ ಕಾರಣ ಜಂಗಮಾರ್ಚನೆಯ ಮಾಡುವುದು ಕೂಡಲ ಸಂಗಮದೇವಾ.''

ಲಿಂಗ ಧರಿಸಿ ಲಿಂಗಾರ್ಚನೆಯ ಮಾಡಿದರೂ ಜಂಗಮ ಮನೆಗೆ ಬರಬೇಕೆಂಬ ಭಾವದಿಂದ ಲಿಂಗಪೂಜೆ ಮಾಡದೆ ಲಿಂಗಾರ್ಚನೆಯ ಮಾಡುವದರಿಂದ ಫಲವುಂಟು ಪದವುಂಟೆಂದು ತಿಳಿದು ಫಲ ಪದಂಗಳ ಪಡೆಯ ಲೋಸುಗ ಲಿಂಗದೇವನ ಒಲಿಸಲು ಲಿಂಗವ ಪೂಜಿಸುವ ಪೂಜಾವಿಧಾನ ಕಲಿತು ಪೂಜೆ ಮಾಡುವವರಾದರು. ಪೂಜೆಗಾಗಿ ಮಂತ್ರ ಪಠಣ ಮಾಡುವುದು ರುದ್ರಧ್ಯಯನಕ್ಕಾಗಿ ಇಡೀ ಆಯುಷ್ಯ ವ್ಯಯ ಮಾಡಿದರಲ್ಲದೆ ಲಿಂಗವ ತಿಳಿಯಲಿಲ್ಲ, ಲಿಂಗವು ಪೂಜ್ಯ ವಸ್ತುವಾಯಿತ್ತು ತಾವು ಪೂಜಕರಾಗಿ ಫಲಪದಂಗಳ ನೀಡುವ ಭ್ರಮಿತ ರಾಗಿರುವದರಿಂದ ಲಿಂಗಧರಿಸಿದವರೆಲ್ಲ ಲಿಂಗ ಸಂಸಾರ ಕ್ಕೊಳಗಾದರು.

ಜಂಗಮ ಪೂಜಿಸಿದವರೆಲ್ಲರು ಸಾಲೋಕ್ಯ ಸಂಸಾರಕ್ಕೊಳಗಾದರು ಜಂಗಮದೇವ ಆರು ಗೊತ್ತೆ? ಲಿಂಗ ಒಂದಾಗಿರ್ದ ಜಂಗಮ ಜಂಗಮ ಒಂದಾಗಿರ್ದ ಲಿಂಗ. ನಿರ್ಗಮನಿ ಜಂಗಮ, ನಿರಾಭಾರಿ ಜಂಗಮ, ನಿಜೈಕ್ಯಜಂಗಮ, ನಿರ್ದೇಹಿ ಇಂತಪ್ಪ ಪರಾತ್ಪರ ಜಂಗಮ ದೇವನ ಪೂಜಿಸುವದೆ ಅವರಿಗದುವೆ ಕಾಯಕವಾದುದರಿಂದ ಸೇವೆ ಯಾದುದರಿಂದ ಅವರಿಗೆ ಸಾಯುಜ್ಯ ಭಾವವೆ ಧೃಢವಾದುದರಿಂದ, ಜಂಗಮ ಪೂಜಿಸಿದವರೆಲ್ಲ ಸಾಯುಜ್ಯ ಸಂಸಾರ ಕ್ಕೊಳಗಾದರು.

ಪ್ರಸಾದ ಪಾದೋದಕ ಸಂಬಂಧಿಗಳೆಲ್ಲರು ಪ್ರಸಾದವೆಂಬ ಸಂಸಾರಕ್ಕೊಳಗಾದರು.

ಇವರು ಬಾಹ್ಯ ಪ್ರಸಾದ, ಬಾಹ್ಯ ಪಾದೋದಕ ಸಂಬಂಧಿಗಳು. ಲಿಂಗಾಂಗ ಸಮರಸ ಜ್ಞಾನವಾಗಿಹ ಜ್ಞಾನ ಪ್ರಸಾದಿಗಳಲ್ಲ. ಅಖಂಡಿತ ಘನ ಪೂರ್ಣವಪ್ಪ ನಿಜದರುವೆ ತನ್ನರುವೆಂಬ ಮಹಾಂತ ಇಲ್ಲಿ ಸ್ವಾನು ಭವದ ಜ್ಞನೋದಕ ಸಂಬಂಧಿಗಳು.

ಮಡಿ ನೀರಿನಿಂದ ನಿತ್ಯ ನಿಯಮಾದಿಗಳಿಂದ ಪಾಕ ಮಾಡಿದ ಪಂಚಾಮೃತಕ್ಕೆ ಪ್ರಸಾದವೆಂದಿಹರು. ಜಂಗಮಯ್ಯನ ಪಾದ ತಿರ್ಥವೆ ಪಾದೋದಕವಾಗಿ ಇವುಗಳಲ್ಲಿ ನಿಷ್ಟೆ ಶ್ರಧ್ದೆ ಭಾವ ಪೂರ್ಣವಿರುವದರಿಂದ ನಿತ್ಯ ಪಾದೋದಕ ಕರುಣ ಪ್ರಸಾದವ ಸೇವಿಸುವದೆ ಅವರಿಗೆ ಸಂಸಾರವಾಗಿದೆ ಇದೊಂದು ನಿತ್ಯದ ಕಾರ್ಯವಾಗಿದೆ. ಇದು ಕಾರಣ ಪಾದೋದಕ ಪ್ರಸಾದ ಸಂಬಂಧಿಗಳೆಲ್ಲರು ಪ್ರಸಾದ ಸಂಸಾರಕ್ಕೊಳಗಾದರು.

ಗುಹೇಶ್ವರ ಲಿಂಗದಲ್ಲಿ ಸರ್ವಸಂಸಾರ ವಿರಹಿತ ಚನ್ನ ಬಸವಣ್ಣಂಗೆ ನಮೋ ನಮೋ ಎನುತ್ತಿದ್ದೆನು. ಸರ್ವ ಸಂಸಾರ ವಿರಹಿತ ನಾದಾತ ಚನ್ನಬಸವಣ್ಣ ನರರ ಸಂಸಾರದಿಂದ ವಿರಹಿತ ಸುರರ ಸಂಸಾರ ದಿಂದ ವಿರಹಿತ ತಪಃ ಸಂಸಾರದಿಂದ ವಿರಹಿತ ರುದ್ರಪದವೆಂಬ ಸಂಸಾರದಿಂದ ವಿರಹಿತ ಲಿಂಗ ಸಂಸಾರದಿಂದ ವಿರಹಿತ ಸಾಯುಜ್ಯ ಸಂಸಾರದಿಂದ ವಿರಹಿತ ಪಾದೋದಕ ಪ್ರಸಾದದಿಂದ ವಿರಹಿತ, ಇದು ಕಾರಣ ಗುಹೇಶ್ವರ ಲಿಂಗದಲ್ಲಿ ಇಂತಿವೆಲ್ಲವು ಸಂಸಾರವು, ಈ ಸಂಸಾರಗಳಿಂದ ವಿರಹಿತ ಚನ್ನ ಬಸವಣ್ಣಂಗೆ ನಮೋ ನಮೋ ಎನುತಿರ್ದೆನು.

ಚೆನ್ನಬಸವಣ್ಣಂಗೆ :

ದೇವರು ಅರುವ ಅರಿಯ ಹೇಳಿ ಸದ್ಗುರುನಾಥ ಕೊಟ್ಟ ಕಾರುಣ್ಯವನ್ನು ಅರಿದರಿದು ನೋಡಿ ಅರುವಿಂಗರುವಾಗಿಹ ಮಹಾಂತ ದೇಹಿಗೆ ದೇಹಿಯಾಗಿಹ ನಿರುಪಮ ಘನಕ್ಕೆ ಘನ ನಿರ್ದೇಹಿಗೆ ದೇಹವುಂಟೆ? ಅತೀಂದ್ರಿಯಂಗೆ ಇಂದ್ರಿಯಂಗಳ ಶುಭಾಶುಭ ಕ್ರಿಯೆ ಉಂಟೆ ? ಪ್ರಾಣ ಲಿಂಗಿಗೆ ಒಡಲುಂಟೆ ಕರಣಂಗಳೆ ಲಿಂಗ ಕಿರಣವಾಗಿಹ ಸ್ವಯ ಲಿಂಗಿಯಾದ್ದರಿಂದ ಸರ್ವಸಂಸಾರ ವಿರಹಿತನೆಂದು ಹೇಳಿಹರು.

ಮರುವಿಂಗೆ ಭ್ರಮುವುಂಟು ಭಾವವುಂಟು ಭಾವವಿದ್ದಲ್ಲಿ ಸೂತಕಗಳುಂಟು ಅರಿಯಬಾರದ ಘನವರಿತು ಅರಿಯದಂತಿದ್ದ ಮಹಾಂತ ಅರಿಯಲಿಲ್ಲದ ಅರುವೆ ತಾನಾಗಿಹ ಅಪ್ರಮಾಣಂಗೆ ಸಂಸಾರವೇತರದು ನಿಷ್ಕಳಂಕನಿಗೆ ಕಳಂಕವೆಲ್ಲಿಯದು ? ಭಾವಕ್ಕಿಂಬು ಕೊಡದ ನಿರ್ಭಾವಿಯಾದ್ದರಿಂದ ಸರ್ವ ಸಂಸಾರ ವಿರಹಿತ, ತನುವಿನ ತನು, ಮನದ ಮನ, ಜೀವದ ಜೀವವಾಗಿಹ ಅಖಂಡಿತನ ನಿಲುವಿಂಗೆ ಅಲ್ಲಿ ಸಂಸಾರವಾವುದು? ಸನ್ಯಾಸ ವಾವುದು? ಬೋಧ ವಾವುದು ಅಬೋಧವಾವುದು? ಯೋಗವಾವುದು? ವಿಯೋಗವಾವುದು? ಮರವಾವುದು? ಅರುವಾವುದು? ಬಂಧವಾವುದು ಮೋಕ್ಷವಾವುದು? ಮುನ್ನೆಲ್ಲಿಂದ ಬಂದ ನಲ್ಲಿಗೆ ಹೋಗಿ ನಿತ್ಯನಾಗಿರ್ಪ ನಿಶಬ್ದವೇದಿ ಯಾದುದರಿಂದ ಸರ್ವಸಂಸಾರ ವಿರಹಿತ ಚೆನ್ನಬಸವಣ್ಣನೆಂದು ಆ ಮಹಾಂತನ ಪರಾತ್ಪರ ಜ್ಞಾನವಾಗಿಹ ಜ್ಞಾನ ನಿಧಿಯಾಗಿಹ ಸ್ವಪ್ರಭೆಗೆ ನಮೋ ನಮೋ ಎನುತಿರ್ದೆನೆಂದು ಅಲ್ಲಮ ಪ್ರಭುದೇವ ಕೊಂಡಾಡಿಹನು.

ವಚನ - 42

ಬೀದಿಯಲ್ಲಿ ಬಿದ್ದ ಮಾಣಿಕ್ಯವ ಹೊಳಿದ್ದ ನಿಧಾನವನು, ಆರಿಗೂ ಕಾಣಬಾರದು
ನೋಡಾ, ಮರಣವುಳ್ಳವಂಗೆ ಮರುಜವಣೆ ಸಿಕ್ಕುವದೆ? ಪಾಪಿಯ ಕಣ್ಣಿಂಗೆ

ಪರುಷ ಕಲ್ಲಾಗಿಪ್ಪಂತೆ ಇಪ್ಪರಯ್ಯ ಶಿವ ಶರಣರು ನಮ್ಮ ಗುಹೇಶ್ವರನ ಶರಣ ಮರುಳ ಶಂಕರ ದೇವರ ನಿಲವ ನೋಡಾ ಸಂಗನ ಬಸವಣ್ಣ.

ತಾತ್ಪರ್ಯ : ಬೀದಿಯಲ್ಲಿ ಬಿದ್ದ ಮಾಣಿಕ್ಯವ :

ಇದಾವ ಬೀದಿಯಲ್ಲಿ ಬಿದ್ದ ಮಾಣಿಕ್ಯವು ಇದು ಇಹದ ಬೀದಿಯಲ್ಲಿ ಬಿದ್ದ ಮಾಣಿಕ್ಯವಲ್ಲ, ಪರ ಬೀದಿಯಲ್ಲಿ ಬಿದ್ದ ಮಾಣಿಕ್ಯವಲ್ಲ ಆರಾರ ಬೀದಿಯಲ್ಲಿ ಬಿದ್ದ ಮಾಣಿಕ್ಯವಲ್ಲ. ''ಕರಿಯ ನಿತ್ತಡೊಲ್ಲೆ ಹಿರಿದಿಪ್ಪ ರಾಜ್ಯವ ನಿತ್ತ ಡೊಲ್ಲೆ ಬ್ರಹ್ಮ ಪದವಿ ವಿಷ್ಣು ಪದವಿ ರುದ್ರ ಪದವಿ ನಾನಾ ಪದವಿ ಪದಂಗಳ ನಿತ್ತಡೊಲ್ಲೆ ಶರಣರ ಸೂಳ್ನುಡಿ ಇತ್ತಡೆ ನಿಮ್ಮ ನಿತ್ತಂತೆ ಕಾಣಾ ರಾಮನಾಥ.'' ಎಂಬ ಮಹಾಂತರ ಬಯಕೆ ಯಂತೆ ಇದು ಶರಣರ ಸೂಳ್ನುಡಿಯಲ್ಲಿದ್ದ ಮಾಣಿಕ್ಯವು. ಇದು ಲಭ್ಯವಾಗುವ ದೆಂದರೆ ರಾಮನಾಥನೆ ಇತ್ತ ಮಾಣಿಕ್ಯವು ಎಂದು ತಿಳಿವುದು.

ಮಾಣಿಕ್ಯ :

ರಾಮನಾಥನಾಗಿಹ ಮಾಣಿಕ್ಯ. ಇದು ಬೇಕೆಂಬ ಭೋಗದಾಶೆಗೆ ದೊರೆಯದ ಮಾಣಿಕ್ಯ. ಬೇಡೆಂಬ ವೈರಾಗ್ಯದವರಿಗೂ ಸಿಗದ ಮಾಣಿಕ್ಯ. ಸಾಲೋಕ್ಯ ಸಾಯುಜ್ಯ ಸಾಮೀಪ್ಯ ಸಾರೂಪ್ಯವೆಂಬ ಚತುರ್ವಿಧ ಫಲಪದಂಗಳ ಪಡೆದವರಿಗೂ ಸಿಗದ ಮಾಣಿಕ್ಯ ಶರಣರ ಸೂಳ್ನುಡಿಯ ಕೃಪೆಯುಳ್ಳವರಿಗೆ ಲಭ್ಯವಾಗುವ ಮಾಣಿಕ್ಯ. ಕಲ್ಯಾಣ ರೂಪಿ ಶಿವ ಶರಣರ ಸ್ವಾನುಭವವೆಂಬ ಬೀದಿಯಲ್ಲಿದ್ದ ಮಾಣಿಕ್ಯ. ಸರ್ವಾತ್ಮ ನೇತಾತ್ಮಕವೆಂಬ ಬೀದಿಯಲ್ಲಿದ್ದ ಮಾಣಿಕ್ಯವಾದರೂ, ಶಬ್ದ ಸಂಭ್ರಮದವರಿಗೆ ಕಾಣದ ಮಾಣಿಕ್ಯ. ನಿಶಬ್ದವೇದಿಗಳಿಗೆ ಕಾಣುವ ಮಾಣಿಕ್ಯ. ಇದು ತನ್ನಿಂದ ತನ್ನ ನರಿದವರ ಇರುವಾಗಿಹ ಮಾಣಿಕ್ಯ. ನಿರಾಲಂಬ ಮಾಣಿಕ್ಯ ನಾನೀನೆಂಬುದಕ್ಕು ಎಡೆಗೊಡದ ಮಾಣಿಕ್ಯ. ಅಚಿಂತ್ಯ ಮಾಣಿಕ್ಯ ಅನುಪಮ ಮಾಣಿಕ್ಯ.

ಮಾಣಿಕ್ಯದ ದರ್ಶನ ಅದಾರಿಗೆ ? ಮಾಣಿಕ್ಯ ಬೇರೆ ತಾನು ಬೇರೆಂಬ ಭೇಧ ಜ್ಞಾನಿ ಗಳಿಗೂ, ಭಾವಿಕರಿಗೂ ಭಕ್ತರಿಗೂ ಕಾಣದ ಮಾಣಿಕ್ಯ. ಅರಿದರಿದು ಮಾಣಿಕ್ಯವೆ ತನ್ನಿರುವು ಆದವರ ದರ್ಶನ ವಾದವಂಗೆ ; ಅರ್ಪಿತ ಹಿಂಗಿತ್ತು ಅರ್ಚನೆ ಹಿಂಗಿತ್ತು ಅವಧಾನ ಹಿಂಗಿತ್ತು ಶಬ್ದಕ್ಕೆ ತೆರಹಿಲ್ಲದಂತಾಯಿತ್ತು.

ಮಾಣಿಕ್ಯ ಗುಹೇಶ್ವರನ ಶರಣರ ನಿಲುವುಳ್ಳದಿರುವು. ಅದುವೆ ಮರುಳ ಶಂಕರ ದೇವನೆಂಬ ಮಾಣಿಕ್ಯ. ತಾನಾರೆಂದರಿತು ತನ್ನಿರುವಿನ ಅರುವಿಂಗೆ ಮರುಳಾದವರ ಮಾಣಿಕ್ಯ ಯಾನೆ ಮಾಣಿಕ್ಯ ತನ್ನ ಕಂಡುದು.ಹೂಳಿದ್ದ ನಿಧಾನವನು ಆರಿಗೂ ಕಾಣಬಾರದು ನೋಡಾ,. ಆವಲ್ಲಿ ಹೂಳಿದ್ದ ನಿಧಾನ ಇದಾರಿಗೂ ಕಾಣಬಾರದ ಸ್ಥಾನದಲ್ಲಿ ಹೂಳಿದ್ದ ನಿಧಾನವಾಗಿದೆ ಅದು ಕಂಡುದು ಹೇಗೆ ? ಅಣ್ಣ ಬಸವಣ್ಣನ ಮಹಾಮನೆಯ ಮಹಾಪ್ರಸಾದದಲ್ಲಿ ಹೂಳಿದ್ದ ನಿಧಾನ. ಶುದ್ದ ಪ್ರಸಾದ ಸಿದ್ದ ಪ್ರಸಾದ ಪ್ರಸಿದ್ದ ಪ್ರಸಾದದಲ್ಲಿ ಗುಪ್ತವಾಗಿದ್ದ ನಿಧಾನ. ಸಕಲರ ಹೃದಯದಲ್ಲಿ ನ್ಯಸ್ತವಾಗಿಹ ನಿಧಾನ. ಶರಣರು ಕಂಡದು. ಇದು ಮುನ್ನ ಮುನ್ನಲಾದ ನಿಧಾನ. ತನ್ನಿಂದಲಾದ ನಿಧಾನ ಇದಾರ ಸ್ವತ್ತು ಆಗಿಹ ನಿಧಾನವಲ್ಲ, ಸ್ವಯಮೇವ ನಿಧಾನವಾದುದರಿಂದ ಆರಾರಿಂದಲೂ ದೊರೆಯದ ನಿಧಾನವೆಂದು ಹೇಳಿಹರು.

ನಿಧಾನ :

ಇದು ಅನ್ಯರ ಸ್ವತ್ತು ಅಲ್ಲ. ಇದಾರ ಹಂಗಿನೊಳಪಟ್ಟ ಸ್ವತ್ತು ಅಲ್ಲ. ಗುರು ಘನದ ಕರುಣೆ ವುಳ್ಳವಂಗೆ ತನ್ನದಾಗಿಹ ಸ್ವತ್ತು. ಗುರು ಶಿಷ್ಯರೆಂಬ ಪ್ರತಿಭಾವವುಳ್ಳವರ ನಿಧಾನವಲ್ಲ. ಕಲ್ಪಿತ ಗುರು, ಕಲ್ಪಿತ ಲಿಂಗ, ಕಲ್ಪಿತ ಜಂಗಮ ಇವರುಗಳ ಸ್ವತ್ತು ಅಲ್ಲ. ಇವರುಗಳೆಲ್ಲರ ಮುನ್ನ ಮುನ್ನವೆ ಇದ್ದ ನಿಧಾನ. ಇದಾರು ಹೂಳಿಡಬೇಕು? ಹೂಳಿಟ್ಟ ನಿಧಾನವೆನ್ನಲು ಬರದು. ಹೂಳಿಟ್ಟುದುದು ಎಲ್ಲಿಂದ ತೋರುವುದು, ತೋರುವುದೆಂದಲ್ಲಿ ನಿಧಾನ ಹೇಗಾಗುವುದು ? ತೋರಬಾರದ ಘನವಾದ್ದರಿಂದ ಹೇಳಲು ಬಾರದಂತಾಗಿದೆ. ಇದು ಕಾರಣ ತನ್ನಂತರಂಗದಲ್ಲಿ ನ್ಯಸ್ತವಾಗಿಹ ನಿಧಾನ. ತನ್ನಿಂದ ತಾನಾಗಿ ಅರಿದರಿದು ನೋಡಿದವರಿಗೆ ತನಗೆ ತಾನೆ ಲಭ್ಯವಾಗಿಹ ನಿಧಾನ. ಈ ನಿಧಾನಕ್ಕೇನೆನ್ನಬೇಕು, ನಿಧಾನವು ಮೌನ, ನಿಧಾನ ಕಂಡವರು ಮೌನ. ಮೌನದ ಸಂಜ್ಞೆ ಮೌನದಿಂದ ತಿಳಿವುದು. ಮೌನಕ್ಕೆ ಮೌನನಾಗಿ, ಮೌನೇಶನಾಗಿ ತಿಳಿವುದು. ಇದು ಸಕಲರ ಅರುವಿನ ವಿಶ್ರಾಮವಾಗಿಹ ನಿಧಾನ. ಈ ನಿಧಾನ ಕಂಡವರು ತಮ್ಮ ತಾವರಿತವರು. ಇವರು ನಿಧಾನವಂತರು.

ಮರಣವುಳ್ಳವಂಗೆ ಮರುಜವಣಿ ಸಿಕ್ಕುವದೆ ? : ಲೋಕದಲ್ಲಿ ಹುಟ್ಟಿದವರಿಗೆಲ್ಲ ಮರುಜವಣಿ ಸಿಕ್ಕಬಹುದೆ ? ಆರಿಗೆ ಮರುಜವಣಿ ಸಿಕ್ಕಿದೆ, ಅವರು ಮರಣ ಗೆದ್ದವರು. ಆರಿಗೆ ಮರಣದ ಭಯವಿದೆ ಮರಣವೆಂಬ ಭಾವವಿದೆ , ಅವರಿಗೆ ಮರುಜವಣಿ ದೊರೆತಿಲ್ಲವೆಂದು ತಿಳಿವುದು. ''ಆರು ಕೋಟಿ ಬ್ರಹ್ಮರು ಮಡಿವಲ್ಲಿ, ನಾರಾಯಣಂಗೊಂದು ದಿನವಾಯಿತ್ತು, ನಾರಾಯಣರೊಂದು ಕೋಟಿ ಮಡಿವಲ್ಲಿ ರುದ್ರನ ಕಣ್ಣೆವೆ ಹಳಚಿತ್ತು, ಹಲವು ರುದ್ರಾವತಾರವಳಿದಲ್ಲಿ ಕೂಡಲ ಸಂಗಮದೇವನೇನೆಂದೂ ಅರಿಯೆನು ಎಂದು ಅಣ್ಣ ಬಸವಣ್ಣನವರು ಬಿತ್ತರಿಸಿದುದು ನೋಡಿದಡೆ ಆರು ಕೋಟಿ ಬ್ರಹ್ಮರು, ನಾರಾಯಣರೊಂದು ಕೋಟಿ, ಹಲವು ರುದ್ರಾವತಾರ ಅಳಿದಿರುವಲ್ಲಿ ಆದಾರಿಗೆ ಮರುಜವಣಿ ಸಿಕ್ಕಿದೆಂದು ತಿಳಿವುದು. ಮರುಜವಣಿ ಸಿಕ್ಕಿರುವುದು ಮರಣ ವಿಲ್ಲದವಂಗೆ ಮರಣವ ಕಾಣದವಂಗೆ.

ಮರುಜವಣಿ ಆವುದು ? ಲಿಂಗದಲ್ಲಿ ಉದಯವಾದ ಲಿಂಗೈಕ್ಯ ನಿಲವು ಮರುಜವಣಿಯು. ಇದು ಎಂಜಲ ಮಾತಿಗೆ ಸಿಗದ ಸಂಜೀವಿನಿ. ಮಿಗೆ ಮಿಗೆ ಮೀಸಲವಾಗಿಹ ತತ್ವಬಲ್ಲವರ ಹೃದಯದಲ್ಲಿದ್ದ ಸ್ವಯಂ ಜ್ಯೋತಿ. ಇವರು ಅಮರತ್ವದ ಹೊಲಬನರಿತವರು. ಸಾವನರಿಯದವರು, ಅಮರರು. ಮರಣವುಳ್ಳವರು ಆರು ? ಎಲ್ಲ ಎಲ್ಲವನರಿಯಬಹುದು. ಸಾವನರಿಯಬಾರದು. ಸರ್ವವಿದ್ಯೆ ಸಕಲ ವ್ಯಾಪ್ತಿಯನರಿಯಬಹುದು. ಹರಿ, ಬ್ರಹ್ಮ, ಕಾಲ, ಕಾಮ, ದಕ್ಷಾದಿ ದೇವ, ದಾನವ, ಮಾನವರಿಗೆಲ್ಲ ಸಾವು, ಮಹಾ ಪುರುಷರಿಗೆಯೂ ಸಾವು, ಶಿವ ಶಿವಾ ಈ ಸಾವನರಿದು, ಲೋಕ ಪ್ರಪಂಚವ ಮರೆತು, ಲಿಂಗದಲ್ಲಿ ನೆನಹು ನೆಲೆಗೊಂಡಡೆ, ಆ ಮಹಾ ಮಹಿಮಂಗೆ ಸಾವಿಲ್ಲ, ಈ ಸಾವನರಿಯದ ಅರೆಮರುಳರ ಅರಿವು ಮಹಾದಾನಿ ಕಾಣಾ ಗುಹೇಶ್ವರಾ.

ಎಲ್ಲ ಎಲ್ಲವನರಿತರೇನಾಯಿತು. ಸಾವ ತಿಳಿಯದಿದ್ದರೆ ಏನು ಅರಿತರೂ ನಿಷ್ಪ್ರಯೋಜಕವು. ಸಾವು ಇಲ್ಲದುದು ಆವುದು ಅದನ್ನು ತಿಳಿಯುವುದು ಶ್ರೇಯಸ್ಕರ. ಸಾವುಳ್ಳುದು ಅದೆಷ್ಟು ತಿಳಿದರೂ ಅದು ಸಾವಿನಿಂದುಕ್ತವಾದುದು ಎಂದಲ್ಲಿ ಅದನ್ನೇಕೆ ಅರಿಯುವುದು. ಸಕಲ ವಿದ್ಯೆಯು ಸಾವು. ಹರಿ, ಬ್ರಹ್ಮ, ಕಾಲ, ಕಾಮ, ದಕ್ಷಾದಿ ದೇವ,

ದಾನವ, ಮಾನವರಿಗೆಲ್ಲ ಸಾವು, ಮಹಾ ಪುರುಷರಿಗೆಯೂ ಸಾವು, ಇವರೆಲ್ಲರು ಮರಣವುಳ್ಳವರು. ಆರು ಲಿಂಗವರಿತು ಲಿಂಗೈಕ್ಯರು, ಅವರಷ್ಟೆ ಸಾವನರಿಯದವರು. ಅಮರಾನಂದಮಯರು.

ಪಾಪಿಯ ಕಣ್ಣಿಗೆ ಪರುಷವು ಕಲ್ಲಾಗಿಪ್ಪಂತೆ ಇಪ್ಪರು ಶರಣರು :

ಶರಣರು ಕಾಂಬಡೆ ಕಣ್ಗೆ ಅಗೋಚರರು. ಪಾಪಿಗಳ ಕಣ್ಗೆ ಸಕಲ ಮಾನವರಂತೆ ಶರಣರು ದೇಹಧಾರಿಗಳು. ಉಂಡವರೆಂಬೆನೆ ? ಉಪವಾಸಿಗಳು. ಬಳಸಿದವರೆಂಬೆನೆ ? ಬ್ರಹ್ಮಚಾರಿಗಳು. ನುಡಿದವರೆಂಬೆನೆ ? ನಿಶಬ್ಧರು. ನಡೆದವರೆಂಬೆನೆ ? ನಿರ್ಗಮನಿಯು. ಉಪಮಿಸುವರೆ ? ಅಪ್ರಮಾಣಗಮ್ಯರು. ಅಚಿಂತ್ಯರು. ಪಾಪಿಯ ಕಣ್ಣಿಗೆ ಪರುಷವು ಕಲ್ಲಾಗಿಪ್ಪಂತೆ ಇಪ್ಪರು.

ಪಾಪಿ ಆರು ? ಪರುಷವು ಮುಂದೆ ಇದ್ದರೂ, ಅದು ಕಲ್ಲಾಗಿ ಕಂಡವರು. ಹಾಗೆ ತೆರಹಿಲ್ಲದಭವ ನುಡಿಗೆಡೆಗೊಡದ ಶರಣ. ಮುಂದಿದ್ದಡೂ ಆ ಮಹಾಂತನನ್ನು ಸಾಮಾನ್ಯರಂತೆ ಕಂಡುದೆ ಪಾಪಿಯ ದೃಷ್ಠಿ. ಅರುವಿಂಗರುವಾಗಿಹ ಸ್ವತೇಜ. ಮುಂದೆ ಇದ್ದಡೂ ಅವನನ್ನು ಮರವರುವುಳ್ಳನನ್ನಾಗಿ ಗಣನೆಗೊಳಪಡಿಸಿ ಕಂಡುದೆ ಪಾಪಿಯ ಕಣ್ಣು. ನಿಶಬ್ಧವೇದಿಯನ್ನು ಶಬ್ಧ ಪ್ರಮಾಣದಿಂದ ಕಂಡುದೆ ಪಾಪಿಯ ಕಣ್ಣು.ಶರಣರ ಪ್ರಸಾದವಾಣಿ ಅದು ಪರುಷವಿದ್ದಂತೆ. ಅವರ ವಚನ ಸಾಹಿತ್ಯ ಪರುಷವು ಜಡಮತಿಯರಿಗೆ ಸಾಮಾನ್ಯ ಸಾಹಿತ್ಯವಾಗಿ ಕಂಡುದು.

ಗುಹೇಶ್ವರನ ಶರಣ ಮರುಳ ಶಂಕರ ದೇವರ ನಿಲವ ನೋಡಾ ಸಂಗನ ಬಸವಣ್ಣ :

ಗುಹೇಶ್ವರನ ಸಾಕ್ಷಾತ್ಕಾರವುಳ್ಳವರೆಲ್ಲ ಮರುಳ ಶಂಕರದೇವರ ನಿಲುವುಳ್ಳವರು. ಶುದ್ಧ, ಸಿದ್ಧ, ಪ್ರಸಿದ್ಧ ತತ್ವ ಅರಿಯ ಹೋಗಿ ಪರಮ ಶಾಂತಿಯೆ ತಾನಾಗಿ ಮಹಾಪ್ರಸಾದ ಸವಿಯುವದರಲ್ಲಿ ತನ್ನ ಮರೆತು. ಸ್ವ ಸ್ವರೂಪದ ಸುಖದ ಸುಖಿಯಾಗಿಹುದೆ ಮರುಳ ಶಂಕರ ದೇವರ ನಿಲುವು. ಇದು ಹೃದಯದಲ್ಲಿ ನ್ಯಸ್ತವಾಗಿಹ ಗುರು, ಲಿಂಗ, ಜಂಗಮ, ಪ್ರಸಾದವಾಗಿಹ ನಿಕ್ಷೇಪವು. ಇದು ಅಚಿಂತ್ಯ ಪದವುಳ್ಳ ನಿಶ್ಚಿಂತತೆಯ ನಿಜ ಧಾಮ. ಈ ಮಹಾಂತ ಬಸವಣ್ಣನವರ ಮಹಾಪ್ರಸಾದದಲ್ಲಿ ಗುಹ್ಯಾತ ಗುಹ್ಯವಾಗಿದ್ದ ಮಾಣಿಕ್ಯ. ಇವರಿಗೆ ಕಾಣಬಾರದ ಮಾಣಿಕ್ಯ ನೋಡಾ ಎಂದು ಹೇಳಿಹರು.

ಇತಿ ಸಮಾಪ್ತಿ

ವಚನಾನುಕ್ರಮಣಿಕೆ

ವಚನ	ವ .ಸಂ
ಅರಿದಿಹೆನೆಂದಡೆ ಅರುಹಿಂಗಸಾಧ್ಯ ನೆನೆದಿಹೆ ನೆಂದಡೆ ನೆನಹಿಂಗಸಾಧ್ಯ	3
ಅಂತ್ಯಜನಾಗಲಿ ಅಗ್ರಜನಾಗಲಿ ಮೂರ್ಖನಾಗಲಿ	14
ಅಂತರಂಗ ದೊಳಿರ್ದ ನಿರವಯ ಲಿಂಗವನು ಸಾವಯವ	27
ಅರಿವನರಿದೆನೆಂಬುದು ಮರವೆ. ಮರಹ	28
ಆದಿಗೆ ಅನಾದಿಗೆ ಭೇದ ಉಂಟೆ ?	33
ಆದಿ ಅನಾದಿ ಎಂಬೆರಡು ಮೂಲವ ನೆತ್ತಿ ತೋರಿದನಯ್ಯ	34
ಆದಿ ಶಕ್ತಿ ಅನಾದಿ ಶಕ್ತಿ ಎಂಬುದ ಅದನಾರು	35
ಆಕಾಶವ ಮೀರುವ ತರುಗಿರಿಗಳುಂಟೆ ?	36
ಆರು ಪ್ರಣವದ ಕಡೆಯಕ್ಷರ ಚಿದಾಕಾಶದಂಗ ನೋಡಾ.	19
ಇನ್ನು ಮುಕ್ತನೆಂದಡೆ ಮುನ್ನವೇನು ಬದ್ಧನೇ?	15
ಉರಿವ ಕೆಂಡದ ಮೇಲೆ ತೃಣವ ತಂದಿರಿಸಿದರೆ	6
ಎನಗೆ ನಿಮ್ಮ ನೆನೆದಾಗಲೆ ಉದಯ. ಎನಗೆ ನಿಮ್ಮ	4
ಎರಡೆಂಭತ್ತು ಕೋಟಿ ವಚನಂಗಳ ಹಾಡಿ	18
ಕಂಡುದ ಹಿಡಿಯಲೊಲ್ಲದೆ ಕಾಣದುದ ನರಸಿ ಹಿಡಿದಿಹೆನೆಂದಡೆ	2
ಕಾಣಬಾರದ ಗುರು ಕಣ್ಗೆ ಗೋಚರವಾದರೆ ಹೇಳಲಿಲ್ಲದ ಭಿನ್ನಪ.	5
ಕಾಣದುದ ನರಸುವರಲ್ಲದೆ ಕಂಡುದ ನರಸುವರೆ ಹೇಳಾ ?	8
ಕಾಣಬಾರದ ಲಿಂಗ ಕರಸ್ಥಲಕ್ಕೆ ಬಂದರೆ ಹೇಳಲಮ್ಮೆ ಕೇಳಲಮ್ಮೆ	9
ಕಂಡುದೆಲ್ಲ ಪಾವನ. ಕೇಳಿತ್ತೆಲ್ಲ ಪರಮ ಬೋಧೆ.	39
ಕಾಯಗೊಂಡ ಮಾನವರಂತೆ ಕೈಗೆ ಸಿಲುಕ ಪ್ರಾಣವಿಡಿದ	40
ಗುರು ಕರುಣಿಸೆ ಬಿಟ್ಟಿತ್ತು ಮರವು ಗುರು	12
ಗುರುವಿಂಗೂ ಶಿಷ್ಯಂಗೂ ಆವುದು ದೂರ,	32
ಜಪವೆಂಬುದು ಪಾಪಕ್ಕೆ ಬಹು ತಾಪ ನೋಡಯ್ಯ	22
ತತ್ವದ ಲಿಂಗ ವೆಂದರುಹಿ ತ್ವಂ ಪದ ಅಂಗವೆಂದರುಹಿ	26
ತನ್ನಿಂದ ತನ್ನ ನೋಡಲು ತನಗೆ ತಾನೇ ಪ್ರತ್ಯಕ್ಷನಾಗೆ	38
ತಿಳಿಯದೆ ಜಪಿಸಿದ ಮಂತ್ರ ನಿಷ್ಫಲವಾದುದು ನೋಡಾ	16
ನೀ ನನಗೆ ಗುರುವಪ್ಪಡೆ . ನಾ ನಿನಗೆ ಶಿಷ್ಯನಪ್ಪಡೆ	7
ನಡದಡೆ ನಡೆ ಗೆಟ್ಟ ನಡೆಯ ನಡೆವುದಯ್ಯ	31
ನರ ಲೋಕದ ನರರುಗಳೆಲ್ಲರು	41
ಬೀದಿಯಲ್ಲಿ ಬಿದ್ದ ಮಾಣಿಕ್ಯವ ಹೊಳಿದ್ದ ನಿಧಾನವನು,	42
ಮೂರು ಲಿಂಗಕ್ಕೆ ಮೂಲ ಸೂತ್ರವಾದಾತ ಗುರು.	1
ಮನನ ಮಾಡಿದ ಮಂತ್ರ ಮಹಾಪದವಿಯ ಕೊಟ್ಟಿತಯ್ಯ.	17

ಮನ ಮನ ಬೆರಸಿದವರಂತಿಪ್ಪವರ	29
ಮನ ಉಂಟೆ ? ಮರುಳೆ ಶಿವಯೋಗಿಗೆ	30
ಮನಸ್ಸಂದಲ್ಲಿ ಬೇರೊಂದು ನೆನಹುಂಟೆ?	37
ಯಥಾಃ ಷಡಕ್ಷರಂ ಮಂತ್ರಂ ದೇವ್ಯೆ ದೇವ ಸಮೀರಿತಂ	20
ಶಿವ ಗುರುವೆಂದು ಬಲ್ಲಾತನೆ ಗುರು,	10
ಶುದ್ದವ ನರಿದೆ ಚನ್ನಬಸವಣ್ಣ ನಿಮ್ಮ ದಯದಿಂದ	11
ಶ್ರೀ ಪಂಚಾಕ್ಷರಿಯೆ ಸರ್ವಮಂತ್ರವೆಲ್ಲಕ್ಕೆ	13
ಶಿವಾ ಭವಾನಿ ರುದ್ರಾಣಿ ಶಿವೋ ಮಹೇಶ್ವರಃ	21
ಸತ್ತ ಗುರುವಿನ ಕಾರುಣ್ಯ ಸತ್ತುಕೊಂಬ ಶಿಷ್ಯಂಗೆ	23
ಸತ್ ರೂಪ ಲಿಂಗ, ಚಿತ್ ರೂಪ ಜಂಗಮ	25



ಪರಮ ಪೂಜ್ಯ ಸದ್ಗುರು ಶ್ರೀ ವಿದ್ಯಾನಂದ ಶರಣರು

ದ್ವೈತ, ದ್ವೈತಾದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಿವಶಕ್ತಿ ವಿಶಿಷ್ಟಾದ್ವೈತ, ಮುಂತಾದ ಸಿದ್ಧಾಂತಗಳು ಭಾರತದಲ್ಲಿ ಪ್ರಚಲಿತದಲ್ಲಿವೆ. ಪ್ರತಿ ದೇಹದಲ್ಲಿರುವ ಶಕ್ತಿಯನ್ನು ಆಯಾ ದೇಹವೇ ಬಳಕೆ ಮಾಡಿಕೊಳ್ಳಲು ಸಕಲ ದೇಹಗಳಿಗೆ ನೆರವಾಗಲೆಂದು ಆಯಾ ಸಿದ್ಧಾಂತಗಳನ್ನು ಮಹಾಜ್ಞಾನಿಗಳು ರಚಿಸಿರುವರು. ಆದರೆ ಜನ ಆಯಾ ಗ್ರಂಥಗಳನ್ನು ಬರೆದ ಜ್ಞಾನಿಗಳನ್ನು ಅವರು ಬರೆದ ಸೂತ್ರಪ್ರಧಾನವಾದ ಜ್ಞಾನ ಗ್ರಂಥಗಳನ್ನು ಮಾತ್ರ ವಿಶ್ವಾಸಕ್ಕೆ ತೆಗೆದುಕೊಂಡರು. ತಮ್ಮ ತಮ್ಮ ದೇಹಗಳಲ್ಲಿ ತನ್ಮಯವಾದ ಅರಿವಿನ ಶಕ್ತಿಯನ್ನೆ ಮರೆತರು. ಒಬ್ಬೊಬ್ಬ ಜ್ಞಾನಿಯ ಹೆಸರಲ್ಲಿ ಮತ ಧರ್ಮ ನಿರ್ಮಾಣವಾಯಿತು. ಜಾತಿ ಉಪಜಾತಿ ಪಂಗಡಗಳು ಹುಟ್ಟಿಕೊಂಡವು. ಜ್ಞಾನಿಗಳು ಬರೆದ ಸೂತ್ರ ಪ್ರಧಾನ ಸಿದ್ಧಾಂತಗಳೆಲ್ಲಾ ಧರ್ಮಗ್ರಂಥಗಳಾದವು. ಅವು ಪೂಜೆಗೆ, ವಾದ ವಿವಾದಗಳಿಗೆ ಉಪನ್ಯಾಸಕ್ಕೆ ಮೀಸಲಾದವು.

ದೇಹದ ಉನ್ನತಿಗಾಗಿ ದೇಹದಿಂದಲೇ ಬರೆದ ಗ್ರಂಥಗಳು ದೇಹಗಳಿಗೆ ಮುಳುವಾದವು. ಈ ಸಕಲ ಸಿದ್ಧಾಂತಗಳಿಂದ ಆದ ಬದಲಾವಣೆಯನ್ನು ಶ್ರೀ ವಿದ್ಯಾನಂದ ಶರಣರು ಗಮನದಲ್ಲಿಟ್ಟುಕೊಂಡು ಶರಣರ ವಚನಗಳನ್ನು ತೆಗೆದುಕೊಂಡು ಅವುಗಳಿಗೆ ತಮ್ಮದೆ ಆದ ಸೂತ್ರ ರೂಪದ ವ್ಯಾಖ್ಯಾನವನ್ನು ಬರೆದರು. ಇವು ಮನುಕುಲವನ್ನು ಮಹಾ ಮನುಕುಲದತ್ತ ತೆಗೆದುಕೊಂಡು ಹೋಗುವುದರಲ್ಲಿ ಸಂದೇಹವೇ ಇಲ್ಲ.

ಸದ್ಗುರು ವಿದ್ಯಾನಂದರು ಈ ನಾಡು ಕಂಡ ಮಹಾನ್ ಸಂತರು. ಮಠ ಮಾನ್ಯಗಳ ಒಡೆಯರು ಸಾಹಿತಿಗಳು ಈ ಸತ್ಪುರುಷರನ್ನು ನೋಡಲು ಬರಲಿಲ್ಲ. ರಾಜಕಾರಣಿಗಳು ಇವರತ್ತ ಸುಳಿಯಲಿಲ್ಲ. ಗುರುಗಳಾದರೂ ಅಷ್ಟೆ. ಅವರ ನೆರಳಿನ ಸಾಮಿಪ್ಯವೂ ಹೋಗಲಿಲ್ಲ. ಅರುಹೃದಯಿಗಳನ್ನು ಕಂಡು ಅರಿವಿನ ಬೀಜ ಬಿತ್ತಿದರು. ಮೊಳಕೆಯೊಡೆದು ಸಸಿಗಳಾಗಿವೆ. ಕೆಲವು ಮರಗಳಾಗಿ ಫಲಕ್ಕೆ ಬಂದಿವೆ ಆ ಮಾಗಿದ ಅರಿವಿನ ಫಲ ತನ್ನ ಕೆಲಸ ಮಾಡದೇ ಇರದು.

ಬಸವರಾಜ ಸ್ವಾಮಿ

ಸಂಪಾದಕ